# ಕರ್ನಾಟಕ ಭೂ ಕಂದಾಯ ಅಧಿನಿಯಮ, 1964

## ಪ್ರಕರಣಗಳ ಅನುಕ್ರಮಣಿಕೆ

ಪ್ರಕರಣಗಳು

### ಅಧ್ಯಾಯ – I
### ಪ್ರಾರಂಭಿಕ


1. ಸಂಕ್ಷಿಪ್ತ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ
2. ಪರಿಭಾಷೆಗಳು


### ಅಧ್ಯಾಯ –II
### ರೆವಿನ್ಯೂ ಅಧಿಕಾರಿಗಳ ನೇಮಕ ಮತ್ತು ಅವರ ಅಧಿಕಾರಗಳು


3. ರೆವಿನ್ಯೂ ವಿಷಯಗಳಲ್ಲಿ ಮುಖ್ಯ ನಿಯಂತ್ರಣ ಪ್ರಾಧಿಕಾರ
4. ರಾಜ್ಯವನ್ನು ಪ್ರದೇಶಗಳಾಗಿ, ಪ್ರದೇಶಗಳನ್ನು ಜಿಲ್ಲೆಗಳಾಗಿ ವಿಭಾಗಿಸುವುದು ಮತ್ತು ಜಿಲ್ಲೆಗಳಲ್ಲಿ ಹೋಬಳಿಗಳು ಮತ್ತು ಗ್ರಾಮಗಳನ್ನೊಳಗೊಂಡ ತಾಲೂಕುಗಳು ಇರುವುದು
5. ಗ್ರಾಮಗಳ ಸರಹದ್ದುಗಳನ್ನು ಬದಲಾಯಿಸಲು ಅಥವಾ ಗ್ರಾಮಗಳನ್ನು ಸಮ್ಮಿಲನಗೊಳಿಸಲು ಅಥವಾ ರಚಿಸಲು ರಾಜ್ಯ ಸರ್ಕಾರಕ್ಕಿರುವ ಅಧಿಕಾರಗಳು
6. ಜಿಲ್ಲೆಗಳನ್ನು, ತಾಲೂಕುಗಳನ್ನು, ಹೋಬಳಿಗಳನ್ನು ಅಥವಾ ಗ್ರಾಮಗಳನ್ನು ರಚಿಸುವ, ರದ್ದುಗೊಳಿಸುವ, ಇತ್ಯಾದಿಗಳ ವಿಧಾನ
7. ರೀಜನಲ್ ಕಮೀಷನರ್‌ರ ನೇಮಕ, ಕರ್ತವ್ಯಗಳು ಮತ್ತು ಪ್ರಕಾರ್ಯಗಳು
8. ಡೆಪ್ಯುಟಿ ಕಮಿಷನರು
9. ವಿಶೇಷ ಡೆಪ್ಯುಟಿ ಕಮಿಷನರು
10. ಅಸಿಸ್ಟೆಂಟ್ ಕಮಿಷನರು
11. ತಹಸೀಲ್ದಾರರು
12. ವಿಶೇಷ ತಹಸೀಲ್ದಾರರು
13. ತಹಸೀಲ್ದಾರನು ಅಥವಾ ವಿಶೇಷ ತಹಸೀಲ್ದಾರನು ತನ್ನ ಕೆಲಸ ಕರ್ತವ್ಯಗಳನ್ನು ನಿರ್ವಹಿಸಲು ತನಗೆ ಅಧೀನರಾಗಿರುವವರನ್ನು ಪ್ರತಿನಿಯೋಜಿಸಬಹುದು
14. ಹಂಗಾಮಿ ಖಾಲಿ ಸ್ಥಾನಗಳಲ್ಲಿ ಅಧಿಕಾರಿಗಳು ಕರ್ತವ್ಯಗಳನ್ನು ನಿರ್ವಹಿಸುವುದು
15. ರೆವಿನ್ಯೂ ಇನ್‌ಸ್ಪೆಕ್ಟರುಗಳು
16. ಗ್ರಾಮ ಲೆಕ್ಕಿಗ
17. ಗ್ರಾಮ ಲೆಕ್ಕಿಗನು ಇಡಬೇಕೆಂದು ಅಗತ್ಯಪಡಿಸಲಾಗಿರುವಂಥ ದಾಖಲೆಗಳನ್ನು ಅವನು ಇಡುವುದು ಮತ್ತು ಸರ್ಕಾರಿ ದಾಖಲೆಗಳನ್ನು ಸಿದ್ಧಪಡಿಸುವುದು
18. ಮೋಜಣಿ ಅಧಿಕಾರಿಗಳು

18ಎ ಲೈಸೆನ್ಸು ಹೊಂದಿರುವ ಮೋಜಣಿದಾರರ ನೇಮಕ

19. ಇತರ ಅಧಿಕಾರಿಗಳು
20. ಹುದ್ದೆಗಳನ್ನು ಒಟ್ಟು ಗೂಡಿಸುವುದು
21. ಮೊಹರುಗಳು
22. ರೆವಿನ್ಯೂ ಅಧಿಕಾರಿಯ ಅಥವಾ ಬೇರೆ ವ್ಯಕ್ತಿಯ ವಶದಲ್ಲಿರುವ ಹಣ, ಕಾಗದ ಪತ್ರಗಳು, ಇತ್ಯಾದಿಗಳ ಬಗ್ಗೆ ತಗಾದೆ
23. ರೆವಿನ್ಯೂ ಅಧಿಕಾರಿಯಿಂದ ಅಥವಾ ಇತರ ವ್ಯಕ್ತಿಗಳಿಂದ ಸರ್ಕಾರಿ ಹಣದ ಅಥವಾ ಸ್ವತ್ತಿನ ವಸೂಲಿ

## ಅಧ್ಯಾಯ-III
## ರೆವಿನ್ಯೂ ಅಧಿಕಾರಿಗಳ ಪ್ರಕ್ರಿಯೆ


24. ರೆವಿನ್ಯೂ ಅಧಿಕಾರಿಗಳು ರೆವಿನ್ಯೂ ನ್ಯಾಯಾಲಯಗಳಾಗಿ ಕೆಲಸ ಮಾಡುವುದು
25. ರೆವಿನ್ಯೂ ನ್ಯಾಯಾಲಯದ ಅಂತರ್ನಿಹಿತ ಅಧಿಕಾರಗಳ ಉಳಿಸುವಿಕೆ
26. ತನಿಖೆ ನಡೆಸುವ ಅಥವಾ ಮೊಕದ್ದಮೆಗಳ ಬಗ್ಗೆ ವಿಚಾರಣೆ ನಡೆಸುವ ಸ್ಥಳ
27. ಮೊಕದ್ದಮೆಗಳನ್ನು ವರ್ಗಾಯಿಸುವ ಅಧಿಕಾರ
28. ಸಾಕ್ಷ್ಯ ತೆಗೆದುಕೊಳ್ಳಲು, ಸಾಕ್ಷ್ಯವನ್ನು ಕೊಡುವುದಕ್ಕಾಗಿ ಮತ್ತು ದಸ್ತಾವೇಜುಗಳನ್ನು ಹಾಜರುಪಡಿಸುವುದಕ್ಕಾಗಿ ವ್ಯಕ್ತಿಗಳನ್ನು ಸಮನು ಮಾಡಲು ಅಧಿಕಾರ
29. ಸಮನಿನ ಒಳಾಂಶಗಳು ಮತ್ತು ಅದನ್ನು ಹೊರಡಿಸುವ ಹಾಗೂ ಜಾರಿ ಮಾಡುವ ರೀತಿ
30. ನೋಟೀಸುಗಳನ್ನು ಜಾರಿ ಮಾಡುವ ವಿಧಾನ
31. ಸಾಕ್ಷಿಗಳು ಹಾಜರಾಗುವಂತೆ ಮಾಡುವ ವಿಧಾನ
32. ಸಾಕ್ಷಿಗಳು ಹಾಜರಾಗಲು ಒತ್ತಾಯಪಡಿಸುವುದು ಮತ್ತು ಸಾಕ್ಷಿಗಳನ್ನು ಕಮಿಷನ್ನಿನ ಮೂಲಕ ವಿಚಾರಣೆ ಮಾಡುವುದು
33. ವಿದ್ಯುಕ್ತ ವಿಚಾರಣೆ
34. ಸಂಕ್ಷಿಪ್ತ ವಿಚಾರಣೆ
35. ವಿದ್ಯುಕ್ತ ಮತ್ತು ಸಂಕ್ಷಿಪ್ತ ವಿಚಾರಣೆಯನ್ನು ನ್ಯಾಯಿಕ ವ್ಯವಹರಣೆಗಳು ಎಂದು ಭಾವಿಸುವುದು
36. ವಿಚಾರಣೆಯನ್ನು ಮತ್ತು ತೀರ್ಮಾನವನ್ನು ಬಹಿರಂಗವಾಗಿ ಮತ್ತು ನೋಟೀಸು ಕೊಟ್ಟ ನಂತರ ಮಾಡತಕ್ಕದ್ದು
37. ವಿದ್ಯುಕ್ತ ಅಥವಾ ಕ್ಷಿಪ್ರ ವಿಚಾರಣೆಗಳು
38. ಅಳತೆ ಮೊದಲಾದ ಉದ್ದೇಶಕ್ಕಾಗಿ ಯಾವುದೇ ಭೂಮಿ ಅಥವಾ ಆವರಣದಲ್ಲಿ ಪ್ರವೇಶಿಸಲು ಅಧಿಕಾರ
39. ಅಕ್ರಮವಾಗಿ ಭೂಮಿಯನ್ನು ಸ್ವಾಧೀನದಲ್ಲಿ ಇಟ್ಟುಕೊಂಡಿರುವ ಯಾರೇ ವ್ಯಕ್ತಿಯನ್ನು ಹೊರದೂಡುವ ರೀತಿ


## ಅಧ್ಯಾಯ-IV
## ಕರ್ನಾಟಕ ರೆವಿನ್ಯೂ ಅಪೀಲು ನ್ಯಾಯಾಧಿಕರಣದ ರಚನೆ ಮತ್ತು ಅಧಿಕಾರಗಳು


40. ರೆವಿನ್ಯೂ ಅಪೀಲು ನ್ಯಾಯಾಧಿಕರಣದ ರಚನೆ
41. ನ್ಯಾಯಾಧಿಕರಣದಿಂದ ವ್ಯವಹಾರ ನಿರ್ವಹಣೆ
42. ನ್ಯಾಯಾಧಿಕರಣದ ಉಪವೇಶನಗಳು
43. ನ್ಯಾಯಾಧೀಕರಣದ ಅಧಿಕಾರಗಳು
44. ಪುನರವಲೋಕನಾ ಅಧಿಕಾರ
45. ನ್ಯಾಯಾಧಿಕರಣದ ಆದೇಶಗಳ ಅಂತಿಮತೆ
46. ವಿವರಣ ಪಟ್ಟಿಕೆ ಮುಂತಾದವುಗಳನ್ನು ತರಿಸಿಕೊಳ್ಳಲು ನ್ಯಾಯಾಧಿಕರಣದ ಅಧಿಕಾರಗಳು
47. ನ್ಯಾಯಾಧಿಕರಣದ ವ್ಯವಹರಣೆಗಳು ನ್ಯಾಯಿಕ ವ್ಯವಹರಣೆಗಳಾಗಿರುವುದು
48. ವಿನಿಯಮಗಳನ್ನು ರಚಿಸಲು ಅಧಿಕಾರ


## ಅಧ್ಯಾಯ-V
## ಅಪೀಲು ಮತ್ತು ಪುನರೀಕ್ಷಣೆ


49. ಮೂಲ ಆದೇಶಗಳ ಮೇಲೆ ಅಪೀಲುಗಳು
50. ಎರಡನೆಯ ಅಪೀಲು
51. ಅಪೀಲುಗಳಿಗೆ ಕಾಲಪರಿಮಿತಿ
52. ಕಾಲಪರಿಮಿತಿ ಅಧಿನಿಯಮದ ಅನ್ವಯ

53. ಅಪೀಲು ಅರ್ಜಿಯ ಜತೆ ಆದೇಶದ ಪ್ರತಿ ಇರತಕ್ಕದ್ದು

54. ಅಪೀಲು ಪ್ರಾಧಿಕಾರಿಯ ಅಧಿಕಾರಗಳು

55. ಆದೇಶಗಳ ಜಾರಿಗೆ ತಡೆ

56. ಪುನರೀಕ್ಷಣಾ ಅಧಿಕಾರ

57. ಈ ಅಧಿನಿಯಮದ ಮೇರೆಗೆ ಸುಸ್ಪಷ್ಟವಾಗಿ ಅಂತಿಮವಾದುದೆಂದು ಮಾಡಿದ ಆದೇಶಗಳು

58. ಆದೇಶಗಳ ತಿದ್ದುಪಡಿ

59. ನ್ಯಾಯ ವಿಫಲತೆಯನ್ನು ಉಂಟುಮಾಡದ ತಪ್ಪು ಅಥವಾ ಅಕ್ರಮದ ಕಾರಣದಿಂದ ಆದೇಶವನ್ನು ವ್ಯತಿರಿಕ್ತಗೊಳಿಸಲಾಗದು


## ಅಧ್ಯಾಯ-VI
## ರೆವಿನ್ಯೂ ಅಧಿಕಾರ ವ್ಯಾಪ್ತಿ


60. ಪರಿಭಾಷೆಗಳು

61. ರೆವಿನ್ಯೂ ನ್ಯಾಯಾಲಯಗಳ ಅನನ್ಯ ಅಧಿಕಾರ ವ್ಯಾಪ್ತಿ ಮತ್ತು ಸಿವಿಲ್ ನ್ಯಾಯಾಲಯಗಳ ಅಧಿಕಾರ ವ್ಯಾಪ್ತಿಗೆ ಪ್ರತಿಬಂಧ

62. ಕೆಲವು ದಾವೆಗಳ ಉಳಿಸುವಿಕೆಗಳು

63. ಸರ್ಕಾರದ ವಿರುದ್ಧ ಯಾವುದೇ ದಾವೆಯನ್ನು ಅಥವಾ ಇತರ ವ್ಯವಹರಣೆಯನ್ನು ಹೂಡುವುದಕ್ಕೆ ಮುಂಚೆ ವಾದಿಯು ಅಪೀಲು ಮಾಡಿಕೊಳ್ಳಲು ತನಗಿರುವ ಹಕ್ಕನ್ನು ಪೂರ್ತಿಯಾಗಿ ಬಳಸಿಕೊಳ್ಳತಕ್ಕದ್ದು

64. ಉಚ್ಚ ನ್ಯಾಯಾಲಯದ ತೀರ್ಮಾನಕ್ಕಾಗಿ ಪ್ರಶ್ನೆಗಳನ್ನು ಒಪ್ಪಿಸಲು ನ್ಯಾಯಾಧಿಕರಣದ ಅಧಿಕಾರ

65. ಅಧಿಕಾರ ವ್ಯಾಪ್ತಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಉಚ್ಚ ನ್ಯಾಯಾಲಯಕ್ಕೆ ಒಪ್ಪಿಸಲು ಸಿವಿಲ್ ನ್ಯಾಯಾಲಯದ ಅಧಿಕಾರ

66. ನ್ಯಾಯಪೀಠದ ರಚನೆ


## ಅಧ್ಯಾಯ-VII
## ಭೂಮಿ ಮತ್ತು ಭೂ ಕಂದಾಯ
### ಭೂಮಿ


67. ಸರ್ಕಾರಿ ರಸ್ತೆ, ಇತ್ಯಾದಿಗಳು ಮತ್ತು ಇತರರಿಗೆ ಸೇರಿರದ ಎಲ್ಲ ಭೂಮಿಗಳು ಸರ್ಕಾರಕ್ಕೆ ಸೇರುತ್ತವೆ

68. ಸಾರ್ವಜನಿಕರ ಬಳಕೆಗೆ ಅಗತ್ಯವಿರದಂಥ ಸಾರ್ವಜನಿಕ ರಸ್ತೆ, ಬೀದಿ, ಓಣಿ ಅಥವಾ ಹಾದಿ ಇವುಗಳಲ್ಲಿ ಅಥವಾ ಇವುಗಳ ಮೇಲೆ ಸಾರ್ವಜನಿಕರಿಗೆ ಮತ್ತು ವ್ಯಕ್ತಿಗಳಿಗೆ ಇರುವ ಹಕ್ಕುಗಳು ನಿಂತುಹೋಗುವಿಕೆ

69. 67ನೇ ಪ್ರಕರಣದ ಮೇರೆಗೆ ರಾಜ್ಯ ಸರ್ಕಾರಕ್ಕೆ ಸೇರಿರುವ ಭೂಮಿಗಳ ಅಥವಾ ಇತರ ಸ್ವತ್ತಿನ ವಿಲೇವಾರಿ

69ಎ ರಾಜ್ಯ ಸರ್ಕಾರಕ್ಕೆ ಸೇರಿರುವ ಭೂಮಿಗಳನ್ನು ಅಥವಾ ಇತರ ಸ್ವತ್ತನ್ನು ಬಹಿರಂಗ ಹರಾಜಿನ ಮೂಲಕ ವಿಲೇವಾರಿ ಮಾಡುವುದು

70. ಗಣಿ ಮತ್ತು ಖನಿಜೋತ್ಪತ್ತಿಗಳ ಬಗೆಗಿನ ಹಕ್ಕು ಸರ್ಕಾರದಲ್ಲಿ ನಿಹಿತವಾಗಿರುವುದು

71. ವಿಶೇಷ ಉದ್ದೇಶಗಳಿಗಾಗಿ ಭೂಮಿಗಳನ್ನು ಮೀಸಲಿಡಬಹುದು ಮತ್ತು ಮೀಸಲಿಟ್ಟಿದ್ದಾಗ ಡೆಪ್ಯುಟಿ ಕಮಿಷನರ ಮಂಜೂರಾತಿಯಿಲ್ಲದೆ ಅವುಗಳನ್ನು ಇತರ ರೀತಿ ಬಳಸತಕ್ಕದ್ದಲ್ಲ

72. ಗೋಮಾಳಗಳ ಬಳಕೆಗೆ ವ್ಯವಸ್ಥೆ

73. ಕೆಲವು ಭೂಮಿಗಳಿಂದ ಅನಧಿಕೃತವಾಗಿ ಸಾಗಿಸಿದ ನೈಸರ್ಗಿಕ ಉತ್ಪನ್ನದ ಮೌಲ್ಯದ ವಸೂಲಿ

74. ಮೋಜಣಿ ವ್ಯವಸ್ಥೆ ಆಗದಿರುವ ಗ್ರಾಮದಲ್ಲಿನ ಮರಗಳ ಬಗ್ಗೆ ಹಕ್ಕು

75. ಮೋಜಣಿ ವ್ಯವಸ್ಥೆ ಆಗಿರುವ ಗ್ರಾಮಗಳಲ್ಲಿನ ಮರಗಳ ಬಗ್ಗೆ ಹಕ್ಕು

76. ಮರಗಳು ಮತ್ತು ಕಾಡುಗಳು ಸರ್ಕಾರದಲ್ಲಿ ನಿಹಿತವಾಗಿರುವುದು

77. ರಸ್ತೆ ಬದಿಯ ಮರಗಳು

78. ಅನಧಿಕೃತವಾಗಿ ಬಳಸಿಕೊಂಡ ಮರ, ಇತ್ಯಾದಿಗಳ ಮೌಲ್ಯದ ವಸೂಲಿ

79. ಮನೆಬಳಕೆ ಅಥವಾ ಇತರ ಉದ್ದೇಶಗಳಿಗಾಗಿ ಸೌದೆ ಅಥವಾ ಮರಮುಟ್ಟಿನ ಸರಬರಾಜಿನ ನಿಯಂತ್ರಣ

**ಭೂ ಕಂದಾಯ**

80. ವಿಶೇಷವಾಗಿ ವಿನಾಯಿತಿಯಾದ ಭೂಕಂದಾಯದ ಹೊರತು ಭೂಕಂದಾಯದ ಸಂದಾಯಕ್ಕೆ ಎಲ್ಲ ಭೂಮಿ ಹೊಣೆಯಾಗಿರುವುದು
81. ನೆರೆಮಣ್ಣಿನ ಭೂಮಿ ಮತ್ತು ಅದರ ಬಗೆಗಿನ ಕಂದಾಯದ ಹೊಣೆ
82. ಪ್ರವಾಹದಿಂದಾದ ನಷ್ಟದ ಸಂದರ್ಭಗಳಲ್ಲಿ ಭೂಕಂದಾಯದ ಮಾಫಿ
83. ಕಂದಾಯ ನಿರ್ಣಯದ ರೀತಿ, ಬೇಸಾಯೇತರ ಕಂದಾಯದ ಪರಿವರ್ತನೆ ಮತ್ತು ಕೆಲವು ಉದ್ದೇಶಗಳಿಗಾಗಿ ಭೂಮಿಯ ಬಳಕೆಯನ್ನು ನಿಷೇಧಿಸುವುದು
84. ಭೂಕಂದಾಯವನ್ನು ಯಾರು ಗೊತ್ತುಪಡಿಸಬೇಕು
85. ವರ್ಗಾವಣೆಯಾದ ಭೂಮಿಗಳ ರಿಜಿಸ್ಟರು
86. ಕಂದಾಯ ನಿರ್ಧರಣೆಯನ್ನು ಮಾಡುವ ಬಗ್ಗೆ
87. ಭೂಕಂದಾಯವು ಭೂಮಿಯ ಮೇಲಿನ ಪ್ರಪ್ರಥಮ ಹೊಣೆ
88. ಮುಟ್ಟುಗೋಲು ಹಾಕಿಕೊಂಡ ಹಿಡುವಳಿಗಳನ್ನು ಸ್ವಾಧೀನಕ್ಕೆ ತೆಗೆದುಕೊಳ್ಳಬಹುದು ಮತ್ತು ಇತರ ರೀತಿಯಲ್ಲಿ ವಿಲೇವಾರಿ ಮಾಡಬಹುದು
89. ರಸೀದಿಗಳು
90. ರಸೀದಿಗಳನ್ನು ಕೊಡಲು ತಪ್ಪಿದಲ್ಲಿ ದಂಡ

**ಅಧ್ಯಾಯ–VIIಎ**

**ಇನ್ನೊಬ್ಬರ ಭೂಮಿಯ ಮೂಲಕ ಜಲಮಾರ್ಗಗಳ ನಿರ್ಮಾಣ**

90ಎ. ಇತರ ವ್ಯಕ್ತಿಗಳಿಗೆ ಸೇರಿದ ಭೂಮಿಯ ಮೂಲಕ ಜಲಮಾರ್ಗಗಳ ನಿರ್ಮಾಣ
90ಬಿ. ಗೇಣಿ ಸಂದಾಯ ಮಾಡುವುದಕ್ಕೆ ಮತ್ತು ಜಲ ಮಾರ್ಗವನ್ನು ಸುಸ್ಥಿತಿಯಲ್ಲಿಡುವುದಕ್ಕೆ ವಿಫಲವಾಗುವುದು
90ಸಿ. ಜಲಮಾರ್ಗವನ್ನು ತೆಗೆದುಹಾಕುವುದು ಅಥವಾ ನಿಲ್ಲಿಸುವುದು

**ಅಧ್ಯಾಯ–VIII**

**ವರ್ಗಾವಣೆಯಾಗಿರದ ಭೂಮಿಗಳ ಮಂಜೂರಾತಿ, ಉಪಯೋಗ ಮತ್ತು ಬಿಟ್ಟು ಕೊಡುವಿಕೆ**

91. ಅಧಿಭೋಗದಲ್ಲಿರದ ಭೂಮಿಯನ್ನು ಷರತ್ತುಗಳ ಮೇಲೆ ಮಂಜೂರು ಮಾಡಬಹುದು
92. ಸರ್ಕಾರದಲ್ಲಿ ನಿಹಿತವಾಗಿರುವ ಮೆಕ್ಕಲುಮಣ್ಣಿನ ಭೂಮಿಯ ಮಂಜೂರಾತಿ
93. ಅಧಿಭೋಗದಲ್ಲಿರುವ ಭೂಮಿಯನ್ನು ತೆಗೆದುಕೊಳ್ಳುವುದಕ್ಕೆ ಅನುಮತಿ
94. ಭೂಮಿಯ ಅನಧಿಕೃತ ಅಧಿಭೋಗಕ್ಕಾಗಿ ದಂಡಗಳು
94ಎ. ಸಮಿತಿ, ಮುಂತಾದವನ್ನು ರಚಿಸುವ ಮೂಲಕ ಅನಧಿಕೃತ ಅಧಿಭೋಗದ ಕೆಲವು ಪ್ರಕರಣಗಳನ್ನು ಸಕ್ರಮಗೊಳಿಸುವುದು
94ಬಿ. ಕೆಲವು ಪ್ರಕರಣಗಳಲ್ಲಿ ಭೂ ಮಂಜೂರಾತಿ
94ಸಿ ಅಧಿಭೋಗದ ಭೂಮಿಯಲ್ಲಿ ವಾಸದ ಮನೆಯನ್ನು ಕಟ್ಟಿಕೊಂಡಿದ್ದರೆ ಪ್ರಕರಣದಲ್ಲಿ ಭೂ ಮಂಜೂರಾತಿ
94ಸಿಸಿ. ನಗರ ಪ್ರದೇಶದಲ್ಲಿನ ಅಧಿಭೋಗದ ಭೂಮಿಯಲ್ಲಿನ ವಾಸದ ಮನೆಯ ನಿರ್ಮಾಣದ ಪ್ರಕರಣದಲ್ಲಿ ಭೂ ಮಂಜೂರಾತಿ
94ಡಿ. ದಾಖಲಾಗದ ವಾಸಿಸುವ ಸ್ಥಳಗಳಲ್ಲಿರುವ ಸರ್ಕಾರಿ ಭೂಮಿಯಲ್ಲಿ ನಿರ್ಮಿಸಲಾದ, ಅದರ ಮತ್ತು ಅದಕ್ಕೆ ನಿಕಟದಲ್ಲಿ ತಾಗಿಕೊಂಡಿರುವ ನಿವೇಶನ ಸಹಿತವಾಗಿ ವಾಸದ ಮನೆಯ ಭೂಮಿಯನ್ನು ಸಕ್ರಮಗೊಳಿಸುವುದು ಮತ್ತು ಮಂಜೂರು ಮಾಡುವುದು
95. ಬೇಸಾಯದ ಭೂಮಿಯ ಬಳಕೆಗಳು ಮತ್ತು ಬೇಸಾಯದ ಭೂಮಿಯನ್ನು ಇತರ ಉದ್ದೇಶಕ್ಕಾಗಿ ಬಳಸುವ ಬಗೆಗಿನ ವಿಧಾನ
96. ಬೇಸಾಯದ ಭೂಮಿಯನ್ನು ಅನುಮತಿ ಇಲ್ಲದೆ ಇತರ ಉದ್ದೇಶಕ್ಕಾಗಿ ಬಳಸುವುದಕ್ಕೆ ದಂಡ
97. ಒಂದು ನಿರ್ದಿಷ್ಟ ಉದ್ದೇಶಕ್ಕಾಗಿ ಹೊಂದಿರುವ ಬೇಸಾಯೇತರ ಭೂಮಿಯ ಪರಿವರ್ತನೆ

98. ನಿಬಂಧನೆಗಳ ಮೇಲೆ ಅನುಮತಿಯನ್ನು ಕೊಡಬಹುದು
99. ಅಧಿಭೋಗದಾರರ ಹಕ್ಕುಗಳು
100. ಗೊತ್ತುಪಡಿಸಿದ ಪ್ರಾಧಿಕಾರದ ಮಂಜೂರಾತಿಯಿಲ್ಲದೆ ಅಧಿಭೋಗವು ವರ್ಗಾವಣೆಯಾಗತಕ್ಕದ್ದಲ್ಲ ಅಥವಾ ಸಿವಿಲ್ ನ್ಯಾಯಾಲಯದ ಕ್ರಮಗಳಿಗೆ ಒಳಪಡತಕ್ಕದ್ದಲ್ಲ
101. ಅಧಿಭೋಗದ ಹಕ್ಕು ವರ್ಗಾವಣೀಯವೂ ಮತ್ತು ವಾರಸುದಾರರು ಪಡೆಯುವಂಥದ್ದೂ ಆಗಿರತಕ್ಕದ್ದು
102. ಬಿಟ್ಟುಕೊಡುವಿಕೆ
103. ಬಿಟ್ಟುಕೊಟ್ಟ ಅಥವಾ ಮುಟ್ಟುಗೋಲು ಹಾಕಿಕೊಂಡ ಭೂಮಿಗೆ ಅಥವಾ ಬೇಸಾಯದ ಉದ್ದೇಶಕ್ಕಾಗಿ ಬಳಸಿದ ಭೂಮಿಗೆ ಹೋಗುವ ದಾರಿಯ ಹಕ್ಕು
104. ಭೂಮಿಯನ್ನು ಅನಧಿಕೃತವಾಗಿ ಅಧಿಭೋಗಿಸುತ್ತಿರುವ ವ್ಯಕ್ತಿಯನ್ನು ಕೂಡಲೇ ಹೊರದೂಡುವುದು
105. ಅಧಿಭೋಗದ ಹಕ್ಕಿನ ಮುಟ್ಟುಗೋಲನ್ನು ತಡೆಯಲು ಅಧಿಭೋಗದಾರರಲ್ಲದ ಹಿತಾಸಕ್ತ ವ್ಯಕ್ತಿಗಳು ಭೂಕಂದಾಯವನ್ನು ಸಂದಾಯ ಮಾಡಬಹುದು

## ಅಧ್ಯಾಯ–IX

### ರೆವಿನ್ಯೂ ಮೋಜಣಿ, ಸರ್ವೇ ನಂಬರುಗಳ ವಿಭಾಗ (ಪೋಡು) ಮತ್ತು ಎಸ್ಟೇಟುಗಳ ವಿಭಜನೆ

106. ರಾಜ್ಯದ ಯಾವುದೇ ಭಾಗದಲ್ಲಿ ರಾಜ್ಯ ಸರ್ಕಾರವು ರೆವಿನ್ಯೂ ಮೋಜಣಿಯನ್ನು ಮಾಡಿಸಬಹುದು
107. ಭೂ ಹಿಡುವಳಿದಾರರಿಂದ ಸಹಾಯ ಬೇಕೆಂದು ಕೇಳಲು ಮೋಜಣಿ ಅಧಿಕಾರಿಯ ಅಧಿಕಾರ
108. ಸರ್ವೇ ನಂಬರಿನ ಕನಿಷ್ಠ ವಿಸ್ತೀರ್ಣ
109. ಸರ್ವೇ ನಂಬರುಗಳನ್ನು ಪೋಡುಗಳಾಗಿ ವಿಭಾಗಿಸುವುದು
110. ಒಂದು ಪೋಡನ್ನು ಬಿಟ್ಟು ಕೊಟ್ಟಾಗ ಅಥವಾ ಅದು ಮುಟ್ಟುಗೋಲಾದಾಗ ಅನ್ವಯಿಸುವ ಉಪಬಂಧಗಳು
111. ಭಾಗ ಮಾಡಿದ್ದಕ್ಕಾಗಿ ವೆಚ್ಚಗಳ ವಸೂಲಿ
112. ರಾಜ್ಯ ಸರ್ಕಾರವು ಹೊಸ ಮೋಜಣಿ ಮಾಡಲು ನಿರ್ದೇಶಿಸಬಹುದು
113. ಅಂಕಿ ಅಂಶಗಳ ಮತ್ತು ಹಣಕಾಸಿನ ದಾಖಲೆಗಳನ್ನು ಸಿದ್ಧಪಡಿಸುವಿಕೆ

## ಅಧ್ಯಾಯ–X

### ಬೇಸಾಯದ ಭೂಮಿಯ ಕಂದಾಯದ ನಿರ್ಧರಣೆ ಮತ್ತು ವ್ಯವಸ್ಥೆ

114. ಸರ್ಕಾರವು ಯಾವುದೇ ಭೂಮಿಯ ಭೂಕಂದಾಯದ ಮೂಲ ವ್ಯವಸ್ಥೆ ಅಥವಾ ಪರಿಷ್ಕರಣ ವ್ಯವಸ್ಥೆ ಮಾಡಲು ನಿರ್ದೇಶಿಸಬಹುದು
114ಎ. ಕೆಲವು ಸಂದರ್ಭಗಳಲ್ಲಿ ಭೂಕಂದಾಯ ವ್ಯವಸ್ಥೆಯ ಪರಿಷ್ಕರಣ
115. ಕಂದಾಯ ವ್ಯವಸ್ಥೆಯ ಅವಧಿ
116. ಕಂದಾಯ ನಿರ್ಧರಣೆಯನ್ನು ಮಾಡುವ ಬಗ್ಗೆ
117. ಹಿಡುವಳಿದಾರರು ಮಾಡಿದ ಸುಧಾರಣೆಗಳಿಂದಾದ ಸರಾಸರಿ ಇಳುವರಿಯ ಹೆಚ್ಚಳವನ್ನು ಗಣನೆಗೆ ತೆಗೆದುಕೊಳ್ಳಕೂಡದು
118. ಕಂದಾಯ ವ್ಯವಸ್ಥೆ ಮಾಡುವಾಗ ಕಂದಾಯ ವ್ಯವಸ್ಥೆಯ ಅಧಿಕಾರಿಯು ಅನುಸರಿಸಬೇಕಾದ ವಿಧಾನ
119. ಕಂದಾಯ ವ್ಯವಸ್ಥೆಯ ವರದಿಯ ಪ್ರಕಟಣೆ
120. ಡೆಪ್ಯುಟಿ ಕಮಿಷನರು ಕಂದಾಯ ವ್ಯವಸ್ಥೆಯ ವರದಿಯನ್ನು ಹಾಗೂ ಅದರ ಬಗೆಗಿನ ಆಕ್ಷೇಪಣೆ, ಇತ್ಯಾದಿಗಳ ವಿವರಣಾ ಪತ್ರವನ್ನು ಮತ್ತು ಆ ಬಗ್ಗೆ ತನ್ನ ಅಭಿಪ್ರಾಯಗಳನ್ನು ಸರ್ಕಾರಕ್ಕೆ ಒಪ್ಪಿಸುವುದು
121. ಕಂದಾಯ ವ್ಯವಸ್ಥೆಯ ವರದಿಗೆ ರಾಜ್ಯ ವಿಧಾನಮಂಡಲದಿಂದ ಅನುಮೋದನೆ
122. ಕಂದಾಯ ವ್ಯವಸ್ಥೆಯನ್ನು ಜಾರಿಗೆ ತರುವುದು
122ಎ. ಅಧಿಭೋಗದಾರರಿಗೆ ಕಂದಾಯ ನಿರ್ಧರಣೆಯ ನೋಟೀಸು
122.ಬಿ. ಭೂಕಂದಾಯದ ನಿರ್ಧರಣೆ

123. ಭೂಕಂದಾಯದ ಸಂದಾಯದಿಂದ ಪೂರ್ತಿಯಾಗಿ ವಿನಾಯಿತಿಗೊಳಿಸಲಾದ ಭೂಮಿಯ ಕಂದಾಯದ ನಿರ್ಧರಣೆ
124. ಈ ಅಧಿನಿಯಮದ ಮೇರೆಗೆ ಕಂದಾಯದ ನಿರ್ಧರಣೆಯು ಸಾಧಾರಣ ಭೂಕಂದಾಯಕ್ಕೆ ಸೀಮಿತವಾಗಿರತಕ್ಕದ್ದು
125. ನೀರಾವರಿಯ ಸೌಕರ್ಯಗಳ ಬಗ್ಗೆ ಭೂಕಂದಾಯ ನಿರ್ಧರಣೆ ಮಾಡುವುದಕ್ಕಾಗಿ ನಿರ್ದೇಶಿಸಲು ಸರ್ಕಾರದ ಅಧಿಕಾರ
126. ಕೆಲವು ಮೋಜಣಿ ಮತ್ತು ಕಂದಾಯ ವ್ಯವಸ್ಥೆ ಕಾರ್ಯಗಳನ್ನು ಮುಂದುವರಿಸುವಿಕೆ

## ಅಧ್ಯಾಯ-XI
## ಹಕ್ಕು ದಾಖಲೆ

127. ಹಕ್ಕು ದಾಖಲೆ
128. ಹಕ್ಕುಗಳ ಆರ್ಜನೆಯನ್ನು ವರದಿ ಮಾಡುವುದು
129. ಹಕ್ಕು ಬದಲಾವಣೆಗಳ ನೋಂದಣಿ ಮತ್ತು ತಕರಾರು ಪ್ರಕರಣಗಳ ರಿಜಿಸ್ಟರು
129ಎ. ಪಟ್ಟಾ ಪುಸ್ತಕ
130. ಮಾಹಿತಿಯನ್ನು ಒದಗಿಸಲು ಜವಾಬ್ದಾರಿ
131. ನಕಾಶೆಗಳನ್ನು ತಯಾರಿಸಲು ಸಹಾಯಕ್ಕಾಗಿ ಕಡ್ಡಾಯ ಕೋರಿಕೆ
132. ದಾಖಲೆಗಳ ಪ್ರಮಾಣಿತ ಪ್ರತಿಗಳನ್ನು ವಾದಪತ್ರಕ್ಕೆ ಅಥವಾ ಅರ್ಜಿಗೆ ಲಗತ್ತಿಸುವುದು
133. ದಾಖಲೆಗಳಲ್ಲಿರುವ ನಮೂದುಗಳ ಬಗ್ಗೆ ಪೂರ್ವಭಾವನೆ
134. ಪ್ರಮಾಣಿತ ಪ್ರತಿಗಳು
135. ದಾವೆಗಳಿಗೆ ಪ್ರತಿಬಂಧ
136. ಅಪೀಲು ಮತ್ತು ಪುನರೀಕ್ಷಣೆ

## ಅಧ್ಯಾಯ-XII
## ಎಲ್ಲೆಗಳು ಮತ್ತು ಎಲ್ಲೆ ಗೆರೆಯ ಗುರುತುಗಳು

137. ಗ್ರಾಮ ಸರಹದ್ದುಗಳನ್ನು ನಿರ್ಧರಿಸುವುದು, ಇತ್ಯಾದಿ
138. ಒಪ್ಪಂದದ ಮೂಲಕ ಗ್ರಾಮದ ಸರಹದ್ದುಗಳ ಇತ್ಯರ್ಥ
139. ಭಿನ್ನಾಭಿಪ್ರಾಯದ ಅಥವಾ ವಿವಾದದ ಸಂದರ್ಭದಲ್ಲಿ ಅವುಗಳನ್ನು ಬಗೆಹರಿಸುವ ಕ್ರಮ
140. ಸರ್ವೇ ನಂಬರಾಗುವ ಅಥವಾ ಹಿಡುವಳಿಯಾಗುವ ಭೂಮಿಗಳ ಸರಹದ್ದುಗಳ ನಿರ್ಧಾರ
141. ಎಲ್ಲೆಯ ಬಗೆಗಿನ ತಕರಾರನ್ನು ಮಧ್ಯಸ್ಥಿಕೆಯ ಮೂಲಕ ಇತ್ಯರ್ಥಗೊಳಿಸುವುದು
142. ಎಲ್ಲೆಯ ಇತ್ಯರ್ಥದ ಪರಿಣಾಮ
143. ಎಲ್ಲೆ ಗುರುತಿನ ನಿರ್ಮಾಣ ಮತ್ತು ದುರಸ್ತಿ
144. ಎಲ್ಲೆ ಗುರುತುಗಳ ವರ್ಣನೆ
145. ಎಲ್ಲೆ ಗುರುತುಗಳನ್ನು ಸುಸ್ಥಿತಿಯಲ್ಲಿಡುವ ಜವಾಬ್ದಾರಿ
146. ಮೋಜಣಿ ವ್ಯವಸ್ಥೆಯು ಜಾರಿಗೆ ಬಂದ ನಂತರ ಎಲ್ಲೆ ಗುರುತುಗಳ ಸುಪರ್ದನ್ನು ಡೆಪ್ಯುಟಿ ಕಮಿಷನರು ಹೊಂದಿರುವುದು
147. ಎಲ್ಲೆ ಗುರುತುಗಳಿಗೆ ಹಾನಿಯುಂಟು ಮಾಡುವುದಕ್ಕೆ ದಂಡ

## ಅಧ್ಯಾಯ–XIII

### ಗ್ರಾಮ ಪ್ರದೇಶಗಳಲ್ಲಿರುವ ಮತ್ತು ಪಟ್ಟಣಗಳ ಮತ್ತು ನಗರಗಳ ಸರಹದ್ದುಗಳಲ್ಲಿರುವ ಭೂಮಿಗಳ ಮೋಜಣಿ ಮತ್ತು ಎಲ್ಲೆ ಬಗೆಗಿನ ವಿವಾದಗಳ ಇತ್ಯರ್ಥ


148. ಗ್ರಾಮಗಳ, ಪಟ್ಟಣಗಳ, ನಗರಗಳ ನಿವೇಶನ ಸರಹದ್ದುಗಳನ್ನು ಹೇಗೆ ಗೊತ್ತುಪಡಿಸಬೇಕು ಮತ್ತು ಕಟ್ಟಡಗಳ ನಿವೇಶನಗಳನ್ನು ವಹಿಸಿಕೊಡುವುದು

149. ಕಟ್ಟಡ ನಿವೇಶನಗಳ ಏಲೆ

150. ಕೆಲವು ಸಂದರ್ಭಗಳಲ್ಲಿ ಈಗಿರುವ ವಿನಾಯಿತಿಗಳನ್ನು ಮುಂದುವರಿಸುವುದು

151. ವಿನಾಯಿತಿಯ ಹಕ್ಕನ್ನು ಡೆಪ್ಯುಟಿ ಕಮಿಷನರು ನಿರ್ಧರಿಸುವುದು

152. ಗ್ರಾಮ ಪ್ರದೇಶಗಳಲ್ಲಿ ಅಥವಾ ನಗರ ಮತ್ತು ಪಟ್ಟಣಗಳ ಸರಹದ್ದುಗಳಲ್ಲಿ ಇರುವ ಭೂಮಿಗಳನ್ನು ಮತ್ತು ಅವುಗಳ ಎಲ್ಲೆಗಳನ್ನು ಮೋಜಣಿ ಮಾಡುವ ಬಗ್ಗೆ

153. 152ನೇ ಪ್ರಕರಣದ ಮೇರೆಗೆ ಮೋಜಣಿಯ ಕೆಲವು ಸಂದರ್ಭಗಳಲ್ಲಿ ಅನುಸರಿಸಬೇಕಾದ ಕ್ರಮಗಳು ಮತ್ತು ಮೋಜಣಿ ಫೀಜನ್ನು ವಿಧಿಸುವುದು

154. ಪ್ರತ್ಯೇಕ ಹಣ ತೆಗೆದುಕೊಳ್ಳದೆ ಪ್ರಮಾಣ ಪತ್ರವನ್ನು ಕೊಡುವುದು

155. ಎಲ್ಲೆ ಅಥವಾ ಮೋಜಣಿ ಗುರುತುಗಳನ್ನು ಸಂರಕ್ಷಿಸುವ ಬಗ್ಗೆ ಸ್ಥಳೀಯ ಪ್ರಾಧಿಕಾರದ ಕರ್ತವ್ಯಗಳು

156. ಸ್ಥಳೀಯ ಪ್ರಾಧಿಕಾರವು ಸಂದಾಯ ಮಾಡಬೇಕಾದ ವಂತಿಗೆ ಹಣ


## ಅಧ್ಯಾಯ–XIV

### ಭೂಕಂದಾಯ ಮತ್ತು ಇತರ ಸರ್ಕಾರಿ ತಗಾದೆಗಳ ವಸೂಲಿ


157. ಭೂಕಂದಾಯದ ಹೊಣೆ

158. ರಾಜ್ಯ ಸರ್ಕಾರದ ಕ್ಲೇಮಿಗೆ ಇತರ ಎಲ್ಲ ಕ್ಲೇಮಿಗಿಂತಲೂ ಆದ್ಯತೆ ಇರತಕ್ಕದ್ದು

159. ಭೂಕಂದಾಯ ಸಂದಾಯದ ಸಂದರ್ಭ ಯಾವಾಗ ಉದ್ಭವಿಸುತ್ತದೆ ಮತ್ತು ಅದನ್ನು ಯಾವಾಗ ಸಂದಾಯ ಮಾಡಬೇಕು

160. ಭೂಕಂದಾಯದ ಬಾಕಿ ಮತ್ತು ಸುಸ್ತಿದಾರ

161. ಬಾಕಿಗಳನ್ನು ವಸೂಲು ಮಾಡುವ ವಿಧಾನ

162. ತಗಾದೆ ನೋಟೀಸು

163. ಅಧಿಭೋಗದ ಅಥವಾ ವರ್ಗಾವಣೆಯಾದ ಹಿಡುವಳಿಯ ಮುಟ್ಟುಗೋಲು

164. ಚರಸ್ವತ್ತಿನ ಜಪ್ತಿ ಮತ್ತು ಮಾರಾಟ

165. ಸ್ಥಿರಸ್ವತ್ತಿನ ಜಪ್ತಿ ಮತ್ತು ಮಾರಾಟ

166. ಜಪ್ತಿ ಮಾಡುವ ಬಗ್ಗೆ

167. ಜಪ್ತಿ ಮಾಡಲಾದ ಸ್ಥಿರ ಸ್ವತ್ತಿನ ಬಗ್ಗೆ ಕ್ಲೇಮುಗಳು

168. ಸ್ಥಿರ ಸ್ವತ್ತನ್ನು ಮಾರಾಟ ಮಾಡುವ ವಿಧಾನ

169. ಹರಾಜಿನ ಮೂಲಕ ಮಾರಾಟ ಆಗಬೇಕು

170. ಹರಾಜಿನಲ್ಲಿ ಬಿಡ್ ಮಾಡಲು ಪ್ರತಿಬಂಧ

171. ಸರ್ಕಾರದಿಂದ ಸ್ವತ್ತಿನ ಖರೀದಿ

172. ಕೆಟ್ಟು ಹೋಗುವ ವಸ್ತುಗಳ ಮಾರಾಟ

173. ಬಾಕಿ ಮೌಲ್ಯಕ್ಕಿಂತ ಹೆಚ್ಚು ಮೌಲ್ಯಕ್ಕೆ ಸ್ವತ್ತನ್ನು ಮಾರಕೂಡದು

174. ಸ್ಥಿರ ಸ್ವತ್ತನ್ನು ಕೊಳ್ಳುವವನಿಂದ ಠೇವಣಿ

175. ಠೇವಣಿ ಮಾಡಲು ತಪ್ಪುವುದು

176. ಹರಾಜನ್ನು ರದ್ದುಪಡಿಸುವುದು

177. ಮಾರಾಟದ ಸ್ಥಿರೀಕರಣ

178. ಮೊಬಲಗಿನ ವಾಪಸಾತಿ

179. ಖರೀದಿ ಪ್ರಮಾಣ ಪತ್ರ
180. ಅಡ್ಡಿ ಅಡಚಣೆಯ ನಿವಾರಣೆ
181. ಮಾರಾಟದಿಂದ ಬಂದ ಉತ್ಪತ್ತಿಯ ವಿನಿಯೋಗ
182. ಪ್ರಮಾಣಪತ್ರ ಪಡೆದ ಖರೀದಿದಾರನ ಹೊಣೆ
183. ಸುಸ್ತಿದಾರನ ಗ್ರಾಮವನ್ನು ಜಪ್ತಿ ಮಾಡಿ ಅದನ್ನು ತನ್ನ ಆಡಳಿತಕ್ಕೆ ತೆಗೆದುಕೊಳ್ಳುವುದರ ಮೂಲಕ ಬಾಕಿವಸೂಲಿ
184. ಅಂಥ ಗ್ರಾಮಗಳ ಭೂಮಿಗಳು ಪೂರ್ವಾವಧಿಯಿಲ್ಲದೆ ಸರ್ಕಾರಕ್ಕೆ ವಾಪಸ್ಸಾಗತಕ್ಕದ್ದು
185. ಹೆಚ್ಚುವರಿ ಉತ್ಪನ್ನಗಳ ವಿನಿಯೋಗ
186. ಹಾಗೆ ಜಪ್ತಿಯಾದ ಗ್ರಾಮವನ್ನು ಪುನಃ ವಹಿಸಿಕೊಡುವುದು
187. ಗ್ರಾಮ, ಇತ್ಯಾದಿಗಳು ಹನ್ನೆರಡು ವರುಷಗಳಲ್ಲಿ ಬಿಡುಗಡೆಯಾಗದಿದ್ದರೆ ಸರ್ಕಾರದಲ್ಲಿ ಕಾಯಂ ಆಗಿ ನಿಹಿತವಾಗಿರತಕ್ಕದ್ದು
188. ಕೆಲವು ಸಂದರ್ಭಗಳಲ್ಲಿ ಮುನ್ನೆಚ್ಚರಿಕೆಯ ಕ್ರಮಗಳು
189. ಭದ್ರತೆಯನ್ನು ಒದಗಿಸಿದಾಗ ಮುಂಜಾಗ್ರತೆ ಕ್ರಮಗಳನ್ನು ಬಿಟ್ಟು ಬಿಡುವಿಕೆ
190. ಇತರ ಸರ್ಕಾರೀ ಬಾಕಿಗಳ ವಸೂಲಿ
191. ಜಾಮೀನುದಾರನಿಂದ ಹಣದ ವಸೂಲಿ
192. ಒಂದು ಜಿಲ್ಲೆಯಲ್ಲಿನ ಬಾಕಿಯನ್ನು ಮತ್ತೊಂದು ಜಿಲ್ಲೆಯ ಡೆಪ್ಯೂಟಿ ಕಮಿಷನರು ವಸೂಲು ಮಾಡುವುದು

## ಅಧ್ಯಾಯ–XIV–ಎ
## ಅಪರಾಧಗಳು ಮತ್ತು ದಂಡನೆಗಳು

192–ಎ. ಅಪರಾಧಗಳು ಮತ್ತು ದಂಡನೆಗಳು
192–ಬಿ. ಅಪರಾಧಗಳ ದುಷ್ಪ್ರೇರಣೆ
192–ಸಿ. ಇತರ ಕಾನೂನುಗಳ ಮೇರೆಗೆ ಶಿಕ್ಷಿಸಲು ನಿಷೇಧ ಇಲ್ಲ
192.ಡಿ. ಅಪರಾಧಗಳನ್ನು ನ್ಯಾಯಿಕ ಗಮನಕ್ಕೆ ತೆಗೆದುಕೊಳ್ಳಬೇಕು

## ಅಧ್ಯಾಯ–XV
## ಸಂಕೀರ್ಣ

193. ನಕಾಶೆಗಳ ಮತ್ತು ಭೂ ದಾಖಲೆಗಳ ಪರಿಶೀಲನೆ ಮತ್ತು ಅವುಗಳ ಪ್ರತಿಗಳನ್ನು ಕೊಡುವುದು
194. ಭೂಕಂದಾಯದ ಸ್ಥಗಿತ ಅಥವಾ ಮಾಫಿ
195. ಅಧಿಕಾರಗಳನ್ನು ವಹಿಸಿಕೊಡುವುದು
196. ಸದ್ಭಾವನೆಯಿಂದ ಕೈಕೊಂಡ ಕ್ರಮಕ್ಕೆ ರಕ್ಷಣೆ
197. ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರದ ಅಧಿಕಾರ
198. ನಿಯಮಗಳನ್ನು, ವಿನಿಯಮನಗಳನ್ನು ಮತ್ತು ಅಧಿಸೂಚನೆಗಳನ್ನು ರಾಜ್ಯ ವಿಧಾನ ಮಂಡಲದ ಮುಂದೆ ಇಡುವುದು
199. ತತ್ಕಾಲೀನ ಉಪಬಂಧಗಳು
200. ಕಂಪೆನಿಗಳಿಂದ ಅಪರಾಧಗಳು
201. ಅಡಚಣೆಗಳನ್ನು ನಿವಾರಿಸುವ ಅಧಿಕಾರ
202. ನಿರಸನ ಮತ್ತು ಉಳಿಸುವಿಕೆಗಳು
ಅನುಸೂಚಿ

## ಉದ್ದೇಶ ಮತ್ತು ಕಾರಣಗಳ ಹೇಳಿಕೆ

## I

**1964ರ ಅಧಿನಿಯಮ 12.–** ಮೈಸೂರು, ಮುಂಬಯಿ, ಹೈದರಬಾದ್ ಮತ್ತು ಕೂಡಗು ಪ್ರದೇಶಗಳ ಭೂಮಿಯ ಹಾಗೂ ಭೂ ಕಂದಾಯ ನಿರ್ವಹಣೆಗೆ ಸಂಬಂಧಿಸಿದ ಕಾನೂನುಗಳನ್ನು ಭೂ ಕಂದಾಯ ಸಂಹಿತೆಗಳಿಗೆ ಅಥವಾ ಅಧಿನಿಯಮಗಳಿಗೆ ಅನುಗುಣವಾಗಿ ಕ್ರೋಡೀಕರಿಸಲಾಗಿದೆ. ಆದರೆ, ಮದ್ರಾಸ್ ಪ್ರದೇಶದಲ್ಲಿ ಭೂಮಿಯ ಮತ್ತು ಭೂ ಕಂದಾಯದ ನಿರ್ವಹಣೆಯನ್ನು ಮಂಡಳಿಯ ಸ್ಥಾಯೀ ಆದೇಶಗಳ ಮೇರೆಗೆ ಹಾಗೂ ಭೂ ಮತ್ತು ಭೂ ಕಂದಾಯದ ನಿರ್ದಿಷ್ಟ ಅಂಶಗಳನ್ನು ನಿರ್ವಹಿಸುವ ಸುಮಾರು 23 ಅಧಿನಿಯಮಗಳಿಗೆ ಅನುಸಾರವಾಗಿ ನಿರ್ವಹಿಸಲಾಗುತ್ತಿದೆ. ರಾಜ್ಯದ ಬೇರೆಬೇರೆ ಪ್ರದೇಶಗಳಲ್ಲಿರುವ ಹಲವಾರು ಕಾನೂನುಗಳಲ್ಲಿ, ತಾತ್ವಿಕವಾಗಿ ಯಾವುದೇ ಪ್ರಮುಖ ವ್ಯತ್ಯಾಸ ಕಂಡುಬರದಿದ್ದರೂ, ಮೈಸೂರು ರಾಜ್ಯದಲ್ಲಿ ಭೂಮಿಯ ಮತ್ತು ಭೂ ಕಂದಾಯ ನಿರ್ವಹಣೆಯನ್ನು ನಿಯಂತ್ರಿಸಲು ಏಕರೂಪದ ಕಾನೂನನ್ನು ನಿರ್ವಹಣೆ ಮಾಡುವುದನ್ನು ಹೊಂದುವುದು ಅಪೇಕ್ಷಣೀಯವಾಗಿದೆ ಹಾಗೂ ಆಡಳಿತಾತ್ಮಕವಾಗಿ ಅನುಕೂಲಕರವಾಗಿದೆ ಎಂದು ಭಾವಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(ದಿನಾಂಕ: 9ನೇ ಆಗಸ್ಟ್ 1962ರ ಕರ್ನಾಟಕ ರಾಜ್ಯಪತ್ರ (ವಿಶೇಷ ಸಂಚಿಕೆ) ಭಾಗ–IV 2ಎ ಯಲ್ಲಿ ಪುಟ ಸಂಖ್ಯೆ 594 ರಲ್ಲಿ ಪ್ರಕಟಿಸಲಾಗಿದೆ.)

## II

**1965ರ ತಿದ್ದುಪಡಿ ಅಧಿನಿಯಮ 9.–** ಖುಷ್ಕಿ ಭೂಮಿ, ಮಳೆ ಆಧಾರಿತ ತರಿ ಭೂಮಿ ಮತ್ತು ಮಳೆ ಆಧಾರಿತ ಬಾಗಾಯತು ಭೂಮಿಗೆ ಸಂಬಂಧಿಸಿದಂತೆ, ಆ ವರ್ಗದಲ್ಲಿ ಶೇಕಡಾ ನೂರರಷ್ಟು ವರ್ಗೀಕರಣ ಮೌಲ್ಯದ ಭೂಮಿಯ ಭೂಕಂದಾಯದ ನಿಗದಿತ ದರವು, ಅಂಥ ಭೂಮಿಯ ಸರಾಸರಿ ಇಳುವರಿಯ ಮೌಲ್ಯದ ಶೇಕಡ ನಾಲ್ಕರಷ್ಟಿರತಕ್ಕದ್ದೆಂಬುದನ್ನು ಪರಿಗಣಿಸಲಾಗಿದೆ. ನೆಡುತೋಪುಗಳಿಗೆ ಸಂಬಂಧಿಸಿದಂತೆ ನಿಗದಿತ ದರವು, ಶೇಕಡಾ ನೂರರಷ್ಟು ವರ್ಗೀಕರಣ ಮೌಲ್ಯವುಳ್ಳಂಥ ವರ್ಗದ ಭೂಮಿಗಳ ಸರಾಸರಿ ಇಳುವರಿಯ ಮೌಲ್ಯದ ಶೇಕಡಾ ಒಂದರಷ್ಟು ಇರತಕ್ಕದ್ದೆಂಬುದನ್ನು ಸಹ ಪರಿಗಣಿಸಲಾಗಿದೆ.

ನೀರಾವರಿ ತರಿ ಭೂಮಿ ಹಾಗೂ ನೀರಾವರಿ ಬಾಗಾಯತು ಭೂಮಿಗೆ ಸಂಬಂಧಪಡುವಷ್ಟರ ಮಟ್ಟಿಗೆ ಹೇಳುವುದಾದರೆ, ಅವು ಖುಷ್ಕಿ ಭೂಮಿಯಾಗಿದ್ದರೂ, ಅವುಗಳನ್ನು ಭೂ ಕಂದಾಯದ ಉದ್ದೇಶಕ್ಕಾಗಿ ಪರಿಗಣಿಸಬೇಕೆಂದು ಮತ್ತು ಆ ಸ್ಥಳದಲ್ಲಿರುವ ಆ ವರ್ಗದ ಖುಷ್ಕಿ ಭೂಮಿಯ ಆ ವರ್ಗೀಕರಣ ಮೌಲ್ಯದ ಭೂಮಿಗಳಿಗೆ ಅನ್ವಯವಾಗುವ ಭೂ ಕಂದಾಯವನ್ನು ವಿಧಿಸತಕ್ಕದ್ದೆಂಬುದನ್ನು ಮತ್ತು ನೀರಿನ ದರವನ್ನು ಮೈಸೂರು ನೀರಾವರಿ (ಪುರೋಭಿವೃದ್ಧಿ ವಂತಿಗೆ ಮತ್ತು ನೀರಿನ ದರ ವಿಧಿಸುವಿಕೆ) ಅಧಿನಿಯಮ, 1957ರ ಉಪಬಂಧಗಳ ಮೇರೆಗೆ ಪ್ರತ್ಯೇಕವಾಗಿ ವಿಧಿಸತಕ್ಕದ್ದೆಂಬುದನ್ನು ಪರಿಗಣಿಸಲಾಗಿದೆ.

ಪ್ರಾರಂಭದಲ್ಲಿ ಹೊಸ ನಿರ್ಧರಣಾ ದರಗಳನ್ನು, 1965–66 ರಿಂದ ಜಾರಿಗೆ ತರಬೇಕೆಂದು ಉದ್ದೇಶಿಸಲಾಗಿತ್ತು. ಕಂದಾಯ ನಿರ್ಧರಣೆಯ ವರದಿಗಳನ್ನು ಪರಿಶೀಲಿಸಲು, ನಿರೀಕ್ಷೆಗಿಂತ ಹೆಚ್ಚಿನ ಸಮಯವನ್ನು ತೆಗೆದುಕೊಂಡಿರುವ ಕಾರಣದಿಂದಾಗಿ, ಹೊಸ ದರಗಳನ್ನು ರೆವಿನ್ಯೂ ವರ್ಷದಲ್ಲಿ ವಾಸ್ತವಿಕವಾಗಿ ಜಾರಿಗೊಳಿಸಿದ್ದರೂ, ಮರು ನಿರ್ಧರಣೆಗೆ ಅನುಸಾರವಾಗಿ ಭೂ ಕಂದಾಯವನ್ನು ವಿಧಿಸುವುದಕ್ಕೆ ಸರ್ಕಾರವನ್ನು ಸಮರ್ಥಗೊಳಿಸುವ ಸಲುವಾಗಿ ಅವಶ್ಯಕ ತಿದ್ದುಪಡಿಗಳನ್ನು ತರಲು ಪ್ರಸ್ತಾವಿಸಲಾಗಿದೆ. ಆದ್ದರಿಂದ ಈ ವಿಧೇಯಕ.

ಚಿಕ್ಕ ಸ್ವರೂಪದ ಕೆಲವು ಇತರ ತಿದ್ದುಪಡಿಗಳನ್ನು ಮಾಡಲು ಇರುವ ಅವಕಾಶವನ್ನು ಬಳಸಿಕೊಳ್ಳಲಾಗಿದೆ.

(ದಿನಾಂಕ: 18ನೇ ಏಪ್ರಿಲ್ 1965ರ ಕರ್ನಾಟಕ ರಾಜ್ಯಪತ್ರ (ವಿಶೇಷ ಸಂಚಿಕೆ) ಭಾಗ–IV 2ಎ ಯಲ್ಲಿ 90 ಪುಟ ಸಂಖ್ಯೆ 6 ರಲ್ಲಿ ಪ್ರಕಟಿಸಲಾಗಿದೆ.)

## III

**1966ರ ತಿದ್ದುಪಡಿ ಅಧಿನಿಯಮ 2.–** ಮೈಸೂರು ಭೂ ಕಂದಾಯ ಅಧಿನಿಯಮ, 1964 ರ 49ನೇ ಪ್ರಕರಣದ ಅನುಸಾರ ಡೆಪ್ಯೂಟಿ ಕಮಿಷನ್‌ರನು ಹೊರಡಿಸಿದ ಯಾವುದೇ ಆದೇಶಕ್ಕೆ ಸಂಬಂಧಿಸಿದಂತೆ ನ್ಯಾಯಾಧಿಕರಣವು ಅಪೀಲು ಪ್ರಾಧಿಕಾರವಾಗಿರುತ್ತದೆ. ಮೇಲ್ಮನವಿ ಅಧಿಕಾರವನ್ನು ಡಿವಿಷನಲ್ ಕಮಿಷನರ್‌ನಿಗೆ ನೀಡಲಾಗಿದೆ, ಆದರೆ ಭೂ ಕಂದಾಯ ಅಧಿನಿಯಮದ ಮೂಲಕ ನಿರಸಿತವಾದ ಅಧಿನಿಯಮಗಳ ಮೇರೆಗೆ ಪ್ರಾರಂಭವಾದ ಹಾಗೂ ಮುಗಿಸಬೇಕಾದ

ವ್ಯವಹರಣೆಗಳಿಗೆ ಸಂಬಂಧಪಟ್ಟಂತೆ ಡೆಪ್ಯೂಟಿ ಕಮಿಷನರ್‌ನು ಹೊರಡಿಸಿದ ಆದೇಶಗಳ ಮೇಲಿನ ಅಪೀಲುಗಳನ್ನು ಡಿವಿಷನಲ್ ಕಮಿಷನರನು ನಿರ್ವಹಿಸಬೇಕಾಗುತ್ತದೆ ಹಾಗೂ ವ್ಯವಹರಿಸಬೇಕಾಗುತ್ತದೆ. ನಿರಸನಗೊಳಿಸಿದ ಅಧಿನಿಯಮಗಳ ಮೇರೆಗೆ ಮಾಡಿದ ಆದೇಶಗಳಿಗೆ ಸಂಬಂಧಿಸಿದ ಅಪೀಲು ಪ್ರಕಾರ್ಯಗಳನ್ನು ಮೈಸೂರು ರೆವಿನ್ಯೂ ಅಪೀಲು ನ್ಯಾಯಾಧಿಕರಣಕ್ಕೆ ವಹಿಸಿಕೊಡುವುದು ಅಪೇಕ್ಷಣೀಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ, ಈ ವಿಧೇಯಕ.

ಸದರಿ ಅಪೀಲು ಪ್ರಕಾರ್ಯಗಳನ್ನು ವಹಿಸಿಕೊಡುವುದರಿಂದ ರಾಜ್ಯಕ್ಕೆ ಯಾವುದೇ ಹೆಚ್ಚುವರಿ ವೆಚ್ಚ ಉಂಟಾಗುವುದಿಲ್ಲ.

(ದಿನಾಂಕ: 22ನೇ ಜನವರಿ 1966 ರ ಕರ್ನಾಟಕ ರಾಜ್ಯಪತ್ರ (ವಿಶೇಷ ಸಂಚಿಕೆ) ಭಾಗ-IV 2 ಎ ಯಲ್ಲಿ 9, ಪುಟ ಸಂಖ್ಯೆ 4 ರಲ್ಲಿ ಪ್ರಕಟಿಸಲಾಗಿದೆ.)

## IV

**1969ರ ತಿದ್ದುಪಡಿ ಅಧಿನಿಯಮ 7.–** ಯಾವ ವಲಯಗಳಲ್ಲಿ ಕಂದಾಯ ವ್ಯವಸ್ಥೆಯಲ್ಲಿ ಇತ್ತೀಚೆಗೆ ಆದ ಪರಿಷ್ಕರಣೆಯಿಂದಾಗಿ ದರಗಳನ್ನು ನಿಗದಿಪಡಿಸಲಾಗಿದೆಯೋ ಆ ದರಗಳನ್ನು ಮಾರ್ಪಾಡು ಮಾಡುವ ಅಗತ್ಯವಿದೆಯೋ ಆ ವಲಯಗಳಲ್ಲಿ ಕಂದಾಯ ವ್ಯವಸ್ಥೆಯ ಪರಿಷ್ಕರಣೆಗೆ ನಿರ್ದೇಶಿಸಲು ಅಧಿಕಾರ ಪಡೆಯುವುದು ಅವಶ್ಯಕವೆಂದು ಪರಿಗಣಿಸಲಾಗಿದೆ. ವೈಯಕ್ತಿಕ ಹಿಡುವಳಿಗಳ ಮೇಲೆ ಕರ ನಿರ್ಧರಣೆಯನ್ನು ನಿರ್ಣಯಿಸುವುದಕ್ಕೆ ಪ್ರಾಧಿಕಾರವನ್ನು ನಿರ್ದಿಷ್ಟಪಡಿಸಲು ಉಪಬಂಧ ಕಲ್ಪಿಸುವುದು ಹಾಗೂ ಆಕ್ಷೇಪಣೆಗಳನ್ನು ಸಲ್ಲಿಸುವುದಕ್ಕೆ ಹಿಡುವಳಿದಾರರಿಗೆ ಅವಕಾಶವನ್ನು ಕಲ್ಪಿಸುವುದು ಹಾಗೂ ಈ ಆಕ್ಷೇಪಣೆಗಳ ಪರಿಶೀಲನೆಗಾಗಿ ಹಾಗೂ ತೀರ್ಮಾನಕ್ಕಾಗಿ ಏರ್ಪಾಟು ಮಾಡುವುದು ಸಹ ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(ದಿನಾಂಕ: 31ನೇ ಮಾರ್ಚ್ 1969ರ ಕರ್ನಾಟಕ ರಾಜ್ಯಪತ್ರ (ವಿಶೇಷ ಸಂಚಿಕೆ) ಭಾಗ-IV 2ಎ ಯಲ್ಲಿ ಪುಟ ಸಂಖ್ಯೆ 6 ರಲ್ಲಿ ಸಂಖ್ಯೆ 193 ಕೊಟ್ಟು ಪ್ರಕಟಿಸಲಾಗಿದೆ.)

## V

**1970ರ ತಿದ್ದುಪಡಿ ಅಧಿನಿಯಮ 5.–** ಈಗ, ಭೂ ಮಂಜೂರಾತಿ ಪ್ರಕರಣಗಳಲ್ಲಿ ಸಹ ಅಪೀಲುಗಳನ್ನು ಮೈಸೂರು ಕಂದಾಯ ಅಪೀಲು ನ್ಯಾಯಾಧಿಕರಣಕ್ಕೆ ಸಲ್ಲಿಸಲಾಗುತ್ತಿದೆ. ಈ ಪ್ರಕರಣಗಳ ಸ್ವರೂಪವನ್ನು ಗಮನದಲ್ಲಿಟ್ಟುಕೊಂಡು, ಅಪೀಲುಗಳನ್ನು ಡಿವಿಷನಲ್ ಕಮೀಷನರನಿಗೆ ಸಲ್ಲಿಸುವುದು ಹಾಗೂ ಪುನರೀಕ್ಷಣಾ ಅಧಿಕಾರಗಳನ್ನು ಸರ್ಕಾರದಲ್ಲಿ ನಿಹಿತಗೊಳಿಸುವುದು ಸೂಕ್ತವಾಗಿದೆ.

ಸರ್ಕಾರಿ ಭೂಮಿಯ ಅನಧಿಕೃತ ಅಧಿಭೋಗದ ಪ್ರಕರಣಗಳಲ್ಲಿ, ಈಗ ಅಸ್ತಿತ್ವದಲ್ಲಿರುವ 94ನೇ ಪ್ರಕರಣದ ಉಪಬಂಧಗಳು ಹೊರಹಾಕುವುದಕ್ಕೆ ಪರ್ಯಾಯ ಉಪಬಂಧ ಕಲ್ಪಿಸಿರುವುದಿಲ್ಲ. ಹೀಗಾಗಿ, ಅನಧಿಕೃತ ಅನುಭೋಗದಾರರು ಸದ್ಭಾವನೆಯಿಂದ ಗಣನೀಯವಾಗಿ ಹೂಡಿಕೆ ಮಾಡಿರುವ ಕೆಲವು ಪ್ರಕರಣಗಳಲ್ಲಿ, ಹೊರಹಾಕುವ ಕ್ರಮದಿಂದ ತುಂಬಾ ತೊಂದರೆಯಾಗುಗುತ್ತದೆ. ಆದ್ದರಿಂದ, ಪ್ರತಿಯೊಂದು ಪ್ರಕರಣದ ಸನ್ನಿವೇಶಗಳಿಗೆ ಹೊಂದುವಂಥ ಸೂಕ್ತ ಷರತ್ತುಗಳ ಮೇಲೆ ಅರ್ಹ ಪ್ರಕರಣಗಳಲ್ಲಿ ಅಂಥ ಅನಧಿಕೃತ ಅಧಿಭೋಗವನ್ನು ಸಕ್ರಮಗೊಳಿಸುವ ಸಲುವಾಗಿ ಹೊಸ 94ಎ ಪ್ರಕರಣವನ್ನು ಸೇರ್ಪಡೆ ಮಾಡಲು ಪ್ರಸ್ತಾವಿಸಲಾಗಿದೆ.

ಆದ್ದರಿಂದ, ಈ ವಿಧೇಯಕ.

(ದಿನಾಂಕ: 16ನೇ ಜನವರಿ 1970ರ ಕರ್ನಾಟಕ ರಾಜ್ಯಪತ್ರ (ವಿಶೇಷ ಸಂಚಿಕೆ) ಭಾಗ-IV 2ಎಯಲ್ಲಿ, ಪುಟ ಸಂಖ್ಯೆ 7 ರಲ್ಲಿ ಸಂಖ್ಯೆ 24 ಕೊಟ್ಟು, ಪ್ರಕಟಿಸಲಾಗಿದೆ.)

## VI

**1975ರ ತಿದ್ದುಪಡಿ ಅಧಿನಿಯಮ 33.–** 1970 ರಲ್ಲಿ ತಿದ್ದುಪಡಿಯಾದ ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ರ ಮೇರೆಗೆ ಭೂ ಮಂಜೂರಾತಿ ಪ್ರಕರಣಗಳಿಗೆ ಸಂಬಂಧಿಸಿದಂತೆ ಕರ್ನಾಟಕ ಸರ್ಕಾರವು ಅತ್ಯುನ್ನತ ಅಪೀಲು ಹಾಗೂ ಪುನರೀಕ್ಷಣಾ ಪ್ರಾಧಿಕಾರವಾಗಿದೆ. ಈ ಕಾರಣದಿಂದಾಗಿ ಸರ್ಕಾರದ ಮಟ್ಟದಲ್ಲಿ ಕಾರ್ಯಬಾಹುಳ್ಯ

ಹೆಚ್ಚಾಗಿದೆ ಹಾಗೂ ಸಮರ್ಪಕ ಪ್ರಮಾಣದಲ್ಲಿ ಈ ಕಾರ್ಯವನ್ನು ಮಾಡಲು ಸಾಧ್ಯವಾಗಿಲ್ಲ. ತತ್ಪರಿಣಾಮವಾಗಿ ಬಾಕಿ ಪ್ರಕರಣಗಳ ಸಂಖ್ಯೆ ಹೆಚ್ಚಾಗಿದೆ.

ಸಾಮಾನ್ಯವಾಗಿ, ಕಂದಾಯ ವಿಷಯಗಳ ಬೆಂಗಳೂರಿನಲ್ಲಿರುವ ಕರ್ನಾಟಕ ರೆವಿನ್ಯೂ ಅಪೀಲು ವಿಚಾರಣಾ ನ್ಯಾಯಾಧಿಕರಣ ಅತ್ಯುನ್ನತ ಅಪೀಲು ಪ್ರಾಧಿಕಾರವಾಗಿದೆ. ಮೂರು-ನಾಲ್ಕು ವರ್ಷಗಳ ಹಿಂದೆ ನ್ಯಾಯಾಧಿಕರಣದ ಕಾರ್ಯಬಾಹುಳ್ಯ ತುಂಬಾನೆ ಹೆಚ್ಚಿಗೆ ಇತ್ತು. ಆದರೆ, ಇನಾಮು ರದ್ದಿಯಾತಿ ಅಧಿನಿಯಮದ ಮೇರೆಗೆ ಬೃಹತ್ ಪ್ರಮಾಣದಲ್ಲಿ ಅಪೀಲುಗಳ ವಿಲೇವಾರಿಯಿಂದಾಗಿ ಮತ್ತು ಮೋಟಾರು ವಾಹನಗಳ ಅಧಿನಿಯಮದ ಮೇರೆಗೆ ಈ ನ್ಯಾಯಾಧಿಕರಣಕ್ಕೆ ಎರಡನೆಯದಾಗಿ ಇದ್ದ ಅಪೀಲು ಅಧಿಕಾರವನ್ನು ಉಚ್ಚನ್ಯಾಯಾಲಯದ ಆದೇಶದ ಮೇರೆಗೆ ತೆಗೆದು ಹಾಕಿರುವುದರಿಂದ ಕಾರ್ಯಬಾಹುಳ್ಯ ಕಡಿಮೆಯಾಗಿದೆ.

ಭೂ ಮಂಜೂರಾತಿ ಪ್ರಕರಣಗಳಿಗೆ ಸಂಬಂಧಿಸಿದಂತೆ ಅಪೀಲು ಮತ್ತು ಪುನರೀಕ್ಷಣಾ ಅಧಿಕಾರಗಳನ್ನು ಕರ್ನಾಟಕ ರೆವಿನ್ಯೂ ಅಪೀಲುಗಳ ನ್ಯಾಯಾಧಿಕರಣಕ್ಕೆ ವರ್ಗಾಯಿಸುವುದು ಸಾರ್ವಜನಿಕ ಹಿತದೃಷ್ಟಿಯಿಂದ ವಿಹಿತವೆಂದು ಸರ್ಕಾರವು ಭಾವಿಸಿತ್ತು.

ಹಾಗಾಗಿ, ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ಅಧ್ಯಾದೇಶ, 1975ನ್ನು ಹೊರಡಿಸಲಾಗಿತ್ತು.

ಸದರಿ ಆಧ್ಯಾದೇಶಕ್ಕೆ ಬದಲಾಗಿ ಈ ವಿಧೇಯಕ.

(ದಿನಾಂಕ: 26ನೇ ಜುಲೈ 1975 ರ ಕರ್ನಾಟಕ ರಾಜ್ಯಪತ್ರ (ವಿಶೇಷ ಸಂಚಿಕೆ) ಭಾಗ-IV 2ಎ ಯಲ್ಲಿ, ಸಂಖ್ಯೆ. 2041 ಕೊಟ್ಟು, ಪುಟ ಸಂಖ್ಯೆ 7 ರಲ್ಲಿ ಪ್ರಕಟಿಸಲಾಗಿದೆ.)

## VII

**1976ರ ತಿದ್ದುಪಡಿ ಅಧಿನಿಯಮ 22.-** ಕರ್ನಾಟಕ ಭೂ ಕಂದಾಯ ಅಧಿನಿಯಮದ 49ನೇ ಪ್ರಕರಣದ ಮೇರೆಗೆ, ಅಸಿಸ್ಟೆಂಟ್ ಕಮೀಷನರ್‌ರ ಅಥವಾ ಡೆಪ್ಯುಟಿ ಕಮಿಷನರ್‌ರ ಅಧಿಕಾರಗಳನ್ನು ಅಸಿಸ್ಟೆಂಟ್ ಕಮೀಷನರ್‌ರ ಅಧೀನದಲ್ಲಿರುವ ಕಂದಾಯ ಅಧಿಕಾರಿಗೆ ನಿಹಿತಗೊಳಿಸಿರಲಿ ಅಥವಾ ನಿಹಿತಗೊಳಿಸದಿರಲಿ ಆ ಕಂದಾಯ ಅಧಿಕಾರಿಯು ಹೊರಡಿಸಿರುವ ಆದೇಶದ ವಿರುದ್ಧ ಅಪೀಲನ್ನು ಅಸಿಸ್ಟೆಂಟ್ ಕಮೀಷನರ್‌ರಿಗೆ ಸಲ್ಲಿಸಬೇಕಾಗುತ್ತದೆ. 197ನೇ ಪ್ರಕರಣದ ಮೇರೆಗೆ ಡೆಪ್ಯುಟಿ ಕಮಿಷನರ್‌ನ ಕೆಲವು ಅಧಿಕಾರಗಳನ್ನು ತಹಸಿಲ್ದಾರನಿಗೆ ವಹಿಸಿಕೊಡಲಾಗಿದೆ. ವಹಿಸಿಕೊಟ್ಟ ಅಂಥ ಅಧಿಕಾರದ ಮೇರೆಗೆ ತಹಸೀಲ್ದಾರನು ಹೊರಡಿಸಿದ ಆದೇಶಗಳ ವಿರುದ್ಧ ಮಾತ್ರ ನ್ಯಾಯಾಧಿಕರಣಕ್ಕೆ ಅಪೀಲು ಸಲ್ಲಿಸಬಹುದೆಂದು ಕೆಲವು ಪ್ರಕರಣಗಳಲ್ಲಿ ಕರ್ನಾಟಕ ರೆವಿನ್ಯೂ ಅಪೀಲು ಪ್ರಾಧಿಕಾರವು ಅಭಿಪ್ರಾಯಪಟ್ಟಿದೆ. ಅಂಥ ಪ್ರಕರಣಗಳಲ್ಲಿ ಸಹ ಅಪೀಲುಗಳನ್ನು ಅಸಿಸ್ಟೆಂಟ್ ಕಮೀಷನರ್‌ರಿಗೆ ಸಲ್ಲಿಸಬೇಕೆಂದು ಉದ್ದೇಶಿಸಲಾಗಿತ್ತು.

94ಎ ಪ್ರಕರಣದ ಮೇರೆಗೆ ಸರ್ಕಾರಿ ಭೂಮಿಗಳ ಅನಧಿಕೃತ ಅಧಿಭೋಗವನ್ನು ಸಕ್ರಮಗೊಳಿಸಬೇಕಾಗಿತ್ತು. ಅನಧಿಕೃತ ಅಧಿಭೋಗದಾರರಿಗೆ ಅಂಥ ಹಕ್ಕನ್ನು ನೀಡುವ ಅವಶ್ಯಕತೆ ಇಲ್ಲವೆಂದು ಮತ್ತು ಈ ಸರ್ಕಾರಿ ಭೂಮಿಗಳನ್ನು ನೈಜ ಭೂ ರಹಿತ ವ್ಯಕ್ತಿಗಳಿಗೆ ಹಂಚಿಕೆ ಮಾಡಬೇಕೆಂದು ಭಾವಿಸಲಾಗಿತ್ತು.

ಆದ್ದರಿಂದ, 49ಎ ಪ್ರಕರಣವನ್ನು ತಿದ್ದುಪಡಿ ಮಾಡಲು ಮತ್ತು 94ಎ ಪ್ರಕರಣವನ್ನು ಬಿಟ್ಟುಬಿಡಲು ಕರ್ನಾಟಕ ಭೂ ಕಂದಾಯ (ಎರಡನೇ ತಿದ್ದುಪಡಿ) ಆಧ್ಯಾದೇಶ, 1975ನ್ನು ಹೊರಡಿಸಲಾಗಿತ್ತು.

ಸದರಿ ಅಧ್ಯಾದೇಶಕ್ಕೆ ಬದಲಾಗಿ ಈ ವಿಧೇಯಕ.

(ಕಡತ ಸಂ.ಲಾ 16 ಎಲ್‌ಜಿಎನ್ 76 ರಿಂದ ಪಡೆದುಕೊಳ್ಳಲಾಗಿದೆ)

## VIII

**1976ರ ತಿದ್ದುಪಡಿ ಅಧಿನಿಯಮ 23.-** ರಾಜ್ಯದಲ್ಲಿ ಜಿಲ್ಲೆಗಳ ಹಾಗೂ ತಾಲ್ಲೂಕುಗಳ ಪುನಾರಚನೆಯು ಎಲ್ಲೆಲ್ಲಿ ಅವಶ್ಯಕತೆಯಿದೆ ಎಂಬುದನ್ನು ಸರ್ಕಾರ ಪರ್ಯಾಲೋಚಿಸುತ್ತಿದೆ. ಏಕ ಸದಸ್ಯ ಆಯೋಗವು ಅನೇಕ ಕಡೆಗಳಿಂದ ಬಂದ ಮನವಿಗಳನ್ನು ಆಲಿಸಿದ ನಂತರ ಹಾಗೂ ಸಲಹೆಗಳನ್ನು ಪರಿಗಣಿಸಿದ ನಂತರ ವಿಷಯವನ್ನು ವಿವರವಾಗಿ ಪರಿಶೀಲಿಸಿದೆ. ಕ್ಷೇತ್ರ ವ್ಯಾಪ್ತಿಯನ್ನು ರದ್ದುಗೊಳಿಸುವುದಕ್ಕೆ, ಸೃಜಿಸುವುದಕ್ಕೆ ಅಥವಾ ಬದಲಾಯಿಸುವುದಕ್ಕೆ ಸರ್ಕಾರಕ್ಕೆ ಅಧಿಕಾರ ಕೊಟ್ಟಿರುವ ಕರ್ನಾಟಕ ಭೂ ಕಂದಾಯ ಅಧಿನಿಯಮದ 6ನೇ ಪ್ರಕರಣದ ಅನುಸಾರವಾಗಿ, ಯಾವುದೇ ಅಧಿಸೂಚನೆಯನ್ನು ಆಕ್ಷೇಪಣೆಗಳನ್ನು ಆಲಿಸುವುದಕ್ಕಾಗಿ ಅಧಿಸೂಚಿಸಬೇಕಾಗುತ್ತದೆ. ಪರ್ಯಾಲೋಚನೆ ಯಲ್ಲಿರುವ ಬದಲಾವಣೆಗಳ ಬಗ್ಗೆ ಸವಿಸ್ತಾರವಾಗಿ ವಿಚಾರಣೆಗಳಾಗುತ್ತಿರುವುದರಿಂದಾಗಿ, ಯಾವ ಪ್ರಕರಣಗಳಲ್ಲಿ ಅಧಿಸೂಚನೆಯ

ಪ್ರಕಟಣೆಯು ಅವಶ್ಯಕವಲ್ಲವೆಂದು ಸರ್ಕಾರವು ಪರಿಗಣಿಸುತ್ತದೋ ಅಂಥ ಪ್ರಕರಣಗಳಲ್ಲಿ ಅಧಿಸೂಚನೆಯ ಪ್ರಕಟಣೆಯಾಗಬೇಕಾಗಿಲ್ಲವೆಂದು ಭೂ ಕಂದಾಯ ಅಧಿನಿಯಮದ ಆ 6ನೇ ಪ್ರಕರಣವನ್ನು ತಿದ್ದುಪಡಿ ಮಾಡಲು ನಿರ್ಧರಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(ವಿಧಾನಸಭೆ ವಿಧೇಯಕ ಸಂಖ್ಯೆ 1979ರ 19, ಕಡತ ಸಂಖ್ಯೆ ಲಾ 16 ಎಲ್‌ಜಿಎನ್ 76 ರಿಂದ ಪಡೆದುಕೊಳ್ಳಲಾಗಿದೆ)

## IX

**1981ರ ತಿದ್ದುಪಡಿ ಅಧಿನಿಯಮ 42.–** ಕರ್ನಾಟಕ ಭೂ ಕಂದಾಯ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 12) ರ 69ನೇ ಪ್ರಕರಣವು ರಾಜ್ಯ ಸರ್ಕಾರಕ್ಕೆ ಸೇರಿದ ಭೂಮಿಯ ವಿಲೇವಾರಿಯನ್ನು ನಿಯಂತ್ರಿಸುತ್ತದೆ. ಅದರಲ್ಲಿ ನಿರ್ದಿಷ್ಟಪಡಿಸಿರುವ ಅಧಿಕಾರಿಗಳು ವಿಲೆವಾರಿಯನ್ನು ಮಾಡುವುದಕ್ಕೆ ಸಕ್ಷಮ ವ್ಯಕ್ತಿಗಳಾಗಿರುತ್ತಾರೆ. ವಿಲೇವಾರಿಯ ಪ್ರಸ್ತುತ ವ್ಯವಸ್ಥೆಯಲ್ಲಿ ಕರ್ನಾಟಕ ಭೂ ಮಂಜೂರಾತಿ ನಿಯಮಗಳ 24ನೇ ನಿಯಮದ ಮೇರೆಗೆ ರಾಜ್ಯ ಸರ್ಕಾರವು, ಸಮಾಲೋಚನಾ ಸಮಿತಿಯನ್ನು ರಚಿಸುವುದಕ್ಕೆ ಅವಕಾಶವಿದೆ. ಇದು, ಅಧಿಕಾರಿ ಹಾಗೂ ಅಧಿಕಾರೇತರ ಸದಸ್ಯರುಗಳನ್ನು ಒಳಗೊಂಡಿದ್ದು, ಅವರ ಶಿಫಾರಸುಗಳನ್ನು ಸಾಮಾನ್ಯವಾಗಿ ಸಕ್ಷಮ ಪ್ರಾಧಿಕಾರವು ಅಂಗೀಕರಿಸುತ್ತದೆ.ಅವುಗಳು ಕೇವಲ ಸಲಹಾ ಸ್ವರೂಪದ್ದಾಗಿರುವುದರಿಂದ ಸಮಿತಿಯು ಪರಿಣಾಮಕಾರಿಯಾಗಿಲ್ಲದಿರುವುದು ಕಂಡು ಬಂದಿದೆ.

ಅಧಿಕಾರಿ ಹಾಗೂ ಅಧಿಕಾರೇತರ ಸದಸ್ಯರನ್ನೊಳಗೊಂಡ ಶಾಸನಾತ್ಮಕ ಸಮಿತಿಗಳನ್ನು ರಚಿಸಲು ಹಾಗೂ ತಾಲ್ಲೂಕುಗಳು ಮತ್ತು ನಗರ ಪ್ರದೇಶಗಳಲ್ಲಿನ ರೆವಿನ್ಯೂ ಭೂಮಿಗಳನ್ನು ವಿಲೇವಾರಿ ಮಾಡುವುದನ್ನು ಅಂಥ ಸಮಿತಿಗೆ ವಹಿಸಲು ಉದ್ದೇಶಿಸಲಾಗಿದೆ.ಆದ್ದರಿಂದ ಪ್ರಕರಣ 69ನ್ನು ತಿದ್ದುಪಡಿ ಮಾಡಲು ಪ್ರಸ್ತಾವಿಸಲಾಗಿದೆ.56ನೇ ಪ್ರಕರಣಕ್ಕೆ ಸೂಕ್ತವಾದ ತಿದ್ದುಪಡಿ ತರುವ ಮೂಲಕ ಸಮಿತಿಯ ನಿರ್ಣಯದ ಪುನರಾವಲೋಕಕ್ಕಾಗಿ ಉಪಬಂಧವನ್ನು ಕಲ್ಪಿಸಲಾಗಿದೆ.

ಕೃಷಿಯೇತರ ಉದ್ದೇಶಗಳಿಗಾಗಿ ಭೂಮಿಯ ಪರಿವರ್ತನೆಗಾಗಿ ಪ್ರಸ್ತುತ ಇರುವ ಪ್ರಕ್ರಿಯೆಯಲ್ಲಿ ಜಿಲ್ಲಾಧಿಕಾರಿಯಿಂದ ಮುಂಚಿತವಾಗಿ ಅನುಮೋದನೆ ಪಡೆಯುವುದು ಒಳಗೊಂಡಿರುವುದರಿಂದ ವಿಳಂಬವಾಗುತ್ತಿರುವುದು ಕಂಡು ಬಂದಿದೆ.ಕೃಷಿ ಭೂಮಿಯನ್ನು ಇತರ ಉದ್ದೇಶಗಳಿಗಾಗಿ ಉಪಯೋಗಿಸಲು ಬಯಸುವವರಿಗೆ ಉಂಟಾಗುತ್ತಿರುವ ತೊಂದರೆಯನ್ನು ತಪ್ಪಿಸುವ ಸಲುವಾಗಿ ಈ ಪ್ರಕ್ರಿಯೆಯನ್ನು ಕೈಬಿಡಲು ಉದ್ದೇಶಿಸಲಾಗಿದೆ. ತತ್ಪರಿಣಾಮವಾಗಿ, ಅಧಿನಿಯಮದ 95ನೇ ಪ್ರಕರಣದ (2) ರಿಂದ (6) ವರೆಗಿನ ಉಪಪ್ರಕರಣವನ್ನು ಬಿಟ್ಟುಬಿಡಲಾಗಿದೆ.ಕೆಲವು ತತ್ಪರಿಣಾಮದ ಹಾಗೂ ಪ್ರಾಸಂಗಿಕ ತಿದ್ದುಪಡಿಗಳನ್ನು ಸಹ ಮಾಡಲಾಗಿದೆ.

ಆದ್ದರಿಂದ ಈ ವಿಧೇಯಕ.

(ದಿನಾಂಕ: 3ನೇ ಫೆಬ್ರವರಿ 1981 ರ ಕರ್ನಾಟಕ ರಾಜ್ಯಪತ್ರ (ವಿಶೇಷ ಸಂಚಿಕೆ) ಭಾಗ–IV 2ಎ ಯಲ್ಲಿ, ಸಂಖ್ಯೆ. 97, ಪುಟ ಸಂಖ್ಯೆ 6 ರಲ್ಲಿ ಪ್ರಕಟಿಸಲಾಗಿದೆ.)

## X

**1982ರ ತಿದ್ದುಪಡಿ ಮಾಡುವ ಅಧಿನಿಯಮ 23.–**ಪ್ರಸ್ತುತ ತನ್ನ ಜಮೀನಿನ ಹಕ್ಕು ದಾಖಲೆಯ ಉದ್ಧೃತ ಭಾಗವನ್ನು ಪಡೆಯಲು ಇಚ್ಚೆಪಡುವ ವ್ಯಕ್ತಿಯು, ಸದರಿ ಉದ್ಧೃತ ಭಾಗವನ್ನು ಸಿದ್ಧಪಡಿಸುವಲ್ಲಿ ಮತ್ತು ಅದನ್ನು ಒದಗಿಸುವಲ್ಲಿ ಸಾಕಷ್ಟು ವಿಳಂಬವಾಗುತ್ತಿರುವುದರಿಂದ ತುಂಬಾ ಸಂಕಷ್ಟವನ್ನು ಎದುರಿಸುತ್ತಿದ್ದಾನೆ. ಇದನ್ನು ತಪ್ಪಿಸಲು, ತನ್ನ ಜಮೀನಿಗೆ ಸಂಬಂಧಿಸಿದ ಇತ್ತೀಚಿನ ವಿವರಗಳನ್ನೊಳಗೊಂಡ ಪಟ್ಟಾ ಪುಸ್ತಕವನ್ನು ಒದಗಿಸುವುದಕ್ಕಾಗಿ ಉಪಬಂಧ ಕಲ್ಪಿಸುವುದು ಅವಶ್ಯಕವೆಂದು ಪರಿಗಣಿಸಲಾಗಿದೆ. ತದ್ವಿರುದ್ಧವಾದುದು ರುಜುವಾತಾಗದ ಹೊರತು ಅದರಲ್ಲಿನ ನಮೂದುಗಳು ನಿಜವೆಂದು ಭಾವಿಸಲು ಉಪಬಂಧವನ್ನು ಸಹ ಕಲ್ಪಿಸಲಾಗದೆ, ಆ ಮೂಲಕ ಈ ಪುಸ್ತಕದ ನೆರವಿನಿಂದ ಸಾಲಗಳನ್ನು ಮತ್ತು ಮುಂಗಡಗಳನ್ನು ಸುಲಭವಾಗಿ ಪಡೆಯಬಹುದಾಗಿದೆ.

ಆದ್ದರಿಂದ ಈ ವಿಧೇಯಕ.

(ದಿನಾಂಕ: 12ನೇ ಜೂನ್ 1982 ರ ಕರ್ನಾಟಕ ರಾಜ್ಯಪತ್ರ (ವಿಶೇಷ ಸಂಚಿಕೆ) ಭಾಗ–IV 2ಎ ಯಲ್ಲಿ, ಪುಟ 4ರಲ್ಲಿ ಸಂಖ್ಯೆ. 483 ರಲ್ಲಿ ಪ್ರಕಟಿಸಲಾಗಿದೆ.)

## XI

**1983ರ ತಿದ್ದುಪಡಿ ಮಾಡುವ ಅಧಿನಿಯಮ 20.–**ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಇರುವ ವಿಶೇಷ ಸನ್ನಿವೇಶಗಳನ್ನು ದೃಷ್ಟಿಯಲ್ಲಿಟ್ಟುಕೊಂಡು, ಆ ಜಿಲ್ಲೆಯಲ್ಲಿನ ಖುಷ್ಕಿ (ಪುಂಜಾ) ಜಮಿನುಗಳನ್ನು ಪರಿವರ್ತನೆಗೊಳಿಸುವುದಕ್ಕಾಗಿ ಸರಳ ವಿಧಾನವನ್ನು ಕಲ್ಪಿಸುವುದು ಅವಶ್ಯಕವೆಂದು ಪರಿಗಣಿಸಲಾಗಿತ್ತು. ಕರ್ನಾಟಕ ಭೂ ಸುಧಾರಣೆಗಳ ಅಧಿನಿಯಮದ ಮೇರೆಗೆ ವ್ಯಕ್ತಿಗಳು ಅಧಿಭೋಗದಾರರೆಂದು ನೋಂದಾಯಿಸಿಕೊಂಡವರನ್ನು ಮತ್ತು ಆ ಅಧಿನಿಯಮದ ಮೇರೆಗೆ ಹೆಚ್ಚುವರಿ ಭೂಮಿಯನ್ನು ಪಡೆದವರನ್ನು ಸಹ ಸದರಿ ಉಪಬಂಧದ ವ್ಯಾಪ್ತಿಗೆ ತಂದಿರುವುದಿಲ್ಲ.

ಕೆಲವು ಪ್ರಾಸಂಗಿಕ ತಿದ್ದುಪಡಿಗಳನ್ನು ಸಹ ಮಾಡಲಾಗಿದೆ.

ಆದ್ದರಿಂದ ಈ ವಿಧೇಯಕ.

(ದಿನಾಂಕ: 12ನೇ ಆಗಸ್ಟ್ 1983 ರ ಕರ್ನಾಟಕ ರಾಜ್ಯಪತ್ರ (ವಿಶೇಷ ಸಂಚಿಕೆ) ಭಾಗ–IV 2ಎ ಯಲ್ಲಿ, ಪುಟ 4 ರಲ್ಲಿ ಸಂಖ್ಯೆ 717ರಲ್ಲಿ ಪ್ರಕಟಿಸಲಾಗಿದೆ.)

## XII

**1984ರ ತಿದ್ದುಪಡಿ ಮಾಡುವ ಅಧಿನಿಯಮ 23.–**ನಗರೀಕರಣವು, ವಿಶೇಷವಾಗಿ ಕರ್ನಾಟಕದಲ್ಲಿ ತೀವ್ರಗತಿಯಲ್ಲಿ ಆಗುತ್ತಿದೆ. ಭಾರತದ ಯಾವುದೇ ನಗರಕ್ಕೆ ಹೋಲಿಸಿದರೆ ಬೆಂಗಳೂರಿನ ಜನಸಂಖ್ಯೆಯ ಬೆಳವಣಿಗೆ ದರವು 1971–81 ರ ದಶಕದಲ್ಲಿ ಶೇಕಡ 76.17 ರಷ್ಟಿತ್ತು.ಪ್ರಸ್ತುತ 2001 A.D. ಒಳಗೆ ಬೆಂಗಳೂರಿನ ಜನಸಂಖ್ಯೆಯ ಪ್ರಮಾಣ ಆಶ್ಚರ್ಯದಾಯಕ ಸಂಖ್ಯೆ 70 ಲಕ್ಷಗಳನ್ನು ತಲುಪಲಿದೆಯೆಂದು ಅಂದಾಜು ಮಾಡಲಾಗಿದೆ.

ಬೆಂಗಳೂರಿಗೆ ಹೋಲಿಸಲಾಗಿ ಸಾಮಾನ್ಯವಾಗಿ ನಿಧಾನವಾಗಿ ಕರ್ನಾಟಕದ ಇತರ ನಗರಗಳು ಮತ್ತು ಪಟ್ಟಣಗಳು ಸಹ ತೀವ್ರಗತಿಯಲ್ಲಿ ಬೆಳವಣಿಗೆ ಹೊಂದುತ್ತಿವೆ.

ಸಾಕಷ್ಟು ಅವಶ್ಯಕಮೂಲ ಸೌಕರ್ಯಗಳನ್ನು ಒದಗಿಸದೇ ಹೋದರೆ ಅಂಥ ತೀವ್ರಗತಿಯ ನಗರೀಕರಣವು ದೊಡ್ಡ ಪ್ರಮಾಣದ ಪರಿಸರ ಅಪಾಯ ಉಂಟು ಮಾಡಬಹುದು. ಅದೇ ರೀತಿ ಸಾಕಷ್ಟು ಹಸಿರು ವಲಯಗಳನ್ನು ನಿರ್ಮಾಣ ಮಾಡುವುದಕ್ಕಾಗಿ ಸೂಕ್ತ ಉಪಬಂಧವನ್ನು ಕಲ್ಪಿಸುವುದರ ಜೊತೆಗೆ ಅವುಗಳ ಬೆಳವಣಿಗೆಯನ್ನು ಸಮರ್ಪಕವಾಗಿ ನಿಯಂತ್ರಿಸದ ಹೊರತು ಈ ನಗರ ಪ್ರದೇಶಗಳು ತೀವ್ರ ಅಪಾಯಕ್ಕೆ ಒಳಗಾಗುವುದರ ಜೊತೆಗೆ "ಕಾಂಕ್ರಿಟ್ ಕಾಡು" ಗಳಾಗಿ ಪರಿವರ್ತಿತವಾಗುತ್ತವೆ. ಅಂಥ ಉಪಬಂಧಗಳನ್ನು ಕಲ್ಪಿಸಿರುವುದರಿಂದ ಬಹುತೇಕ ನಗರಗಳು ಇಂದು ಹಸಿರು ವಲಯಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡುತ್ತಿವೆ.

ಕರ್ನಾಟಕದ ನಗರ ಪ್ರದೇಶದ ಜನರಿಗೆ ಸಾಕಷ್ಟು ಮೂಲಭೂತ ಸೌಕರ್ಯಗಳು ಒದಗುತ್ತಿರುವುದನ್ನು ಹಾಗೂ ಪರಿಸರದಿಂದ ಉಂಟಾಗುವ ಹಾನಿಗೆ ಒಳಗಾಗುತ್ತಿಲ್ಲವೆಂಬುದನ್ನು ಸುನಿಶ್ಚಿತಪಡಿಸಿಕೊಳ್ಳು ದೃಷ್ಟಿಯಿಂದ ಅಂಥ ನಗರಗಳ/ ಪಟ್ಟಣಗಳ ಸುತ್ತಮುತ್ತಲೂ ಹಸಿರು ವಲಯವನ್ನು ನಿರ್ಮಾಣ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ. ಕೃಷಿ ಭೂಮಿಯನ್ನು ಕೃಷಿಯೇತರ ಬಳಕೆಗಾಗಿ ಪರಿವರ್ತಿಸುವುದನ್ನು ನಿಯಂತ್ರಿಸುವುದು ಅಂಥ ಹಸಿರು ವಲಯವನ್ನು ಸಂರಕ್ಷಿಸಲು ಮೊಟ್ಟಮೊದಲು ಕೈಗೊಳ್ಳಬೇಕಾದ ಕ್ರಮ. ಆದ್ದರಿಂದ, ನಗರಗಳ/ ಪಟ್ಟಣಗಳ ಸುತ್ತಮುತ್ತಲೂ ಇರುವ ಹಸಿರು ವಲಯಗಳ ವ್ಯಾಪ್ತಿಯಲ್ಲಿ ಬಳಕೆಯಲ್ಲಿರುವ ಕೃಷಿ ಭೂಮಿಯನ್ನು ಕೃಷಿಯೇತರ ಭೂಮಿಯನ್ನಾಗಿ ಪರಿವರ್ತಿಸುವುದನ್ನು ತಡೆಯುವುದಕ್ಕಾಗಿ ಉಪಬಂಧ ಕಲ್ಪಿಸುವ ಸಲುವಾಗಿ, ಕಾಲಕಾಲಕ್ಕೆ ಅಧಿಸೂಚಿಸಬಹುದಾದಂತೆ, ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ರ 95ನೇ ಪ್ರಕರಣದ ಉಪಬಂಧಗಳನ್ನು ತಿದ್ದುಪಡಿ ಮಾಡಲು ಉದ್ದೇಶಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(ದಿನಾಂಕ: 9ನೇ ಫೆಬ್ರವರಿ 1984 ರ ಕರ್ನಾಟಕ ರಾಜ್ಯಪತ್ರ (ವಿಶೇಷ ಸಂಚಿಕೆ) ಭಾಗ–IV 2ಎಯಲ್ಲಿ, ಪುಟ 3 ರಲ್ಲಿ ಸಂಖ್ಯೆ. 112 ರಲ್ಲಿ ಪ್ರಕಟಿಸಲಾಗಿದೆ.)

## XIII

**1985ರ ತಿದ್ದುಪಡಿ ಅಧಿನಿಯಮ 10.–** ಎರಡು ಹೆಕ್ಟರ್‌ಗಳಿಗೆ ಮೀರದ ಮಳೆ ಆಶ್ರಿತ ಖುಷ್ಕಿ ಭೂಮಿಯ ಮತ್ತು ಅದಕ್ಕೆ ಸಮನಾದ ವಿಸ್ತೀರ್ಣದ ಮಳೆ ಆಶ್ರಿತ ತರಿ ಭೂಮಿಯ ಹಿಡುವಳಿಗಳಿಗೆ ಸರ್ಕಾರಿ ಆದೇಶ ಸಂಖ್ಯೆ ಆರ್‌ಡಿ 215 ಎಸ್‌ಎಸ್‌ಟಿ 77, ದಿನಾಂಕ 5.10.1977 ರಲ್ಲಿ ಭೂ ಕಂದಾಯ ಪಾವತಿಯಿಂದ ವಿನಾಯಿತಿ ನೀಡಲಾಗಿತ್ತು ಹಾಗೂ ಈ ವಿನಾಯಿತಿಯನ್ನು ಸರ್ಕಾರಿ ಆದೇಶ ಸಂಖ್ಯೆ ಆರ್‌ಡಿ 215 ಎಸ್‌ಎಸ್‌ಟಿ 77, ದಿನಾಂಕ: 18.10.1980 ರಲ್ಲಿ ನಾಲ್ಕು

ಹೆಕ್ಟರ್‌ಗಳಿಗೆ ಹೆಚ್ಚಿಸಲಾಗಿತ್ತು. ಆದರೆ, ಅಂಥ ಸ್ವರೂಪದ ವಿನಾಯಿತಿಗಳನ್ನು ನೀಡಲು ಭೂ ಕಂದಾಯ ಅಧಿನಿಯಮ, 1964 ರಲ್ಲಿ ಯಾವುದೇ ಉಪಬಂಧವಿರಲಿಲ್ಲ.

ಈ ಹಿಂದೆ, ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ರ ನಿಯಂತ್ರಕ ಉಪಬಂಧಗಳನ್ನು ಉಲ್ಲಂಘಿಸಿ ಕೃಷಿ ಭೂಮಿಯನ್ನು ಕೃಷಿಯೇತರ ಬಳಕೆಗಾಗಿ ಅನಧಿಕೃತವಾಗಿ ಮಾರ್ಪಾಡಿಸಿರುವ ಬಹಳಷ್ಟು ನಿದರ್ಶನಗಳು ಕಂಡು ಬರುತ್ತವೆ. ಹಾಗೆ ಮಾರ್ಪಡಿಸಿರುವುದನ್ನು ರದ್ದು ಮಾಡುವುದು ಮುಂತಾದ ಅಧಿಕಾರದ ನೆರವಿನಿಂದ ಹಾಗೆ ಮಾರ್ಪಡಿಸುವುದನ್ನು ತಡೆಯಲು ಪ್ರಯತ್ನಿಸಿದರೂ ಆ ಉಪಬಂಧಗಳು ಪರಿಣಾಮಕಾರಿ ಫಲಿತಾಂಶ ನೀಡಿರುವುದಿಲ್ಲ ಮತ್ತು ಬಹಳಷ್ಟು ಸಲ ಉಪಬಂಧಗಳನ್ನು ಕಾರ್ಯಗತಗೊಳಿಸುವುದಕ್ಕೆ ಆಗಿರುವುದಿಲ್ಲ.

ಇಂಥ ಸನ್ನಿವೇಶಗಳಲ್ಲಿ, ಈಗಾಗಲೇ ನೀಡಿರುವ ವಿನಾಯಿತಿಗಳನ್ನು ಸಕ್ರಮಗೊಳಿಸಲು ಹಾಗೂ ಹಾಗೆ ಮಾರ್ಪಡಿಸಿರುವುದಕ್ಕೆ ಗೊತ್ತುಪಡಿಸಿದ ಮೊತ್ತವನ್ನು ಸಂದಾಯ ಮಾಡಿದ ಮೇಲೆ, ಒಪ್ಪಿಗೆ ಕೊಟ್ಟು, ಯಾವ ಪರಿವರ್ತನೆಗಳು ಕಟ್ಟಡ ನಿರ್ಮಾಣ ಕಾನೂನುಗಳಿಗೆ ಮತ್ತು ಗೊತ್ತುಪಡಿಸಿರುವ ನಿಯಮಗಳು ಮುಂತಾದವುಗಳಿಗೆ ಅನುಗುಣವಾಗಿಯೋ ಅಂಥ ಪರಿವರ್ತನೆಗಳನ್ನು ಸಕ್ರಮಗೊಳಿಸುವುದಕ್ಕಾಗಿ ಉಪಬಂಧ ಕಲ್ಪಿಸುವುದು ಅವಶ್ಯವೆಂದು ಪರಿಗಣಿಸಲಾಗಿದೆ. ಭೂ ಕಂದಾಯ ಅಧಿನಿಯಮ, 1964ಕ್ಕೆ ಸೂಕ್ತ ತಿದ್ದುಪಡಿ ತರುವ ಮೂಲಕ ಪ್ರದೇಶಗಳಿಗೆ ಅನುಗುಣವಾಗಿ ಅಥವಾ ಮಾಡಿರುವ ಪರಿವರ್ತನೆ ಮತ್ತು ಮಾಡಿರುವ ಉಲ್ಲಂಘನೆಯ ಉದ್ದೇಶಗಳಿಗೆ ಅನುಗುಣವಾಗಿ ವಿವಿಧ ದರಗಳಲ್ಲಿ ಪರಿವರ್ತನೆ ಜುಲ್ಮಾನೆಯ ಮೊತ್ತವನ್ನು ಅಥವಾ ಒಪ್ಪಿಗೆ ಕೊಡಲು ತಗಲುವ ವೆಚ್ಚವನ್ನು ವಿಧಿಸಲು ಅಧಿಕಾರ ಪಡೆದುಕೊಳ್ಳಲು ಉದ್ದೇಶಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(ದಿನಾಂಕ: 20ನೇ ಮಾರ್ಚ್ 1985ರ ಕರ್ನಾಟಕ ರಾಜ್ಯಪತ್ರ (ವಿಶೇಷ ಸಂಚಿಕೆ) ಭಾಗ-IV 2ಎ ಯಲ್ಲಿ ಪುಟ 4 ರಲ್ಲಿ ಸಂಖ್ಯೆ. 150ರಲ್ಲಿ ಪ್ರಕಟಿಸಲಾಗಿದೆ.)

## XIV

**1986ರ ತಿದ್ದುಪಡಿ ಮಾಡುವ ಅಧಿನಿಯಮ 20.–**ತಮ್ಮ ಅಕ್ಕಪಕ್ಕದ ಜಮೀನುಗಳ ಮೂಲಕ ತಮ್ಮ ಜಮೀನುಗಳಿಗೆ ನೀರಾವರಿ ಉದ್ದೇಶಕ್ಕಾಗಿ ನೀರಿನ ಕೊಳವೆಗಳನ್ನು ಹಾಕುವುದು ಅಥವಾ ನೀರುದಾರಿಗಳನ್ನು ನಿರ್ಮಿಸುವುದು ಅವಶ್ಯಕವಾಗಿರುವಾಗ, ಅಕ್ಕಪಕ್ಕದವರು ತಮಗೆ ಅಡ್ಡಿಪಡಿಸುತ್ತಿದ್ದಾರೆಂದು ಬೇಸಾಯಗಾರರಿಂದ ಬಹಳಷ್ಟು ಮನವಿಗಳು ಬರುತ್ತಿವೆ. ಪ್ರಸ್ತುತ, ನೀರಿನ ಕೊಳವೆಗಳನ್ನು ಹಾಕಲು ಅಥವಾ ನೀರು ದಾರಿಗಳನ್ನು ನಿರ್ಮಿಸಲು ಅವರಿಗೆ ಅನುಮತಿಸುವಂಥ ಯಾವುದೇ ಕಾನೂನುಗಳು ಇರುವುದಿಲ್ಲ. ಆದ್ದರಿಂದ, ಅವರು ಸಾಕಷ್ಟು ತೊಂದರೆಯನ್ನು ಅನುಭವಿಸುತ್ತಿದ್ದಾರೆ ಹಾಗೂ ನೀರಾವರಿ ಯೋಜನೆಗಳ ಅನುಷ್ಠಾನವು ನಿಧಾನಗತಿಯದಾಗಿದೆ. ಈ ಸನ್ನಿವೇಶವನ್ನು ನಿಭಾಯಿಸುವ ಸಲುವಾಗಿ, ಷರತ್ತುಗಳು ಮತ್ತು ನಿರ್ಬಂಧಗಳಿಗೆ ಒಳಪಟ್ಟು, ತಮ್ಮ ನೆರೆಹೊರೆ ಜಮೀನುಗಳ ಮುಖಾಂತರ ನೀರಿನ ಕೊಳವೆಗಳನ್ನು ಹಾಕಿಕೊಳ್ಳಲು ಭೂ ಹಿಡುವಳಿದಾರರಿಗೆ ಅನುಮತಿ ನೀಡುವ ಸಲುವಾಗಿ ತಹಸೀಲ್ದಾರರಿಗೆ ಅಧಿಕಾರ ನೀಡಲು ಕರ್ನಾಟಕ ಭೂ ಕಂದಾಯ ಅಧಿನಿಯಮವನ್ನು ತಿದ್ದುಪಡಿ ಮಾಡಲು ಉದ್ದೇಶಿಸಲಾಗಿದೆ.

ಇದೇ ರೀತಿಯ ಉಪಬಂಧ ಮಹಾರಾಷ್ಟ್ರ ರಾಜ್ಯದಲ್ಲಿ ಚಾಲ್ತಿಯಲ್ಲಿದೆ.

ಆದ್ದರಿಂದ ಈ ವಿಧೇಯಕ.

(ದಿನಾಂಕ: 29ನೇ ಜನವರಿ 1986 ರ ಕರ್ನಾಟಕ ರಾಜ್ಯಪತ್ರ (ವಿಶೇಷ ಸಂಚಿಕೆ) ಭಾಗ-IV 2ಎಯಲ್ಲಿ, ಪುಟ 6 ರಲ್ಲಿ ಸಂಖ್ಯೆ 58ರಲ್ಲಿ ಪ್ರಕಟಿಸಲಾಗಿದೆ.)

## V

**1991ರ ತಿದ್ದುಪಡಿ ಮಾಡುವ ಅಧಿನಿಯಮ 2.–** ಸರ್ಕಾರವು, ಕೆಲವೊಂದು ಷರತ್ತುಗಳಿಗೆ ಹಾಗೂ ನಿರ್ಬಂಧಗಳಿಗೆ ಒಳಪಟ್ಟು ಮತ್ತು ಸಕ್ರಮಗೊಳಿಸುವಿಕೆಯ ಶುಲ್ಕಗಳನ್ನು ಸಂದಾಯ ಮಾಡಿದ ಮೇಲೆ ಸರ್ಕಾರಿ ಜಮೀನಿನ ಅನಧಿಕೃತ ಅಧಿಭೋಗವನ್ನು ಸಕ್ರಮಗೊಳಿಸಲು ನಿರ್ಧರಿಸಿದೆ. ಕರ್ನಾಟಕ ಭೂ ಕಂದಾಯ ಅಧಿನಿಯಮ, 1954ರ ಪ್ರಕರಣ 94ನ್ನು ತಿದ್ದುಪಡಿ ಮಾಡಲು ಉದ್ದೇಶಿಸಲಾಗಿದೆ ಹಾಗೂ ಈ ಮುಂದಿನವುಗಳಿಗೆ ಉಪಬಂಧ ಕಲ್ಪಿಸಲು 94-ಎ ಪ್ರಕರಣವನ್ನು ಜಾರಿಗೊಳಿಸಲು ಉದ್ದೇಶಿಸಲಾಗಿದೆ:–

1) ಸರ್ಕಾರಿ ಜಮೀನಿನ ಅನಧಿಕೃತ ಅಧಿಭೋಗವನ್ನು ಶಿಕ್ಷಾರ್ಹಗೊಳಿಸುವುದು.

2) 1.1.1989 ಕ್ಕಿಂತ ಮುಂಚೆ ಆಗಿರುವ ಸರ್ಕಾರಿ ಜಮೀನಿನ ಅನಧಿಕೃತ ಅಧಿಭೋಗವನ್ನು ಸಕ್ರಮಗೊಳಿಸವುದು.

3) ಸಕ್ರಮಗೊಳಿಸಲು ಉದ್ದೇಶಿಸಿದ ಅನಧಿಕೃತ ಹಿಡುವಳಿಯ ಗರಿಷ್ಠ ವಿಸ್ತೀರ್ಣವು 2 ಎಕರೆ 'ಡಿ' ವರ್ಗದ ಭೂಮಿಗೆ ಅಥವಾ ಅದಕ್ಕೆ ಸಮನಾದುದಾಗಿರಬೇಕು.

4) ಅಂಥ ಭೂಮಿಯು ನಗರ ಅಥವಾ ನಗರಸಭೆಯ ಪರಿಮಿತಿಯಲ್ಲಿ ಇದ್ದರೆ, ಸಕ್ರಮಗೊಳಿಸಬೇಕಾದ ವಿಸ್ತೀರ್ಣ ಗರಿಷ್ಠ 2 ಹೆಕ್ಟೇರ್ ವಿಸ್ತೀರ್ಣಕ್ಕೆ ಒಳಪಟ್ಟು ಗೊತ್ತುಪಡಿಸಬಹುದಾದಷ್ಟಾಗಿರತಕ್ಕದ್ದು.

5) ಸಕ್ರಮಗೊಳಿಸುವಿಕೆಯ ಶುಲ್ಕಗಳು ಭೂಮಿಯ ಕಂದಾಯ ನಿರ್ಧರಣೆಯ 500 ಪಟ್ಟು ಆಗಿರತಕ್ಕದ್ದು.

6) ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳು ಕೇವಲ 1/20 ರಷ್ಟು ಮೊತ್ತವನ್ನು ಸಂದಾಯ ಮಾಡತಕ್ಕದ್ದು.

7) ನೆಡುತೋಪು ಭೂಮಿ, ಭಾಗಾಯತ್ ಭೂಮಿ ಮತ್ತು ಅರಣ್ಯ ಭೂಮಿಯನ್ನು ಸಕ್ರಮಗೊಳಿಸುವಿಕೆಯಿಂದ ಹೊರತುಪಡಿಸತಕ್ಕದ್ದು.

ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಏನೇ ಇದ್ದರೂ, ಕೃಷಿ ಭೂಮಿಯನ್ನು ಕೃಷಿಯೇತರ ಉದ್ದೇಶಕ್ಕಾಗಿ ಬಳಸಲು ಡೆಪ್ಯೂಟಿ ಕಮಿಷನರ್‌ನ ಅನುಮತಿ ಪಡೆಯಲಾಗುತ್ತಿದೆ ಎಂಬುದನ್ನು ಸುನಿಶ್ಚಿತಪಡಿಸಿಕೊಳ್ಳಲು ಪ್ರಕರಣ 95ನ್ನು ತಿದ್ದುಪಡಿ ಮಾಡಲು ಪ್ರಸ್ತಾಪಿಸಲಾಗಿದೆ.ಕೆಲವೊಂದು ನ್ಯಾಯಿಕ ತೀರ್ಪುಗಳ ಕಾರಣದಿಂದ ಉಂಟಾಗಿರುವ ಸಂದಿಗ್ಧತೆಯನ್ನು ನಿವಾರಿಸುವ ಸಲುವಾಗಿ ಈ ತಿದ್ದುಪಡಿಯನ್ನು ಪ್ರಸ್ತಾಪಿಸಿದೆ.

ಕೆಲವೊಂದು ಪ್ರಾಸಂಗಿಕ ಹಾಗೂ ತತ್ಪರಿಣಾಮದ ತಿದ್ದುಪಡಿಗಳನ್ನು ಸಹ ಮಾಡಲಾಗಿದೆ.

ಆದ್ದರಿಂದ ಈ ವಿಧೇಯಕ.

(ದಿನಾಂಕ: 20ನೇ ನವೆಂಬರ್ 1990 ರ ಕರ್ನಾಟಕ ರಾಜ್ಯಪತ್ರ (ವಿಶೇಷ ಸಂಚಿಕೆ) ಭಾಗ–IV 2ಎ ಯಲ್ಲಿ, ಪುಟ 7 ರಲ್ಲಿ ಸಂಖ್ಯೆ. 607ರಲ್ಲಿ ಪ್ರಕಟಿಸಲಾಗಿದೆ.)

## XVI

**1991ರ ತಿದ್ದುಪಡಿ ಮಾಡುವ ಅಧಿನಿಯಮ 21.–** 1991ರ ಕರ್ನಾಟಕ ಅಧಿನಿಯಮ 2ರ ಮೂಲಕ ತಿದ್ದುಪಡಿಯಾದ ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ರ ಪ್ರಕರಣ 94ಎ ಮೇರೆಗೆ, ಅನಧಿಕೃತ ಅಧಿಭೋಗದ ಕೆಲವು ಪ್ರಕರಣಗಳನ್ನು ಸಕ್ರಮಗೊಳಿಸುವುದಕ್ಕಾಗಿ ರಚಿಸಿ ಸಮಿತಿಯಲ್ಲಿ ಮೂರು ಜನರನ್ನು ಮೀರದ ಸದಸ್ಯರು ಇರಬೇಕಾಗಿತ್ತು. ಕಾರ್ಯಗತಗೊಳಿಸುವಾಗ ಎದುರಾಗುವ ತೊಂದರೆಗಳನ್ನು ನಿವಾರಿಸುವ ಸಲುವಾಗಿ ಸದಸ್ಯರ ಸಂಖ್ಯೆಯನ್ನು ಐದರವರೆಗೆ ಹೆಚ್ಚಿಸುವುದಕ್ಕಾಗಿ ಉಪಬಂಧ ಕಲ್ಪಿಸಲು ಉದ್ದೇಶಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(ದಿನಾಂಕ: 26ನೇ ಮಾರ್ಚ್ 1991 ರ ಕರ್ನಾಟಕ ರಾಜ್ಯಪತ್ರ (ವಿಶೇಷ ಸಂಚಿಕೆ) ಭಾಗ–IV 2ಎ ಯಲ್ಲಿ, ಪುಟ 137 ರಲ್ಲಿ ಸಂಖ್ಯೆ. 138ರಲ್ಲಿ ಪ್ರಕಟಿಸಲಾಗಿದೆ).

## XVII

**1991ರ ತಿದ್ದುಪಡಿ ಮಾಡುವ ಅಧಿನಿಯಮ 28.–** ಭೂ ಕಂದಾಯವು ಬಾಕಿ ಇರುವ ಯಾವ ಅನಧಿಕೃತ ಅಧಿಭೋಗದ ಅಥವಾ ಪರಭಾರೆಯ ಹಿಡುವಳಿಯು ರಾಜ್ಯ ಸರ್ಕಾರಕ್ಕೆ ಮುಟ್ಟುಗೋಲಾಗತಕ್ಕದ್ದೆಂದು ಘೋಷಿಸಲು ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ರ 163ನೇ ಪ್ರಕರಣವು ತಹಸೀಲ್ದಾರನಿಗೆ ಅಧಿಕಾರ ನೀಡುತ್ತದೆ.

ಭೂ ಕಂದಾಯ ಬಾಕಿಯು ಹತ್ತು ಸಾವಿರ ರೂ.ಗಳನ್ನು ಮೀರಿರದಿದ್ದರೆ ಅಂಥ ಅಧಿಭೋಗದ ಅಥವಾ ಪರಭಾರೆಯ ಹಿಡುವಳಿಯನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳತಕ್ಕದ್ದಲ್ಲವೆಂದು ಪರಿಗಣಿಸುವುದು ಅವಶ್ಯಕವಾಗಿರುವುದರಿಂದ, 163ನೇ ಪ್ರಕರಣಕ್ಕೆ ಸೂಕ್ತ ತಿದ್ದುಪಡಿ ತರಲು ಉದ್ದೇಶಿಸಲಾಗಿದೆ.

ಸದರಿ ಉದ್ದೇಶಕ್ಕಾಗಿ ಹೊರಡಿಸಿದ್ದ ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ಅಧ್ಯಾದೇಶ, 1991ಕ್ಕೆ (1991ರ ಕರ್ನಾಟಕ ಅಧ್ಯಾದೇಶ 8) ಬದಲಿಗೆ ಈ ವಿಧೇಯಕ.

ಆದ್ದರಿಂದ ಈ ವಿಧೇಯಕ.

(ದಿನಾಂಕ: 28ನೇ ಆಗಸ್ಟ್ 1991ರ ಕರ್ನಾಟಕ ರಾಜ್ಯಪತ್ರ (ವಿಶೇಷ ಸಂಚಿಕೆ) ಭಾಗ-IV 2ಎ ಯಲ್ಲಿ, ಪುಟ 32 ರಲ್ಲಿ ಸಂಖ್ಯೆ. 567 ರಲ್ಲಿ ಪ್ರಕಟಿಸಲಾಗಿದೆ).

## XVIII

**1993ರ ಕರ್ನಾಟಕ ಅಧಿನಿಯಮ 20.-** ರಾಜ್ಯದ ವಿವಿಧ ಭಾಗಗಳಲ್ಲಿರುವ ಪಟ್ಟಾ ಅಥವಾ ಹಿಡುವಳಿ ಭೂಮಿಗಳಲ್ಲಿ ನಡೆಸುತ್ತಿರುವ ಅಕ್ರಮ ಕಲ್ಲುಗಣಿಗಾರಿಕೆ, ಗ್ರಾನೈಟ್ ಮತ್ತು ಇತರ ಉಪ ಖನಿಜಗಳ ಗಣಿಗಾರಿಕೆಯನ್ನು ತಡೆಯುವ ಸಲುವಾಗಿ ಮತ್ತು ಪಟ್ಟಾ ಭೂಮಿಗಳಲ್ಲಿನ ಉಪ ಖನಿಜಗಳ ಮೇಲಿನ ಹಕ್ಕುಗಳು ರಾಜ್ಯ ಸರ್ಕಾರದಲ್ಲಿ ನಿಹಿತವಾಗಲು ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ರ ಪ್ರಕರಣ 70 ನ್ನು ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ರ ಪ್ರಕರಣ 70ರ ಉಳಿಸುವಿಕೆ ಉಪಬಂಧದ ಮೇರೆಗೆ, ರಾಜ್ಯದ ಬೇರೆಬೇರೆ ಭಾಗಗಳಲ್ಲಿ ಪಟ್ಟಾ ಹಿಡುವಳಿದಾರರು, ಪಟ್ಟಾ, ಹಿಡುವಳಿ ಭೂಮಿಗಳಲ್ಲಿ ರಾಜ್ಯ ಸರ್ಕಾರಕ್ಕೆ ಯಾವುದೇ ರಾಜಧನವನ್ನು ಸಂದಾಯ ಮಾಡದೇ ಗಣಿಗಾರಿಕೆಯನ್ನು ನಡೆಸಿಕೊಂಡು ಬರುತ್ತಿದ್ದರು.

ಅಮೂಲ್ಯವಾದ ಗ್ರಾನೈಟ್‌ನ್ನು ಮತ್ತು ಇತರ ಉಪ ಖನಿಜಗಳನ್ನು ನಿಯಂತ್ರಿಸುವ ಸಲುವಾಗಿ ಹಾಗೂ ಜೀವಿ ಪರಿಸರದ ಸಮತೋಲನ ಕಾಯ್ದುಕೊಳ್ಳುವ ಸಲುವಾಗಿ ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ರ ಪ್ರಕರಣ 70 ಕ್ಕೆ ಸೂಕ್ತ ತಿದ್ದುಪಡಿ ತರುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ತದನುಸಾರವಾಗಿ, ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ಅಧ್ಯಾದೇಶ 1993ನ್ನು (1993ರ ಕರ್ನಾಟಕ ಅಧ್ಯಾದೇಶ 2) ಹೊರಡಿಸಲಾಗಿತ್ತು.

ಸದರಿ ಅಧ್ಯಾದೇಶಕ್ಕೆ ಬದಲಿಗೆ ಈ ವಿಧೇಯಕ.

ಆದ್ದರಿಂದ ಈ ವಿಧೇಯಕ.

(ಕರ್ನಾಟಕ ವಿಧಾನ ಸಭೆ ವಿಧೇಯಕ ಸಂಖ್ಯೆ 12ರ ಕಡತ ಸಂಖ್ಯೆ ಲಾ 11 ಎಲ್‌ಜಿಎನ್ 93 ರಿಂದ ಪಡೆಯಲಾಗಿದೆ).

## XIX

**1994ರ ತಿದ್ದುಪಡಿ ಮಾಡುವ ಅಧಿನಿಯಮ 33.-** ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ನ್ನು ತಿದ್ದುಪಡಿ ಮಾಡುವ ಮೂಲಕ,-

1) ಪ್ರಕರಣ 94ರ ಮೇರೆಗೆ ಡೆಪ್ಯೂಟಿ ಕಮಿಷನರ್ ಅಥವಾ ತಹಸೀಲ್ದಾರ್‌ನು ಮಾಡಿದ ಆದೇಶಗಳ ಬಗ್ಗೆ ಅಪೀಲು ಸಲ್ಲಿಸುವುದಕ್ಕಾಗಿ;

2) ಅನಧಿಕೃತ ಬೇಸಾಯವನ್ನು ಸಕ್ರಮಗೊಳಿಸಲು, ಸರ್ಕಾರಕ್ಕೆ ಅವಶ್ಯಕವೆಂದು ಕಂಡುಬಂದರೆತಾಲೂಕಿನಲ್ಲಿ ಹೆಚ್ಚುವರಿ ಸಮಿತಿಗಳನ್ನು ರಚಿಸುವುದಕ್ಕಾಗಿ;

3) ಭೂಮಿ ಪಡೆದವನು ಮೊತ್ತವನ್ನು ಸಂದಾಯ ಮಾಡುವುದಕ್ಕೂ ಮುಂಚೆ ತಹಸೀಲ್ದಾರನು ಮಂಜೂರಾತಿ ಆದೇಶ ಮತ್ತು ಸಾಗುವಳಿ ಚೀಟಿಯನ್ನು ನೀಡುವುದಕ್ಕಾಗಿ; ಮತ್ತು

4) ನಗರಸಭೆಯ ಸರಹದ್ದಿನಿಂದ ಐದು ಕಿಲೋಮೀಟರ್ ಅಂತರದೊಳಗೆ ಇರುವ, 50,000 ಕ್ಕಿಂತ ಕಡಿಮೆ ಜನಸಂಖ್ಯೆ ಇರುವ ಕಡೆ ಅನಧಿಕೃತವಾಗಿ ಸಾಗುವಳಿ ಮಾಡುತ್ತಿರುವ ಭೂಮಿಯ ಮಂಜೂರಾತಿಗೆ,

– ಉಪಬಂಧ ಕಲ್ಪಿಸುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(ದಿನಾಂಕ: 5ನೇ ಸೆಪ್ಟೆಂಬರ್ 1994ರ ಕರ್ನಾಟಕ ರಾಜ್ಯಪತ್ರ (ವಿಶೇಷ ಸಂಚಿಕೆ) ಭಾಗ- 2ಎ ಯಲ್ಲಿ, 13ರಲ್ಲಿ ಪುಟ ಸಂಖ್ಯೆ 731 ರಲ್ಲಿ ಪ್ರಕಟಿಸಲಾಗಿದೆ).

## XX

**1998ರ ತಿದ್ದುಪಡಿ ಮಾಡುವ ಅಧಿನಿಯಮ 22.-** ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ರ 94ಎ ಪ್ರಕರಣವು, 14ನೇ ಏಪ್ರಿಲ್ 1990ಕ್ಕೆ ಮುಂಚೆ ಯಾರೇ ವ್ಯಕ್ತಿಯು ಕೆಲವು ಭೂಮಿಯನ್ನು ಅನಧಿಕೃತವಾಗಿ

ಅಧಿಭೋಗಿಸಿದ್ದು, ನಿಗದಿಪಡಿಸಿದ ಅವಧಿಯೊಳಗೆ ಅಂಥ ಭೂಮಿಯ ಮಂಜೂರಾತಿಗಾಗಿ ಅರ್ಜಿ ಸಲ್ಲಿಸಿದರೆ ಅವುಗಳನ್ನು ಮಂಜೂರು ಮಾಡಲು ಉಪಬಂಧ ಕಲ್ಪಿಸುತ್ತದೆ. ಇಂಥ ಹೆಚ್ಚಿನ ಪ್ರಕರಣಗಳಲ್ಲಿ ವ್ಯಕ್ತಿಗಳು ಬಡವರು ಮತ್ತು ಅನಕ್ಷರಸ್ಥರಾಗಿದ್ದು, ಅಂಥ ದಿನಾಂಕಕ್ಕೆ ಮುಂಚೆ ಅನಧಿಕೃತ ಅಧಿಭೋಗದಲ್ಲಿದ್ದು ಹಾಗೂ ಮಂಜೂರಾತಿಗಾಗಿ ಅರ್ಹರಾಗಿದ್ದು, ಗೊತ್ತುಪಡಿಸಿದ ಅವಧಿಯೊಳಗೆ ಅಂಥ ಮಂಜೂರಾತಿಗಾಗಿ ಅರ್ಜಿ ಸಲ್ಲಿಸಲು ಅವರಿಗೆ ಆಗದಿದ್ದ ಕಾರಣದಿಂದ ಇದರ ಪ್ರಯೋಜನದಿಂದ ವಂಚಿತರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಆದ್ದರಿಂದ ಡೆಪ್ಯೂಟಿ ಕಮಿಷನ್‌ರನು, ವಿಚಾರಣೆಯನ್ನು ನಡೆಸಿದ ತರುವಾಯ ಹಾಗೂ ಸಮಿತಿಯ ಮುಂದೆ ಬಾಕಿ ಇರುವ ಯಾರೇ ವ್ಯಕ್ತಿಯ ಅರ್ಜಿಯ ಕ್ಲೇಮನ್ನು ಪರಿಗಣಿಸಿದ ತರುವಾಯ ಸೂಕ್ತವಾದ ಪ್ರಕರಣಗಳಲ್ಲಿ ಅಂಥ ಭೂಮಿಯನ್ನು ಮಂಜೂರು ಮಾಡುವುದಕ್ಕಾಗಿ ಉಪಬಂಧ ಕಲ್ಪಿಸುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

79ನೇ ಪ್ರಕರಣದ (2)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಿದ ಭೂಮಿಗಳು ಸೇರಿದಂತೆ ಕೆಲವು ಬಗೆಯ ಭೂಮಿಗೆ ಹಾಗೂ ಇತರ ವರ್ಗಗಳ ಭೂಮಿಗೆ ಸಂಬಂಧಿಸಿದಂತೆ ಈಗಾಗಲೇ ಲಭ್ಯವಿರುವ ಸಕ್ರಮಗೊಳಿಸುವಿಕೆಯ ಪ್ರಯೋಜನವನ್ನು ವಿಸ್ತರಿಸಲು ಹಾಗೂ ವಿಚಾರಣೆಯನ್ನು ನಡೆಸಿದ ತರುವಾಯ ಅಂಥ ಭೂಮಿಯನ್ನು ಮಂಜೂರು ಮಾಡಲು ಡೆಪ್ಯೂಟಿ ಕಮಿಷನರ್‌ಗೆ ಅಧಿಕಾರ ನೀಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

79ನೇ ಪ್ರಕರಣದ (2)ನೇ ಉಪ ಪ್ರಕರಣದಲ್ಲಿ ಉಲ್ಲೇಖಿಸಿದ ಭೂಮಿಯಾಗಿರದ, ಅದು ಅರಣ್ಯ ಭೂಮಿಯಾಗಿದ್ದರೆ ಅಂಥ ಭೂಮಿಯನ್ನು ಮಂಜೂರು ಮಾಡದಿರಲು ಸಹ ಉಪಬಂಧ ಕಲ್ಪಿಸಲಾಗಿದೆ.

ಅರಣ್ಯ ಸಂರಕ್ಷಣೆ ಅಧಿನಿಯಮ, 1990ರ ಮೇರೆಗೆ ಕೇಂದ್ರ ಸರ್ಕಾರದಿಂದ ಮುಂಚಿತವಾಗಿ ಅನುಮೋದನೆ ಪಡೆಯುವುದು ಅಗತ್ಯವಿರುವಂಥ ಕಡೆಗಳಲ್ಲಿ ಕೇಂದ್ರ ಸರ್ಕಾರದಿಂದ ಮೊದಲೇ ಅನುಮೋದನೆ ಪಡೆಯದೇ ಯಾವುದೇ ಮಂಜೂರಾತಿಯನ್ನು ಮಾಡತಕ್ಕದ್ದಲ್ಲವೆಂಬುದನ್ನು ಸ್ಪಷ್ಟಪಡಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(ಕರ್ನಾಟಕ ವಿಧಾನಸಭೆ ವಿಧೇಯಕ ಸಂಖ್ಯೆ. 30ರ ಕಡತ ಸಂಖ್ಯೆ ಲಾ 43 ಎಲ್‌ಜಿಎನ್ 97 ರಿಂದ ಪಡೆಯಲಾಗಿದೆ).

## XXI

**1999ರ ತಿದ್ದುಪಡಿ ಮಾಡುವ ಅಧಿನಿಯಮ 14.-** ಮೂರು ಲಕ್ಷಕ್ಕಿಂತ ಅಧಿಕ ಮುಟೇಷನ್ ಪೋಡಿ ಪ್ರಕರಣಗಳು ಅಳತೆಗಾಗಿ ಬಾಕಿ ಇವೆ ಹಾಗೂ ಸರ್ವೆ ನಂಬರಗಳ ಬದಲಾವಣೆ, ವಿಸ್ತೀರ್ಣ ವ್ಯತ್ಯಾಸ ಹಾಗೂ ಇತರ ಕಾರಣಗಳಿಂದ ಹಲವು ಪ್ರಕರಣಗಳು ವಿಲೇವಾರಿಗಾಗಿ ಬಾಕಿ ಉಳಿದಿವೆ. ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ಕ್ಕೆ ಹೊಸ ಪ್ರಕರಣವನ್ನು ಸೇರಿಸುವ ಮೂಲಕ ಗೊತ್ತುಪಡಿಸಬಹುದಾದಂಥ ಅರ್ಹತೆಗಳು ಹಾಗೂ ಅನುಭವವನ್ನು ಹೊಂದಿರತಕ್ಕಂಥ ಖಾಸಗಿ ಮೋಜಣಿದಾರರಿಗೆ (ಅವರನ್ನು ಲೈಸನ್ಸ್ ಹೊಂದಿರುವ ಮೋಜಣಿದಾರರೆಂದು ಕರೆಯಲಾಗುವುದು) ಸ್ವತ್ತುಗಳ ನಕ್ಷೆಯನ್ನು ಸಿದ್ಧಪಡಿಸುವ ಕಾರ್ಯವನ್ನು ವಹಿಸುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಸದರಿ ಅಧಿನಿಯಮದ 128 ಹಾಗೂ 131 ನೇ ಪ್ರಕರಣಗಳನ್ನು ತಿದ್ದುಪಡಿ ಮಾಡುವ ಮೂಲಕ, ಭಾಗ ಮಾಡಿಕೊಂಡಿರುವ ಭೂಮಿಗೆ ಸಂಬಂಧಿಸಿದಂತೆ ಯಾರೇ ವ್ಯಕ್ತಿಯು ಹಕ್ಕನ್ನು ಪಡೆದುಕೊಂಡಿರುವುದನ್ನು ಆ ವ್ಯಕ್ತಿಯು ವರದಿ ಮಾಡುವುದನ್ನು ಮತ್ತು ಸರ್ವೆ ನಂಬರಿನ ಅಥವಾ ಉಪ-ಸಂಖ್ಯೆಯ ಭಾಗವಾಗಿರುವ ಯಾವುದೇ ಭೂಮಿಯನ್ನು ಪರಭಾರೆಯ ಮಾಡುವ ಯಾರೇ ವ್ಯಕ್ತಿಯು ಲೈಸೆನ್ಸ್ ಹೊಂದಿರುವ ಮೋಜಣಿದಾರನು ಸಿದ್ಧಪಡಿಸಿದ ಸದರಿ ಸ್ವತ್ತಿನ ನಕ್ಷೆಯನ್ನು ಪಡೆದುಕೊಳ್ಳುವುದನ್ನು ಕಡ್ಡಾಯಗೊಳಿಸಲು ಸಹ ಪ್ರಸ್ತಾಪಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(ಕರ್ನಾಟಕ ವಿಧಾನ ಪರಿಷತ್ ವಿಧೇಯಕ ಸಂಖ್ಯೆ.14ರ ಕಡತ ಸಂಖ್ಯೆ ಲಾ 46 ಎಲ್‌ಜಿಎನ್ 98 ರಿಂದ ಪಡೆಯಲಾಗಿದೆ).

## XXII

**1999ರ ತಿದ್ದುಪಡಿ ಮಾಡುವ ಅಧಿನಿಯಮ 26.-** ಜನಸಂಖ್ಯೆಯ ಹೆಚ್ಚಳದಿಂದಾಗಿ, ಅವಿಭಕ್ತ ಕುಟುಂಬಗಳು ಬೇರೆಬೇರೆಯಾಗುವುದರಿಂದಾಗಿ ಮತ್ತು ವಲಸೆ ಹೋಗುವಿಕೆಯ ಕಾರಣದಿಂದ ಸಮಾಜದ ಬಡ ವರ್ಗಗಳಿಗೆ ಸೇರಿದ ಜನರು ಗ್ರಾಮ ಠಾಣಾಗಳಿಗೆ ಹೊಂದಿಕೊಂಡ ಭೂಮಿಯನ್ನು ಒತ್ತುವರಿ ಮಾಡಿಕೊಂಡು ಮತ್ತು ಅನಧಿಕೃತವಾಗಿ

ಮನೆಗಳನ್ನು ಹಾಗೂ ಗುಡಿಸಲುಗಳನ್ನು ಕಟ್ಟಿಕೊಂಡು ದೀರ್ಘಕಾಲದಿಂದ ವಾಸಿಸುತ್ತಿದ್ದಾರೆ. ಬೇಸಾಯಕ್ಕಾಗಿ ಬಳಕೆ ಮಾಡಿಕೊಂಡಿರುವ ಸರ್ಕಾರದ ಭೂಮಿಯ ಅನಧಿಕೃತ ಅಧಿಭೋಗವನ್ನು ಸಕ್ರಮಗೊಳಿಸಲು ಈಗಾಗಲೇ ಉಪಬಂಧ ಕಲ್ಪಿಸಲಾಗಿದೆ.ಅದೇ ರೀತಿಯಾಗಿ, ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ಕ್ಕೆ ತಿದ್ದುಪಡಿ ಮಾಡುವ ಮೂಲಕ (ಕರ್ನಾಟಕ ನಗರ ಪ್ರದೇಶಗಳಲ್ಲಿನ ಅನಧಿಕೃತ ಕಟ್ಟಡಗಳನ್ನು ನಿಯಂತ್ರಿಸುವ ಅಧಿನಿಯಮ 1991)ರ ಮೇರೆಗೆ ಸಲ್ಲಿಸಿದ ಅರ್ಜಿಗೆ ಸಂಬಂಧಿಸಿದಂತೆ,ಅರಣ್ಯ ಭೂಮಿಯಲ್ಲಿ ಅಥವಾ ಸರ್ಕಾರಿ ಭೂಮಿಯಲ್ಲಿ ನಿರ್ಮಿಸಿದ್ದನ್ನು ಹೊರತುಪಡಿಸಿ ಇತರ ಯಾವುದೇ ಸರ್ಕಾರಿ ಭೂಮಿಯಲ್ಲಿ ನಿರ್ಮಿಸಿದ ಅನಧಿಕೃತ ವಾಸದ ಮನೆಗಳನ್ನು ಸಕ್ರಮಗೊಳಿಸುವುದಕ್ಕಾಗಿ ಉಪಬಂಧ ಕಲ್ಪಿಸುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(1999ರ ಕರ್ನಾಟಕ ವಿಧಾನ ಪರಿಷತ್ ವಿಧೇಯಕ ಸಂಖ್ಯೆ.7ರ ಕಡತ ಸಂಖ್ಯೆ ಲಾ 46 ಎಲ್‌ಜಿಎನ್ 99 ರಿಂದ ಪಡೆಯಲಾಗಿದೆ).

## XXIII

**2000ರ ತಿದ್ದುಪಡಿ ಅಧಿನಿಯಮ 15.**–ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ಅಧಿನಿಯಮ, 1997ರ ಮೂಲಕ ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ಕ್ಕೆ ಸೇರ್ಪಡೆ ಮಾಡಲಾದ 94ಬಿ ಪ್ರಕರಣವು, ಸದರಿ ತಿದ್ದುಪಡಿ ಅಧಿನಿಯಮ ಜಾರಿಗೆ ಬಂದ ದಿನಾಂಕದಿಂದ ಒಂದು ವರ್ಷದ ಒಳಗಾಗಿ ಕೆಲವು ಭೂಮಿಗಳನ್ನು ಸಕ್ರಮಗೊಳಿಸುವುದಕ್ಕಾಗಿ ಉಪಬಂಧ ಕಲ್ಪಿಸುತ್ತದೆ. ಸದರಿ ಅಧಿನಿಯಮವನ್ನು 1998ರ ನವೆಂಬರ್, 1 ರಿಂದ ಜಾರಿಗೆ ಬರುವಂತೆ ಜಾರಿಗೊಳಿಸಲಾಗಿದೆ ಮತ್ತು 1999ರ ಅಕ್ಟೋಬರ್ 30ರಂದು ಒಂದು ವರ್ಷದ ಅವಧಿಯು ಮುಕ್ತಾಯವಾಗುತ್ತದೆ. ವಿಲೇವಾರಿಗಾಗಿ ಪ್ರಸ್ತುತ 10.54 ಲಕ್ಷ ಅರ್ಜಿಗಳು ಬಾಕಿಯಿರುವುದರಿಂದ, ಒಂದು ವರ್ಷದ ಅವಧಿಯ ನಿರ್ಬಂಧವನ್ನು ತೆಗೆದು ಹಾಕುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(2000ರ ಕರ್ನಾಟಕ ವಿಧಾನಸಭೆ ವಿಧೇಯಕ ಸಂಖ್ಯೆ.14 ರಿಂದ ಪಡೆಯಲಾಗಿದೆ).

## XXIV

**2000ರ ತಿದ್ದುಪಡಿ ಅಧಿನಿಯಮ 22.**– ಕರ್ನಾಟಕ ಅಧಿನಿಯಮಗಳ ಕೋಡಲ್ ವಾಲ್ಯೂಂಗಳನ್ನು ತಹಲ್‌ವರೆಗೆ ಸಿದ್ಧಪಡಿಸುವುದು ಮತ್ತು ಕಾಲಕಾಲಕ್ಕೆ ಚಾಲ್ತಿಗೆ ತಂದಿದ್ದ, ಆದರೆ ಬಳಕೆ ನಿಂತುಹೋದ ಎಲ್ಲಾ ಅಧಿನಿಯಮಗಳನ್ನು ಹಾಗೂ ತಿದ್ದುಪಡಿ ಅಧಿನಿಯಮಗಳನ್ನು ನಿರಸನಗೊಳಿಸುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಈ ಮೇಲಿನ ಉದ್ದೇಶಕ್ಕಾಗಿ ಸರ್ಕಾರವು ಏಕವ್ಯಕ್ತಿ ಸಮಿತಿಯನ್ನು ರಚಿಸಿದೆ. ಸಮಿತಿಯು 1.1.1956 ರಿಂದ 31.12.1998 ರ ಅವಧಿಯ ಕರ್ನಾಟಕ ಅಧಿನಿಯಮಗಳನ್ನು ಪುನರ್ ಪರಿಶೀಲಿಸಿದೆ ಮತ್ತು ಈ ಮುಂದಿನ ಬಗೆಯ ಅಧಿನಿಯಮಗಳನ್ನು ನಿರಸನಗೊಳಿಸುವುದಕ್ಕಾಗಿ ಈ 'ನಿರಸನಗೊಳಿಸುವ ಮತ್ತು ತಿದ್ದುಪಡಿ ಮಾಡುವ ವಿಧೇಯಕ, 2000' ನ್ನು ಪ್ರಸ್ತಾಪಿಸಿದೆ.

(i) ಕರ್ನಾಟಕ ಅಧಿನಿಯಮಗಳು ಅವು ಜಾರಿಯಲ್ಲಿರಲಿ ಅಥವಾ ಇಲ್ಲದಿರಲಿ ಅವುಗಳನ್ನು ತಿದ್ದುಪಡಿ ಮಾಡಿರುವ ಅಧಿನಿಯಮಗಳು;

(ii) ದೀರ್ಘಕಾಲದಿಂದ ಜಾರಿಯಲ್ಲಿಲ್ಲದ ಪ್ರಾದೇಶಿಕ ಅಧಿನಿಯಮಗಳನ್ನು ತಿದ್ದುಪಡಿ ಮಾಡಿರುವ ಅಧಿನಿಯಮಗಳು;

(iii) ಬಳಕೆ ನಿಂತುಹೋದ ಅಧಿನಿಯಮಗಳಾದಂಥ ವಿನಿಯೋಗ ಅಧಿನಿಯಮಗಳು;

(iv) ನ್ಯಾಯಾಲಯವು ತಳ್ಳಿಹಾಕಿದ ಅಥವಾ ಅಗತ್ಯ ಇಂಗಿತದ ಮೂಲಕ ತಳ್ಳಿ ಹಾಕಿದ ಅಧಿನಿಯಮಗಳು;

(v) ಕೇಂದ್ರ ಅಧಿನಿಯಮಗಳಲ್ಲಿ ಇಂಗಿತದ ಮೂಲಕ ನಿರಸನಗೊಂಡ ಅಧಿನಿಯಮಗಳು; ಮತ್ತು

(vi) ತಾತ್ಕಾಲಿಕ ಹಾಗೂ ಬಳಕೆ ನಿಂತುಹೋದ ಅಧಿನಿಯಮಿತಿಗಳಂಥ ಅಧಿನಿಯಮಗಳು;

ಈ ವಿಧೇಯಕವು ಈ ಮುಂದಿನವುಗಳನ್ನು ಒಳಗೊಳ್ಳುವುದಿಲ್ಲ,–

(i) ಕೇಂದ್ರ ಅಧಿನಿಯಮಗಳ ತಿದ್ದುಪಡಿ ಅಧಿನಿಯಮಗಳು ಮತ್ತು ಜಾರಿಯಲ್ಲಿರುವ ಪ್ರಾದೇಶಿಕ ಅಧಿನಿಯಮಗಳು; ಮತ್ತು

(ii) ಈಗಾಗಲೇ ಸುಸ್ಪಷ್ಟವಾಗಿ ನಿರಸನಗೊಂಡಿರುವ ಅಧಿನಿಯಮಗಳು

ಬಳಿಕೆ ನಿಂತುಹೋದ ಎಲ್ಲಾ ಮತ್ತು ತಿದ್ದುಪಡಿ ಅಧಿನಿಯಮಗಳನ್ನು ನಿರಸನಗೊಳಿಸಲು ಮತ್ತು ಶಾಸನ ಪುಸ್ತಕದಿಂದ ತೆಗೆದು ಹಾಕಲು ಈ ವಿಧೇಯಕವು ಉದ್ದೇಶಿಸಿದೆ.

ಆದ್ದರಿಂದ ಈ ವಿಧೇಯಕ.

(2000ರ ಕರ್ನಾಟಕ ವಿಧಾನ ಸಭೆ ವಿಧೇಯಕ ಸಂಖ್ಯೆ.17 ರಿಂದ ಪಡೆಯಲಾಗಿದೆ).

## XXV

**2003ರ ತಿದ್ದುಪಡಿ ಅಧಿನಿಯಮ 21.–** ಡಿವಿಜನಲ್ ಕಮಿಷನರ್ ಹುದ್ದೆಗಳನ್ನು ರದ್ದುಗೊಳಿಸುವುದು, ಮತ್ತು,–

(i) ಡಿವಿಜನಲ್ ಕಮಿಷನರ್‌ನ ಅಪೀಲು ಮತ್ತು ಪುನರೀಕ್ಷಣಾ ಅಧಿಕಾರಗಳನ್ನು ಕರ್ನಾಟಕ ಅಪೀಲು ನ್ಯಾಯಾಧೀಕರಣಕ್ಕೆ ವಹಿಸುವುದು;

(ii) ಭೂದಾಖಲೆಗಳ ಉಪ–ಆಯುಕ್ತರ, ಕಂದಾಯ ವ್ಯವಸ್ಥೆಯ ಉಪ–ಆಯುಕ್ತರ, ಭೂ ದಾಖಲೆಗಳ ಸೂಪರಿಂಟೆಂಡೆಂಟ್, ಕಂದಾಯ ವ್ಯವಸ್ಥೆಯ ಸೂಪರಿಂಟೆಂಡೆಂಟ್, ಕಂದಾಯ ವ್ಯವಸ್ಥೆಯ ಸಹಾಯಕ ಸೂಪರಿಂಟೆಂಟ್, ಭೂ ದಾಖಲೆಗಳ ಸಹಾಯಕ ಸೂಪರಿಂಟೆಂಡೆಂಟರ್ ಹುದ್ದೆಗಳನ್ನು ಅನುಕ್ರಮವಾಗಿ ಭೂ ದಾಖಲೆಗಳ ಜಂಟಿ ನಿರ್ದೇಶಕ, ಕಂದಾಯ ವ್ಯವಸ್ಥೆ ಜಂಟಿ ನಿರ್ದೇಶಕ, ಭೂ ದಾಖಲೆಗಳ ಉಪನಿರ್ದೇಶಕ, ಕಂದಾಯ ವ್ಯವಸ್ಥೆಯ ಉಪನಿರ್ದೇಶಕ, ಕಂದಾಯ ವ್ಯವಸ್ಥೆಯ ಸಹಾಯಕ ನಿರ್ದೇಶಕ, ಭೂದಾಖಲೆಗಳ ಸಹಾಯಕ ನಿರ್ದೇಶಕ ಹುದ್ದೆ ಎಂದು ಮರು ನಾಮಕರಣಗೊಳಿಸುವುದು.

(iii) ಪ್ರಸ್ತಾವಿತ ಶಾಸನವು ಜಾರಿಗೆ ಬಂದ ದಿನಾಂಕದಿಂದ ಡಿವಿಜನಲ್ ಕಮಿಷನರ್‌ನ ಮುಂದೆ ಇತ್ಯರ್ಥಕಾಗಿ ಇರುವ ಅಪೀಲುಗಳ/ ಪುನರೀಕ್ಷಣೆಗಳ ವಿಲೇವಾರಿಗಾಗಿ ಉಪಬಂಧ ಕಲ್ಪಿಸುವುದು,

–ಅವಶ್ಯಕವೆಂದು ಪರಿಗಣಿಸಲಾಗಿದೆ.

ಕೆಲವು ಇತರೆ ಪ್ರಾಸಂಗಿಕ ತಿದ್ದುಪಡಿಗಳನ್ನು ಸಹ ಮಾಡಲಾಗಿದೆ.

ಆದ್ದರಿಂದ ಈ ವಿಧೇಯಕ.

[2002ರ ಕರ್ನಾಟಕ ವಿಧಾನಸಭೆಯ ವಿಧೇಯಕ ಸಂಖ್ಯೆ.33].

(ಭಾರತ ಸಂವಿಧಾನದ 7ನೇ ಅನುಸೂಚಿಯIIನೇ ಪಟ್ಟಿಯ 18ನೇ ನಮೂದು)

## XXVI

**2004ರ ತಿದ್ದುಪಡಿ ಅಧಿನಿಯಮ 19.–**ಕರ್ನಾಟಕ ಭೂಕಂದಾಯ (ತಿದ್ದುಪಡಿ) ಅಧಿನಿಯಮ, 1997ರ ಮೂಲಕ ಭೂ ಕಂದಾಯ ಅಧಿನಿಯಮ, 1964ಕ್ಕೆ ಸೇರ್ಪಡೆ ಮಾಡಲಾದ 94ಬಿ ಪ್ರಕರಣವು, ಸದರಿ ತಿದ್ದುಪಡಿ ಅಧಿನಿಯಮವು ಜಾರಿಗೆ ಬಂದ ದಿನಾಂಕದಿಂದ ಒಂದು ವರ್ಷದೊಳಗೆ ಕೆಲವು ಭೂಮಿಗಳನ್ನು ಸಕ್ರಮಗೊಳಿಸಲು ಉಪಬಂಧವನ್ನು ಕಲ್ಪಿಸುತ್ತದೆ. ಸದರಿ ಅಧಿನಿಯಮವನ್ನು 1998ರ ನವಂಬರ್ 1 ರಿಂದ ಜಾರಿಗೆ ತರಲಾಗಿತ್ತು ಮತ್ತು 1999ರ ಅಕ್ಟೋಬರ್ 30 ರಂದು ಒಂದು ವರ್ಷದ ಅವಧಿಯು ಮುಕ್ತಾಯವಾಗಿದೆ. ಈ ಅವಧಿಯನ್ನು ಭೂಕಂದಾಯ (ತಿದ್ದುಪಡಿ) ಅಧಿನಿಯಮ, 2000 (2000ದ ಕರ್ನಾಟಕ ಅಧಿನಿಯಮ 15ರ) ಪ್ರಾರಂಭದ ದಿನಾಂಕದಿಂದ ಮೂರು ವರ್ಷಗಳವರೆಗೆ ವಿಸ್ತರಿಸಲಾಗಿತ್ತು. ಸದರಿ ಅವಧಿಯು 2003ರ ಏಪ್ರಿಲ್ 27 ರಂದು ಮುಕ್ತಾಯವಾಗಿದೆ. ನಮೂನೆ 50 ರಲ್ಲಿ 55267 ಅರ್ಜಿಗಳು ಮತ್ತು ನಮೂನೆ 53 ರಲ್ಲಿ 753727 ಅರ್ಜಿಗಳು ಈಗಲೂ ಬಾಕಿ ಉಳಿದಿದ್ದರಿಂದ, ಸದರಿ ಅವಧಿಯನ್ನು ಇನ್ನೂ ಒಂದು ವರ್ಷದ ಅವಧಿಗೆ ವಿಸ್ತರಿಸುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

[2004ರ ಕರ್ನಾಟಕ ವಿಧಾನ ಪರಿಷತ್‌ನ ವಿಧೇಯಕ ಸಂಖ್ಯೆ.10].

(ಭಾರತ ಸಂವಿಧಾನದ 7ನೇ ಅನುಸೂಚಿಯ IIನೇ ಪಟ್ಟಿಯ 18 ಮತ್ತು 45ನೇ ನಮೂದುಗಳು)

## XXVII

**2005ರ ತಿದ್ದುಪಡಿ ಅಧಿನಿಯಮ 1.–** ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961 ಕ್ಕೆ ತಿದ್ದುಪಡಿ ಮಾಡಿ.–

(i) ಪಾರಂಪರಿಕ ಕಟ್ಟಡ ಮತ್ತು ಪಾರಂಪರಿಕ ಪ್ರಾಕಾರಗಳನ್ನು ಪರಿಭಾಷಿಸುವುದಕ್ಕೆ ಮತ್ತು ಅವುಗಳ ಸಂರಕ್ಷಣೆಗಾಗಿ ವಿನಿಯಮನ ರಚಿಸುವುದಕ್ಕೆ;

(ii) ಮಾಸ್ಟರ್ ಪ್ಲ್ಯಾನ್ ಮೂಲಕ ಸಮಗ್ರ ಅಭಿವೃದ್ಧಿ ಯೋಜನೆ ಮತ್ತು ರೂಪುರೇಷ ಅಭಿವೃದ್ಧಿ ಯೋಜನೆ ಮತ್ತು ರೂಪುರೇಷ ಅಭಿವೃದ್ಧಿ ಯೋಜನೆಯನ್ನು ಬದಲಾಯಿಸುವುದಕ್ಕಾಗಿ ಕಾರ್ಯವಿಧಾನವನ್ನು ಸರಳೀಕರಣಗೊಳಿಸುವುದಕ್ಕೆ;

(iii) ವಾಣಿಜ್ಯ ಬಳಕೆಯಿಂದ ಅಥವಾ ಕೈಗಾರಿಕೆ ಬಳಕೆಯಿಂದ ನಿವಾಸ ಬಳಕೆಗೆ ಮತ್ತು ಕೈಗಾರಿಕೆ ಬಳಕೆಯಿಂದ ವಾಣಿಜ್ಯ ಬಳಕೆಗೆ ಭೂ ಬಳಕೆಯ ಪರಿಭಾವಿತ ಬದಲಾವಣೆಗೆ;

– ಉಪಬಂಧ ಕಲ್ಪಿಸುವುದಕ್ಕಾಗಿ ಅವಶ್ಯಕವೆಂದು ಪರಿಗಣಿಸಲಾಗಿದೆ.

ಕೆಲವು ಇತರ ಪ್ರಾಸಂಗಿಕ ಬದಲಾವಣೆಗಳನ್ನು ಮಾಡಲಾಗಿದೆ.

ಆದ್ದರಿಂದ ಈ ವಿಧೇಯಕ.

## XXVIII

**2005ರ ತಿದ್ದುಪಡಿ ಅಧಿನಿಯಮ 29.–** ಕರ್ನಾಟಕ ಭೂಕಂದಾಯ (ತಿದ್ದುಪಡಿ) ಅಧಿನಿಯಮ, 1997ರ ಮೂಲಕ ಭೂ ಕಂದಾಯ ಅಧಿನಿಯಮ, 1964ಕ್ಕೆ ಸೇರ್ಪಡೆ ಮಾಡಲಾದ 94ಬಿ ಪ್ರಕರಣವು, ಸದರಿ ತಿದ್ದುಪಡಿ ಅಧಿನಿಯಮ ಜಾರಿಗೆ ಬಂದ ದಿನಾಂಕದಿಂದ ಒಂದು ವರ್ಷದೊಳಗೆ ಕೆಲವು ಭೂಮಿಗಳನ್ನು ಸಕ್ರಮಗೊಳಿಸಲು ಉಪಬಂಧವನ್ನು ಕಲ್ಪಿಸುತ್ತದೆ. ಸದರಿ ಅವಧಿಯನ್ನು ಕಾಲಕಾಲಕ್ಕೆ ವಿಸ್ತರಿಸಲಾಗಿತ್ತು ಮತ್ತು ಅದು24.04.2005 ರಂದು ಮುಕ್ತಾಯವಾಗಿದೆ. ತಿದ್ದುಪಡಿ ಉಪಬಂಧಗಳಿಗೆ ಅನುಸಾರವಾಗಿ ನಮೂನೆ 50 ರಲ್ಲಿಸಲ್ಲಿಸಲಾದ 94350 ಅರ್ಜಿಗಳು ಮತ್ತು ನಮೂನೆ 53 ರಲ್ಲಿ ಸಲ್ಲಿಸಲಾದ 4,26,912 ಅರ್ಜಿಗಳು ವಿವಿಧ ಸಮಿತಿಗಳ ಮುಂದೆ ವಿಲೇಗಾಗಿ ಬಾಕಿ ಉಳಿದಿರುವುದರಿಂದ, ಸದರಿ ಅವಧಿಯನ್ನು ಇನ್ನೂ ಒಂದು ವರ್ಷದವರೆಗೆ ವಿಸ್ತರಿಸುವುದು ಅವಶ್ಯಕವೆಂದು ಪರಿಗಣಿಸಿದೆ.

ಆದ್ದರಿಂದ ಈ ವಿಧೇಯಕ.

[2005ರ ಕರ್ನಾಟಕ ವಿಧಾನ ಪರಿಷತ್ ವಿಧೇಯಕ ಸಂಖ್ಯೆ. 20].

## XXIX

**2006ರ ತಿದ್ದುಪಡಿ ಅಧಿನಿಯಮ 18.–** ಕರ್ನಾಟಕ ಭೂಕಂದಾಯ (ತಿದ್ದುಪಡಿ) ಅಧಿನಿಯಮ, 1997ರ ಮೂಲಕ ಭೂ ಕಂದಾಯ ಅಧಿನಿಯಮ, 1964 ಕ್ಕೆ ಸೇರ್ಪಡೆ ಮಾಡಲಾದ 94ಬಿ ಪ್ರಕರಣವು, ಸದರಿ ತಿದ್ದುಪಡಿ ಅಧಿನಿಯಮ ಜಾರಿಗೆ ಬಂದ ದಿನಾಂಕದಿಂದ ಒಂದು ವರ್ಷದೊಳಗೆ ಕೆಲವು ಭೂಮಿಗಳನ್ನು ಸಕ್ರಮಗೊಳಿಸಲು ಉಪಬಂಧವನ್ನು ಕಲ್ಪಿಸುತ್ತದೆ. ಈ ಅವಧಿಯನ್ನು 2006ರ ಏಪ್ರಿಲ್ 26 ರವರೆಗೆ ಕಾಲಕಾಲಕ್ಕೆ ವಿಸ್ತರಿಸಲಾಗಿತ್ತು. ನೋಡಿ: (i) ಕರ್ನಾಟಕ ಭೂಕಂದಾಯ (ತಿದ್ದುಪಡಿ) ಅಧಿನಿಯಮ, 2000 (2000ದ ಕರ್ನಾಟಕ ಅಧಿನಿಯಮ, 15); (ii) ಕರ್ನಾಟಕ ಭೂಕಂದಾಯ (ತಿದ್ದುಪಡಿ) ಅಧಿನಿಯಮ, 2004 (2004ರ ಕರ್ನಾಟಕ ಅಧಿನಿಯಮ, 19); (iii) ಕರ್ನಾಟಕ ಭೂಕಂದಾಯ (ತಿದ್ದುಪಡಿ) ಅಧಿನಿಯಮ, 2005 (2005ರ ಕರ್ನಾಟಕ ಅಧಿನಿಯಮ, 29)

ಪ್ರಸ್ತುತ, ನಮೂನೆ 50 ರಲ್ಲಿ 29361 ಅರ್ಜಿಗಳು ಮತ್ತು ನಮೂನೆ 53 ರಲ್ಲಿ 435842 ಅರ್ಜಿಗಳು ವಿಲೇಗಾಗಿ ಬಾಕಿ ಉಳಿದಿರುವುರಿಂದ, ಸದರಿ ಅವಧಿಯನ್ನು ಇನ್ನೂ ಎರಡು ವರ್ಷಗಳ ಅವಧಿಗೆ ವಿಸ್ತರಿಸುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

[2006ರ ಕರ್ನಾಟಕ ವಿಧಾನಸಭೆಯ ವಿಧೇಯಕ ಸಂಖ್ಯೆ. 20].

## XXX

**2007ರ ತಿದ್ದುಪಡಿ ಅಧಿನಿಯಮ 15.–** ಕರ್ನಾಟಕ ಭೂಕಂದಾಯ ಅಧಿನಿಯಮದ 94ನೇ ಪ್ರಕರಣವು, ಸರ್ಕಾರದ ಭೂಮಿಯಲ್ಲಿನ ಅನಧಿಕೃತವಾಗಿ ಅಧಿಭೋಗವನ್ನು ತೆರವುಗೊಳಿಸಲು ಡೆಪ್ಯೂಟಿ ಕಮಿಷನರ್‌ನಿಗೆ ಅಧಿಕಾರ ನೀಡುತ್ತದೆ. ಆದರೆ ಇಂದಿಗೂ ವಿಶೇಷವಾಗಿ ಬೆಂಗಳೂರು, ಮೈಸೂರು, ಮಂಗಳೂರು, ಬೆಳಗಾಂ, ಹುಬ್ಬಳ್ಳಿ–ಧಾರವಾಡ, ಗುಲ್ಬರ್ಗಾ ಮತ್ತು ಇತರ ನಗರಗಳ ಸುತ್ತಮುತ್ತಲೂ ಇರುವ ಸರ್ಕಾರದ ಭೂಮಿಗಳನ್ನು ವ್ಯಾಪಕವಾಗಿ ಒತ್ತುವರಿ ಮಾಡಲಾಗುತ್ತಿದೆ.ಅಂಥ ಭೂ ಕಬಳಿಕೆದಾರರು ರಿಯಲ್ ಎಸ್ಟೇಟ್ ವ್ಯವಹಾರಗಳಲ್ಲಿ ತೊಡಗಿರುವುದು ಮತ್ತು ಆ ಮೂಲಕ ಮುಗ್ಧ ಸಾರ್ವಜನಿಕರನ್ನು ವಂಚನೆಗೊಳಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.ಆದ್ದರಿಂದ ನಗರ ಪ್ರದೇಶಗಳಲ್ಲಿ ಸರ್ಕಾರದ ಭೂಮಿಯ ಮತ್ತಷ್ಟು ಒತ್ತುವರಿಯನ್ನು ಪತ್ತೆ ಮಾಡುವುದು ಮತ್ತು ಅಂಥ ಭೂ ಕಬಳಿಕೆದಾರರನ್ನು ತೀವ್ರ ಶಿಕ್ಷೆಗೆ ಗುರಿಪಡಿಸುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಅಧಿಕಾರಿಗಳು ಅಂಥ ಭೂಕಬಳಿಕೆದಾರರೊಂದಿಗೆ ಶಾಮೀಲಾಗುವುದನ್ನು ತಡೆಯುವುದಕ್ಕಾಗಿ, ಅಂಥ ಚಟುವಟಿಕೆಗಳ ಬಗ್ಗೆ ಗೊತ್ತಿದ್ದು ಅವರ ವಿರುದ್ಧ ಕಾನೂನು ಕ್ರಮಗಳನ್ನು ತೆಗೆದುಕೊಳ್ಳದಿರುವ ಅಧಿಕಾರಿಗಳನ್ನು, ಒತ್ತುವರಿಗಳಿಗೆ ಪ್ರೇರೇಪಣೆ ನೀಡುವ ಅಧಿಕಾರಿಗಳನ್ನು, ಸುಳ್ಳು ದಾಖಲೆಗಳನ್ನು ಮತ್ತು ರೆವಿನ್ಯೂ ದಾಖಲಾತಿಗಳನ್ನು ಸೃಷ್ಟಿಸುವ ಅಧಿಕಾರಿಗಳನ್ನು ತಪ್ಪಿತಸ್ಥರನ್ನಾಗಿ ಮಾಡಲಾಗುತ್ತದೆ ಹಾಗೂ ಪ್ರಾಸಿಕ್ಯೂಷನ್‌ಗೆ ಒಳಪಡಿಸಲಾಗುತ್ತದೆ.

ಮೇಲಿನ ಅಂಶಗಳನ್ನು ದೃಷ್ಟಿಯಲ್ಲಿಟ್ಟುಕೊಂಡು, “ಅಪರಾಧಗಳು ಮತ್ತು ದಂಡನೆಗಳು” ಎಂಬ ಹೊಸ ಅಧ್ಯಾಯವನ್ನು ಸೇರಿಸುವ ಮೂಲಕ ಕರ್ನಾಟಕ ಭೂಕಂದಾಯ ಅಧಿನಿಯಮ, 1964ಕ್ಕೆ ತಿದ್ದುಪಡಿಯನ್ನು ತರಲು ಉದ್ದೇಶಿಸಲಾಗಿದೆ.

ಕೊಡಗು ಜಿಲ್ಲೆಯಲ್ಲಿ ಜಮ್ಮಾ, ಬಾಣೆ ಭೂಮಿಗಳಿಗೆ ಅಥವಾ ಸರ್ಕಾರದ ಭೂಮಿಯನ್ನು ಒತ್ತುವರಿ ಮಾಡಿಕೊಂಡು ಸಕ್ರಮ ಮಾಡಿಕೊಂಡಿರುವ ಅಥವಾ ಅಧಿನಿಯಮದ 94ಎ, 94ಬಿ ಮತ್ತು 94ಸಿ ಪ್ರಕರಣಗಳ ಮೇರೆಗೆ ರಚಿಸಲಾದ ಸಮಿತಿಯ ಮುಂದೆ ಸಕ್ರಮಗೊಳಿಸುವುದಕ್ಕಾಗಿ ಇತ್ಯರ್ಥದಲ್ಲಿರುವ ಪ್ರಕರಣಗಳನ್ನು ಮತ್ತು ಈ ಬಗ್ಗೆ ವಿಶೇಷ ಯೋಜನೆಯನ್ನು ರೂಪಿಸುವ ಮೂಲಕ ಸರ್ಕಾರವು ಸಕ್ರಮಗೊಳಿಸಿರುವಂಥ ಪ್ರಕರಣಗಳನ್ನು ಅಪರಾಧದ ವ್ಯಾಪ್ತಿಯಿಂದ ಹೊರತುಪಡಿಸಲಾಗಿದೆ.

ವಿಷಯವು ತುರ್ತುಸ್ವರೂಪದ್ದಾಗಿದ್ದುದರಿಂದ ಮತ್ತು ಕರ್ನಾಟಕದ ವಿಧಾನ ಮಂಡಲವು ಅಧಿವೇಶನದಲ್ಲಿಲ್ಲದಿರುವುದರಿಂದ ಮೇಲಿನ ಉದ್ದೇಶವನ್ನು ಸಾಧಿಸುವ ಸಲುವಾಗಿ ಕರ್ನಾಟಕ ಭೂಕಂದಾಯ (ತಿದ್ದುಪಡಿ) ಆದ್ಯಾದೇಶ, 2006 (2006ರ ಕರ್ನಾಟಕ ಆಧ್ಯಾದೇಶ ಸಂಖ್ಯೆ.3) ನ್ನು ಹೊರಡಿಸಲಾಗಿತ್ತು.

ಸದರಿ ಆಧ್ಯಾದೇಶಕ್ಕೆ ಬದಲಾಗಿ ಈ ವಿಧೇಯಕವನ್ನು ಮಂಡಿಸಲಾಗಿದೆ.

[2007ರ ವಿಧಾನಸಭೆ ವಿಧೇಯಕ ಸಂಖ್ಯೆ. 28].

[ಭಾರತ ಸಂವಿಧಾನದ ಏಳನೇ ಅನುಸೂಚಿಯ IIನೇ ಪಟ್ಟಿಯ ನಮೂದು 64]

## XXXI

**2007ರ ತಿದ್ದುಪಡಿ ಅಧಿನಿಯಮ 17.–**ಆದೇಶ ಸಂಖ್ಯೆ: ಆರ್‌ಡಿ 9 ಬಿಎಂಎಂ 2003, ದಿನಾಂಕ: 08.09.2005ರಲ್ಲಿ ಸಹಾಯಕ ಸಿಬ್ಬಂದಿಯೊಂದಿಗೆ ಬೆಂಗಳೂರು, ಮೈಸೂರು, ಗುಲ್ಬರ್ಗಾ, ಬೆಳಗಾಂನಲ್ಲಿ ರೀಜನಲ್ ಕಮೀಷನರ್ ಹುದ್ದೆಗಳನ್ನು ಸೃಜಿಸಲಾಗಿದೆ.

ಆಯಾಯ ಅಧಿನಿಯಮಗಳಿಗೆ ಅವಶ್ಯಕ ತಿದ್ದುಪಡಿಗಳನ್ನು ಮಾಡುವ ಮೂಲಕ ರೀಜನಲ್ ಕಮೀಷನರುಗಳಿಗೆ ಶಾಸನಾತ್ಮಕ ಅಧಿಕಾರಗಳನ್ನು ನೀಡಬೇಕಾಗಿದೆ.

ವಿಷಯವು ತುರ್ತುಸ್ವರೂಪದಾಗಿದ್ದುದರಿಂದ ಮತ್ತು ಕರ್ನಾಟಕ ವಿಧಾನ ಮಂಡಲವು ಅಧಿವೇಶನದಲ್ಲಿಲ್ಲದಿದ್ದುದರಿಂದ ಮೇಲಿನ ಉದ್ದೇಶವನ್ನು ಸಾಧಿಸುವ ಸಲುವಾಗಿ ಕರ್ನಾಟಕ ಭೂಕಂದಾಯ ಮತ್ತು ಇತರೆ ಕೆಲವು ಕಾನೂನುಗಳ (ತಿದ್ದುಪಡಿ) ಆಧ್ಯಾದೇಶ, 2006 (2006ರ ಕರ್ನಾಟಕ ಆಧ್ಯಾದೇಶ ಸಂಖ್ಯೆ.5ರ) ನ್ನು ಹೊರಡಿಸಲಾಗಿತ್ತು.

ಆದ್ದರಿಂದ ಈ ವಿಧೇಯಕ.

[2007ರ ವಿಧಾನಸಭೆ ವಿಧೇಯಕ ಸಂಖ್ಯೆ. 07].

[ಭಾರತ ಸಂವಿಧಾನದ ಏಳನೇ ಅನುಸೂಚಿಯ IIನೇ ಪಟ್ಟಿಯ 5 ಮತ್ತು 18ನೇ ನಮೂದುಗಳು]

## XXXII

**2007ರ ತಿದ್ದುಪಡಿ ಅಧಿನಿಯಮ 18.–** ಕರ್ನಾಟಕ ಭೂಕಂದಾಯ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ (2)ರ 69ನೇ ಪ್ರಕರಣವು, ರಾಜ್ಯ ಸರ್ಕಾರಕ್ಕೆ ಸೇರಿದ ಭೂಮಿಯನ್ನು ಅಥವಾ ಇತರ ಸ್ವತ್ತನ್ನು ವಿಲೆ ಮಾಡುವುದಕ್ಕಾಗಿ ಉಪಬಂಧ ಕಲ್ಪಿಸುತ್ತದೆ, ಸಾರ್ವಜನಿಕ ಹರಾಜಿನ ಮೂಲಕ ಮಾರಾಟ ಮಾಡಿದ ಭೂಮಿಯ ಸ್ಥಿರೀಕರಣಕ್ಕಾಗಿ ಯಾವುದೇ ಉಪಬಂಧ ಇಲ್ಲ. ಸಾರ್ವಜನಿಕ ಹರಾಜಿನ ಮೂಲಕ ಮಾರಾಟಕ್ಕಾಗಿ ಮತ್ತು ಅಂಥ ಮಾರಾಟದ ಸ್ಥಿರೀಕರಣಕ್ಕಾಗಿ ಹೊಸ ಪ್ರಕರಣವನ್ನು ಸೇರಿಸುವ ಮೂಲಕ ಉಪಬಂಧ ಕಲ್ಪಿಸುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

[2005ರ ವಿಧಾನಸಭೆ ವಿಧೇಯಕ ಸಂಖ್ಯೆ. 31]

[ಭಾರತ ಸಂವಿಧಾನದ ಏಳನೇ ಅನುಸೂಚಿಯ IIನೇ ಪಟ್ಟಿಯ 18 ಮತ್ತು 45ನೇ ನಮೂದುಗಳು]

## XXXIII

**2009ರ ತಿದ್ದುಪಡಿ ಅಧಿನಿಯಮ 23.–** ಕರ್ನಾಟಕ ಭೂಕಂದಾಯ (ತಿದ್ದುಪಡಿ) ಅಧಿನಿಯಮ, 1997ರ ಮೂಲಕ ಕರ್ನಾಟಕ ಭೂಕಂದಾಯ ಅಧಿನಿಯಮ, 1964ಕ್ಕೆ ಸೇರ್ಪಡೆ ಮಾಡಿದ 94ಬಿ ಪ್ರಕರಣವು, ಸದರಿ ತಿದ್ದುಪಡಿ ಅಧಿನಿಯಮ ಜಾರಿಗೆ ಬಂದ ದಿನಾಂಕದಿಂದ ಒಂದು ವರ್ಷದೊಳಗೆ ಕೆಲವು ಭೂಮಿಗಳನ್ನು ಸಕ್ರಮಗೊಳಿಸಲು ಉಪಬಂಧವನ್ನು ಕಲ್ಪಿಸುತ್ತದೆ. ಸದರಿ ಅವಧಿಯನ್ನು ಕಾಲಕಾಲಕ್ಕೆ ವಿಸ್ತರಿಸಲಾಗಿದೆ ಮತ್ತು ಆ ಅವಧಿಯು 26.04.2008 ರಂದು ಮುಕ್ತಾಯವಾಗಿದೆ.ತಿದ್ದುಪಡಿಯಾದ ಉಪಬಂಧಗಳಿಗೆ ಅನುಸಾರವಾಗಿ ನಮೂನೆ 50ರಲ್ಲಿ 29047 ಅರ್ಜಿಗಳು ಮತ್ತು ನಮೂನೆ 53 ರಲ್ಲಿ 402482 ಅರ್ಜಿಗಳು ಬೇರೆಬೇರೆ ಸಮಿತಿಗಳ ಮುಂದೆ ವಿಲೇವಾರಿಗಾಗಿ ಬಾಕಿ ಉಳಿದಿರುವುದರಿಂದ, ಈ ಅವಧಿಯನ್ನು ಇನ್ನೂ ಎರಡು ವರ್ಷಗಳಿಗೆ ವಿಸ್ತರಿಸುವುದು ಅವಶ್ಯಕವೆಂದು ಪರಿಗಣಿಸಿದೆ.

ಹಲವಾರು ರಿಟ್ ಅರ್ಜಿಗಳಲ್ಲಿ, ಗೌರವಾನ್ವಿತ ಕರ್ನಾಟಕ ಉಚ್ಚನ್ಯಾಯಾಲಯವು, ಬಗರ್ ಹುಕುಂ ಸಮಿತಿಗಳನ್ನು ರಚಿಸುವ ಮೂಲಕ ನಿಗದಿತ ಅವಧಿಯೊಳಗೆ ಬಾಕಿ ಇರುವ ಅರ್ಜಿಗಳನ್ನು ವಿಲೇ ಮಾಡುವಂತೆ ಸರ್ಕಾರಕ್ಕೆ ನಿರ್ದೇಶನಗಳನ್ನು ನೀಡಿದೆ, ಈ ಸಂಬಂಧದಲ್ಲಿ ನ್ಯಾಯಾಲಯ ನಿಂದನೆ ಅರ್ಜಿಗಳನ್ನು ಸಹ ಸಲ್ಲಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

[2009ರ ವಿಧಾನಸಭೆ ವಿಧೇಯಕ ಸಂಖ್ಯೆ.15, ಕಡತ ಸಂಖ್ಯೆ. ಡಿಪಿಎಎಲ್ 20 ಶಾಸನ 2008]

[ಭಾರತ ಸಂವಿಧಾನದ ಏಳನೇ ಅನುಸೂಚಿಯ IIನೇ ಪಟ್ಟಿಯ 18, 45ನೇ ನಮೂದುಗಳು.]

## XXXIV

**2009ರ ತಿದ್ದುಪಡಿ ಅಧಿನಿಯಮ 26.–** ಅನಧಿಕೃತ ಬಡಾವಣೆಗಳಲ್ಲಿನ ರೆವಿನ್ಯೂ ನಿವೇಶನಗಳ ವಿಶೇಷವಾಗಿ, ಬೆಂಗಳೂರಿನ ಸುತ್ತಮುತ್ತ ಇರುವ ಮತ್ತು ರಾಜ್ಯದ ಇತರ ನಗರಪಾಲಿಕೆಗಳಲ್ಲಿ ಇರುವ ಈ ಬಡಾವಣೆಗಳು ನಿವೇಶನಗಳು ಪರಿವರ್ತನೆ ಹೊಂದದ ಕೃಷಿ ಭೂಮಿಯಲ್ಲಿದ್ದವು ಮತ್ತು ಬಡಾವಣೆಗಳಲ್ಲಿನ ಮತ್ತು ಅನುಮೋದಿತವಾದ ಆದರೆ ಅಭಿವೃದ್ಧಿಪಡಿಸದನಿವೇಶನಗಳ ನೋಂದಣಿಯನ್ನು ನಿಷೇಧಿಸಲಾಗಿತ್ತು. ಏಕೆಂದರೆ ಈ ಬಡಾವಣೆಗಳು ಮತ್ತು ನಿವೇಶನಗಳು ಪರಿವರ್ತನೆ ಹೊಂದದ ಕೃಷಿ ಭೂಮಿಯಲ್ಲಿದ್ದವು. ನಿಷೇಧ ಇದ್ದ ದಿನಾಂಕದವರೆಗೆ ಸುಮಾರು 3 ರಿಂದ 5 ಲಕ್ಷ ಜನರು ಅನೌಪಚಾರಿಕವಾಗಿ ಅಂಥ ನಿವೇಶನಗಳನ್ನು ಖರೀದಿಸಿದ್ದಾರೆ ಮತ್ತು ನೋಂದಣಿ ಮಾಡಿಸದೆಯೇ ಅವುಗಳಲ್ಲಿ ಮನೆಗಳನ್ನು ಕಟ್ಟಿಕೊಂಡಿದ್ದಾರೆ, ಅಂತಹ ಜನರಿಗೆ ಅನಗತ್ಯ ಬವಣೆ ಉಂಟಾಗಿದೆ. ಆದ್ದರಿಂದ, 13.12.2008 ಕ್ಕೆ ಮುಂಚೆ ಅಭಿವೃದ್ಧಿಪಡಿಸಿದ ಎಲ್ಲಾ ಅಂಥ ನಿವೇಶನಗಳನ್ನು ಮತ್ತು ಬಡಾವಣೆಗಳನ್ನು ಒಂದು ಸಲದ ಸಮಗ್ರ ವ್ಯವಸ್ಥೆ ಎಂಬಂತೆ ಸರ್ಕಾರವು ಕೆಲವು ಸೂಕ್ತ ಷರತ್ತುಗಳಿಗೆ ಒಳಪಟ್ಟು, ಸಕ್ರಮಗೊಳಿಸಲು ಉದ್ದೇಶಿಸಿದೆ.

ಆದ್ದರಿಂದ ಈ ವಿಧೇಯಕ.

[2009ರ ವಿಧಾನಸಭೆಯ ವಿಧೇಯಕ ಸಂಖ್ಯೆ.16, ಕಡತ ಸಂಖ್ಯೆ. 20. ಶಾಸನ 2006]

[ಭಾರತ ಸಂವಿಧಾನದ ಏಳನೇ ಅನುಸೂಚಿ ಪಟ್ಟಿIIರ18 ಮತ್ತು 45ನೇ ನಮೂದುಗಳು.]

## XXXV

**2011ರ ತಿದ್ದುಪಡಿ ಅಧಿನಿಯಮ 29.–** 2009ರ ಕರ್ನಾಟಕ ಅಧಿನಿಯಮ 26 ರಲ್ಲಿ ತಿದ್ದುಪಡಿಯಾದಂತೆ ಕರ್ನಾಟಕ ಭೂಕಂದಾಯ ಅಧಿನಿಯಮ, 1964ರ 95ನೇ ಪ್ರಕರಣದ ಉದ್ದೇಶಕ್ಕಾಗಿ ಅರ್ಜಿಗಳನ್ನು ಸಲ್ಲಿಸುವುದಕ್ಕಾಗಿ ಇದ್ದ ಒಂದು ವರ್ಷದ ಅವಧಿಯು ಮುಕ್ತಾಯವಾಗಿರುತ್ತದೆ. ಸದರಿ ಒಂದು ವರ್ಷದ ಅವಧಿಯನ್ನು ಪ್ರಸ್ತಾವಿತ ತಿದ್ದುಪಡಿ ಮೂಲಕ ವಿಸ್ತರಿಸಲಾಗುತ್ತಿದೆ.

ಆದ್ದರಿಂದ ಈ ವಿಧೇಯಕ.

[2011ರ ವಿಧಾನಸಭೆ ವಿಧೇಯಕ ಸಂಖ್ಯೆ.27, ಕಡತ ಸಂಖ್ಯೆ. ಸಂವ್ಯಶಾಇ 28, ಶಾಸನ 2011]

[ಭಾರತ ಸಂವಿಧಾನದ ಏಳನೇ ಅನುಸೂಚಿ ಪಟ್ಟಿ IIರ 18ನೇ ನಮೂದುಗಳು.]

## XXXVI

**2012ರ ತಿದ್ದುಪಡಿ ಅಧಿನಿಯಮ 9.–** ಕರ್ನಾಟಕ ಭೂಕಂದಾಯ (ತಿದ್ದುಪಡಿ) ಅಧಿನಿಯಮ, 1997ರ ಮೂಲಕ ಕರ್ನಾಟಕ ಭೂಕಂದಾಯ ಅಧಿನಿಯಮ, 1964ಕ್ಕೆ ಸೇರ್ಪಡೆ ಮಾಡಲಾದ 94ಬಿ ಪ್ರಕರಣವು, ಸದರಿ ತಿದ್ದುಪಡಿ ಅಧಿನಿಯಮವು ಜಾರಿಗೆ ಬಂದ ದಿನಾಂಕದಿಂದ ಒಂದು ವರ್ಷದೊಳಗೆ ಕೆಲವು ಭೂಮಿಗಳನ್ನು ಸಕ್ರಮಗೊಳಿಸಲು ಉಪಬಂಧವನ್ನು ಕಲ್ಪಿಸುತ್ತದೆ. ಸದರಿ ಅವಧಿಯನ್ನು ಕಾಲಕಾಲಕ್ಕೆ ವಿಸ್ತರಿಸಲಾಗಿತ್ತು ಮತ್ತು ಆ ಅವಧಿಯು 26.04.2011 ರಂದು ಮುಕ್ತಾಯವಾಗಿದೆ.ತಿದ್ದುಪಡಿ ಉಪಬಂಧಗಳಿಗೆ ಅನುಸಾರವಾಗಿ ನಮೂನೆ ಸಂಖ್ಯೆ. 50ರಲ್ಲಿ 26,000 ಅರ್ಜಿಗಳು ಮತ್ತು ನಮೂನೆ ಸಂಖ್ಯೆ.53 ರಲ್ಲಿ 4.02 ಲಕ್ಷ ಅರ್ಜಿಗಳು ಬೇರೆಬೇರೆ ಸಮಿತಿಗಳ ಮುಂದೆ ವಿಲೇವಾರಿಗಾಗಿ ಬಾಕಿ ಉಳಿದಿರುತ್ತವೆ. ಆದ್ದರಿಂದ, ಸದರಿ ಅವಧಿಯನ್ನು ಇನ್ನೂ ಮೂರು ವರ್ಷಗಳಿಗೆ ವಿಸ್ತರಿಸುವುದು ಅವಶ್ಯಕವೆಂದು ಪರಿಗಣಿಸಲಾಗಿದೆ. ಹಲವಾರು ರಿಟ್ ಅರ್ಜಿಗಳಲ್ಲಿ, ಗೌರವಾನ್ವಿತ ಕರ್ನಾಟಕ ಉಚ್ಚ ನ್ಯಾಯಾಲಯವು, ಬಗರ್‌ಹುಕುಂ ಸಮಿತಿಗಳನ್ನು ರಚಿಸುವ ಮೂಲಕ ನಿಗದಿತ ಅವಧಿಯೊಳಗೆ ಬಾಕಿ ಇರುವ ಅರ್ಜಿಗಳನ್ನು ವಿಲೇ ಮಾಡುವಂತೆ ಸರ್ಕಾರಕ್ಕೆ ನಿರ್ದೇಶನಗಳನ್ನು ನೀಡಿದೆ. ಈ ಸಂಬಂಧದಲ್ಲಿ ನ್ಯಾಯಾಲಯ ನಿಂದನೆ ಅರ್ಜಿಗಳನ್ನು ಸಹ ಸಲ್ಲಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

[2011ರ ವಿಧಾನಸಭೆ ವಿಧೇಯಕ ಸಂಖ್ಯೆ.48, ಕಡತ ಸಂಖ್ಯೆ. ಸಂವ್ಯಶಾಇ 43, ಶಾಸನ 2011]

[ಭಾರತ ಸಂವಿಧಾನದ ಏಳನೇ ಅನುಸೂಚಿ ಪಟ್ಟಿ IIರ 18ನೇ ನಮೂದು.]

## XXXVII

**2013ರ ತಿದ್ದುಪಡಿ ಅಧಿನಿಯಮ 11.–** ಕೊಡಗು ಜಿಲ್ಲೆಯಲ್ಲಿರುವ ಬಾಣೆ ಭೂಮಿಯ ಕರನಿರ್ಧರಣೆಯೂ ಒಳಗೊಂಡಂತೆ ಕೆಲವು ಹಕ್ಕುಗಳನ್ನು ನೀಡಲು ಕರ್ನಾಟಕ ಭೂಕಂದಾಯ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 12) ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

[2011ರ ವಿಧಾನಸಭೆ ವಿಧೇಯಕ ಸಂಖ್ಯೆ.49, ಕಡತ ಸಂಖ್ಯೆ. ಸಂವ್ಯಶಾಇ 53, ಶಾಸನ 2011]

[ಭಾರತ ಸಂವಿಧಾನದ ಏಳನೇ ಅನುಸೂಚಿ ಪಟ್ಟಿ IIರ 18ನೇ ನಮೂದು.]

## XXXVIII

**2013ರ ತಿದ್ದುಪಡಿ ಅಧಿನಿಯಮ 51.–**ಸರ್ಕಾರಿ ಭೂಮಿಯಲ್ಲಿ 2012ರ ಜನವರಿ ಒಂದನೇ ದಿನಾಂಕಕ್ಕೂ ಮುಂಚೆ ಅನಧಿಕೃತವಾಗಿ ಕಟ್ಟಿಕೊಂಡಿರುವ ಮನೆಗಳನ್ನು ಕೆಲವು ಷರತ್ತುಗಳಿಗೊಳಪಟ್ಟು ಸಕ್ರಮಗೊಳಿಸುವುದಕ್ಕಾಗಿ ಕರ್ನಾಟಕ ಭೂಕಂದಾಯ ಅಧಿನಿಯಮ, 1961 (1964ರ ಕರ್ನಾಟಕ ಅಧಿನಿಯಮ 12) ರ 94ಸಿ ಪ್ರಕರಣವನ್ನು ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

[2012ರ ವಿಧಾನಸಭೆ ವಿಧೇಯಕ ಸಂಖ್ಯೆ.02, ಕಡತ ಸಂಖ್ಯೆ. ಸಂವ್ಯಶಾಇ 47, ಶಾಸನ 2012]

[ಭಾರತ ಸಂವಿಧಾನದ ಏಳನೇ ಅನುಸೂಚಿ ಪಟ್ಟಿ IIರ 18ನೇ ನಮೂದು.]

## XXXIX

**2013ರ ತಿದ್ದುಪಡಿ ಅಧಿನಿಯಮ 66.–** ಪ್ರಸ್ತುತ 1964ರ ಭೂಕಂದಾಯ ಅಧಿನಿಯಮವು, ಅನಧಿಕೃತವಾಗಿ ಸಾಗುವಳಿ ಮಾಡುತ್ತಿರುವ ಭೂಮಿಯನ್ನು ವಿಧಾನ ಸಭೆಯ ಸದಸ್ಯರು ಅಧ್ಯಕ್ಷರಾಗಿರುವ ತಾಲ್ಲೂಕು ಮಟ್ಟದ ಸಮಿತಿಯು ಹಂಚಿಕೆ ಮತ್ತು ಮಂಜೂರು ಮಾಡಲು ಉಪಬಂಧ ಕಲ್ಪಿಸಿದೆ. ವಿಧಾನಸಭಾ ಚುನಾವಣಾ ಕ್ಷೇತ್ರಗಳ ಸೀಮಾನಿರ್ಣಯದ ಪರಿಣಾಮವಾಗಿ ತಾಲ್ಲೂಕಿನ ಕೆಲವು ಪ್ರದೇಶಗಳು ಅಕ್ಕಪಕ್ಕದ ತಾಲ್ಲೂಕುಗಳೊಂದಿಗೆ ಪರಸ್ಪರ ವ್ಯಾಪ್ತವಾಗಿರುವುದರಿಂದ, ಯಾವ ವಿಧಾನಸಭಾ ಸದಸ್ಯರು ತಾಲ್ಲೂಕು ಮಟ್ಟದ ಸಮಿತಿಗೆ ಅಧ್ಯಕ್ಷರಾಗಬೇಕೆಂಬ ಬಗ್ಗೆ ಗೊಂದಲ ಉಂಟಾಗುತ್ತಿದೆ.

ಈ ಅಸಂಗತತೆಯನ್ನು ತಪ್ಪಿಸುವುದಕ್ಕಾಗಿ, ಅವಶ್ಯವಿರುವ ಕಡೆಗಳಲ್ಲೆಲ್ಲಾ ಪ್ರತಿಯೊಂದು ವಿಧಾನಸಭಾ ಚುನಾವಣಾ ಕ್ಷೇತ್ರಕ್ಕಾಗಿ ಪ್ರತ್ಯೇಕ ಸಮಿತಿಗಳನ್ನು ರಚಿಸುವುದಕ್ಕಾಗಿ ಉಪಬಂಧ ಕಲ್ಪಿಸಲು ಕರ್ನಾಟಕ ಭೂಕಂದಾಯ ಅಧಿನಿಯಮ 1964ನ್ನು (1964ರ ಕರ್ನಾಟಕ ಅಧಿನಿಯ 12) ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿತ್ತು.

ವಿಷಯವು ತುರ್ತು ಸ್ವರೂಪದ್ದಾಗಿರುವುದರಿಂದ ಮತ್ತು ಕರ್ನಾಟಕ ವಿಧಾನ ಮಂಡಲದ ಉಭಯ ಸದನಗಳು ಅಧಿವೇಶನದಲ್ಲಿಲ್ಲದಿದ್ದುದರಿಂದ, ಕರ್ನಾಟಕ ಭೂಕಂದಾಯ (ತಿದ್ದುಪಡಿ) ಅಧ್ಯಾದೇಶ, 2013 (2013ರ ಅಧ್ಯಾದೇಶ ಸಂಖ್ಯೆ. 1) ನ್ನು 15.110.2013 ರಂದು ಹೊರಡಿಸಲಾಗಿತ್ತು.

ಸದರಿ ಅಧ್ಯಾದೇಶಕ್ಕೆ ಬದಲಾಗಿ ಈ ವಿಧೇಯಕವನ್ನು ಮಂಡಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

[2013ರ ವಿಧಾನಸಭೆ ವಿಧೇಯಕ ಸಂಖ್ಯೆ.18, ಕಡತ ಸಂಖ್ಯೆ. ಸಂವ್ಯಶಾಇ 45, ಶಾಸನ 2013]

[ಭಾರತ ಸಂವಿಧಾನದ ಏಳನೇ ಅನುಸೂಚಿ ಪಟ್ಟಿ IIರ 18ನೇ ನಮೂದು.]

## XL

**2014ರ ತಿದ್ದುಪಡಿ ಅಧಿನಿಯಮ 26.–** ವಿಲೇವಾರಿಗಾಗಿ ಇತ್ಯರ್ಥದಲ್ಲಿರುವ ಸುಮಾರು 34,824 (ನಮೂನೆ 50ರಲ್ಲಿರುವ) ಅರ್ಜಿಗಳನ್ನು ಮತ್ತು (ನಮೂನೆ 53ರಲ್ಲಿರುವ) 3,74,580 ಅರ್ಜಿಗಳನ್ನು ವಿಲೆ ಮಾಡಲು ಕರ್ನಾಟಕ ಭೂಕಂದಾಯ ಅಧಿನಿಯಮ, 1964ನ್ನು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ ಮತ್ತು ಅದಕ್ಕಾಗಿ ಇನ್ನೂ ಎರಡು ವರ್ಷಗಳಿಗೆ ಕಾಲಮಿತಿಯನ್ನು ವಿಸ್ತರಿಸುವುದು ಅವಶ್ಯಕವಾಗಿದೆ.

ಆದ್ದರಿಂದ ಈ ವಿಧೇಯಕ.

[2014ರ ವಿಧಾನಸಭೆ ವಿಧೇಯಕ ಸಂಖ್ಯೆ.54, ಕಡತ ಸಂಖ್ಯೆ. ಸಂವ್ಯಶಾಇ 25, ಶಾಸನ 2014]

[ಭಾರತ ಸಂವಿಧಾನದ ಏಳನೇ ಅನುಸೂಚಿ ಪಟ್ಟಿ IIರ 18ನೇ ನಮೂದು.]

## XLI

**2014ರ ತಿದ್ದುಪಡಿ ಅಧಿನಿಯಮ 27.–**ಕರ್ನಾಟಕ ಭೂ ಸುಧಾರಣಾ ಅಧಿನಿಯಮ, 1961ರ 109ನೇ ಪ್ರಕರಣದ ಮೇರೆಗೆ ಒಮ್ಮೆ ಅನುಮತಿಯನ್ನು ತೆಗೆದುಕೊಂಡರೆ, ಕರ್ನಾಟಕ ಭೂಕಂದಾಯ ಅಧಿನಿಯಮ, 1964ರ 95ನೇ ಪ್ರಕರಣದ ಮೇರೆಗೆ ಅನುಮತಿಯನ್ನು ತೆಗೆದುಕೊಳ್ಳಲಾಗಿದೆಯೆಂದು ಪರಿಭಾವಿಸುವುದಕ್ಕಾಗಿ ಉಪಬಂಧ ಕಲ್ಪಿಸಲು ಕರ್ನಾಟಕ ಭೂಸುಧಾರಣಾ ಅಧಿನಿಯಮ, 1961 (1962ರ ಕರ್ನಾಟಕ ಅಧಿನಿಯಮ 10)ರ 109ನೇ ಪ್ರಕರಣವನ್ನು ಮತ್ತು ಕರ್ನಾಟಕ ಭೂಕಂದಾಯ ಅಧಿನಿಯಮ 1964ರ 95ನೇ ಪ್ರಕರಣವನ್ನು ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ. ಏಕೆಂದರೆ ಈ ಎರಡೂ ಅಧಿನಿಯಮಗಳ ಮೇರೆಗೆ ಕೈಗೊಳ್ಳುವ ಕಾರ್ಯವಿಧಾನವು ಒಂದೇ ರೀತಿ ಇತ್ತು ಎಂದು ಭಾವಿಸಿ ಉಪಬಂಧ ಕಲ್ಪಿಸಿದೆ. ಹೀಗಾಗಿ ಪ್ರತಿಯೊಂದು ಅಧಿನಿಯಮದ ಮೇರೆಗೆ ಪ್ರತ್ಯೇಕವಾಗಿ ಅನುಮತಿಯನ್ನು ತೆಗೆದುಕೊಳ್ಳಬೇಕಾಗಿತ್ತು. ಹಾಗಾಗಿ ಅನುಚಿತ ವಿಳಂಬ ಉಂಟಾಗುತ್ತಿತ್ತು. ಸದರಿ ಪ್ರಕ್ರಿಯೆಯನ್ನು ಸರಳೀಕರಣಗೊಳಿಸುವುದು ಅವಶ್ಯವೆಂದು ಪರಿಗಣಿಸಲಾಗಿದೆ.

(1)ನೇ ಪ್ರಕರಣದ ಮೇರೆಗೆ ಯಾವುದೇ ಪ್ರದೇಶದ ಭೂಮಿಯನ್ನು ಕೈಗಾರಿಕಾ ಅಭಿವೃದ್ಧಿ, ಶಿಕ್ಷಣ ಸಂಸ್ಥೆಗಳು, ಪೂಜಾ ಸ್ಥಳಗಳು, ರಾಜ್ಯ ಸರ್ಕಾರವು ಅನುಮೋದಿಸಿದ ವಸತಿ ಯೋಜನೆಯ ಉದ್ದೇಶಗಳಿಗಾಗಿ ಅಥವಾ ತೋಟಗಾರಿಕಾ ಉದ್ದೇಶಕ್ಕಾಗಿ ಬಳಸದೇ ಇರುವ ಸಂದರ್ಭದಲ್ಲಿ ಅಂಥ ಭೂಮಿಯನ್ನು ನಿಗದಿತ ಸಮಯದೊಳಗೆ ಸರ್ಕಾರದ ಭೂಬ್ಯಾಂಕಿಗೆ ಒಪ್ಪಿಸತಕ್ಕದ್ದೆಂದು, ಹಾಗೆ ಮಾಡಲು ವಿಫಲವಾದರೆ ವಿನಾಯಿತಿಯನ್ನು ರದ್ದುಗೊಳಿಸತಕ್ಕದ್ದೆಂದು ಮತ್ತು ಪರಿಹಾರವನ್ನು ಪಾವತಿ ಮಾಡದೆಯೇ ಅದನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳತಕ್ಕದ್ದೆಂದು ಸಹ

ಉಪಬಂಧಗಳನ್ನು ಕಲ್ಪಿಸಲಾಗಿದೆ. ಆದ್ದರಿಂದ ಕರ್ನಾಟಕ ಭೂಕಂದಾಯ ಅಧಿನಿಯಮ, 1961ರ 109ನೇ ಪ್ರಕರಣದ (2)ನೇ ಉಪ-ಪ್ರಕರಣಕ್ಕೆ ಹೊಸ ಪರಂತುಕವನ್ನು ಸೇರಿಸಲು ಉದ್ದೇಶಿಸಿದೆ.

ಆದ್ದರಿಂದ ಈ ವಿಧೇಯಕ.

[2014ರ ವಿಧಾನಸಭೆ ವಿಧೇಯಕ ಸಂಖ್ಯೆ.47, ಕಡತ ಸಂಖ್ಯೆ. ಸಂವ್ಯಶಾಇ 24, ಶಾಸನ 2014]

[ಭಾರತ ಸಂವಿಧಾನದ ಏಳನೇ ಅನುಸೂಚಿಯ ಪಟ್ಟಿIIರ 5 ಮತ್ತು 18ನೇ ನಮೂದುಗಳು.]

## XLII

**2015ರ ತಿದ್ದುಪಡಿ ಅಧಿನಿಯಮ 02.**– ಉಪ-ಖನಿಜಗಳ ಗಣಿಗಾರಿಕೆಯನ್ನು, ನಿರ್ದಿಷ್ಟಪಡಿಸಿರಲಿ ಅಥವಾ ನಿರ್ದಿಷ್ಟಪಡಿಸದಿರಲಿ ಅದನ್ನು ಸೇರ್ಪಡೆ ಮಾಡುವುದಕ್ಕಾಗಿ ಉಪಬಂಧ ಕಲ್ಪಿಸಲು ಕರ್ನಾಟಕ ಭೂ ಸುಧಾರಣೆಗಳ ಅಧಿನಿಯಮ, 1961 (1962ರ ಕರ್ನಾಟಕ ಅಧಿನಿಯಮ 10ರ) 109ನೇ ಪ್ರಕರಣದ (1)ನೇ ಉಪ-ಪ್ರಕರಣದಲ್ಲಿ "ಕೈಗಾರಿಕೆ ಅಭಿವೃದ್ಧಿ" ಗೆ ಸಂಬಂಧಿಸಿದಂತೆ ಮತ್ತು ಆ ಪ್ರಕರಣದ ಮೇರೆಗೆ ವಿನಾಯಿತಿ ನೀಡುವುದಕ್ಕಾಗಿ ಕಲ್ಲು ಪುಡಿ ಮಾಡುವ ಚಟುವಟಿಕೆಗಳಿಗೆ ವಿವರಣೆಯನ್ನು ಸೇರಿಸಲು ಆ 109ನೇ ಪ್ರಕರಣಕ್ಕೆ ತಿದ್ದುಪಡಿ ತರುವುದು.

(2) ತತ್ಕಾಲದಲ್ಲಿ ಜಾರಿಯಲ್ಲಿರುವ ಸಂಬಂಧಪಟ್ಟ ಕಾನೂನಿನ ಮೇರೆಗೆ ಉಪ-ಖನಿಜದ ಕಲ್ಲುಗಣಿಗಾರಿಕೆಯ ಅಥವಾ ಕಲ್ಲುಪುಡಿ ಮಾಡುವ ಚಟುವಟಿಕೆಯ ಉದ್ದೇಶಕ್ಕಾಗಿ ಅನುಮತಿಯನ್ನು ಪಡೆಯುವುದಕ್ಕೆ ಒಳಪಟ್ಟು ಭೂಮಿಯ ಪರಿವರ್ತನೆಯನ್ನು ಸರಳಗೊಳಿಸುವುದಕ್ಕೆ ಅಥವಾ ಗೊತ್ತುಪಡಿಸಿರುವ ಸಮಯವನ್ನು ಕಡಿಮೆ ಮಾಡುವುದಕ್ಕೆ ಕರ್ನಾಟಕ ಭೂ ಕಂದಾಯ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ, 12)ರ 95ನೇ ಪ್ರಕರಣಕ್ಕೆ ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಿದೆ.

ಆದ್ದರಿಂದ ಈ ವಿಧೇಯಕ.

[2014ರ ವಿಧಾನಸಭೆ ವಿಧೇಯಕ ಸಂಖ್ಯೆ.64, ಕಡತ ಸಂಖ್ಯೆ. ಸಂವ್ಯಶಾಇ 42, ಶಾಸನ 2014]

[ಭಾರತ ಸಂವಿಧಾನದ ಏಳನೇ ಅನುಸೂಚಿಯ ಪಟ್ಟಿ IIರ 5 ಮತ್ತು 18ನೇ ನಮೂದುಗಳು.]

## XLIII

**2015ರ ತಿದ್ದುಪಡಿ ಅಧಿನಿಯಮ 07.**– ನಗರ ಪ್ರದೇಶಗಳಲ್ಲಿರುವ ರೆವಿನ್ಯೂ ಭೂಮಿಗಳಲ್ಲಿ 2012ರ ಜನವರಿ, ಒಂದನೇ ದಿನಾಂಕಕ್ಕೆ ಮುಂಚೆ ಕಟ್ಟಿಕೊಂಡಿರುವ ಅನಧಿಕೃತ ವಾಸದ ಮನೆಯನ್ನು ಸಕ್ರಮಗೊಳಿಸುವುದಕ್ಕೆ ಕರ್ನಾಟಕ ಭೂಕಂದಾಯ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 12) ಕ್ಕೆ ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಿದೆ.

ಆದ್ದರಿಂದ ಈ ವಿಧೇಯಕ.

[2012ರ ವಿಧಾನಸಭೆ ವಿಧೇಯಕ ಸಂಖ್ಯೆ.45, ಕಡತ ಸಂಖ್ಯೆ. ಸಂವ್ಯಶಾಇ 76, ಶಾಸನ 2012]

[ಭಾರತ ಸಂವಿಧಾನದ ಏಳನೇ ಅನುಸೂಚಿಯ ಪಟ್ಟಿ IIರ 18ನೇ ನಮೂದು]

## XLIV

**2015ರ ತಿದ್ದುಪಡಿ ಅಧಿನಿಯಮ 31.**– ಕರ್ನಾಟಕ ಭೂಸುಧಾರಣೆಗಳ ಅಧಿನಿಯಮ, 1961ರ 109ನೇ ಪ್ರಕರಣಕ್ಕೆ ತಂದ ತಿದ್ದುಪಡಿಯ ಕಾರಣದಿಂದ,–

(i) ಸರ್ಕಾರಿ ಭೂಮಿಗಳಲ್ಲಿ ಕಟ್ಟಿಕೊಂಡಿರುವ ಅನಧಿಕೃತ ವಾಸದ ಮನೆಗಳನ್ನು ಸಕ್ರಮಗೊಳಿಸುವುದಕ್ಕೆ;

(ii) ಕೃಷಿ ಭೂಮಿಯನ್ನು ಕೃಷಿಯೇತರ ಉದ್ದೇಶಕ್ಕಾಗಿ ಪರಿವರ್ತನೆಗೊಳಿಸಲು ಅನುಮತಿಗಾಗಿ ಸಲ್ಲಿಸುವ ಅರ್ಜಿಯನ್ನು ಸ್ವೀಕರಿಸುವ ಕಾಲಾವಧಿಯ ವಿಸ್ತರಣೆಗೆ; ಮತ್ತು

(iii) ಫಾರಂ ಹೌಸ್‌ನ್ನು ನಿರ್ಮಿಸುವ ಉದ್ದೇಶಕ್ಕಾಗಿ ಮಾತ್ರವೇ ಸದ್ಭಾವನೆಯಿಂದ ಬಳಸಿದ ಎಂದರೆ ಕೃಷಿ ಉದ್ದೇಶಕ್ಕಾಗಿ, ಹಿಡುವಳಿಯ ಶೇಕಡ ಹತ್ತರಷ್ಟಕ್ಕೆ ವಿನಾಯಿತಿಗೆ,

– ಉಪಬಂಧ ಕಲ್ಪಿಸುವುದಕ್ಕಾಗಿ ಕರ್ನಾಟಕ ಭೂಕಂದಾಯ ಅಧಿನಿಯಮ, 1964ಕ್ಕೆ ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಿದೆ.

ಆದ್ದರಿಂದ ಈ ವಿಧೇಯಕ.

[2015ರ ವಿಧಾನಸಭಾ ವಿಧೇಯಕ ಸಂಖ್ಯೆ.19, ಕಡತ ಸಂಖ್ಯೆ. ಸಂವ್ಯಶಾಇ 23, ಶಾಸನ 2015]

[ಭಾರತ ಸಂವಿಧಾನದ ಏಳನೇ ಅನುಸೂಚಿಯ ಪಟ್ಟಿ IIರ 18ನೇ ನಮೂದು.]

## XLV

**2017ರ ತಿದ್ದುಪಡಿ ಅಧಿನಿಯಮ 11.–** ಕೆಲವು ಭೂಮಿಗಳ ಸಕ್ರಮಕ್ಕಾಗಿ ಸುಮಾರು 2,387 ಅರ್ಜಿಗಳು ನಮೂನೆ 50ರಲ್ಲಿ ಮತ್ತು 3,09,293 ಅರ್ಜಿಗಳು ನಮೂನೆ 53 ರಲ್ಲಿ ವಿಲೇವಾರಿಗಾಗಿ ಇನ್ನೂ ಬಾಕಿಯಿದ್ದು, ಈ ಬಾಕಿಯಿರುವ ಅರ್ಜಿಗಳನ್ನು ವಿಲೇವಾರಿ ಮಾಡಲು ಅನುಕೂಲವಾಗುವಂತೆ ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ರ 94ಬಿ ಪ್ರಕರಣವನ್ನು ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ. ಆದ್ದರಿಂದ ಇನ್ನೂ ಎರಡು ವರ್ಷಗಳಿಗೆ ಕಾಲಮಿತಿಯನ್ನು ವಿಸ್ತರಿಸುವುದು ಅವಶ್ಯಕವಾಗಿದೆ.

ಆದ್ದರಿಂದ ಈ ವಿಧೇಯಕ.

[2017ರ ವಿಧಾನಸಭಾ ವಿಧೇಯಕ ಸಂಖ್ಯೆ.4, ಕಡತ ಸಂಖ್ಯೆ. ಸಂವ್ಯಶಾಇ 12, ಶಾಸನ 2017]

[ಭಾರತ ಸಂವಿಧಾನದ ಏಳನೇ ಅನುಸೂಚಿಯ ಪಟ್ಟಿ IIರ 18ನೇ ನಮೂದು.]

## XLVI

**2017ರ ತಿದ್ದುಪಡಿ ಅಧಿನಿಯಮ 20.–**ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ರ (1964ರ ಕರ್ನಾಟಕ ಅಧಿನಿಯಮ ಸಂಖ್ಯೆ 12) 94ಸಿಸಿ ಪ್ರಕರಣವನ್ನು, ಸದರಿ ಪ್ರಕರಣದಲ್ಲಿರುವ ಕೋಷ್ಟಕದಲ್ಲಿ ನಿರ್ದಿಷ್ಟಪಡಿಸಿರುವ ಪೌರಸಭಾ ನಿಗಮಗಳ, ಪುರಸಭೆಗಳ ಮತ್ತು ಪಟ್ಟಣ ಪಂಚಾಯತ್‌ಗಳ ಸರಹದ್ದುಗಳಿಂದ ಗೊತ್ತುಪಡಿಸಿರುವ ಅಂತರಗಳೊಳಗೆ ಇರುವ ಜಾಗಗಳಲ್ಲಿ ಕಟ್ಟಿಕೊಂಡಿರುವ 30X40 ಅಡಿ ಅಳತೆಯಷ್ಟರ ವಾಸದ ಮನೆಗಳನ್ನು ಸಕ್ರಮಗೊಳಿಸುವುದಕ್ಕಾಗಿ ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಿದೆ.

ಆದ್ದರಿಂದ ಈ ವಿಧೇಯಕ.

[2017ರ ವಿಧಾನಸಭಾ ವಿಧೇಯಕ ಸಂಖ್ಯೆ.7, ಕಡತ ಸಂಖ್ಯೆ. ಸಂವ್ಯಶಾಇ 57, ಶಾಸನ 2016]

[ಭಾರತ ಸಂವಿಧಾನದ ಏಳನೇ ಅನುಸೂಚಿಯ ಪಟ್ಟಿ IIರ 18ನೇ ನಮೂದು.]

## XLVII

**2017ರ ತಿದ್ದುಪಡಿ ಅಧಿನಿಯಮ 49.–** ಸರ್ಕಾರಕ್ಕೆ ಸೇರಿದ ಭೂಮಿಯಲ್ಲಿ, ಅದಕ್ಕೆ ಹೊಂದಿಕೊಂಡಿರುವ ಭೂಮಿಯಲ್ಲಿ ಲಂಬಾಣಿ ತಾಂಡ, ಗೊಲ್ಲರ ಹಟ್ಟಿ, ವಡ್ಡರ ಹಟ್ಟಿ, ಕುರುಬರ ಹಟ್ಟಿ, ನಾಯಕರ ಹಟ್ಟಿ, ಮಜರೆ ಗ್ರಾಮ, ಹಾಡಿ, ದೊಡ್ಡಿ, ಪಾಳ್ಯ, ಶಿಬಿರ, ಕಾಲೋನಿ ಮುಂತಾದ ದಾಖಲಿಸದಿರುವ ವಾಸಸ್ಥಳಗಳಲ್ಲಿ ವಾಸದ ಮನೆಯ ಅಥವಾ ಈಗಿರುವ ರೆವಿನ್ಯೂ ಗ್ರಾಮದ ವ್ಯಾಪ್ತಿಯೊಳಗೆ ಬರುವ ಯಾವುದೇ ಇತರ ಗುಂಪಿನ ಮನೆಗಳು ಎಂದು ರಾಜ್ಯ ಸರ್ಕಾರವು ಗುರುತಿಸಿರುವ ಅಥವಾ ನಿಗದಿಪಡಿಸಬಹುದಾದಂತಹ ಷರತ್ತುಗಳಿಗೆ ಒಳಪಟ್ಟು ಒಂದು ಗ್ರಾಮದಲ್ಲಿ ಸಂಯೋಜನೆಗೊಳಿಸಬೇಕಾದ ಅಥವಾ ಪರಿವರ್ತಿತವಾಗಬೇಕಾದ ಆ ಯಾವುದೇ ಇತರ ಗುಂಪಿನ ಮನೆಗಳ ಅನಧಿಕೃತ ನಿರ್ಮಾಣವನ್ನು ಸಕ್ರಮಗೊಳಿಸುವುದಕ್ಕಾಗಿ ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ಕ್ಕೆ ಪ್ರಕರಣ 94 ಡಿ ಯನ್ನು ಸೇರಿಸಿ ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

[2017ರ ವಿಧಾನಸಭಾ ವಿಧೇಯಕ ಸಂಖ್ಯೆ.43, ಕಡತ ಸಂಖ್ಯೆ. ಸಂವ್ಯಶಾಇ 54, ಶಾಸನ 2017]

[ಭಾರತ ಸಂವಿಧಾನದ ಏಳನೇ ಅನುಸೂಚಿಯ ಪಟ್ಟಿ IIರ 18ನೇ ನಮೂದು.]

## XLVIII

**2017ರ ತಿದ್ದುಪಡಿ ಅಧಿನಿಯಮ 50.–** ಸರ್ಕಾರಿ ಭೂಮಿಗಳ ಮೇಲೆ ವಾಸದ ಮನೆಗಳನ್ನು ಅನಧಿಕೃತವಾಗಿ ನಿರ್ಮಾಣ ಮಾಡಿರುವುದನ್ನು ಸಕ್ರಮಗೊಳಿಸಲು ನಿರ್ದಿಷ್ಟ ದಿನಾಂಕವಾದ 2012ರ ಜನವರಿಯ ಮೊದಲ ದಿನದ ಬದಲು 2015ರ ಜನವರಿಯ ಮೊದಲ ದಿನಕ್ಕೆ ವಿಸ್ತರಿಸಲು ಕರ್ನಾಟಕ ಭೂ ಕಂದಾಯ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 12) ರ ಪ್ರಕರಣಗಳು 94 ಸಿ ಮತ್ತು 94 ಸಿಸಿ ಯನ್ನು ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

[2017ರ ವಿಧಾನಸಭಾ ವಿಧೇಯಕ ಸಂಖ್ಯೆ.45, ಕಡತ ಸಂಖ್ಯೆ. ಸಂವ್ಯಶಾಇ 60, ಶಾಸನ 2017]

[ಭಾರತ ಸಂವಿಧಾನದ ಏಳನೇ ಅನುಸೂಚಿಯ ಪಟ್ಟಿ IIರ 18ನೇ ನಮೂದು.]

## XLIX

**2018ರ ತಿದ್ದುಪಡಿ ಅಧಿನಿಯಮ 11.–** ಈ ಮುಂದಿನವುಗಳಿಗೆಅನುಕೂಲ ಮಾಡಿಕೊಡಲು ಕರ್ನಾಟಕ ಭೂ ಕಂದಾಯ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 12) 94–ಎ ಮತ್ತು 95ನೇ ಪ್ರಕರಣಗಳನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಿದೆ.

(ಎ) ಕೆಲವು ಭೂಮಿಗಳ ಅನಧಿಕೃತ ಅಧಿಭೋಗವನ್ನು ಸಕ್ರಮಗೊಳಿಸುವುದಕ್ಕಾಗಿ ಇರುವ ಕೊನೆಯ (cut-off) ದಿನಾಂಕವನ್ನು ವಿಸ್ತರಿಸುವುದು;

(ಬಿ) ಅಂಥ ಸಕ್ರಮಕ್ಕಾಗಿ ಅರ್ಜಿ ಸಲ್ಲಿಸುವ ಸಮಯವನ್ನು ವಿಸ್ತರಿಸುವುದು; ಮತ್ತು

(ಸಿ) ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961ರ (1963ರ ಕರ್ನಾಟಕ ಅಧಿನಿಯಮ 11) ಅಡಿಯಲ್ಲಿ ಪ್ರಕಟಿಸಲಾದ ಮಾಸ್ಟರ್ ಪ್ಲಾನ್‌ನಲ್ಲಿ ಭೂಬಳಕೆಯನ್ನು ನಿರ್ದಿಷ್ಟಪಡಿಸಿರುವ ಸ್ಥಳೀಯ ಯೋಜನಾ ಪ್ರದೇಶದೊಳಗೆ ಇರುವ ಭೂಮಿಗೆ ಸಂಬಂಧಿಸಿದಂತೆ ಭಾವಿತ ಅನುಮತಿಯನ್ನು ನೀಡುವುದು.

ಆದ್ದರಿಂದ ಈ ವಿಧೇಯಕ.

[2018ರ ವಿಧಾನಸಭಾ ವಿಧೇಯಕ ಸಂಖ್ಯೆ.58, ಕಡತ ಸಂಖ್ಯೆ. ಸಂವ್ಯಶಾಇ 09, ಶಾಸನ 2018]

[ಭಾರತ ಸಂವಿಧಾನದ ಏಳನೇ ಅನುಸೂಚಿಯ ಪಟ್ಟಿ II ರ 18ನೇ ನಮೂದು.]

## L

**2018ರ ತಿದ್ದುಪಡಿ ಅಧಿನಿಯಮ 27.–**ಕೆಲವು ಭೂಮಿಗಳ ಸಕ್ರಮಕ್ಕಾಗಿ ಸುಮಾರು 9,937 ಅರ್ಜಿಗಳು ನಮೂನೆ 50ರಲ್ಲಿ ಮತ್ತು 1,84,329 ಅರ್ಜಿಗಳು ನಮೂನೆ 53ರಲ್ಲಿ ವಿಲೇವಾರಿಗಾಗಿ ಇನ್ನೂ ಬಾಕಿಯಿದ್ದು, ಈ ಬಾಕಿಯಿರುವ ಅರ್ಜಿಗಳನ್ನು ವಿಲೇವಾರಿ ಮಾಡಲು ಅನುಕೂಲವಾಗುವಂತೆ ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ರ 94ಬಿ ಪ್ರಕರಣವನ್ನು ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ. ಆದ್ದರಿಂದ ಮತ್ತೆ ಎರಡು ವರ್ಷಗಳಿಗೆ ಕಾಲಮಿತಿಯನ್ನು ವಿಸ್ತರಿಸುವುದು ಅವಶ್ಯಕವಾಗಿದೆ.

ಆದ್ದರಿಂದ ಈ ವಿಧೇಯಕ.

[2018ರ ವಿಧಾನಸಭೆಯ ವಿಧೇಯಕ ಸಂಖ್ಯೆ:08, ಕಡತ ಸಂಖ್ಯೆ: ಸಂವ್ಯಶಾಇ 19 ಶಾಸನ 2018]
[ಭಾರತ ಸಂವಿಧಾನದ 7ನೇ ಅನುಸೂಚಿಯ 2ನೇ ಪಟ್ಟಿಯ 18ನೇಯ ನಮೂದನೆಯಡಿಯಲ್ಲಿ ಬರುತ್ತದೆ]

## LI

**2020ರ ತಿದ್ದುಪಡಿ ಅಧಿನಿಯಮ 22.–** ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ನ್ನು (1964ರ ಕರ್ನಾಟಕ ಅಧಿನಿಯಮ ಸಂಖ್ಯೆ 12) ಈ ಮುಂದಿನವುಗಳಿಗಾಗಿ ಉಪಬಂಧ ಕಲ್ಪಿಸಲು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ, ಎಂದರೆ:–

(ಎ) ಸಾರ್ವಜನಿಕ ರಸ್ತೆ, ಬೀದಿ, ಓಣಿ ಅಥವಾ "ಬಿ" ಖರಾಬು ಭೂಮಿಯೆಂದು ವರ್ಗೀಕರಿಸಲಾದ ಭೂಮಿಯ ಮೇಲೆ ಇದಕ್ಕೆ ಪರಿಣಾಮಕಾರಿಯಾಗಿ ಘೋಷಣೆಯನ್ನು ಮಾಡಿದ ತರುವಾಯ ಸಾರ್ವಜನಿಕ ಹಕ್ಕಿನ ಅಳಿಯುವಿಕೆಯ ಪೂರ್ವದಲ್ಲಿ ಸಾರ್ವಜನಿಕರಿಂದ ಆಕ್ಷೇಪಣೆಯನ್ನು ಆಹ್ವಾನಿಸುವುದಕ್ಕಾಗಿ ನಿಗದಿಪಡಿಸಿದ ಸಮಯವನ್ನು ತೊಂಬತ್ತು ದಿನಗಳಿಂದ ಒಂದು ತಿಂಗಳ ಅವಧಿಗೆ ಕಡಿಮೆಗೊಳಿಸಲು ಸದರಿ ಅಧಿನಿಯಮದ 68ನೇ ಪ್ರಕರಣವನ್ನು ತಿದ್ದುಪಡಿ ಮಾಡುವುದು;

(ಬಿ) ಅನಧೀಕೃತ ಬೇಸಾಯ ಭೂಮಿಯ ಸಕ್ರಮೀಕರಣಕ್ಕಾಗಿ ಅರ್ಜಿಗಳ ವಿಲೆಯು ಬಾಕಿಯಿದ್ದು, ನಮೂನೆ 50ರಲ್ಲಿ ಸುಮಾರು 10,572 ಅರ್ಜಿಗಳು ಮತ್ತು ನಮೂನೆ 53ರಲ್ಲಿ 1,40,781 ಅರ್ಜಿಗಳು ವಿಲೆಗಾಗಿ ಇನ್ನು ಬಾಕಿ ಉಳಿದಿವೆ. ಕಾಲಮಿತಿಯು 27.04.2020ರಂದು ಕೊನೆಗೊಳ್ಳುತ್ತಿದೆ. ಆದ್ದರಿಂದ ಎರಡು ವರ್ಷಗಳ ಮತ್ತಷ್ಟು ಅವಧಿಗೆ ಕಾಲಮಿತಿಯನ್ನು ವಿಸ್ತರಿಸುವುದು ಅವಶ್ಯಕವಾಗಿದೆ.

ಆದ್ದರಿಂದ ಈ ವಿಧೇಯಕ.

[2020ರ ವಿಧಾನಸಭೆಯ ವಿಧೇಯಕ ಸಂಖ್ಯೆ.43, ಕಡತ ಸಂಖ್ಯೆ. ಸಂವ್ಯಶಾಇ 53, ಶಾಸನ 2020]

[ಭಾರತ ಸಂವಿಧಾನದ 7ನೇ ಅನುಸೂಚಿಯ ಪಟ್ಟಿ 2ನೇ ಪಟ್ಟಿಯ 18ನೇ ನಮೂದನೆಯಡಿಯಲ್ಲಿ ಬರುತ್ತದೆ]

[ಕರ್ನಾಟಕ ರಾಜ್ಯ ಪತ್ರದ ಭಾಗ–IV, ವಿಶೇಷ ಪತ್ರಿಕೆ ಸಂಖ್ಯೆ: 456 ದಿನಾಂಕ: 15.10.2020ರಲ್ಲಿ ಪ್ರಕಟಣೆಗೊಂಡಿದೆ]

## LII

**2020ರ ತಿದ್ದುಪಡಿ ಅಧಿನಿಯಮ ಸಂಖ್ಯೆ 44.–** ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ನ್ನು (1964ರ ಕರ್ನಾಟಕ ಅಧಿನಿಯಮ ಸಂಖ್ಯೆ 12) ಈ ಮುಂದಿನವುಗಳಿಗಾಗಿ ಉಪಬಂಧ ಕಲ್ಪಿಸಲು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ, ಎಂದರೆ:–

(i) "ಭೂ ಬಂಧಿತ ಖರಾಬು ಭೂಮಿ"ಯನ್ನು ಪರಿಭಾಷಿಸಲು;

(ii) ನಗರ ಪ್ರದೇಶಗಳಲ್ಲಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಗಳಿಂದ 18 ಕಿಲೋ ಮೀಟರುಗಳವರೆಗಿನ, ಇತರ ನಗರ ಪಾಲಿಕೆಗಳ ವ್ಯಾಪ್ತಿಗಳಿಂದ 10 ಕಿಲೋ ಮೀಟರುಗಳವರೆಗಿನ ಮತ್ತು ಇತರ ನಗರಗಳ ವ್ಯಾಪ್ತಿಗಳಿಂದ 5 ಕಿಲೋ ಮೀಟರುಗಳವರೆಗಿನ ಅಂಥ ಭೂಮಿಯನ್ನು ಚಾಲ್ತಿಯಲ್ಲಿರುವ ಮಾರುಕಟ್ಟೆ ಮಾರ್ಗಸೂಚಿ ಮೌಲ್ಯಕ್ಕೆ ಕಡಿಮೆಯಲ್ಲದ ನಿಯಮಿಸಬಹುದಾದ ಅಂಥ ದರದಲ್ಲಿ ಅದನ್ನು ಸುತ್ತುವರಿದ ಭೂಮಿಯ ಮಾಲೀಕನಿಗೆ ವಿಲೇವಾರಿ ಮಾಡಲು; ಮತ್ತು

(iii) ಸೊಸೈಟಿಗಳಿಗೆ, ಧರ್ಮಾರ್ಥ ಅಥವಾ ಧಾರ್ಮಿಕ ಸಂಸ್ಥೆಗಳಿಗೆ ಅಥವಾ ಶೈಕ್ಷಣಿಕ ಸಂಸ್ಥೆಗಳಿಗೆ ಅಥವಾ ಕೃಷಿ ಅಥವಾ ಇತರ ಉದ್ದೇಶಗಳಿಗೆ ಹದಿನೈದು ವರ್ಷಗಳಿಗಿಂತ ಹೆಚ್ಚಿಗೆ ಗುತ್ತಿಗೆ ನೀಡಿದ ಸರ್ಕಾರಿ ಭೂಮಿಗಳನ್ನು ಏಕಕಾಲ ಕ್ರಮಜರುಗಿಸುವಿಕೆಯಂತೆ ನಿಯಮಿಸಬಹುದಾದ ಅಂಥ ದರಗಳಲ್ಲಿ, ಅದೇ ಉದ್ದೇಶಕ್ಕಾಗಿಯಾದಲ್ಲಿ, ಚಾಲ್ತಿಯಲ್ಲಿರುವ ಮಾರುಕಟ್ಟೆ ಮೌಲ್ಯ ಮಾರ್ಗಸೂಚಿಗಳಿಗೆ ಕಡಿಮೆಯಲ್ಲದ ದರದಲ್ಲಿ, ಇತರ ಉದ್ದೇಶಕ್ಕಾಗಿಯಾದಲ್ಲಿ, ಚಾಲ್ತಿಯಲ್ಲಿರುವ ಮಾರುಕಟ್ಟೆ ಮಾರ್ಗಸೂಚಿ ಮೌಲ್ಯಕ್ಕೆ ಕಡಿಮೆಯಲ್ಲದ ದುಪ್ಪಟ್ಟು ದರದಲ್ಲಿ ವಿಲೇವಾರಿ ಮಾಡಲು.

ಆದ್ದರಿಂದ ಈ ವಿಧೇಯಕ.

[2020ರ ವಿಧಾನಸಭೆಯ ವಿಧೇಯಕ ಸಂಖ್ಯೆ.57, ಕಡತ ಸಂಖ್ಯೆ. ಸಂವ್ಯಶಾಇ 69, ಶಾಸನ 2020]

[ಭಾರತ ಸಂವಿಧಾನದ 7ನೇ ಅನುಸೂಚಿಯ ಪಟ್ಟಿ 2ನೇ ಪಟ್ಟಿಯ 18 ಮತ್ತು 45ನೇಯ ನಮೂದನೆಯಡಿಯಲ್ಲಿ ಬರುತ್ತದೆ]

[ಕರ್ನಾಟಕ ರಾಜ್ಯ ಪತ್ರದ ಭಾಗ–IVA, ವಿಶೇಷ ಪತ್ರಿಕೆ ಸಂಖ್ಯೆ: 475 ದಿನಾಂಕ: 19.10.2020ರಲ್ಲಿ ಪ್ರಕಟಣೆಗೊಂಡಿದೆ]

## 1964ರ[1][ಕರ್ನಾಟಕ ಅಧಿನಿಯಮ][1], ಸಂಖ್ಯೆ 12

(1964ರಮಾರ್ಚ್ ಹತ್ತೊಂಬತ್ತನೇ ದಿನಾಂಕದಂದು [1][ಕರ್ನಾಟಕ ರಾಜ್ಯಪತ್ರದಲ್ಲಿ][1] ಮೊದಲು ಪ್ರಕಟವಾಗಿದೆ)

## [1][ಕರ್ನಾಟಕ] ಭೂ ಕಂದಾಯ ಅಧಿನಿಯಮ, 1964

(1964ರ ಮಾರ್ಚ್ ಆರನೆಯ ದಿನಾಂಕದಂದು ರಾಷ್ಟ್ರಪತಿಯ ಅನುಮತಿ ಪಡೆದಿದೆ)

(ಕರ್ನಾಟಕ ಅಧಿನಿಯಮಗಳು, 1965ರ 9, 1966ರ 2, 1969ರ 7, 1970ರ 5, 1975ರ 33, 1976ರ 22, 1976ರ 23, 1981ರ 42, 1982ರ 23, 1983ರ 20, 1984ರ 23, 1985ರ 10, 1986ರ 20, 1991ರ 2, 1991ರ 21, 1991ರ 28, 1993ರ 20, 1994ರ 33, 1998ರ 22, 1999ರ 14, 1999ರ 26, 2000ರ 15, 2000ರ 22, 2003ರ 21, 2004ರ 19, 2005ರ 1, 2005ರ 29, 2006ರ 18, 2007ರ 15, 2007ರ 17, 2007ರ 18, 2009ರ 23, 2009ರ 26, 2011ರ 29, 2012ರ 9, 2013ರ 11, 2013ರ 51, 2013ರ 66, 2014ರ 26, 2014ರ 27, 2015ರ 2, 2015ರ 7, 2015ರ 31, 2017ರ 11, 2017ರ 20, 2017ರ 49, 2017ರ 50, 2018ರ 11, 2018ರ 27, 2020 ರ 22 ಮತ್ತು 2020ರ 44–ಇವುಗಳ ಮೂಲಕ ತಿದ್ದುಪಡಿಯಾದಂತೆ)

**[1][ಕರ್ನಾಟಕ ರಾಜ್ಯ][1]ದಲ್ಲಿ ಭೂಮಿಯ ಮತ್ತು ಭೂ ಕಂದಾಯದ ನಿರ್ವಹಣೆಗೆ ಸಂಬಂಧಿಸಿದ ಕಾನೂನನ್ನು ಒಂದುಗೂಡಿಸುವ ಮತ್ತು ತಿದ್ದುಪಡಿ ಮಾಡುವ ಅಧಿನಿಯಮ.**

ಭೂಮಿ, ಭೂಕಂದಾಯದ ನಿರ್ಧರಣೆ ಮತ್ತು ವಸೂಲಿ, ಭೂಕಂದಾಯದ ನಿರ್ವಹಣೆ ಮತ್ತು ಈ ಮುಂದಿನ ಇತರ ವಿಷಯಗಳಿಗೆ ಸಂಬಂಧಿಸಿದ ಕಾನೂನನ್ನು ಕ್ರೋಡೀಕರಿಸುವುದು ಮತ್ತು ತಿದ್ದುಪಡಿ ಮಾಡುವುದು ವಿಹಿತವಾಗಿರುವುದರಿಂದ;

ಭಾರತ ಗಣರಾಜ್ಯದ ಹದಿನಾಲ್ಕನೆಯ ವರ್ಷದಲ್ಲಿ [1][ಕರ್ನಾಟಕ][1]ರಾಜ್ಯವಿಧಾನಮಂಡಲದಿಂದ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು–:–

1. 1973ರ ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶದ ಮೂಲಕ 1–11–1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

### ಅಧ್ಯಾಯ – I

### ಪ್ರಾರಂಭಿಕ

**1. ಸಂಕ್ಷಿಪ್ತ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು [1][ಕರ್ನಾಟಕ][1]ಭೂ ಕಂದಾಯ ಅಧಿನಿಯಮ, 1964ಎಂದು ಕರೆಯತಕ್ಕದ್ದು.

1. 1973ರ ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶದ ಮೂಲಕ 1–11–1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

(2) ಇದು ಇಡೀ [1][ಕರ್ನಾಟಕ][1] ರಾಜ್ಯಕ್ಕೆ ವ್ಯಾಪ್ತವಾಗತಕ್ಕದ್ದು.

1. 1973ರ ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶದ ಮೂಲಕ 1–11–1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

(3) ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ [1][ದಿನಾಂಕ][1] ದಂದು ಇದು ಜಾರಿಗೆ ಬರತಕ್ಕದು.

1. ಅಧಿನಿಯಮವು ಅಧಿಸೂಚನೆಯ ಮೂಲಕ 1–4–1964ರಿಂದ ಜಾರಿಗೆ ಬಂದಿದೆ. ಅಧಿಸೂಚನೆಯ ಪಾಠವು ಅಧಿನಿಯಮದ ಕೊನೆಯಲ್ಲಿದೆ.

**2. ಪರಿಭಾಷೆಗಳು.–** ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು, –

(1) "ವರ್ಗಾವಣೆ ಮಾಡಿದ" ಎಂದರೆ, ಗೇಣಿಯನ್ನು ಅಥವಾ ಕಂದಾಯವನ್ನು ಸಲ್ಲಿಸುವುದಕ್ಕೆ ಸಂಬಂಧಪಡುವಷ್ಟರ ಮಟ್ಟಿಗೆ ರಾಜ್ಯ ಸರ್ಕಾರದ ಹಕ್ಕುಗಳನ್ನು ಪೂರ್ತಿಯಾಗಿ ಅಥವಾ ಭಾಗಶಃ ಯಾರೇ ವ್ಯಕ್ತಿಯ ಒಡೆತನಕ್ಕೆ ವರ್ಗಾವಣೆ ಮಾಡಲಾದುದು;

(2) "ಕಟ್ಟಡ ನಿವೇಶನ" ಎಂದರೆ, ಕಟ್ಟಡದ ಉದ್ದೇಶಗಳಿಗಾಗಿ ಹೊಂದಿರುವ ಪ್ಲಾಟ್‌ನ ಮೇಲೆ ವಾಸ್ತವವಾಗಿ ಯಾವುದೇ ಕಟ್ಟಡವನ್ನು ಕಟ್ಟಿರಲಿ ಅಥವಾ ಇಲ್ಲದಿರಲಿ ಆ ಪ್ಲಾಟ್ ಮತ್ತು ಅದರ ಮೇಲೆ ಕಟ್ಟಿದ ಯಾವುದೇ ಕಟ್ಟಡದಿಂದ ಸುತ್ತುವರಿದಿರುವ ಅಥವಾ ಅದಕ್ಕೆ ಹೊಂದಿಕೊಂಡಿರುವ ಖುಲ್ಲಾ ಜಾಗವು ಅಥವಾ ಅಂಗಳವೂ ಇದರಲ್ಲಿ ಸೇರುತ್ತದೆ ;

(3) "ಎಲ್ಲೆಗೆರೆ ಗುರುತು" ಎಂದರೆ, ಭೂಮಿಯ ಯಾವುದೇ ಭಾಗದ ಎಲ್ಲೆಗೆರೆಯನ್ನು ನಿರ್ಧರಿಸುವ ಸಲುವಾಗಿ ಆ ಬಗ್ಗೆ ಅಧಿಕಾರವುಳ್ಳ ಮೋಜಣಿ ಅಧಿಕಾರಿಯು ಅಥವಾ ಇತರ ರೆವಿನ್ಯೂ ಅಧಿಕಾರಿಯು ಆ ಮೋಜಣಿ ಅಧಿಕಾರಿಯು ಅಥವಾ ರೆವಿನ್ಯೂ ಅಧಿಕಾರಿಯು ಸ್ಥಾಪಿಸಿದ, ಬಳಸಿದ ಅಥವಾ ನಿರ್ದಿಷ್ಟಪಡಿಸಿದ ಬೇರೆ ವಸ್ತು ಮತ್ತು ಮಣ್ಣಿನಿಂದ, ಕಲ್ಲಿನಿಂದ ಅಥವಾ ಇತರ ಸಾಮಗ್ರಿಯಿಂದ ಗುರುತು ಮಾಡಿ ಏನನ್ನಾದರೂ ಸ್ಥಾಪಿಸಿದ್ದರೆ, ಅದು ಮತ್ತು ಯಾವುದೇ ಬೇಲಿ, ಉಳದೆ ಇರುವ ಬದುವು ಅಥವಾ ನೆಲದ ಯಾವುದೇ ಪಟ್ಟೆ;

(4) "ಪ್ರಮಾಣೀಕೃತ ನಕಲು" ಅಥವಾ "ಪ್ರಮಾಣೀಕೃತ ಉದ್ಧೃತ ಭಾಗ" ಎಂದರೆ, ಭಾರತ ಸಾಕ್ಷ್ಯ ಅಧಿನಿಯಮ, 1872ರ (ಕೇಂದ್ರ ಅಧಿನಿಯಮ 1872ರ 1) 76ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ರೀತಿಯಲ್ಲಿ ಸಂದರ್ಭಾನುಸಾರ ಪ್ರಮಾಣೀಕರಿಸಿದ ನಕಲು ಅಥವಾ ಉದ್ಧೃತ ಭಾಗ;

(5) "ಚಾವಡಿ" ಎಂಬುದರಲ್ಲಿ ಚಾವಡಿ ಇಲ್ಲದಿರುವ ಯಾವುದೇ ಗ್ರಾಮದಲ್ಲಿ ಡೆಪ್ಯುಟಿ ಕಮಿಷನರು, ಈ ಅಧಿನಿಯಮದ ಉದ್ದೇಶಕ್ಕಾಗಿ ಅಧಿಸೂಚನೆಯ ಮೂಲಕ ಚಾವಡಿಯೆಂದು ನಿಶ್ಚಯ ಮಾಡಿದಂತಹ ಸ್ಥಳವು ಸೇರುತ್ತದೆ;

(6) "ನಗರ" ಎಂಬುದರಲ್ಲಿ, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಅಡಿಯಲ್ಲಿ ನಗರ ಪಾಲಿಕೆ ಎಂದು, ನಗರ ಪೌರಸಭೆ ಎಂದು ಅಥವಾ ಬರೋ ಪೌರಸಭೆ ಎಂದು ಘೋಷಿಸಿದ ಯಾವುದೇ ಸ್ಥಳೀಯ ಪ್ರದೇಶವೂ ಸೇರುತ್ತದೆ ;

(7) "ವರ್ಗೀಕರಣ ಮೌಲ್ಯ" ಎಂದರೆ, [1][ಯಾವುದೇ ವರ್ಗದ ಭೂಮಿ][1]ಯ ಬಗ್ಗೆ ಅದರ ಮಣ್ಣು, ನೀರು ಮತ್ತು ಇತರ ಪ್ರಯೋಜನಗಳನ್ನು ಪರಿಗಣಿಸಿ ಮೋಜಣಿ ದಾಖಲೆಗಳಲ್ಲಿ ನಮೂದಿಸಿದ ಸಾಪೇಕ್ಷ ಮೌಲ್ಯೀಕರಣ;

1. 1965ರ ಅಧಿನಿಯಮ 9ರ ಮೂಲಕ 1.4.1964ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][(8) "ಭೂಮಿಯ ವರ್ಗ" ಎಂದರೆ, ಮುಂದೆ ಹೇಳಿರುವ ಎಂದರೆ, ಖುಷ್ಕಿಭೂಮಿ, ತರಿ ಭೂಮಿ, ಬಾಗಾಯತ ಭೂಮಿ ಅಥವಾ ಪ್ಲಾಂಟೇಶನ್ ಭೂಮಿ ಎಂಬ ಯಾವುದೇ ವರ್ಗಗಳ ಭೂಮಿ ;

1. 1965ರ ಅಧಿನಿಯಮ 9ರ ಮೂಲಕ 1.4.1964ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**ವಿವರಣೆಗಳು:**– ಅಧಿನಿಯಮದ ಉದ್ದೇಶಗಳಿಗಾಗಿ :–

(ಎ) "ಖುಷ್ಕಿ ಭೂಮಿ" ಎಂದರೆ:–

(i) 202ನೇ ಪ್ರಕರಣದಿಂದ ನಿರಸಿತವಾದ ಯಾವುದೇ ಕಾನೂನು ಅಥವಾ ಈ ಅಧಿನಿಯಮವು ಪ್ರಾರಂಭವಾಗುವುದಕ್ಕೆ ಮುಂಚಿತವಾಗಿ ಯಾವುದೇ ಕಾಲದಲ್ಲಿ ಜಾರಿಯಲ್ಲಿದ್ದ ಯಾವುದೇ ಕಾನೂನಿನ ಅಡಿಯಲ್ಲಿ ಖುಷ್ಕಿ ಭೂಮಿಯೆಂದು ವರ್ಗೀಕರಿಸಲಾದ ಭೂಮಿ ;

(ii) ರಾಜ್ಯ ಸರ್ಕಾರದ ಸ್ವತ್ತಾಗಿರುವ ಯಾವುದೇ ಜಲಮೂಲದಿಂದ ಪಡೆದ ನೀರಿನಿಂದ ನೀರಾವರಿ ಮಾಡಿದ ಹೊರತು ತರಿ ಬೆಳೆ ಬೆಳೆಯಲಾಗದ ಭೂಮಿ ;

(ಬಿ) "ತರಿ ಭೂಮಿ" ಎಂದರೆ, ಮಳೆ ನೀರಿನ ಅಥವಾ ರಾಜ್ಯ ಸರ್ಕಾರದ ಸ್ವತ್ತಾಗಿರದ ಯಾವುದೇ ಜಲಮೂಲದಿಂದ ಪಡೆದ ನೀರಿನ ಬಳಕೆಯಿಂದ ತರಿ ಬೆಳೆ ಬೆಳೆಯುವ ಭೂಮಿ ;

(ಸಿ) "ಬಾಗಾಯತು ಭೂಮಿ" ಎಂದರೆ, ಪ್ಲಾಂಟೇಷನ್ ಬೆಳೆಯಲ್ಲದ ಇತರ ಬಾಗಾಯತು ಬೆಳೆಗಳನ್ನು ಬೆಳೆಯುವ ಭೂಮಿ; ಮತ್ತು ಇದರಲ್ಲಿ ಖುಷ್ಕಿ ಬಾಗಾಯತು ಭೂಮಿ ಮತ್ತು ತರಿ ಬಾಗಾಯತು ಭೂಮಿಯೂ ಸೇರುತ್ತವೆ ; ಮತ್ತು

(i) "ಖುಷ್ಕಿ ಬಾಗಾಯತು ಭೂಮಿ" ಎಂದರೆ, 202ನೇ ಪ್ರಕರಣದಿಂದ ನಿರಸಿತವಾದ ಯಾವುದೇ ಕಾನೂನಿನ ಅಥವಾ ಈ ಅಧಿನಿಯಮವು ಪ್ರಾರಂಭವಾಗುವುದಕ್ಕೆ ಮುಂಚಿತವಾಗಿ ಯಾವುದೇ ಕಾಲದಲ್ಲಿ ಜಾರಿಯಲ್ಲಿದ್ದ ಯಾವುದೇ ಕಾನೂನಿನ ಅಡಿಯಲ್ಲಿ ಹಾಗೆಂದು ವರ್ಗೀಕರಿಸಲಾದ, ಅಥವಾ ರಾಜ್ಯ ಸರ್ಕಾರದ ಸ್ವತ್ತಾಗಿರುವ ಯಾವುದೇ ಜಲ ಮೂಲದ ನೀರಿನಿಂದ ನೀರಾವರಿ ಮಾಡಿದ ಹೊರತು ತರಿ ಬಾಗಾಯತು ಬೆಳೆಗಳನ್ನು ಬೆಳೆಯಲಾಗದ ಬಾಗಾಯತು ಭೂಮಿ;

(ii) "ತರಿ ಬಾಗಾಯತು ಭೂಮಿ" ಎಂದರೆ, ಮಳೆ ನೀರಿನ ಅಥವಾ ರಾಜ್ಯ ಸರ್ಕಾರದ ಸ್ವತ್ತಾಗಿರುವ ಯಾವುದೇ ಜಲಮೂಲದಿಂದ ಪಡೆದ ನೀರಿನ ಬಳಕೆಯಿಂದ ತರಿ ಬಾಗಾಯತು ಬೆಳೆಯನ್ನು ಬೆಳೆಯುವ ಭೂಮಿ ;

(ಡಿ) **"ಪ್ಲಾಂಟೇಷನ್ ಭೂಮಿ"**, ಎಂದರೆ ಏಲಕ್ಕಿ, ಕಾಫಿ, ಮೆಣಸು, ರಬ್ಬರು ಅಥವಾ ಚಹ ಪ್ಲಾಂಟೇಷನ್ ಬೆಳೆಗಳನ್ನು ಬೆಳೆಯುವ ಭೂಮಿ;][1]

(9) "ಎಸ್ಟೇಟ್" ಎಂದರೆ, ಭೂಮಿಯಲ್ಲಿನ ಹಿತಾಸಕ್ತಿ ಮತ್ತು ಭೂಮಿಯಲ್ಲಿನ ಯಾವುದೇ ಹಿತಾಸಕ್ತಿಯನ್ನು ಹೊಂದಿರಲು ಸಮರ್ಥವಾಗಿರುವ ವ್ಯಕ್ತಿಯಲ್ಲಿ ಅಥವಾ ವ್ಯಕ್ತಿಗಳ ಸಮೂಹದಲ್ಲಿ ನಿಹಿತವಾಗಿರುವ, ಒಟ್ಟುಗೂಡಿರುವ ಅಂಥ ಹಿತಾಸಕ್ತಿ ;

(10) "ಗುಂಪು" ಎಂದರೆ, 116ನೇ ಪ್ರಕರಣದಲ್ಲಿ ವಿವರಿಸಿರುವ ಸಂಗತಿಗಳಿಗೆ ಸಂಬಂಧಿಸಿದಂತೆ ಯಾವ ಭೂಮಿಗಳಿಗೆ ಭೂ ಕಂದಾಯವನ್ನು ನಿರ್ಧರಿಸುವ ಉದ್ದೇಶಕ್ಕಾಗಿ ಒಂದೇ ಬಗೆಯ ಅಧಿಕೃತ ಪ್ರಮಾಣಿತ ದರಗಳನ್ನು ಅನ್ವಯಿಸಲು ಆ ಸಂಗತಿಗಳು ಸಾಧ್ಯವಾಗುತ್ತದೋ ಆ ಭೂಮಿಗಳು ಸಾಕಷ್ಟುಮಟ್ಟಿಗೆ ಒಂದೇ ರೀತಿಯಲ್ಲಿರುವವೆಂದು

ಹಾಗೂ ಒಂದೇ ವಲಯದೊಳಗಿರುವವೆಂದು ರಾಜ್ಯ ಸರ್ಕಾರವು ಅಭಿಪ್ರಾಯಪಡುವುದೋ ಅಥವಾ ಆ ಬಗ್ಗೆ ಅಧಿಕೃತನಾದ ಅಧಿಕಾರಿಯು ಅಭಿಪ್ರಾಯಪಡುವನೋ ಆ ಎಲ್ಲ ಭೂಮಿಗಳು ;

(11) "ಭೂಮಿಯನ್ನು ಹೊಂದಿರುವುದು" ಅಥವಾ "ಭೂ ಹಿಡುವಳಿದಾರನಾಗಿರಲು" ಅಥವಾ "ಭೂಮಿಯ ಹಿಡುವಳಿದಾರ" ಎಂದರೆ ಭೂಮಿಯ ಸ್ವಾಧೀನ ವಾಸ್ತವವಾದುದಾಗಿರಲಿ ಅಥವಾ ಇಲ್ಲದಿರಲಿ; ಅಂಥ ಭೂಮಿಯನ್ನು ಕಾನೂನು ಬದ್ಧವಾಗಿ ಸ್ವಾಧೀನದಲ್ಲಿ ಹೊಂದಿರುವುದು,

(12) "ಹಿಡುವಳಿ" ಎಂದರೆ, ಹಿಡುವಳಿದಾರನು ಹೊಂದಿರುವ ಭೂಮಿಯ ಭಾಗ;

(13) "ಜಂಟಿ ಹಿಡುವಳಿದಾರರು" ಅಥವಾ "ಜಂಟಿ ಅಧಿಭೋಗದಾರರು" ಎಂದರೆ, ಹಿಂದೂ ಕಾನೂನಿಗನುಸಾರವಾಗಿ ಅವಿಭಕ್ತ ಕುಟುಂಬದಲ್ಲಿ ಅಥವಾ ಬೇರೆ ರೀತಿಯಲ್ಲಿ ಸಹ ಪಾಲುಗಾರರಾಗಿದ್ದು ಸಹಪಾಲುಗಾರರಂತೆ ಭೂಮಿಯನ್ನು ಹೊಂದಿರುವ "ಹಿಡುವಳಿದಾರ" ಅಥವಾ ಅಧಿಭೋಗದಾರರು ಮತ್ತು ಯಾರ ಪಾಲುಗಳನ್ನು ಅಳತೆ ಮತ್ತು ಗುರುತುಗಳಿಂದ ವಿಭಾಗಿಸಿಲ್ಲವೋ ಅವರು ; ಮತ್ತು ಜಂಟಿ ಹಿಡುವಳಿದಾರರು ಅಥವಾ ಜಂಟಿ ಅಧಿಭೋಗದಾರರು ಭೂಮಿಯನ್ನು ಹೊಂದಿದ್ದಾಗ, ಸಂದರ್ಭಾನುಸಾರ "ಹಿಡುವಳಿದಾರ" ಅಥವಾ "ಅಧಿಭೋಗದಾರ" ಎಂದರೆ, ಆ ಎಲ್ಲ ಜಂಟಿ ಹಿಡುವಳಿದಾರರು ಅಥವಾ ಜಂಟಿ ಅಧಿಭೋಗದಾರರು ;

(14) "ಭೂಮಿ" ಎಂಬುವುದರಲ್ಲಿ ಭೂಮಿಯಿಂದ ಉದ್ಭವವಾಗುವ ಪ್ರಯೋಜನಗಳು ಮತ್ತು ಮಣ್ಣಿಗೆ ಲಗತ್ತಾಗಿರುವ ಅಥವಾ ಮಣ್ಣಿಗೆ ಲಗತ್ತಾಗಿರುವ ಯಾವುದೇ ವಸ್ತುವಿಗೆ ಖಾಯಂ ಆಗಿ ಲಗತ್ತಾಗಿರುವ ವಸ್ತುಗಳು ಮತ್ತು ಗ್ರಾಮಗಳ ಅಥವಾ ಇತರ ನಿರ್ದಿಷ್ಟ ಪ್ರದೇಶಗಳ ಕಂದಾಯದಲ್ಲಿ ಅಥವಾ ಗೇಣಿಯಲ್ಲಿರುವ ಪಾಲುಗಳು ಅಥವಾ ಅವುಗಳ ಮೇಲಿರುವ ಹೊಣೆಗಳು ಸೇರಿರುತ್ತವೆ;

[1][(14–ಎ) "ಭೂ ಬಂಧಿತ ಸರ್ಕಾರಿ ಭೂಮಿ" ಎಂದರೆ ಖಾಸಗಿ ವ್ಯಕ್ತಿ ಅಥವಾ ರಾಜ್ಯ ಸರ್ಕಾರದ ಇಲಾಖೆಗಳ ಅಥವಾ ಕೇಂದ್ರ ಸರ್ಕಾರದ ಇಲಾಖೆಗಳ ಅಥವಾ ಸ್ವಾಯತ್ತ ನಿಕಾಯಗಳ ಅಥವಾ ಶಾಸನಬದ್ಧ ಸಂಸ್ಥೆಗಳ ಮಾಲೀಕತ್ವದ ಭೂಮಿಯ ಗಡಿಯೊಳಗಿರುವ, ರಸ್ತೆಯ ಮೂಲಕ ಅಥವಾ ಕಾಲುಹಾದಿಯ ಮೂಲಕ ಅಥವಾ ಬಂಡಿಹಾದಿಯ ಮೂಲಕ ಸಾರ್ವಜನಿಕ ಪ್ರವೇಶವಿಲ್ಲದ ಹಾಗೂ ಸಾರ್ವಜನಿಕ ಉದ್ದೇಶಕ್ಕಾಗಿ ಉಪಯೋಗವಿಲ್ಲದ ಸರ್ಕಾರಿ ಖರಾಬು ಭೂಮಿ;][1]

1. 2020ರ ಅಧಿನಿಯಮ 44ರ ಮೂಲಕ ದಿನಾಂಕ: 19.10.2020ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(15) "ಭೂಮಾಲೀಕ" ಎಂದರೆ, ಗೇಣಿದಾರನಿಗೆ ಭೂಮಿಯನ್ನು ಗುತ್ತಿಗೆ ಕೊಟ್ಟಿರುವ ವ್ಯಕ್ತಿ ಮತ್ತು ಇದರಲ್ಲಿ ಗೇಣಿದಾರನಿಂದ ಕಂದಾಯವನ್ನು ಅಥವಾ ಗೇಣಿಯನ್ನು ಪಡೆಯಲು ಹಕ್ಕುಳ್ಳವನಾಗಿರುವ ವ್ಯಕ್ತಿಯೂ ಸೇರುತ್ತಾನೆ;

(16) "ಭೂ ದಾಖಲೆಗಳು" ಎಂದರೆ, ಈ ಅಧಿನಿಯಮದ ಉಪಬಂಧಗಳ ಮೇರೆಗೆ ಅಥವಾ ಉದ್ದೇಶಗಳಿಗಾಗಿ ಇಟ್ಟಿರುವ ದಾಖಲೆಗಳು;

(17) "ಸ್ಥಳೀಯ ಪ್ರಾಧಿಕಾರ" ಎಂದರೆ:–

(i) ಸಂದರ್ಭಾನುಸಾರ, ಯಾವುದೇ ಪೌರಸಭಾ ಪ್ರದೇಶದಲ್ಲಿರುವ ನಗರಪಾಲಿಕೆ, ಪುರಸಭೆ, ಕಂಟೋನ್ಮೆಂಟ್ ಮಂಡಲಿ, ನೈರ್ಮಲ್ಯ ಮಂಡಲಿ ಅಥವಾ ಅಧಿಸೂಚಿತ ಪ್ರದೇಶ ಸಮಿತಿ;

(ii) ಯಾವುದೇ ಗ್ರಾಮದಲ್ಲಿ, [1][ಕರ್ನಾಟಕ][1] ಗ್ರಾಮ ಪಂಚಾಯತಿಗಳ ಮತ್ತು ಸ್ಥಳೀಯ ಮಂಡಲಿಗಳ ಅಧಿನಿಯಮ 1859ರ ಅಡಿಯಲ್ಲಿ ರಚಿತವಾದ ಗ್ರಾಮ ಪಂಚಾಯಿತಿ ಅಥವಾ ಪಟ್ಟಣ ಪಂಚಾಯಿತಿ ;

1. 1973ರ ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶದ ಮೂಲಕ 1-11-1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

(18) "ಅಧಿಸೂಚನೆ" ಎಂದರೆ, ಸರ್ಕಾರಿ ಗೆಜೆಟ್‌ನಲ್ಲಿ ಪ್ರಕಟಿತವಾದ ಅಧಿಸೂಚನೆ;

(19) "ಅಧಿಭೋಗ" ಎಂದರೆ, ಸ್ವಾಧೀನ ಮತ್ತು "ಭೂಮಿಯ ಅಧಿಭೋಗ" ಎಂದರೆ ಭೂಮಿಯನ್ನು ಹೊಂದುವುದು ಅಥವಾ ಸ್ವಾಧೀನಕ್ಕೆ ತೆಗೆದುಕೊಳ್ಳುವುದು;

(20) "ಅಧಿಭೋಗದಾರ" ಎಂದರೆ, ಗೇಣಿದಾರನಲ್ಲದ, ಆದರೆ, ವರ್ಗಾವಣೆಯಾಗದಿರುವ ಭೂಮಿಯನ್ನು ವಾಸ್ತವವಾಗಿ ಸ್ವಾಧೀನದಲ್ಲಿಟ್ಟುಕೊಂಡಿರುವ ಹಿಡುವಳಿದಾರ:

ಪರಂತು, ಭೂಮಿಯನ್ನು ವಾಸ್ತವವಾಗಿ ಸ್ವಾಧೀನದಲ್ಲಿ ಇಟ್ಟುಕೊಂಡಿರುವ ಹಿಡುವಳಿದಾರನೇ ಗೇಣಿದಾರನಾಗಿದ್ದರೆ, ಸಂದರ್ಭಾನುಸಾರ, ಭೂಮಾಲೀಕನನ್ನು ಅಥವಾ ಪ್ರಧಾನ ಭೂಮಾಲೀಕನನ್ನು ಅಧಿಭೋಗದಾರನೆಂದು ಭಾವಿಸತಕ್ಕದ್ದು.

[1][**ವಿವರಣೆ:**–[2][ಮಂಗಳೂರು ಮತ್ತು ಕೊಳ್ಳೆಗಾಲ ಪ್ರದೇಶದಲ್ಲಿ][2] ಹಾಗೂ ಬಳ್ಳಾರಿ ಜಿಲ್ಲೆಯಲ್ಲಿ ಇರುವ ರೈತವಾರಿ ಪಟ್ಟೇದಾರನನ್ನು, [2][ಗುಲ್ಬರ್ಗಾ ಪ್ರದೇಶದಲ್ಲಿಯ][2] ಪಟ್ಟೇದಾರನನ್ನು ಅಥವಾ ಷಿಕ್ಮಿದಾರನನ್ನು ಮತ್ತು [3][ಕೊಡಗು ಜಿಲ್ಲೆಯಲ್ಲಿರುವ ಜಮ್ಮಾಬಾಣೆ ಭೂಮಿ ಮೇಲೆ ಹಕ್ಕುಳ್ಳ ಮತ್ತು ಹಕ್ಕುಳ್ಳದಿರುವನೂ ಒಳಗೊಂಡಂತೆ ಉಂಬಳಿ ಭೂಮಿಯ

ಹಿಡುವಳಿದಾರನನ್ನು][3] ಈ ಅಧಿನಿಯಮದ ಉದ್ದೇಶಗಳಿಗಾಗಿ, ಅಂಥ ಭೂಮಿಯ ಅಧಿಭೋಗದಾರನೆಂದು ಭಾವಿಸತಕ್ಕದ್ದು.][1]

1. 1965ರ ಅಧಿನಿಯಮ 9ರ ಮೂಲಕ 1.4.1964 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
2. 1973ರ ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶದ ಮೂಲಕ 1-11-1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.
3. 2013ರ ಅಧಿನಿಯಮ 11ರ ಮೂಲಕ 1.2.2013 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(21) "ಅಧಿಭೋಗದಲ್ಲಿರುವ ಭೂಮಿ" ಎಂದರೆ, ಅಧಿಭೋಗದಾರನು ಹೊಂದಿರುವ ಭೂಮಿಯ ಭಾಗ;

(22) "ನಿಯಮಿಸಿದ" ಎಂದರೆ, ಈ ಅಧಿನಿಯಮದ ಅಡಿಯಲ್ಲಿ ರಚಿಸಿದ ನಿಯಮಗಳಿಂದ ನಿಯಮಿಸಲಾದುದು;

(23) "ಗೇಣಿ ಮೌಲ್ಯ" ಎಂದರೆ, ಕೊಡುಗೆಗಳೇನಾದರೂ ಇದ್ದರೆ, ಅದನ್ನು ಅಥವಾ ಸಂದಾಯ ಮಾಡಿದ ಅಥವಾ ಸಂದಾಯ ಮಾಡಲು ವಾಗ್ದಾನ ಮಾಡಿದ ಯಾವುದೇ ಮೊಬಲಗು, ಅಥವಾ ನಿಯತಕಾಲಿಕವಾಗಿ ಅಥವಾ ನಿರ್ದಿಷ್ಟಪಡಿಸಿದ ಸಮಯಗಳಲ್ಲಿ ಸಲ್ಲಿಸಿದ ಬೆಳೆಯ ಪಾಲು ಅಥವಾ ಇತರ ಯಾವುದೇ ಮೌಲಿಕ ವಸ್ತುಗಳು ಸೇರಿ ಯಾವ ಪ್ರತಿಫಲಕ್ಕಾಗಿ ಒಂದು ವರ್ಷದ ಅವಧಿಗಾಗಿ ಯಾವ ಭೂಮಿಯನ್ನು ಅದರಿಂದ ಅತ್ಯಧಿಕ ಪ್ರಯೋಜನ ಪಡೆಯಲು ಬಳಕೆಗೆ ಯಾವ ಪ್ರತಿಫಲಕ್ಕಾಗಿ ಗೇಣಿಗೆ ಗುತ್ತಿಗೆಗೆ ಕೊಡಲಾಗಿದೆಯೋ ಅಥವಾ ಕೊಡಬಹುದಾಗಿದೆಯೋ ಆ ಪ್ರತಿಫಲ;

(24) "ರೆವಿನ್ಯೂಅಧಿಕಾರಿ" ಎಂದರೆ, ಈ ಅಧಿನಿಯಮದ ಅಡಿಯಲ್ಲಿ ಅಥವಾ ಅದರ ಉದ್ದೇಶಗಳಿಗಾಗಿ ನೇಮಕ ಮಾಡಲಾದ ಅಥವಾ ನಿಯೋಜಿಸಲಾದ ಯಾವುದೇ ದರ್ಜೆಯ ಅಧಿಕಾರಿ ;

(25) "ರೆವಿನ್ಯೂವರ್ಷ" ಎಂದರೆ, ಜುಲೈ 1ನೆಯ ದಿನಾಂಕದಂದು ಪ್ರಾರಂಭವಾಗುವ ವರ್ಷ;

(26) "ಕಂದಾಯ ವ್ಯವಸ್ಥೆ" ಎಂದರೆ, ಒಂದು ವಲಯದಲ್ಲಿ ಭೂಕಂದಾಯದ ನಿರ್ಧರಣೆಗಾಗಿ ನಡೆಸಿದ ಕಾರ್ಯಗಳ ಫಲಿತಾಂಶ;

(27) "ಅಧಿಕೃತ ಪ್ರಮಾಣ ದರ" ಎಂದರೆ, ಒಂದು ಗುಂಪಿನ ಯಾವುದೇ ವಿಶಿಷ್ಟ ವರ್ಗದ ಭೂಮಿಯ ಸಂಬಂಧದಲ್ಲಿ, ಶೇಕಡ ನೂರರಷ್ಟು ವರ್ಗೀಕರಣ ಮೌಲ್ಯವುಳ್ಳ ಆ ವರ್ಗದ ಭೂಮಿಯಲ್ಲಿ ಒಂದು ಎಕರೆ ಬೆಳೆಯ ಸರಾಸರಿ ಉತ್ಪನ್ನದಲ್ಲಿ [1][ಶೇಕಡ ನಾಲ್ಕರಷ್ಟು][1] ಮೌಲ್ಯ:

1. 1965ರ ಅಧಿನಿಯಮ 9ರ ಮೂಲಕ 21.4.1965 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][ಪರಂತು, ಯಾವುದೇ ಪ್ಲಾಂಟೇಷನ್ ಭೂಮಿಯ ಸಂಬಂಧದಲ್ಲಿ, ಶೇಕಡ ನೂರರಷ್ಟು ವರ್ಗೀಕರಣ ಮೌಲ್ಯವುಳ್ಳ ವರ್ಗದ ಭೂಮಿಯಲ್ಲಿ ಒಂದು ಎಕರೆ ಬೆಳೆಯ ಸರಾಸರಿ ಉತ್ಪನ್ನದಲ್ಲಿ ಶೇಕಡ ಒಂದರಷ್ಟು ಮೌಲ್ಯವು ಅಧಿಕೃತ ಪ್ರಮಾಣ ದರವಾಗಿರತಕ್ಕದ್ದು.][1]

1. 1965ರ ಅಧಿನಿಯಮ 9ರ ಮೂಲಕ 21.4.1965 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(28) "ಪ್ರಧಾನ ಹಿಡುವಳಿದಾರ" ಎಂದರೆ, (ಇದರಲ್ಲಿ ಇನ್ನು ಮುಂದೆ ಕನಿಷ್ಠ ಹಿಡುವಳಿದಾರರೆಂದು ಕರೆಯಲಾಗಿರುವ) ಇತರ ಭೂ ಹಿಡುವಳಿದಾರರಿಂದ ಗೇಣಿಯನ್ನು ಅಥವಾ ಭೂ ಕಂದಾಯವನ್ನು ಪಡೆಯಲು ಹಕ್ಕಿರುವ ಅಂಥ ಭೂಮಿಗೆ ಅಥವಾ ಭೂ ಕಂದಾಯಕ್ಕೆ ಅಥವಾ ಅದರ ಯಾವುದೇ ಭಾಗಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಕ್ಕೆ ಅವನು ಹೊಣೆಗಾರನಾಗಬೇಕಾದ ವ್ಯಕ್ತಿಯಾಗಿರಲಿ ಅಥವಾ ಇಲ್ಲದಿರಲಿ ಆ ಭೂ ಹಿಡುವಳಿದಾರ;

ಪರಂತು, ಭೂ ದಾಖಲೆಗಳಲ್ಲಿ ಅಧಿಕೃತವಾಗಿ ಯಾವ ಜಹಗೀರದಾರನ, ಇನಾಂದಾರನ ಅಥವಾ ವರ್ಗಾವಣೆಯಾದ ಭೂಮಿಯ ಹಿಡುವಳಿದಾರನ ಹೆಸರನ್ನು ನಮೂದಿಸಲಾಗಿದೆಯೋ ಆ ಜಹಗೀರದಾರನು, ಇನಾಮದಾರನು ಅಥವಾ ವರ್ಗಾವಣೆಯಾದ ಭೂಮಿಯ ಇತರ ಹಿಡುವಳಿದಾರನು ಕೆಲವು ನಿರ್ದಿಷ್ಟ ಸಂದರ್ಭಗಳಲ್ಲಿ ಭೂಮಿಯನ್ನು ಪುನಃ ಪಡೆಯುವ ಹಕ್ಕಿಗೊಳಪಟ್ಟು, ಆ ಜಹಗೀರದಾರನಿಗೆ, ಇನಾಂದಾರನಿಗೆ ಅಥವಾ ವರ್ಗಾವಣೆಯಾದ ಇತರ ಹಿಡುವಳಿದಾರನಿಗೆ ಗೇಣಿ ಅಥವಾ ಭೂಕಂದಾಯವಿಲ್ಲದೆ ಭೂಮಿಯನ್ನು ಕೊಟ್ಟಿದ್ದರೆ, ಅಂಥ ಜಹಗೀರದಾರನನ್ನು, ಇನಾಮುದಾರನನ್ನು ಅಥವಾ ಹಿಡುವಳಿದಾರನನ್ನು, ಭೂಮಿಯ ಮಂಜೂರಾತಿ ಪಡೆದವನಿಗೆ ಸಂಬಂಧಿಸಿದಂತೆ, ಅಂಥ ಭೂಮಿಯ ಪ್ರಧಾನ ಹಿಡುವಳಿದಾರನೆಂದು ಭಾವಿಸತಕ್ಕದ್ದು ಮತ್ತು ಅಂಥ ಭೂಮಿಯನ್ನು ಪಡೆದವನನ್ನು, ಕೊಟ್ಟವನಿಗೆ ಸಂಬಂಧಿಸಿದಂತೆ ಅಂಥ ಭೂಮಿಯ ಕನಿಷ್ಠ ಹಿಡುವಳಿದಾರನೆಂದು ಭಾವಿಸತಕ್ಕದ್ದು;

(29) "ಮೋಜಣಿ" ಎಂಬುದರಲ್ಲಿ, ಎಲ್ಲೆಯ ಅಥವಾ ಎಲ್ಲೆಗಳ ಅಥವಾ ಎಲ್ಲೆಯ ಯಾವುದೇ ಭಾಗದ ನಿರ್ಧರಣೆ, ಅಳತೆ ಮತ್ತು ನಮೂದನೆಗಳಿಗೆ ಸಂಬಂಧಿಸಿದ ಎಲ್ಲ ಕಾರ್ಯಗಳು ಸೇರುತ್ತವೆ ಮತ್ತು ಇದರಲ್ಲಿ ಮರು ಮೋಜಣಿಯೂ ಸೇರುತ್ತದೆ;

(30) "ಮೋಜಣಿ ಗುರುತು" ಎಂದರೆ, ಯಾವುದೇ ನಿರ್ದಿಷ್ಟ ಸ್ಥಳ ಅಥವಾ ಸ್ಥಳಗಳ ಸ್ಥಾನವನ್ನು ಅಥವಾ ಮಟ್ಟವನ್ನು ಸೂಚಿಸಲು ಅಥವಾ ನಿರ್ಧರಿಸಲು ಅಥವಾ ನಿರ್ಧರಿಸುವುದಕ್ಕೆ ನೆರವಾಗಲು ಮೋಜಣಿ ಅಧಿಕಾರಿಯು ಸ್ಥಾಪಿಸಿದ, ಮಾಡಿದ, ಬಳಸಿದ ಅಥವಾ ನಿರ್ದಿಷ್ಟಪಡಿಸಿದ ಯಾವುದೇ ಗುರುತು ಅಥವಾ ವಸ್ತು ;

(31) "ಮೋಜಣಿ ಅಧಿಕಾರಿ" ಎಂದರೆ, 18ನೇ ಪ್ರಕರಣದ ಅಡಿಯಲ್ಲಿ ಅಥವಾ ಅದರಲ್ಲಿ ಉಪಬಂಧಿಸಲಾದ ರೀತಿಯಲ್ಲಿ ನೇಮಕಗೊಂಡ ಅಧಿಕಾರಿ ;

(32) "ಸರ್ವೇ ನಂಬರ್" ಎಂದರೆ, ಭೂ ದಾಖಲೆಗಳಲ್ಲಿ ಒಂದು ಸೂಚಿತ ಸಂಖ್ಯೆಯ ಕೆಳಗೆ ಭೂಮಿಯ ಯಾವ ಭಾಗದ ವಿಸ್ತೀರ್ಣವನ್ನು ಮತ್ತು ಕಂದಾಯವನ್ನು ಪ್ರತ್ಯೇಕವಾಗಿ ನಮೂದಿಸಲಾಗಿದೆಯೋ ಆ ಭಾಗ; ಮತ್ತು "ಸರ್ವೇ ನಂಬರಿನ ಪೋಡು" ಎಂದರೆ ಆ ಪೋಡು ಯಾವ ಸರ್ವೇ ನಂಬರಿನ ಭಾಗವಾಗಿದೆಯೋ ಅಂಥ ಸರ್ವೇ ನಂಬರಿನ ಕೆಳಗಿನ ಸೂಚಿತ ಸಂಖ್ಯೆಯ ಕೆಳಗೆ ಭೂದಾಖಲೆಗಳಲ್ಲಿ ಯಾವ ಆ ಭಾಗದ ವಿಸ್ತೀರ್ಣವನ್ನು ಮತ್ತು ಕಂದಾಯವನ್ನು ಪ್ರತ್ಯೇಕವಾಗಿ ನಮೂದಿಸಲಾಗಿದೆಯೋ ಆ ಭಾಗ;

(33) "ಮೋಜಣಿ ಮತ್ತು ಕಂದಾಯ ವ್ಯವಸ್ಥೆ" ಎಂಬುದರ, 10ನೆಯ ಅಧ್ಯಾಯದ ಉಪಬಂಧಗಳ ಅಡಿಯಲ್ಲಿ ಮಾಡಿದ ಕಂದಾಯ ವ್ಯವಸ್ಥೆಯೂ ಸೇರುತ್ತದೆ;

(34) "ಗೇಣಿದಾರ" ಎಂದರೆ, ಲಿಖಿತದ ಮೇರೆಗೆ ಅಥವಾ ಬಾಯಿ ಮಾತಿನ ಒಪ್ಪಂದದ ಮೇರೆಗೆ ಭೂಮಿಯನ್ನು ಹೊಂದಿರುವ ಗೇಣಿದಾರ; ಮತ್ತು ಇದರಲ್ಲಿ,–

(i) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ಗೇಣಿದಾರನಾಗಿರುವ ಅಥವಾ ಗೇಣಿದಾರನೆಂದು ಭಾವಿಸಲ್ಪಡುವ ವ್ಯಕ್ತಿ;

(ii) ಭೂಮಿಯ ಸ್ವಾಧೀನದೊಂದಿಗೆ ಗೇಣಿದಾರನ ಹಕ್ಕುಗಳನ್ನು ಹೊಂದಿರುವ ಅಡಮಾನದಾರ; ಅಥವಾ

(iii) ರಾಜ್ಯ ಸರ್ಕಾರದ ಅಥವಾ ಸ್ಥಳೀಯ ಪ್ರಾಧಿಕಾರದ ಅಥವಾ ನಿಗಮಿತ ನಿಕಾಯದ ಅಧೀನದಲ್ಲಿ ನೇರವಾಗಿ ಭೂಮಿಯನ್ನು ಹೊಂದಿರುವ ಗೇಣಿದಾರ;

– ಸೇರುತ್ತಾರೆ;

(35) "ಕಂದಾಯ ವ್ಯವಸ್ಥೆಯ ಅವಧಿ" ಎಂದರೆ, ಕಂದಾಯ ವ್ಯವಸ್ಥೆಯು ಯಾವ ಅವಧಿಯವರೆಗೆ ಜಾರಿಯಲ್ಲಿರತಕ್ಕದ್ದೆಂದು ರಾಜ್ಯ ಸರ್ಕಾರವು ಘೋಷಿಸಿದೆಯೋ ಅಂಥ ಅವಧಿ;

(36) "ಪಟ್ಟಣ" ಎಂಬುದರಲ್ಲಿ [1][ಕರ್ನಾಟಕ][1] ಗ್ರಾಮಪಂಚಾಯತಿ ಮತ್ತು ಸ್ಥಳೀಯ ಮಂಡಲಿಗಳ ಅಧಿನಿಯಮ 1959ರ ಮೇರೆಗಿನ ಪಂಚಾಯತ್ ಪಟ್ಟಣ ಅಥವಾ ಪಟ್ಟಣ ಪ್ರದೇಶವು ಸೇರುತ್ತದೆ;

1. 1973ರ ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶದ ಮೂಲಕ 1-11-1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

(37) "ನ್ಯಾಯಾಧಿಕರಣ" ಎಂದರೆ 40ನೇ ಪ್ರಕರಣದ ಮೇರೆಗೆ ರಚಿಸಲಾದ [1][ಕರ್ನಾಟಕ ರೆವಿನ್ಯೂಅಪೀಲು ನ್ಯಾಯಾಧಿಕರಣ;][1]

1. 1973ರ ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶದ ಮೂಲಕ 1-11-1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

(38) "ಗ್ರಾಮ" ಎಂದರೆ, ರೆವಿನ್ಯೂಆಡಳಿತದ ಉದ್ದೇಶಗಳಿಗಾಗಿ ಭೂದಾಖಲೆಗಳಲ್ಲಿ ಗ್ರಾಮ ಎಂಬುದಾಗಿ ಮನ್ನಣೆ ಪಡೆದಿರುವ ಸ್ಥಳೀಯ ಪ್ರದೇಶ ಮತ್ತು ಪಟ್ಟಣ ಅಥವಾ ನಗರವು ಮತ್ತು ಗ್ರಾಮದ, ಪಟ್ಟಣದ ಅಥವಾ ನಗರದ ಸರಹದ್ದುಗಳ ಒಳಗಡೆ ಇರುವ ಎಲ್ಲ ಭೂಮಿಯೂ ಇದರಲ್ಲಿ ಸೇರುತ್ತದೆ;

(39) "ಗ್ರಾಮ ಲೆಕ್ಕಿಗ" ಎಂದರೆ, 16ನೇ ಪ್ರಕರಣದ ಮೇರೆಗೆ ನೇಮಕಗೊಂಡ ಅಥವಾ ನೇಮಕಗೊಂಡಿರುವನೆಂದು ಭಾವಿಸಲಾದ ಗ್ರಾಮ ಲೆಕ್ಕಿಗ;

(40) "ವಲಯ" ಯಾವ ಸ್ಥಳೀಯ ಪ್ರದೇಶದಲ್ಲಿ ಎಂದರೆ, ಒಂದು ಜಿಲ್ಲೆಯಲ್ಲಿರುವ ಅಥವಾ ಹೆಚ್ಚು ಜಿಲ್ಲೆಗಳಲ್ಲಿರುವ ತಾಲೂಕನ್ನು; ಅಥವಾ ತಾಲೂಕುಗಳ ಗುಂಪನ್ನು ಅಥವಾ ಅದರ ಭಾಗವನ್ನೊಳಗೊಂಡಿರುವುದೋ ಮತ್ತು ರಾಜ್ಯ ಸರ್ಕಾರವು ಅಥವಾ ಈ ಬಗ್ಗೆ ಅದರಿಂದ ಅಧಿಕೃತನಾದ ಅಧಿಕಾರಿಯು,

(i) ಪ್ರಾಕೃತಿಕ ಆಕಾರಕ್ಕೆ;

(ii) ವಾಯುಗುಣಕ್ಕೆ ಮತ್ತು ಮಳೆಗೆ;

(iii) ಆ ಪ್ರದೇಶದಲ್ಲಿ ಬೆಳೆಯುವ ಮುಖ್ಯ ಬೆಳೆಗಳಿಗೆ; ಮತ್ತು

(iv) ಮಣ್ಣಿನ ಗುಣಕ್ಕೆ

– ಸಂಬಂಧಿಸಿದಂತೆ ಅದು ಒಂದಕ್ಕೊಂದು ಹೊಂದಿಕೊಂಡಿರುವುದೆಂದು ಮತ್ತು ಒಂದೇ ರೀತಿಯದಾಗಿರುವುದೆಂದು ಅಭಿಪ್ರಾಯಪಟ್ಟಿದೆಯೋ ಅಥವಾ ಅಭಿಪ್ರಾಯಪಟ್ಟಿರುವರೋ ಆ ಯಾವುದೇ ಸ್ಥಳೀಯ ಪ್ರದೇಶ.

## ಅಧ್ಯಾಯ –II

**ರೆವಿನ್ಯೂ ಅಧಿಕಾರಿಗಳ ನೇಮಕ ಮತ್ತು ಅವರ ಅಧಿಕಾರಗಳು**

**3. ರೆವಿನ್ಯೂವಿಷಯಗಳಲ್ಲಿ ಮುಖ್ಯ ನಿಯಂತ್ರಣ ಪ್ರಾಧಿಕಾರ.–** ಈ ಅಧಿನಿಯಮದ ಮೇರೆಗೆ ಭೂಮಿಯ ಮತ್ತು ಭೂಕಂದಾಯದ ನಿರ್ವಹಣೆಗೆ ಸಂಬಂಧಪಟ್ಟ ಎಲ್ಲ ವಿಷಯಗಳ ಬಗ್ಗೆ ರಾಜ್ಯ ಸರ್ಕಾರವು ಮುಖ್ಯ ನಿಯಂತ್ರಣ ಪ್ರಾಧಿಕಾರವಾಗಿರತಕ್ಕದ್ದು.

**4. ರಾಜ್ಯವನ್ನು [1][ಪ್ರದೇಶಗಳಾಗಿ,ಪ್ರದೇಶಗಳನ್ನು ಜಿಲ್ಲೆಗಳಾಗಿ ವಿಭಾಗಿಸುವುದು][1] ಮತ್ತು ಜಿಲ್ಲೆಗಳಲ್ಲಿ ಹೋಬಳಿಗಳು ಮತ್ತು ಗ್ರಾಮಗಳನ್ನೊಳಗೊಂಡ ತಾಲೂಕುಗಳು ಇರುವುದು.–**[2][(1) ರಾಜ್ಯದಲ್ಲಿ ಯಾವ ಪ್ರದೇಶಗಳು ಪ್ರತ್ಯೇಕ ಪ್ರದೇಶವಾಗತಕ್ಕದ್ದೆಂದು ಭಾವಿಸುತ್ತದೋ ಆ ಪ್ರದೇಶಗಳನ್ನು ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ, ನಿರ್ಧರಿಸಬಹುದು ಮತ್ತು ಅಂಥ ಪ್ರದೇಶದ ಸರಹದ್ದುಗಳನ್ನು ಅಧಿಸೂಚನೆಯ ಮೂಲಕ ಅದು ಬದಲಾಯಿಸಬಹುದು ಅಥವಾ ರದ್ದುಗೊಳಿಸಬಹುದು.][2]

1. 2003ರ ಅಧಿನಿಯಮ 21ರ ಮೂಲಕ 26.05.2003 ರಿಂದ ಜಾರಿಗೆ ಬರುವಂತೆ ಅಧಿಸೂಚನೆಯ ಮೂಲಕ ಪ್ರತಿಯೋಜಿಸಲಾಗಿದೆ. ಅಧಿಸೂಚನೆಯ ಪಾಠವು ಅಧಿನಿಯಮದ ಕೊನೆಯಲ್ಲಿದೆ ಮತ್ತು 2007ರ ಅಧಿನಿಯಮ 17ರ ಮೂಲಕ 5.1.2007 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
2. 2007ರ ಅಧಿನಿಯಮ 17ರ ಮೂಲಕ 5.1.2007 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(2) [1][ಪ್ರತಿಯೊಂದು ಪ್ರತ್ಯೇಕ ಪ್ರದೇಶವನ್ನು,][1] ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ನಿರ್ಧರಿಸಬಹುದಾದಂಥ ಸರಹದ್ದುಗಳುಳ್ಳ ಜಿಲ್ಲೆಗಳನ್ನಾಗಿ ವಿಭಾಗಿಸತಕ್ಕದ್ದು.

1. 2007ರ ಅಧಿನಿಯಮ 17ರ ಮೂಲಕ 5.1.2007 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(3) ಉಪಪ್ರಕರಣ (2)ರಮೇರೆಗೆ ನಿರ್ಧರಿಸಲಾದ ಪ್ರತಿಯೊಂದು ಜಿಲ್ಲೆಯು ರಾಜ್ಯ ಸರ್ಕಾರವು, ಅಧಿಸೂಚನೆ ಮೂಲಕ ನಿರ್ಧರಿಸಬಹುದಾದಂಥ ತಾಲೂಕುಗಳನ್ನು ಮತ್ತು ಪ್ರತಿಯೊಂದು ತಾಲೂಕು ಹಾಗೆ ನಿರ್ಧರಿಸಬಹುದಾದಂಥ ಹೋಬಳಿಗಳನ್ನು ಮತ್ತು ಪ್ರತಿಯೊಂದು ಹೋಬಳಿಯು ಹಾಗೆ ನಿರ್ಧರಿಸಬಹುದಾದಂಥ ಗ್ರಾಮಗಳನ್ನು ಒಳಗೊಂಡಿರತಕ್ಕದ್ದು.

(4) ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ ಯಾವುದೇ ಜಿಲ್ಲೆಯ, ತಾಲೂಕಿನ ಅಥವಾ ಹೋಬಳಿಯ ಸರಹದ್ದುಗಳನ್ನು ಬದಲಾಯಿಸಬಹುದು ಮತ್ತು ಜಿಲ್ಲೆಗಳನ್ನು, ತಾಲೂಕುಗಳನ್ನು ಅಥವಾ ಹೋಬಳಿಗಳನ್ನು ಹೊಸದಾಗಿ ರಚಿಸಬಹುದು ಅಥವಾ ಅಸ್ತಿತ್ವದಲ್ಲಿರುವುವುಗಳನ್ನು ರದ್ದುಗೊಳಿಸಬಹುದು.

(5) ಈ ಅಧಿನಿಯಮವು ಪ್ರಾರಂಭವಾಗುವುದಕ್ಕೆ ನಿಕಟಪೂರ್ವದಲ್ಲಿ ಅಸ್ತಿತ್ವದಲ್ಲಿದ್ದಂಥ ವಿಭಾಗಗಳ, ಜಿಲ್ಲೆಗಳ, ತಾಲೂಕುಗಳ, ಹೋಬಳಿಗಳ (ಅವುಗಳನ್ನು ಯಾವ ಹೆಸರಿನಿಂದಲೇ ಕರೆಯಲಿ) ಮತ್ತು ಗ್ರಾಮಗಳ ಸರಹದ್ದುಗಳನ್ನು (1), (2), (3) ಮತ್ತು (4)ನೇ ಉಪಪ್ರಕರಣಗಳ ಮೇರೆಗೆ ಅಧಿಸೂಚನೆಯ ಮೂಲಕ ರಾಜ್ಯ ಸರ್ಕಾರವು ಬದಲಾಯಿಸುವವರೆಗೆ, ಈ ಅಧಿನಿಯಮದ ಉದ್ದೇಶಗಳಿಗಾಗಿ ಆ ಸರಹದ್ದುಗಳು ಇದ್ದಂತೆಯೇ ಇರತಕ್ಕದ್ದು.

**5. ಗ್ರಾಮಗಳ ಸರಹದ್ದುಗಳನ್ನು ಬದಲಾಯಿಸಲು ಅಥವಾ ಗ್ರಾಮಗಳನ್ನು ಸಮ್ಮಿಲನಗೊಳಿಸಲು ಅಥವಾ ರಚಿಸಲು ರಾಜ್ಯ ಸರ್ಕಾರಕ್ಕಿರುವ ಅಧಿಕಾರಗಳು.–** ನಿಯಮಿಸಬಹುದಾದಂಥ ಷರತ್ತುಗಳಿಗೊಳಪಟ್ಟು ಮತ್ತು ನಿಯಮಿಸಬಹುದಾದಂಥ ರೀತಿಯಲ್ಲಿ ರಾಜ್ಯ ಸರ್ಕಾರವು, ಈ ಅಧಿನಿಯಮದ ಉದ್ದೇಶಕ್ಕಾಗಿ ಯಾವುದೇ ಗ್ರಾಮದ ಸರಹದ್ದುಗಳನ್ನು ಬದಲಾಯಿಸಬಹುದು ಅಥವಾ ವಿಸ್ತರಿಸಬಹುದು ಅಥವಾ ಎರಡು ಅಥವಾ ಹೆಚ್ಚು ಗ್ರಾಮಗಳನ್ನು ಸಮ್ಮಿಲನಗೊಳಿಸಬಹುದು ಅಥವಾ ಹೊಸ ಗ್ರಾಮವನ್ನು ರಚಿಸಬಹುದು.

**6. [1][XXX][1], [2][ಪ್ರದೇಶಗಳನ್ನು, ಜಿಲ್ಲೆಗಳನ್ನು][2] ತಾಲೂಕುಗಳನ್ನು, ಹೋಬಳಿಗಳನ್ನು ಅಥವಾ ಗ್ರಾಮಗಳನ್ನು ರಚಿಸುವ, ರದ್ದುಗೊಳಿಸುವ, ಇತ್ಯಾದಿಗಳ ವಿಧಾನ.–** 4ನೆಯ ಅಥವಾ 5ನೆಯ ಪ್ರಕರಣದ ಮೇರೆಗೆ ಯಾವುದೇ ಪ್ರದೇಶವನ್ನು [1][XXX][1], ಜಿಲ್ಲೆಯೆಂದು, ತಾಲೂಕೆಂದು, ಹೋಬಳಿಯೆಂದು ಅಥವಾ ಗ್ರಾಮವೆಂದು ಘೋಷಿಸುವ ಅಥವಾ ಯಾವುದೇ[1][XXX][1],[2][ಪ್ರದೇಶಗಳ, ಜಿಲ್ಲೆಗಳ][2], ತಾಲೂಕಿನ, ಹೋಬಳಿಯ ಅಥವಾ ಗ್ರಾಮದ ಸರಹದ್ದನ್ನು ಬದಲಾಯಿಸುವ ಅಥವಾ ಯಾವುದೇ [1][XXX][1],[2][ಪ್ರದೇಶಗಳ ಜಿಲ್ಲೆಗಳ][2] ತಾಲೂಕನ್ನು, ಹೋಬಳಿಯನ್ನು ಅಥವಾ ಗ್ರಾಮವನ್ನು ರದ್ದುಗೊಳಿಸುವ ಅಧಿಸೂಚನೆಯನ್ನು ಪ್ರಕಟಿಸುವುದಕ್ಕೂ ಮೊದಲು ರಾಜ್ಯ ಸರ್ಕಾರವು, ಆಕ್ಷೇಪಣೆಗಳಿದ್ದರೆ ತಿಳಿಸಬೇಕೆಂದು ಕೇಳಿ, [2][ಆಕ್ಷೇಪಣೆಗಳನ್ನು ಆಹ್ವಾನಿಸುವುದು ಅವಶ್ಯವಿಲ್ಲವೆಂದು ಪರಿಗಣಿಸುವ ಪ್ರಕರಣಗಳಲ್ಲಿ ಹೊರತು,][2] ತನ್ನ ಉದ್ದೇಶದ ಬಗೆಗಿನ ನೋಟೀಸನ್ನು ಸರ್ಕಾರಿ ಗೆಜೆಟಿನಲ್ಲಿ ಮತ್ತು ನಿಯಮಿಸಬಹುದಾದಂಥ ಬೇರೆ ರೀತಿಯಲ್ಲಿ ಪ್ರಕಟಿಸತಕ್ಕದ್ದು ಮತ್ತು ಅಂಥ ಉದ್ದೇಶದ ಬಗೆಗೆ ಬಂದ ಆಕ್ಷೇಪಣೆಗಳನ್ನು ಪರ್ಯಾಲೋಚಿಸತಕ್ಕದ್ದು.

1. 2003ರ ಅಧಿನಿಯಮ 21ರ ಮೂಲಕ 26.05.2003 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.
2. 2007ರ ಅಧಿನಿಯಮ 17ರ ಮೂಲಕ 5.1.2007 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][7. **ರೀಜನಲ್ ಕಮೀಷನರ್‌ರ ನೇಮಕ, ಕರ್ತವ್ಯಗಳು ಮತ್ತು ಪ್ರಕಾರ್ಯಗಳು.–** (1) ಪ್ರತಿಯೊಂದು ಪ್ರತ್ಯೇಕ ಪ್ರದೇಶಕ್ಕೆ ಒಬ್ಬರು **ರೀಜನಲ್ ಕಮೀಷನರ್‌**ರನ್ನು ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ನೇಮಕ ಮಾಡತಕ್ಕದ್ದು.

(2) **ರೀಜನಲ್ ಕಮೀಷನರ್‌ರು,** ರಾಜ್ಯ ಸರ್ಕಾರದ ನಿಯಂತ್ರಣಕ್ಕೊಳಪಟ್ಟು, ವಿಭಾಗಕ್ಕೆ ಮುಖ್ಯ ರೆವಿನ್ಯೂಅಧಿಕಾರಿಯಾಗಿರತಕ್ಕದ್ದು ಮತ್ತು ವಿಭಾಗದಲ್ಲಿ ತನ್ನ ಅಧೀನದಲ್ಲಿರುವ ಎಲ್ಲ ಅಧಿಕಾರಿಗಳ ಮೇಲೆ ಮೇಲ್ವಿಚಾರಣೆಯ ಹಾಗೂ ನಿಯಂತ್ರಣದ ಅಧಿಕಾರಗಳನ್ನು ಚಲಾಯಿಸತಕ್ಕದ್ದು.

(3)**ರೀಜನಲ್ ಕಮೀಷನರ್‌ರು,** ಈ ಅಧಿನಿಯಮದ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನ ಅಡಿಯಲ್ಲಿ ಅಥವಾ ಅಂಥ ಕಾನೂನಿನಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ವಹಿಸಿದ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು. ಈ ಅಧಿನಿಯಮದ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನ ಉಪಬಂಧಗಳನ್ನು ಕಾರ್ಯರೂಪಕ್ಕೆ ತರುವ ಉದ್ದೇಶಕ್ಕಾಗಿ ಈ ಬಗ್ಗೆ ರಾಜ್ಯ ಸರ್ಕಾರದಿಂದ ಪ್ರದತ್ತವಾಗಬಹುದಾದಂಥ ಅಧಿಕಾರಗಳನ್ನು ಸಹ ಚಲಾಯಿಸತಕ್ಕದ್ದು ಮತ್ತು ವಹಿಸಬಹುದಾದಂಥ ಕರ್ತವ್ಯಗಳನ್ನು ಸಹ ನಿರ್ವಹಿಸತಕ್ಕದ್ದು.][1]

1. 2007ರ ಅಧಿನಿಯಮ 17ರ ಮೂಲಕ 5.1.2007 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

8. **ಡೆಪ್ಯುಟಿ ಕಮಿಷನರು.–** (1) ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ ಪ್ರತಿಯೊಂದು ಜಿಲ್ಲೆಗೆ ಒಬ್ಬರು ಡೆಪ್ಯೂಟಿ ಕಮೀಷನರರನ್ನು ನೇಮಕ ಮಾಡತಕ್ಕದ್ದು ಮತ್ತು [1][ಅವನು ರೀಜನಲ್ ಕಮೀಷನರ್‌ಗೆ ಅಧೀನನಾಗಿರತಕ್ಕದ್ದು.][1]

1. 2007ರ ಅಧಿನಿಯಮ 17ರ ಮೂಲಕ 5.1.2007 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(2) ಡೆಪ್ಯುಟಿ ಕಮಿಷನರನು, ಈ ಅಧಿನಿಯಮದ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ತನಗೆ ಪ್ರದತ್ತವಾದ ಎಲ್ಲ ಅಧಿಕಾರಗಳನ್ನು ತನ್ನ ಜಿಲ್ಲೆಯಲ್ಲಿ ಚಲಾಯಿಸತಕ್ಕದ್ದು ಮತ್ತು ತನಗೆ ವಹಿಸಿದ ಎಲ್ಲ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು. ಅಲ್ಲದೆ, ಅವನು ಈ ಅಧಿನಿಯಮದ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಅಡಿಯಲ್ಲಿ ಅಸಿಸ್ಟೆಂಟ್ ಕಮಿಷನರನಿಗೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಬಹುದು ಮತ್ತು ವಹಿಸಿದ ಕರ್ತವ್ಯಗಳನ್ನು ನಿರ್ವಹಿಸಬಹುದು, ಮತ್ತು ಕಾನೂನಿನಿಂದ ವಿಶೇಷವಾಗಿ ಉಪಬಂಧಿಸಲಾಗಿರುವ ಎಲ್ಲ ವಿಷಯಗಳಲ್ಲಿ ಅವನು ರಾಜ್ಯ ಸರ್ಕಾರದ ಸೂಚನೆಗಳ ಮೇರೆಗೆ ಕಾರ್ಯನಿವಹಿಸತಕ್ಕದ್ದು.

**9. ವಿಶೇಷ ಡೆಪ್ಯುಟಿ ಕಮಿಷನರು.–** (1) ಯಾವುದೇ ಅವಧಿಯವರೆಗೆ ಯಾವುದೇ ಉದ್ದೇಶಗಳಿಗಾಗಿ ಯಾವುದೇ ಜಿಲ್ಲೆಗೆ ಒಬ್ಬರು ವಿಶೇಷ ಡೆಪ್ಯುಟಿ ಕಮಿಷನರರನ್ನು ನೇಮಕಮಾಡುವುದು ವಿಹಿತವೆಂದು ರಾಜ್ಯ ಸರ್ಕಾರವು ಪರ್ಯಾಲೋಚಿಸಿದಲ್ಲಿ, ಅದು ಅಧಿಸೂಚನೆಯ ಮೂಲಕ, ಅದರಲ್ಲಿ ಉಲ್ಲೇಖಿಸಬಹುದಾದಂಥ ಜಿಲ್ಲೆಗೆ ಅಂಥ ಉದ್ದೇಶಕ್ಕಾಗಿ ಮತ್ತು ಅಂಥ ಅವಧಿಗಾಗಿ ಒಬ್ಬರು ವಿಶೇಷ ಡೆಪ್ಯುಟಿ ಕಮೀಷನರನನ್ನು ನೇಮಕ ಮಾಡಬಹುದು.

(2) ಈ ಅಧಿನಿಯಮದ ಮೇರೆಗೆ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಬೇರೆ ಯಾವುದೇ ಕಾನೂನಿನ ಮೇರೆಗೆ ಡೆಪ್ಯೂಟಿ ಕಮಿಷನರು ಜಿಲ್ಲೆಯಲ್ಲಿ ಅಥವಾ ಜಿಲ್ಲೆಯ ಭಾಗದಲ್ಲಿ ಚಲಾಯಿಸುವಂಥ ಅಧಿಕಾರಗಳನ್ನು ಅಥವಾ ನೆರವೇರಿಸುವಂಥ ಕರ್ತವ್ಯಗಳನ್ನು ವಿಶೇಷ ಡೆಪ್ಯುಟಿ ಕಮಿಷನರು, ರಾಜ್ಯ ಸರ್ಕಾರವು ನಿರ್ದೇಶಿಸಿದಂತೆ ಚಲಾಯಿಸತಕ್ಕದ್ದು ಮತ್ತು ನೆರವೇರಿಸತಕ್ಕದ್ದು.

(3) [1][ಉಪಪ್ರಕರಣ (1)ರ ಮೇರೆಗೆ ನೇಮಕಗೊಂಡ ವಿಶೇಷ ಡೆಪ್ಯೂಟಿ ಕಮಿಷನರನು, ರೀಜನಲ್ ಕಮೀಷನರ್‌ಗೆ ಅಧೀನನಾಗಿರತಕ್ಕದ್ದು. ರಾಜ್ಯ ಸರ್ಕಾರವು ಈ ಸಂಬಂಧದಲ್ಲಿ ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ವಿಷಯಗಳನ್ನುಳಿದು ಜಿಲ್ಲೆಯ ಡೆಪ್ಯುಟಿ ಕಮೀಷನರನಿಗೂ ಕೂಡ ಅವನು ಅಧೀನನಾಗಿರತಕ್ಕದ್ದು.][1]

1. 2007ರ ಅಧಿನಿಯಮ 17ರ ಮೂಲಕ 5.1.2007 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**10. ಅಸಿಸ್ಟೆಂಟ್ ಕಮಿಷನರು.–** (1) ರಾಜ್ಯ ಸರ್ಕಾರವು ಪ್ರತಿಯೊಂದು ಜಿಲ್ಲೆಗೆ, ಸೂಕ್ತವೆಂದು ತಾನು ಭಾವಿಸುವಷ್ಟು ಸಂಖ್ಯೆಯ ಅಸಿಸ್ಟೆಂಟ್ ಕಮೀಷನರರನ್ನು ಅಧಿಸೂಚನೆಯ ಮೂಲಕ ನೇಮಕ ಮಾಡಬಹುದು; ಅಂಥ ಎಲ್ಲ ಅಸಿಸ್ಟೆಂಟ್ ಕಮಿಷನರು ಮತ್ತು ಜಿಲ್ಲೆಯ ರೆವಿನ್ಯೂಆಡಳಿತದಲ್ಲಿ ನಿಯೋಜಿತರಾಗಿರುವ ಇತರ ಎಲ್ಲಾ ಅಧಿಕಾರಿಗಳು [1][ರೀಜನಲ್ ಕಮೀಷನರ್‌ಗೆ ಅಥವಾ ಡೆಪ್ಯೂಟಿ ಕಮಿಷನರಿಗೆ][1]ಅಧೀನರಾಗಿರತಕ್ಕದ್ದು.

1. 2007ರ ಅಧಿನಿಯಮ 17ರ ಮೂಲಕ 5.1.2007 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) ರಾಜ್ಯ ಸರ್ಕಾರವು (1)ನೇ ಉಪ ಪ್ರಕರಣದ ಮೇರೆಗೆ ನೇಮಕ ಮಾಡಿದ ಯಾರೇ ಅಸಿಸ್ಟೆಂಟ್ ಕಮೀಷನರನಿಗೆ, ರೆವಿನ್ಯೂ ಉಪವಿಭಾಗ ಎಂದು ಕರೆಯಲ್ಪಡುವ[1][XXX][1], ಒಂದು ತಾಲೂಕನ್ನು ಅಥವಾ ಹೆಚ್ಚು ತಾಲೂಕುಗಳನ್ನೊಳಗೊಂಡಿರುವ ರೆವಿನ್ಯೂ ಉಪವಿಭಾಗದ ಆಡಳಿತದ ಹೊಣೆಗಾರಿಕೆಯನ್ನು ವಹಿಸಬಹುದು. ಈ

ಅಧಿನಿಯಮದ ಮೂಲಕ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಕಾನೂನಿನ ಮೂಲಕ ಅಸಿಸ್ಟೆಂಟ್ ಕಮೀಷನರನಿಗೆ ಪ್ರದತ್ತವಾದ ಅಂಥ ಎಲ್ಲ ಕರ್ತವ್ಯಗಳನ್ನು ಅಸಿಸ್ಟೆಂಟ್ ಕಮಿಷನರು ನೆರವೇರಿಸತಕ್ಕದ್ದು ಮತ್ತು ಅಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು V£ÉÃ ಅಧ್ಯಾಯದ ಉಪಬಂಧಗಳಿಗೆ ಒಳಪಟ್ಟು ಮತ್ತು ರಾಜ್ಯ ಸರ್ಕಾರದ ಆದೇಶಗಳು ಯಾವುದಾದರೂ ಇದ್ದರೆ ಅವುಗಳಿಗೊಳಪಟ್ಟು, ಆ ಅಧಿನಿಯಮದ ಮೂಲಕ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಬೇರೆ ಯಾವುದೇ ಕಾನೂನಿನ ಮೂಲಕ ಡೆಪ್ಯುಟಿ ಕಮಿಷನರನಿಗೆ ಪ್ರದತ್ತವಾದ ಎಲ್ಲ ಅಧಿಕಾರಗಳನ್ನು ಕೂಡ ಅಂಥ ಅಸಿಸ್ಟೆಂಟ್ ಕಮಿಷನರನು ಚಲಾಯಿಸತಕ್ಕದ್ದು ಮತ್ತು ಅಂಥ ಎಲ್ಲ ಕರ್ತವ್ಯಗಳನ್ನು ಸಹ ನೆರವೇರಿಸತಕ್ಕದ್ದು.

1. 1969ರ ಅಧಿನಿಯಮ 7ರ ಮೂಲಕ 17.4.1969 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

(3) ಉಪಪ್ರಕರಣ (1)ರಮೇರೆಗೆ ನೇಮಕಗೊಂಡ ಆದರೆ (2)ನೇ ಉಪಪ್ರಕರಣದ ಅಡಿಯಲ್ಲಿ ರೆವಿನ್ಯೂ ಉಪವಿಭಾಗದ ಆಡಳಿತವನ್ನು ಹೊಂದಿರುವಂಥ ಅಸಿಸ್ಟೆಂಟ್ ಕಮಿಷನರನು, ರಾಜ್ಯ ಸರ್ಕಾರದ ಆದೇಶಗಳಿಗೊಳಪಟ್ಟು, ಡೆಪ್ಯುಟಿ ಕಮಿಷನರನು ಅವನಿಗೆ ವಹಿಸಿಕೊಡಬಹುದಾದಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂಥ ಕರ್ತವ್ಯಗಳನ್ನು ನೆರವೇರಿಸತಕ್ಕದ್ದು.

**11. ತಹಸೀಲ್ದಾರರು.–** (1) ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ ಪ್ರತಿಯೊಂದು ತಾಲೂಕಿಗೆ ಒಬ್ಬರು ತಹಸೀಲ್ದಾರನನ್ನು ನೇಮಕ ಮಾಡತಕ್ಕದ್ದು ಮತ್ತು ಅವನು ತಾಲ್ಲೂಕಿನ ಭೂ ಕಂದಾಯದ ನಿರ್ವಹಣೆಯನ್ನು ನೆರವೇರಿಸುವ ಮುಖ್ಯ ಅಧಿಕಾರಿಯಾಗಿರತಕ್ಕದ್ದು. ಆ ತಾಲೂಕಿನ ಆಡಳಿತವನ್ನು ಹೊಂದಿರುವ ಅಸಿಸ್ಟೆಂಟ್ ಕಮಿಷನರನಿಗೆ ಅವನು ಅಧೀನವಾಗಿರತಕ್ಕದ್ದು ಮತ್ತು ಅಂಥ ಅಸಿಸ್ಟೆಂಟ್ ಕಮಿಷನರನ ಇಲ್ಲದಿದ್ದಲ್ಲಿ ಆ ಜಿಲ್ಲೆಯ ಡೆಪ್ಯುಟಿ ಕಮಿಷನರನಿಗೆ ಅಧೀನನಾಗಿರತಕ್ಕದ್ದು.

(2) ತಹಸೀಲ್ದಾರನ ಕರ್ತವ್ಯಗಳು ಮತ್ತು ಅಧಿಕಾರಗಳು ಈ ಅಧಿನಿಯಮದ ಮೂಲಕ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಬೇರೆ ಯಾವುದೇ ಕಾನೂನಿನ ಮೂಲಕ ಸ್ಪಷ್ಟವಾಗಿ ಅವನಿಗೆ ವಹಿಸಬಹುದಾದಂಥವುಗಳು ಅಥವಾ ಪ್ರದತ್ತವಾಗಬಹುದಾದಂಥವುಗಳು ಆಗಿರತಕ್ಕದ್ದು, ಅಥವಾ ರಾಜ್ಯ ಸರ್ಕಾರದ ಸಾಮಾನ್ಯ ಅಥವಾ ವಿಶೇಷ ಆದೇಶಗಳ ಅಡಿಯಲ್ಲಿ ಡೆಪ್ಯುಟಿ ಕಮಿಷನರು ಅವನಿಗೆ ಗೊತ್ತುಪಡಿಸಬಹುದಾದಂಥ ಅವಧಿಗಾಗಿ ಅವನಿಗೆ ವಹಿಸಬಹುದಾದಂಥವುಗಳು ಅಥವಾ ಪ್ರತ್ಯಾಯೋಜಿಸಬಹುದಾದಂಥವುಗಳು ಆಗಿರತಕ್ಕದ್ದು.

**12. ವಿಶೇಷ ತಹಸೀಲ್ದಾರರು.–** (1) ಯಾವುದೇ ಉದ್ದೇಶಕ್ಕಾಗಿ ಯಾವುದೇ ತಾಲೂಕಿಗೆ, ವಿಶೇಷ ತಹಸೀಲ್ದಾರನನ್ನು ನೇಮಕ ಮಾಡುವುದು ಯುಕ್ತವೆಂದು ರಾಜ್ಯ ಸರ್ಕಾರವು ಪರ್ಯಾಲೋಚಿಸಿದಾಗ, ಅಧಿಸೂಚನೆಯ ಮೂಲಕ, ಅದರಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಉದ್ದೇಶಗಳಿಗಾಗಿ ಮತ್ತು ಅಂಥ ತಾಲ್ಲೂಕಿಗೆ ವಿಶೇಷ ತಹಸೀಲ್ದಾರನನ್ನು ಅದು ನೇಮಕ ಮಾಡಬಹುದು.

(2) ಈ ಅಧಿನಿಯಮದ ಮೇರೆಗೆ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವಂಥ ಬೇರೆ ಕಾನೂನಿನ ಅಡಿಯಲ್ಲಿ ತಾಲ್ಲೂಕಿನಲ್ಲಿ ಅಥವಾ ತಾಲ್ಲೂಕಿನ ಭಾಗದಲ್ಲಿ ತಹಸೀಲ್ದಾರನು ಚಲಾಯಿಸುವಂಥ ಅಧಿಕಾರಗಳಲ್ಲಿ ಮತ್ತು ನೆರವೇರಿಸುವಂಥ ಕರ್ತವ್ಯಗಳಲ್ಲಿ ರಾಜ್ಯ ಸರ್ಕಾರವು ನಿರ್ದೇಶಿಸುವಂಥ ಅಧಿಕಾರಗಳನ್ನು ಮತ್ತು ಕರ್ತವ್ಯಗಳನ್ನು ವಿಶೇಷ ತಹಸೀಲ್ದಾರನು ಚಲಾಯಿಸತಕ್ಕದ್ದು ಮತ್ತು ನೆರವೇರಿಸತಕ್ಕದ್ದು.

(3) ವಿಶೇಷ ತಹಸೀಲ್ದಾರನು ಆ ತಾಲ್ಲೂಕಿನ ಆಡಳಿತವನ್ನು ಹೊಂದಿರುವ ಅಸಿಸ್ಟೆಂಟ್ ಕಮಿಷನರಿಗೆ ಅಧೀನನಾಗಿರತಕ್ಕದ್ದು ಮತ್ತು ಅಂಥ ಅಸಿಸ್ಟೆಂಟ್ ಕಮಿಷನರನು ಇಲ್ಲದಿರುವಲ್ಲಿ ಆ ಜಿಲ್ಲೆಯ ಡೆಪ್ಯುಟಿ ಕಮಿಷನರಿಗೆ ಅಧೀನನಾಗಿರತಕ್ಕದ್ದು. ರಾಜ್ಯ ಸರ್ಕಾರವು ಆದೇಶದ ಮೂಲಕ ಈ ಬಗ್ಗೆ ನಿರ್ದಿಷ್ಟಪಡಿಸಬಹುದಾದಂಥ ವಿಷಯಗಳನ್ನುಳಿದು ಬೇರೆ ವಿಷಯಗಳಲ್ಲಿ ವಿಶೇಷ ತಹಸೀಲ್ದಾರನು ಆ ತಾಲ್ಲೂಕಿನ ತಹಸೀಲ್ದಾರನಿಗೆ ಅಧೀನನಾಗಿರತಕ್ಕದ್ದು:

**13. ತಹಸೀಲ್ದಾರನು ಅಥವಾ ವಿಶೇಷ ತಹಸೀಲ್ದಾರನು ತನ್ನ ಕೆಲಸ ಕರ್ತವ್ಯಗಳನ್ನು ನಿರ್ವಹಿಸಲು ತನಗೆ ಅಧೀನರಾಗಿರುವವರನ್ನು ಪ್ರತಿನಿಯೋಜಿಸಬಹುದು.–**[1][XXX][1],[2][ಪ್ರಾದೇಶಿಕ ಆಯುಕ್ತರು ಅಥವಾ ಡೆಪ್ಯುಟಿ ಕಮಿಷನರನು][2] ಮಾಡಬಹುದಾದಂಥ ಆದೇಶಗಳಿಗೊಳಪಟ್ಟು, ಆಡಳಿತಕ್ಕೆ ಸಂಬಂಧಿಸಿದ ಕರ್ತವ್ಯಗಳ ಯಾವುದೇ ಭಾಗವನ್ನು ನಿರ್ವಹಿಸಲು ತನ್ನ ಅಧೀನ ಅಧಿಕಾರಿಗಳ ಪೈಕಿ ಯಾರನ್ನಾದರೂ ತಹಸೀಲ್ದಾರನು ಅಥವಾ ವಿಶೇಷ ತಹಸೀಲ್ದಾರನು ಪ್ರತಿನಿಯೋಜಿಸಬಹುದು:

1. 2003ರ ಅಧಿನಿಯಮ 21ರ ಮೂಲಕ 26.05.2003 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.
2. 2007ರ ಅಧಿನಿಯಮ 17ರ ಮೂಲಕ 5.1.2007 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

ಪರಂತು, ಹಾಗೆ ನಿಯೋಜಿಸಿದಾಗ ಅವನ ಅಧೀನ ಅಧಿಕಾರಿಗಳ ಎಲ್ಲ ಕಾರ್ಯಗಳು ಅಂಥ ತಹಸೀಲ್ದಾರನ ಅಥವಾ ವಿಶೇಷ ತಹಸೀಲ್ದಾರನ ಪುನರೀಕ್ಷಣೆಗೆ ಮತ್ತು ಸ್ಥಿರೀಕರಣಕ್ಕೆ ಒಳಪಟ್ಟಿರುತಕ್ಕದ್ದು.

**14. ಹಂಗಾಮಿ ಖಾಲಿ ಸ್ಥಾನಗಳಲ್ಲಿ ಅಧಿಕಾರಿಗಳು ಕರ್ತವ್ಯಗಳನ್ನು ನಿರ್ವಹಿಸುವುದು.–**[1][(1) ರೀಜನಲ್ ಕಮೀಷನರ್‌ರು ತಮ್ಮ ಕರ್ತವ್ಯಗಳನ್ನು ನಿರ್ವಹಿಸಲು ಅಶಕ್ತನಾದರೆ ಅಥವಾ ರಜೆಯ ಮೇಲಿದ್ದರೆ ಅಥವಾ ಯಾವುದೇ ಕಾರಣದಿಂದಾಗಿ ತನ್ನ ಹುದ್ದೆಯನ್ನು ತ್ಯಜಿಸಿದರೆ ಅಥವಾ ಮೃತಪಟ್ಟರೆ, ರೀಜನಲ್ ಕಮೀಷನರ್ ಕೇಂದ್ರ ಕಾರ್ಯಸ್ಥಳದಲ್ಲಿರುವ ಡೆಪ್ಯುಟಿ ಕಮಿಷನರನು, ರಾಜ್ಯ ಸರ್ಕಾರವು ಬೇರೆ ಏರ್ಪಾಟು ಮಾಡಿದ ಹೊರತು, ಆ ಪ್ರಾದೇಶಿಕ ಆಯುಕ್ತರ ಹುದ್ದೆಗೆ ತಾತ್ಕಾಲಿಕವಾಗಿ ಉತ್ತರಾಧಿಕಾರಿಯಾಗತಕ್ಕದ್ದು ಮತ್ತು ಪ್ರಾದೇಶಿಕ ಆಯುಕ್ತರು ತಮ್ಮ ವಿಭಾಗದ ಆಡಳಿತವನ್ನು ಪುನಃ ವಹಿಸಿಕೊಳ್ಳುವವರೆಗೆ ಅಥವಾ ಮೊದಲಿನ ಪ್ರಾದೇಶಿಕ ಆಯುಕ್ತರ ಸ್ಥಳದಲ್ಲಿ ರಾಜ್ಯ ಸರ್ಕಾರವು ಉತ್ತರಾಧಿಕಾರಿಯನ್ನು ನೇಮಿಸಿದಾಗ ಅಂಥ ಉತ್ತರಾಧಿಕಾರಿಯು ತನ್ನ ನೇಮಕ ಆದಾಗ ಆಡಳಿತವನ್ನು ವಹಿಸಿಕೊಳ್ಳುವವರೆಗೆ ಈ ಅಧಿನಿಯಮದ ಅಡಿಯಲ್ಲಿ ಆ ವಿಭಾಗದ ಪ್ರಾದೇಶಿಕ ಆಯುಕ್ತರೆಂದು ಭಾವಿಸತಕ್ಕದ್ದು.][1]

1. 2007ರ ಅಧಿನಿಯಮ 17ರ ಮೂಲಕ 5.1.2007 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(2) ಡೆಪ್ಯುಟಿ ಕಮಿಷನರನು ತನ್ನ ಕರ್ತವ್ಯಗಳನ್ನು ನಿರ್ವಹಿಸಲು ಅಶಕ್ತನಾದರೆ ಅಥವಾ ಯಾವುದೇ ಕಾರಣದಿಂದಾಗಿ ತನ್ನ ಹುದ್ದೆಯನ್ನು ತ್ಯಜಿಸಿದರೆ ಅಥವಾ ತನ್ನ ಜಿಲ್ಲೆಯನ್ನು ಬಿಟ್ಟು ಹೋದರೆ ಅಥವಾ ಮೃತಪಟ್ಟರೆ, ವಿಶೇಷ ಡೆಪ್ಯೂಟಿ ಕಮಿಷನರನು, ಯಾರಾದರೂ ಇದ್ದರೆ, ಅಥವಾ ಅವನು ಇರದಿದ್ದರೆ ಆ ಜಿಲ್ಲೆಯ ಕೇಂದ್ರಕಾರ್ಯ ಸ್ಥಳದಲ್ಲಿರುವ ಅತ್ಯಂತ ಹಿರಿಯ ಅಸಿಸ್ಟೆಂಟ್ ಕಮಿಷನರನು, ರಾಜ್ಯ ಸರ್ಕಾರವು ಬೇರೆ ಏರ್ಪಾಟು ಮಾಡಿದ ಹೊರತು, ಆ ಹುದ್ದೆಗೆ ತಾತ್ಕಾಲಿಕವಾಗಿ ಉತ್ತರಾಧಿಕಾರಿಯಾಗತಕ್ಕದ್ದು ಮತ್ತು ಡೆಪ್ಯುಟಿ ಕಮಿಷನರನು ತನ್ನ ಜಿಲ್ಲೆಯ ಆಡಳಿತವನ್ನು ಪುನಃ ವಹಿಸಿಕೊಳ್ಳುವವರೆಗೆ ಅಥವಾ ರಾಜ್ಯ ಸರ್ಕಾರವು ಅವನ ಬದಲಿಗೆ ಉತ್ತರಾಧಿಕಾರಿಯನ್ನು ನೇಮಿಸಿದಾಗ, ಅವನು ಆಡಳಿತವನ್ನು ವಹಿಸಿಕೊಳ್ಳುವವರೆಗೆ ಅಂಥ ಅಸಿಸ್ಟಟೆಂಟ್ ಕಮೀಷನರ್‌ನನ್ನು ಈ ಅಧಿನಿಯಮದ ಮೇರೆಗೆ ಡೆಪ್ಯುಟಿ ಕಮೀಷನರನೆಂದು ಭಾವಿಸತಕ್ಕದ್ದು.

(3) ರೆವಿನ್ಯೂ ಉಪವಿಭಾಗದ ಅಸಿಸ್ಟೆಂಟ್ ಕಮಿಷನರನ ತನ್ನ ಕರ್ತವ್ಯಗಳನ್ನು ನಿರ್ವಹಿಸಲು ಅಶಕ್ತನಾದರೆ ಅಥವಾ ರಜೆಯ ಮೇಲಿದ್ದರೆ ಅಥವಾ ಯಾವುದೇ ಕಾರಣದಿಂದಾಗಿ ತನ್ನ ಹುದ್ದೆಯನ್ನು ತ್ಯಜಿಸಿದರೆ ಅಥವಾ ಮೃತಪಟ್ಟರೆ, ಅಸಿಸ್ಟೆಂಟ್ ಕಮಿಷನರನ ಕಛೇರಿಯ ಕೇಂದ್ರ ಕಾರ್ಯಸ್ಥಳದಲ್ಲಿ ಇರುವ ತಹಸೀಲ್ದಾರನು, ಸರ್ಕಾರವು ಬೇರೆ ಏರ್ಪಾಟನ್ನು ಮಾಡಿದ ಹೊರತು, ಆ ಅಸಿಸ್ಟೆಂಟ್ ಕಮಿಷನರನ ಹುದ್ದೆಗೆ ತಾತ್ಕಾಲಿಕವಾಗಿ, ಉತ್ತರಾಧಿಕಾರಿಯಾಗತಕ್ಕದ್ದು ಮತ್ತು ಆ ಅಸಿಸ್ಟೆಂಟ್ ಕಮಿಷನರು ತನ್ನ ರೆವಿನ್ಯೂ ಉಪವಿಭಾಗದ ಆಡಳಿತವನ್ನು ಪುನಃ ವಹಿಸಿಕೊಳ್ಳುವವರೆಗೆ ಅಥವಾ ಸರ್ಕಾರವು ಮೊದಲಿನ ಅಸಿಸ್ಟೆಂಟ್ ಕಮಿಷನರನ ಬದಲಿಗೆ ಉತ್ತರಾಧಿಕಾರಿಯನ್ನು ನೇಮಿಸಿ, ಅಂಥ ಉತ್ತರಾಧಿಕಾರಿಯು ಆಡಳಿತವನ್ನು ವಹಿಸಿಕೊಳ್ಳುವವರೆಗೆ, ಈ ಅಧಿನಿಯಮದ ಮೇರೆಗೆ ಅಂಥ ತಹಸೀಲ್ದಾರನನ್ನು ರೆವಿನ್ಯೂ ಉಪವಿಭಾಗದ ಅಸಿಸ್ಟೆಂಟ್ ಕಮಿಷನರನೆಂದು ಭಾವಿಸತಕ್ಕದ್ದು.

(4) ತಹಸೀಲ್ದಾರನು ತನ್ನ ಕರ್ತವ್ಯಗಳನ್ನು ನಿರ್ವಹಿಸಲು ಅಶಕ್ತನಾದರೆ ಅಥವಾ ಯಾವುದೇ ಕಾರಣದಿಂದಾಗಿ ತನ್ನ ಹುದ್ದೆಯನ್ನು ತ್ಯಜಿಸಿದರೆ ಅಥವಾ ತನ್ನ ತಾಲ್ಲೂಕನ್ನು ಬಿಟ್ಟು ಹೋದರೆ ಅಥವಾ ಮೃತ ಪಟ್ಟರೆ, ವಿಶೇಷ ತಹಶೀಲ್ದಾರನು ಯಾರಾದರೂ ಇದ್ದರೆ, ಅಥವಾ ಅವನು ಇರದಿದ್ದರೆ ತಾಲೂಕು ಕಚೇರಿಯ ಅತ್ಯಂತ ಹಿರಿಯ ಲಿಪಿಕ ಅಧಿಕಾರಿಯು ಸದರಿ ತಹಸೀಲ್ದಾರನ ಹುದ್ದೆಗೆ ಹಂಗಾಮಿಯಾಗಿ ಉತ್ತರಾಧಿಕಾರಿಯಾಗತಕ್ಕದ್ದು ಮತ್ತು ಆ ತಹಶೀಲ್ದಾರನು ತನ್ನ ತಾಲ್ಲೂಕಿನ ಆಡಳಿತವನ್ನು ಪುನಃ ವಹಿಸಿಕೊಳ್ಳುವವರೆಗೆ ಅಥವಾ ಆ ತಹಸೀಲ್ದಾರ್ ಹುದ್ದೆಗೆ ಉತ್ತರಾಧಿಕಾರಿಯು ಕ್ರಮಬದ್ಧವಾಗಿ ನೇಮಕಗೊಂಡು ಆಡಳಿತವನ್ನು ವಹಿಸಿಕೊಳ್ಳುವವರೆಗೆ, ಈ ಅಧಿನಿಯಮದ ಮೇರೆಗೆ ಅಂಥ ಲಿಪಿಕ ಅಧಿಕಾರಿಯನ್ನು ತಹಸೀಲ್ದಾರನೆಂದು ಭಾವಿಸತಕ್ಕದ್ದು.

**15. ರೆವಿನ್ಯೂ ಇನ್‌ಸ್ಪೆಕ್ಟರುಗಳು.–** (1) [1][ಡೆಪ್ಯುಟಿ ಕಮಿಷನರನು ರೀಜನಲ್ ಕಮೀಷನರ ಅಥವಾ ರಾಜ್ಯ ಸರ್ಕಾರದ][1]ಸಾಮಾನ್ಯ ಆದೇಶಗಳಿಗೊಳಪಟ್ಟು, ಪ್ರತಿಯೊಂದು ಹೋಬಳಿಗೆ ಒಬ್ಬ ರೆವಿನ್ಯೂ ಇನ್ಸ್‌ಪೆಕ್ಟರ್‌ನನ್ನು ನೇಮಕ ಮಾಡಬಹುದು ಮತ್ತು ಅವನು ಈ ಅಧಿನಿಯಮದಲ್ಲಿ ಅಥವಾ ಇದರ ಮೇರೆಗೆ ಅಥವಾ ತಾತ್ಕಾಲದಲ್ಲಿ ಜಾರಿಯಲ್ಲಿರುವ ಬೇರೆ ಕಾನೂನಿನಲ್ಲಿ ಅಥವಾ ಅದರ ಮೇರೆಗೆ ನಿಯಮಿಸಬಹುದಾದಂತೆ ರೆವಿನ್ಯೂ ಇನ್‌ಸ್ಪೆಕ್ಟರನ ಎಲ್ಲ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು ಮತ್ತು ಆ ಹುದ್ದೆಯಲ್ಲಿರತಕ್ಕದ್ದು ಮತ್ತು ನಿಯಮಿಸಬಹುದಾದಂಥ ನಿಯಮಗಳಿಗೆ ಒಳಪಟ್ಟಿರತಕ್ಕದ್ದು.

1. 2007ರ ಅಧಿನಿಯಮ 17ರ ಮೂಲಕ 5.1.2007 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) ಈ ಅಧಿನಿಯಮವು ಪ್ರಾರಂಭವಾಗುವುದಕ್ಕೆ ನಿಕಟಪೂರ್ವದಲ್ಲಿ ಹೋಬಳಿಯ ರೆವಿನ್ಯೂ ಇನ್‌ಸ್ಪೆಕ್ಟರ್‌ನ ಹುದ್ದೆಯಲ್ಲಿರುವ ವ್ಯಕ್ತಿಗಳನ್ನು (ಅವರನ್ನು ಯಾವುದೇ ಹೆಸರಿನಿಂದ ಕರೆಯಲಿ) (1)ನೇ ಉಪ ಪ್ರಕರಣದ ಮೇರೆಗೆ ಮತ್ತೊಬ್ಬ ವ್ಯಕ್ತಿಯನ್ನು ನೇಮಕ ಮಾಡುವವರೆಗೆ, ಅಂಥ ಹೋಬಳಿಯ ರೆವಿನ್ಯೂ ಇನ್‌ಸ್ಪೆಕ್ಟರುಗಳೆಂದು ಭಾವಿಸತಕ್ಕದ್ದು.

**16. ಗ್ರಾಮ ಲೆಕ್ಕಿಗ.–** (1) ಡೆಪ್ಯೂಟಿ ಕಮಿಷನರನು,[1][XXX][1],[2][ರಾಜ್ಯ ಸರ್ಕಾರದ ಮತ್ತು ರೀಜನಲ್ ಕಮೀಷನರ್][2] ಸಾಮಾನ್ಯ ಆದೇಶಗಳಿಗೊಳಪಟ್ಟು ಒಂದು ಗ್ರಾಮಕ್ಕೆ ಅಥವಾ ಗ್ರಾಮಗಳ ಗುಂಪಿಗೆ ಒಬ್ಬ ಗ್ರಾಮ ಲೆಕ್ಕಿಗನನ್ನು ನೇಮಕ ಮಾಡಬಹುದು ಮತ್ತು ಅವನು ಈ ಅಧಿನಿಯಮದಲ್ಲಿ ಅಥವಾ ಅದರ ಮೇರೆಗೆ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಬೇರೆ ಯಾವುದೇ ಕಾನೂನಿನಲ್ಲಿ ಅಥವಾ ಅದರ ಮೇರೆಗೆ ನಿಯಮಿಸಲಾದ ಎಲ್ಲ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು ಮತ್ತು ನಿಯಮಿಸಬಹುದಾದಂಥ ನಿಯಮಗಳ ಮೇರೆಗೆ ಆ ಹುದ್ದೆಯಲ್ಲಿರತಕ್ಕದ್ದು ಮತ್ತು ಆ ನಿಯಮಗಳಿಗೆ ಒಳಪಟ್ಟಿರತಕ್ಕದ್ದು.

1. 2003ರ ಅಧಿನಿಯಮ 21ರ ಮೂಲಕ 26.05.2003 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.
2. 2007ರ ಅಧಿನಿಯಮ 17ರ ಮೂಲಕ 5.1.2007 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) ಈ ಅಧಿನಿಯಮವು ಪ್ರಾರಂಭವಾಗುವುದಕ್ಕೆ ನಿಕಟಪೂರ್ವದಲ್ಲಿ ಒಂದು ಗ್ರಾಮಕ್ಕೆ ಅಥವಾ ಗ್ರಾಮಗಳ ಗುಂಪಿಗೆ ಗ್ರಾಮ ಲೆಕ್ಕಿಗನ ಹುದ್ದೆಯಲ್ಲಿರುವ ವ್ಯಕ್ತಿಗಳನ್ನು, (1)ನೇ ಉಪಪ್ರಕರಣದ ಮೇರೆಗೆ ಮತ್ತೊಬ್ಬ ವ್ಯಕ್ತಿಯನ್ನು ನೇಮಕ ಮಾಡುವವರೆಗೆ, ಅಂಥ ಗ್ರಾಮದ ಅಥವಾ ಗ್ರಾಮಗಳ ಗುಂಪಿಗೆ ಗ್ರಾಮ ಲೆಕ್ಕಿಗರೆಂದು ಭಾವಿಸತಕ್ಕದ್ದು.

**17. ಗ್ರಾಮ ಲೆಕ್ಕಿಗನು ಇಡಬೇಕೆಂದು ಅಗತ್ಯಪಡಿಸಲಾಗಿರುವಂಥ ದಾಖಲೆಗಳನ್ನು ಅವನು ಇಡುವುದು ಮತ್ತು ಸರ್ಕಾರಿ ದಾಖಲೆಗಳನ್ನು ಸಿದ್ಧಪಡಿಸುವುದು.–** (1) ಗ್ರಾಮ ಲೆಕ್ಕಿಗನು ಇಡಬೇಕಾದ ರಿಜಿಸ್ಟ್ರರುಗಳನ್ನು, ಲೆಕ್ಕಗಳನ್ನು ಮತ್ತು ಇತರೆ ದಾಖಲೆಗಳನ್ನು ರಾಜ್ಯ ಸರ್ಕಾರವು ನಿಯಮಿಸತಕ್ಕದ್ದು.

(2) ಉಪ ಪ್ರಕರಣ (1)ರ ಮೇರೆಗೆ ನಿಯಮಿಸಬಹುದಾದಂಥ ಎಲ್ಲ ರಿಜಿಸ್ಟರುಗಳನ್ನು, ಲೆಕ್ಕಗಳನ್ನು ಮತ್ತು ಇತರ ದಾಖಲೆಗಳನ್ನು ಗ್ರಾಮ ಲೆಕ್ಕಿಗನು ಇಡತಕ್ಕದ್ದು ಮತ್ತು ಅವನು ತಾಲ್ಲೂಕಿನ ಅಥವಾ ಜಿಲ್ಲೆಯ ಯಾರೇ ವರಿಷ್ಠ ರೆವಿನ್ಯೂ ಅಧಿಕಾರಿಯು ಕೇಳಿದಾಗ, ಗ್ರಾಮ ವ್ಯವಹಾರಗಳಿಗೆ ಸಂಬಂಧಿಸಿದ ಕೇಂದ್ರ ಅಥವಾ ರಾಜ್ಯ ಸರ್ಕಾರದ ಅಥವಾ ಸಾರ್ವಜನಿಕರ ಉಪಯೋಗಕ್ಕಾಗಿ ಅಗತ್ಯವಾಗಿರುವಂಥ ಎಲ್ಲ ದಾಖಲೆಗಳನ್ನು ಎಂದರೆ, ನೋಟೀಸುಗಳನ್ನು, ವರದಿಗಳನ್ನು, ಮಹಜರುಗಳನ್ನು ಮತ್ತು ಕೈಫಿಯತ್ತುಗಳನ್ನು ಸಿದ್ಧಪಡಿಸತಕ್ಕದ್ದು.

**18. ಮೋಜಣಿ ಅಧಿಕಾರಿಗಳು.–** (1) ಮೋಜಣಿ, ಕಂದಾಯ ನಿರ್ಧರಣೆ ಮತ್ತು ಭೂಕಂದಾಯದ ನಿರ್ಧರಣೆ ವ್ಯವಸ್ಥೆ ಮತ್ತು ಎಲ್ಲೆಗಳ ನಿರ್ಣಯ ಮತ್ತು ಈ ಅಧಿನಿಯಮದಲ್ಲಿ ಉಪಬಂಧಿಸಲಾದ ಅವುಗಳಿಗೆ ಸಂಬಂಧಿಸಿದ ವಿಷಯಗಳು, ಇವುಗಳ ಉದ್ದೇಶಗಳಿಗಾಗಿ ರಾಜ್ಯ ಸರ್ಕಾರವು, ಅವಶ್ಯವೆಂದು ತಾನು ಭಾವಿಸುವಂಥ ಅಧಿಕಾರಿಗಳನ್ನು ಅಧಿಸೂಚನೆಯ ಮೂಲಕ ನೇಮಕ ಮಾಡಬಹುದು. ಅಂಥ ಅಧಿಕಾರಿಗಳಿಗೆ [1][ಮೋಜಣಿ, ಕಂದಾಯ ವ್ಯವಸ್ಥೆ ಮತ್ತು ಭೂ ದಾಖಲೆಗಳ ನಿರ್ದೇಶಕರು,][1][2][ಭೂ ದಾಖಲೆಗಳ ಜಂಟಿ ನಿರ್ದೇಶಕರು, ಕಂದಾಯ ವ್ಯವಸ್ಥೆಯ ಜಂಟಿ ನಿರ್ದೇಶಕರು, ಭೂ ದಾಖಲೆಗಳ ಉಪ ನಿರ್ದೇಶಕರು, ಕಂದಾಯ ವ್ಯವಸ್ಥೆಯ ಉಪ ನಿರ್ದೇಶಕರು, ಕಂದಾಯ ವ್ಯವಸ್ಥೆಯ ಸಹಾಯಕ ನಿರ್ದೇಶಕರು, "ಭೂ ದಾಖಲೆಗಳ ಸಹಾಯಕ ನಿರ್ದೇಶಕರು,][2]ಕಂದಾಯ ವ್ಯವಸ್ಥೆಯ ಅಧಿಕಾರಿಗಳು ಮತ್ತು "ಕಂದಾಯ ವ್ಯವಸ್ಥೆಯ ಸಹಾಯಕ ಅಧಿಕಾರಿಗಳು" ಅಥವಾ ರಾಜ್ಯ ಸರ್ಕಾರವು ಉಚಿತವೆಂದು ಭಾವಿಸುವಂಥ ಬೇರೆ ರೀತಿಯ ಹೆಸರನ್ನು ಕೊಡತಕ್ಕದ್ದು. ಅಂಥ ಪ್ರತಿಯೊಬ್ಬ ಅಧಿಕಾರಿಯು ರಾಜ್ಯ ಸರ್ಕಾರವು ನಿರ್ದೇಶಿಸಬಹುದಾದಂಥ ಅಧಿಕಾರಿಗೆ ಅಥವಾ ಅಧಿಕಾರಿಗಳಿಗೆ ಅಧೀನನಾಗಿರತಕ್ಕದ್ದು.

1. 1973ರ ಕರ್ನಾಟಕ ಕಾನೂನುಗಳ ಆದೇಶದ ಅಳವಡಿಕೆಗಳ ಮೂಲಕ 1.3.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.
2. 2003ರ ಅಧಿನಿಯಮ 21ರ ಮೂಲಕ 26.5.2003 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) ಉಪ ಪ್ರಕರಣ(1)ರ ಮೇರೆಗೆ ನೇಮಕಗೊಂಡ ಅಧಿಕಾರಿಗಳು, ರಾಜ್ಯ ಸರ್ಕಾರದ ಆದೇಶಗಳಿಗೊಳಪಟ್ಟು, ಮೋಜಣಿ ಮತ್ತು ಕಂದಾಯ ವ್ಯವಸ್ಥೆ–ಇವುಗಳಿಗೆ ಸಂಬಂಧಪಟ್ಟ ಎಲ್ಲಾ ವಿಷಯಗಳನ್ನು ಗಮನಕ್ಕೆ ತೆಗೆದುಕೊಳ್ಳುವ ಅಧಿಕಾರವನ್ನು ಹೊಂದಿರತಕ್ಕದ್ದು ಮತ್ತು ಈ ಅಧಿನಿಯಮದಿಂದ ಅಥವಾ ಅದರ ಮೇರೆಗೆ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಬೇರೆ ಕಾನೂನಿನಿಂದ ಅಥವಾ ಅದರ ಮೇರೆಗೆ ನಿಯಮಿಸಬಹುದಾದಂಥ ಎಲ್ಲ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂಥ ಎಲ್ಲ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು.

[1][**18ಎ. ಲೈಸೆನ್ಸು ಹೊಂದಿರುವ ಮೋಜಣಿದಾರರ ನೇಮಕ.–** (1) ಕಂದಾಯ ವ್ಯವಸ್ಥೆ ಹಾಗೂ ಭೂ ದಾಖಲೆಗಳ ನಿರ್ದೇಶಕರು, 128ನೇ ಪ್ರಕರಣದ 3ನೇ ಪರಂತುಕದ ಮತ್ತು 131ನೇ ಪ್ರಕರಣದ (ಸಿ) ಖಂಡದ ಉದ್ದೇಶಗಳಿಗಾಗಿ ರಾಜ್ಯ ಸರ್ಕಾರದಿಂದ ಮುಂಚಿತವಾಗಿಯೇ ಅನುಮೋದನೆ ಪಡೆದು ಮತ್ತು ಗೊತ್ತುಪಡಿಸಬಹುದಾದಂಥ ಷರತ್ತುಗಳಿಗೆ ಹಾಗೂ ನಿರ್ಬಂಧಗಳಿಗೆ ಒಳಪಟ್ಟು ಮತ್ತು ಅಂಥ ರೀತಿಯಲ್ಲಿ ಗೊತ್ತುಪಡಿಸಿದ ಅರ್ಹತೆಗಳನ್ನು ಮತ್ತು ಅನುಭವವನ್ನು

ಹೊಂದಿರುವ ಯಾರೇ ವ್ಯಕ್ತಿಯು (ಇಲ್ಲಿ ಇನ್ನು ಮುಂದೆ ಲೈಸೆನ್ಸ್ ಹೊಂದಿರುವ ಮೋಜಣಿದಾರ ಎಂದು ಉಲ್ಲೇಖಿಸಲಾಗಿದೆ) ಲೈಸೆನ್ನು ಪಡೆಯಬಹುದು.

(2) ಲೈಸೆನ್ಸ್ ಪಡೆದಿರುವ ಮೋಜಣಿದಾರನು ಸಂದಾಯ ಮಾಡಬೇಕಾದ ಶುಲ್ಕವು ಗೊತ್ತುಪಡಿಸಬಹುದಾಂತೆ ಇರತಕ್ಕದ್ದು.][1]

1. 1999ರ ಅಧಿನಿಯಮ 14ರ ಮೂಲಕ 30.4.1999 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

**19. ಇತರ ಅಧಿಕಾರಿಗಳು.–** (1) ರಾಜ್ಯ ಸರ್ಕಾರವು ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯರೂಪಕ್ಕೆ ತರಲು ಅವಶ್ಯಕವಾದಂಥ ಇತರ ಅಧಿಕಾರಿಗಳನ್ನು ನೇಮಕ ಮಾಡಬಹುದು ಮತ್ತು ಅಂಥ ಅಧಿಕಾರಗಳನ್ನು ಅವರಿಗೆ ವಹಿಸಿಕೊಡಬಹುದು

(2) ರಾಜ್ಯ ಸರ್ಕಾರವು ನಿರ್ದೇಶಿಸಬಹುದಾದಂಥ ಕರ್ತವ್ಯಗಳನ್ನು ಅಂಥ ಅಧಿಕಾರಿಗಳು ನಿರ್ವಹಿಸತಕ್ಕದ್ದು ಮತ್ತು ಅಂಥ ಅಧಿಕಾರಿಗಳಿಗೆ ಅಧೀನರಾಗಿರತಕ್ಕದ್ದು.

**20. ಹುದ್ದೆಗಳನ್ನು ಒಟ್ಟು ಗೂಡಿಸುವುದು.–** ಈ ಅಧ್ಯಾಯದಲ್ಲಿ ಉಪಬಂಧ ಕಲ್ಪಿಸಿರುವ ಯಾವುದೇ ಎರಡು ಅಥವಾ ಹೆಚ್ಚು ಹುದ್ದೆಗಳಿಗೆ ಬೇರೆ ರೀತಿಯಲ್ಲಿ ಕಾನೂನಿಗನುಸಾರವಾಗಿ ಅರ್ಹನಾಗಿರುವ ಒಬ್ಬನೇ ವ್ಯಕ್ತಿಯನ್ನು ರಾಜ್ಯ ಸರ್ಕಾರವು ನೇಮಕ ಮಾಡುವುದು ಅಥವಾ ಒಂದು ವರ್ಗಕ್ಕೆ ಸೇರಿದ ಅಧಿಕಾರಿಗೆ ಕೆಲವೊಂದು ನಿರ್ದಿಷ್ಟ ಸ್ಥಳೀಯ ಎಲ್ಲೆಗಳ ಒಳಗಿರುವ ಅಥವಾ ಅನ್ಯಥಾ ವಿಹಿತವೆಂದು ಕಂಡುಬಂದರೆ ಇತರ ಯಾರೇ ಅಧಿಕಾರಿಯ ಅಥವಾ ಅಧಿಕಾರಿಗಳ ಎಲ್ಲ ಅಥವಾ ಯಾವುದೇ ಅಧಿಕಾರಗಳನ್ನು ಪ್ರದಾನ ಮಾಡುವುದು ಅಥವಾ ಕರ್ತವ್ಯಗಳನ್ನು ವಹಿಸುವುದು ಕಾನೂನುಬದ್ಧವಾಗಿರತಕ್ಕದ್ದು.

**21. ಮೊಹರುಗಳು.–** ಮೊಹರನ್ನು ಬಳಸತಕ್ಕ ರೆವಿನ್ಯೂ ಅಧಿಕಾರಿಗಳು ಯಾರೆಂಬುದನ್ನು ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸತಕ್ಕದ್ದು ಮತ್ತು ಅಂಥ ಅಧಿಕಾರಿಗಳು ಬಳಸಬೇಕಾಗಿರುವ ಮೊಹರಿನ ಗಾತ್ರವನ್ನು ಮತ್ತು ವಿವರವನ್ನು ನಿಯಮಿಸತಕ್ಕದ್ದು.

**22. ರೆವಿನ್ಯೂ ಅಧಿಕಾರಿಯ ಅಥವಾ ಬೇರೆ ವ್ಯಕ್ತಿಯ ವಶದಲ್ಲಿರುವ ಹಣ,ಕಾಗದ ಪತ್ರಗಳು, ಇತ್ಯಾದಿಗಳ ಬಗ್ಗೆ ತಗಾದೆ.–** (1) ಯಾವ ಪ್ರಕರಣಗಳಲ್ಲಿ ಸರ್ಕಾರಿ ಹಣಕ್ಕೆ, ಅಥವಾ ಕಾಗದ ಪತ್ರಗಳಿಗೆ ಅಥವಾ ಸರ್ಕಾರದ ಇತರ ಸ್ವತ್ತುಗಳಿಗೆ ಸಂಬಂಧಿಸಿದಂತೆ ತನ್ನ ಜಿಲ್ಲೆಯಲ್ಲಿ ಅಥವಾ ಇಲಾಖೆಯಲ್ಲಿ ಯಾರೇ ರೆವಿನ್ಯೂ ಅಧಿಕಾರಿಯ ಮೇಲೆ ಅಥವಾ ಹಾಗೆಂದು ನಿಯೋಜಿತನಾಗಿದ್ದ ಯಾರೇ ವ್ಯಕ್ತಿಯ ಮೇಲೆ ರಾಜ್ಯ ಸರ್ಕಾರವು ಕ್ಲೇಮು ಹೊಂದಿರಬಹುದಾಗಿದೆಯೋ ಆ ರೆವಿನ್ಯೂ ಅಧಿಕಾರಿಯು ಅಥವಾ ಆ ವ್ಯಕ್ತಿಯು ತನ್ನ ಬಳಿ ಇರುವ ಹಣವನ್ನು ಅಥವಾ ಕಾಗದ ಪತ್ರಗಳನ್ನು ಅಥವಾ ಸ್ವತ್ತನ್ನು [1][ಜಿಲ್ಲೆಯ ಡೆಪ್ಯುಟಿ ಕಮಿಷನರನು, ಅಥವಾ ಭೂ ದಾಖಲೆಗಳ ಜಂಟಿ ನಿರ್ದೇಶಕನು ಅಥವಾ ಕಂದಾಯ ವ್ಯವಸ್ಥೆಯ ಜಂಟಿ ನಿರ್ದೇಶಕನು][1] ಅಥವಾ ಈ ಬಗ್ಗೆ ಅಂಥ ಡೆಪ್ಯುಟಿ ಕಮಿಷನರನು ನೇಮಕ ಮಾಡಿದ ಯಾರೇ ಅಧಿಕಾರಿಯು ತನ್ನ ಹುದ್ದೆಯ ಮೊಹರು ಮತ್ತು ತನ್ನ ಸಹಿ ಇರುವ ಆದೇಶದ ಮೂಲಕ, ಅಂಥ ಆದೇಶವನ್ನು ತಲುಪಿಸುವ ವ್ಯಕ್ತಿಗೆ ಕೂಡಲೇ ಅಥವಾ ಅಂಥ ಆದೇಶದಲ್ಲಿ ಉಲ್ಲೇಖಿಸಬಹುದಾದಂಥ ವ್ಯಕ್ತಿಗೆ ಉಲ್ಲೇಖಿಸಬಹುದಾದಂಥ ಕಾಲದಲ್ಲಿ ಮತ್ತು ಸ್ಥಳದಲ್ಲಿ ಒಪ್ಪಿಸಬೇಕೆಂದು ಅಗತ್ಯಪಡಿಸತಕ್ಕದ್ದು.

1. 2003ರ ಅಧಿನಿಯಮ 21ರ ಮೂಲಕ 26.05.2003 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) ಉಪಪ್ರಕರಣ (1)ರ ಮೇರೆಗೆ ಯಾವ ರೆವಿನ್ಯೂ ಅಧಿಕಾರಿಗೆ ಅಥವಾ ಇತರ ವ್ಯಕ್ತಿಗೆ ಆದೇಶ ಮಾಡಲಾಗಿದೆಯೋ ಅಂಥ ಅಧಿಕಾರಿಯು ಅಥವಾ ಇತರ ವ್ಯಕ್ತಿಯು ನಿರ್ದೇಶಿಸಿದಂತೆ ಹಣವನ್ನು ಸಂದಾಯ ಮಾಡದಿದ್ದರೆ ಅಥವಾ ಕಾಗದ ಪತ್ರಗಳನ್ನು ಅಥವಾ ಸ್ವತ್ತನ್ನು ಒಪ್ಪಿಸಿಕೊಡದಿದ್ದರೆ ಅಥವಾ ಮೇಲೆ ಹೇಳಿದಂಥ ಅಗತ್ಯತೆಯನ್ನು ಪಾಲಿಸದಿರುವುದಕ್ಕೆ ಸಾಕಷ್ಟು ಕಾರಣವನ್ನು ಕೊಡಲು ತಪ್ಪಿದರೆ, ಸಂದರ್ಭಾನುಸಾರ, [1][ಜಿಲ್ಲೆಯ ಡೆಪ್ಯೂಟಿ ಕಮಿಷನರು ಅಥವಾ ಭೂ ದಾಖಲೆಗಳ ಜಂಟಿ ನಿರ್ದೇಶಕರು ಅಥವಾ ಕಂದಾಯ ವ್ಯವಸ್ಥೆಯ ಜಂಟಿ ನಿರ್ದೇಶಕರು][1] ಆ ರೆವಿನ್ಯೂ ಅಧಿಕಾರಿಯನ್ನು ಅಥವಾ ಇತರ ವ್ಯಕ್ತಿಯನ್ನು ದಸ್ತಗಿರಿ ಮಾಡಿಸಬಹುದು ಮತ್ತು ಅವನು ಕೊಡಬೇಕಾದ ಮೊಬಲಗನ್ನು ಸಂದಾಯ ಮಾಡುವವರೆಗೆ ಅಥವಾ ಕಾಗದ ಪತ್ರಗಳನ್ನು ಅಥವಾ ಸ್ವತ್ತನ್ನು ಒಪ್ಪಿಸಿ ಕೊಡುವವರೆಗೆ ಅವನನ್ನು ಸಿವಿಲ್ ಜೈಲಿನಲ್ಲಿ ಬಂಧಿಸಿಡಬೇಕೆಂದು ನಿಯಮಿಸಿದ ನಮೂನೆಯಲ್ಲಿನ ವಾರಂಟಿನೊಂದಿಗೆ ಕಳಿಸಬಹುದು:

1. 2003ರ ಅಧಿನಿಯಮ 21ರ ಮೂಲಕ 26.05.2003 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

ಪರಂತು, ಇಂಥ ವಾರಂಟಿನಿಂದಾಗಿ ತೊಂಬತ್ತು ದಿನಗಳ ಅವಧಿಗೆ ಮೀರಿ ಯಾರೇ ವ್ಯಕ್ತಿಯನ್ನು ಬಂಧನದಲ್ಲಿ ಇರಿಸತಕ್ಕದ್ದಲ್ಲ.

**23. ರೆವಿನ್ಯೂ ಅಧಿಕಾರಿಯಿಂದ ಅಥವಾ ಇತರ ವ್ಯಕ್ತಿಗಳಿಂದ ಸರ್ಕಾರಿ ಹಣದ ಅಥವಾ ಸ್ವತ್ತಿನ ವಸೂಲಿ.–** (1) ಆ ರೆವಿನ್ಯೂ ಅಧಿಕಾರಿಯು ಅಥವಾ ಇತರ ವ್ಯಕ್ತಿಯು ಡೆಪ್ಯುಟಿ ಕಮಿಷನರನ ಇಲಾಖೆಯಲ್ಲಿ ಮತ್ತು ಜಿಲ್ಲೆಯಲ್ಲಿ ಸೇವೆ ಸಲ್ಲಿಸುತ್ತಿದ್ದರೆ ಅಥವಾ ಸೇವೆ ಸಲ್ಲಿಸಿದ್ದರೆ, ಆ ಡೆಪ್ಯುಟಿ ಕಮಿಷನರನ ತಾನಾಗಿಯೇ ಮತ್ತು ಅಂಥ ಅಧಿಕಾರಿಯು ಅಥವಾ ವ್ಯಕ್ತಿಯು ತನ್ನ ಜಿಲ್ಲೆಯಲ್ಲಿ ಮೋಜಣಿ ಮತ್ತು ಭೂ ದಾಖಲೆಗಳ ಇಲಾಖೆಯಲ್ಲಿ, ಸೇವೆ ಸಲ್ಲಿಸುತ್ತಿದ್ದರೆ ಅಥವಾ ಸೇವೆ ಸಲ್ಲಿಸಿದ್ದರೆ ಆ [1][ಭೂ ದಾಖಲೆಗಳ ಜಂಟಿ ನಿರ್ದೇಶಕರು ಅಥವಾ ಕಂದಾಯ ವ್ಯವಸ್ಥೆಯ ಜಂಟಿ ನಿರ್ದೇಶಕರು][1] ಅರ್ಜಿ ಸಲ್ಲಿಸಿದಾಗ,–

1. 2003ರ ಅಧಿನಿಯಮ 21ರ ಮೂಲಕ 26.05.2003 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಎ) ಅಂಥ ಅಧಿಕಾರಿಯಿಂದ ಅಥವಾ ವ್ಯಕ್ತಿಯಿಂದ ಬಾಕಿಯಾಗಿರುವ ಯಾವುವೇ ಸರ್ಕಾರಿ ಹಣವನ್ನು ಬಾಕಿದಾರನಿಂದ ಭೂ ಕಂದಾಯದ ಬಾಕಿಯನ್ನು ಯಾವ ರೀತಿಯಲ್ಲಿ ವಸೂಲು ಮಾಡಲಾಗುತ್ತದೋ ಮತ್ತು ಯಾವ ನಿಯಮಗಳು ಅನ್ವಯವಾಗುತ್ತವೋ ಅದೇ ರೀತಿಯಲ್ಲಿ ಮತ್ತು ಅವೇ ನಿಯಮಗಳಿಗೊಳಪಟ್ಟು ವಸೂಲು ಮಾಡಿಕೊಳ್ಳಲು ವ್ಯವಹರಣೆಗಳನ್ನು ನಡೆಸಬಹುದು; ಮತ್ತು

(ಬಿ) ಸರ್ಕಾರಿ ಕಾಗದ ಪತ್ರಗಳ ಅಥವಾ ರಾಜ್ಯ ಸರ್ಕಾರದ ಇತರ ಸ್ವತ್ತಿನ ವಸೂಲಿಗಾಗಿ ಸರ್ಚ್ ವಾರಂಟನ್ನು ಹೊರಡಿಸಬಹುದು, ಮತ್ತು ದಂಡ ಪ್ರಕ್ರಿಯಾ ಸಂಹಿತೆ, 1898ರ VIIನೇ ಅಧ್ಯಾಯದಲ್ಲಿರುವ ಉಪಬಂಧಗಳ ಮೇರಗೆ ಮ್ಯಾಜಿಸ್ಟ್ರೇಟನು ಕಾನೂನುಬದ್ಧವಾಗಿ ಚಲಾಯಿಸಬಹುದಾದಂಥ ಎಲ್ಲಾ ಅಧಿಕಾರಗಳನ್ನು ಈ ಸಂಬಂಧದಲ್ಲಿ ಚಲಾಯಿಸಬಹುದು.

(2) ಅಂಥ ಸರ್ಕಾರಿ ಹಣದ, ರಾಜ್ಯ ಸರ್ಕಾರದ ಕಾಗದ ಪತ್ರಗಳ ಅಥವಾ ಇತರ ಸ್ವತ್ತಿನ ಸ್ವಾಧೀನವನ್ನು ಹೊಂದಿರುವ ಎಲ್ಲ ವ್ಯಕ್ತಿಗಳು ಅವುಗಳನ್ನು ಕೂಡಲೇ ಡೆಪ್ಯುಟಿ ಕಮಿಷನರನಿಗೆ ಒಪ್ಪಿಸಿಕೊಡುವುದು ಅವರ ಕರ್ತವ್ಯವಾಗಿರತಕ್ಕದ್ದು, ಮತ್ತು ಅಂಥ ಯಾವುದೇ ಸ್ವತ್ತನ್ನು ಎಲ್ಲಿ ಬಚ್ಚಿಡಲಾಗಿದೆಯೆಂಬುದನ್ನು ತಿಳಿದಿರುವ ಪ್ರತಿಯೊಬ್ಬ ವ್ಯಕ್ತಿಯು ಅದರ ಬಗ್ಗೆ ಡೆಪ್ಯುಟಿ ಕಮಿಷನರನಿಗೆ ಮಾಹಿತಿಯನ್ನು ಕೊಡಲು ಬದ್ಧನಾಗಿರತಕ್ಕದ್ದು.

(3) ಉಪಪ್ರಕರಣ (2)ರ ಉಪಬಂಧಗಳನ್ನು ಉಲ್ಲಂಘಿಸುವ ಯಾರೇ ವ್ಯಕ್ತಿಯು, ಅವನು ಅಪರಾಧಿಯೆಂದು ನಿರ್ಣೀತನಾದ ಮೇಲೆ ಆರು ತಿಂಗಳವರೆಗಿನ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಎರಡರಿಂದಲೂ ದಂಡಿತನಾಗಿರತಕ್ಕದ್ದು.

## ಅಧ್ಯಾಯ–III
## ರೆವಿನ್ಯೂ ಅಧಿಕಾರಿಗಳ ಪ್ರಕ್ರಿಯೆ

**24. ರೆವಿನ್ಯೂ ಅಧಿಕಾರಿಗಳು ರೆವಿನ್ಯೂ ನ್ಯಾಯಾಲಯಗಳಾಗಿ ಕೆಲಸ ಮಾಡುವುದು.–** ತಹಸೀಲ್ದಾರನ ದರ್ಜೆಗೆ ಕಡಿಮೆಯಲ್ಲದ ರೆವಿನ್ಯೂ ಅಧಿಕಾರಿಯು, ಈ ಅಧಿನಿಯಮದ ಮೇರೆಗೆ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಕಾನೂನಿನ ಮೇರೆಗೆ ರಾಜ್ಯ ಸರ್ಕಾರದ ಮತ್ತು ಯಾರೇ ವ್ಯಕ್ತಿಯ ನಡುವೆ ಅಥವಾ ಯಾವುದೇ ವ್ಯವಹರಣೆಗೆ ಪಕ್ಷಕಾರರಾಗಿರುವವರ ನಡುವೆ ಉದ್ಭವಿಸುವ ಯಾವುದೇ ಪ್ರಶ್ನೆಯ ವಿಚಾರಣೆ ಮಾಡಲು ಅಥವಾ ಅದನ್ನು ತೀರ್ಮಾನಿಸಲು ಅಧಿಕಾರವನ್ನು ಚಲಾಯಿಸುವಾಗ ರೆವಿನ್ಯೂ ನ್ಯಾಯಾಲಯವಾಗಿ ಕೆಲಸ ಮಾಡತಕ್ಕದ್ದು.

**25. ರೆವಿನ್ಯೂ ನ್ಯಾಯಾಲಯದ ಅಂತರ್ನಿಹಿತ ಅಧಿಕಾರಗಳ ಉಳಿಸುವಿಕೆ.–** ನ್ಯಾಯ ನೀಡಿಕೆ ಉದ್ದೇಶಗಳಿಗಾಗಿ ಅಗತ್ಯವಿರಬಹುದಾದಂಥ ಆದೇಶಗಳನ್ನು ಮಾಡಲು ಅಥವಾ ರೆವಿನ್ಯೂ ನ್ಯಾಯಾಲಯದ ಕಾರ್ಯವಿಧಾನಗಳು ದುರುಪಯೋಗವಾಗುವುದನ್ನು ತಡೆಗಟ್ಟಲು ರೆವಿನ್ಯೂ ನ್ಯಾಯಾಲಯದ ಅಂತರ್ನಿಹಿತ ಅಧಿಕಾರವನ್ನು ಈ ಅಧಿನಿಯಮದಲ್ಲಿ ಇರುವುದು ಯಾವುದೂ ನಿರ್ಬಂಧಿಸುವುದೆಂದು ಅಥವಾ ಅದರ ಮೇಲೆ ಬೇರೆ ರೀತಿಯಲ್ಲಿ ಪ್ರಭಾವ ಬೀರುವುದೆಂದು ಭಾವಿಸತಕ್ಕದ್ದಲ್ಲ.

**26. ತನಿಖೆ ನಡೆಸುವ ಅಥವಾ ಮೊಕದ್ದಮೆಗಳ ಬಗ್ಗೆ ವಿಚಾರಣೆ ನಡೆಸುವ ಸ್ಥಳ.–** ಯಾರೇರೆವಿನ್ಯೂ ಅಧಿಕಾರಿಯು, ತಾನು ಯಾರಿಗೆ ಅಧೀನನಾಗಿರುವನೋ ಆ ಅಧಿಕಾರಿಯ ನಿರ್ದೇಶನಗಳಿಗೆ ಮತ್ತು ನಿಯಂತ್ರಣಕ್ಕೊಳಪಟ್ಟು ಮತ್ತು ಲಿಖಿತದಲ್ಲಿ ಕಾರಣಗಳನ್ನು ದಾಖಲಿಸಿ, ತನ್ನ ಅಧಿಕಾರ ವ್ಯಾಪ್ತಿಯ ಸ್ಥಳೀಯ ಸರಹದ್ದುಗಳ ಹೊರಗಿನ ಯಾವುದೇ ಸ್ಥಳದಲ್ಲಿ ಯಾವುದೇ ಮೊಕದ್ದಮೆಯನ್ನು ಕುರಿತು ತನಿಖೆಯನ್ನು ಅಥವಾ ವಿಚಾರಣೆಯನ್ನು ನಡೆಸತಕ್ಕದ್ದಲ್ಲ:

ಪರಂತು, ರೆವಿನ್ಯೂ ಅಧಿಕಾರಿಯು, ಕೇಂದ್ರ ಕಾರ್ಯಸ್ಥಳವು ತನ್ನ ಅಧಿಕಾರ ವ್ಯಾಪ್ತಿಯ ಸ್ಥಳೀಯ ಸರಹದ್ದುಗಳ ಹೊರಗಡೆ ಇದ್ದರೆ, ಅವನು, ಅಂಥ ಯಾವುದೇ ನಿರ್ದೇಶನ ಅಥವಾ ನಿಯಂತ್ರಣವಿಲ್ಲದೆ ಆ ಸ್ಥಳದಲ್ಲಿ ಮೊಕದ್ದಮೆಯನ್ನು ಕುರಿತು ತನಿಖೆಯನ್ನು ಅಥವಾ ವಿಚಾರಣೆಯನ್ನು ನಡೆಸಬಹುದು.

**27. ಮೊಕದ್ದಮೆಗಳನ್ನು ವರ್ಗಾಯಿಸುವ ಅಧಿಕಾರ.–** [1][(1) ವರ್ಗಾವಣೆಯ ಬಗ್ಗೆ ನ್ಯಾಯಾಧೀಕರಣಕ್ಕೆ ಅರ್ಜಿ ಸಲ್ಲಿಸಿದಾಗ ಅಥವಾ ಬೇರೆ ಅನ್ಯಥಾ, ನ್ಯಾಯೋದ್ದೇಶಗಳಿಗಾಗಿ ವರ್ಗಾವಣೆ ಮಾಡುವುದು ವಿಹಿತವೆಂದು ಅದು ಅಭಿಪ್ರಾಯಪಟ್ಟರೆ, ಈ ಅಧಿನಿಯಮದ ಮೇರೆಗೆ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಬೇರೆ ಕಾನೂನಿನ ಮೇರೆಗೆ ಉದ್ಭವಿಸುವ ಯಾವುದೇ ಮೊಕದ್ದಮೆಯನ್ನು ಅಥವಾ ಯಾವುದೇ ವರ್ಗದ ಮೊಕದ್ದಮೆಗಳನ್ನು ಯಾರೇ ರೀಜನಲ್ ಕಮೀಷನರ್‌ರಿಂದ ಮತ್ತೊಬ್ಬ ರೀಜನಲ್ ಕಮೀಷನರು ವರ್ಗಾವಣೆ ಮಾಡಲು ಅದು ಆದೇಶ ಮಾಡಬಹುದು.

(1ಎ) ಈ ಬಗ್ಗೆ ರೀಜನಲ್ ಕಮೀಷನರ್‌ಗೆ ಅರ್ಜಿ ಸಲ್ಲಿಸಿದಾಗ ಅಥವಾ ಅನ್ಯಥಾ ನ್ಯಾಯೋದ್ದೇಶಗಳಿಗಾಗಿ ಅಂಥ ವರ್ಗಾವಣೆಯು ವಿಹಿತವೆಂದು ಅವರು ಅಭಿಪ್ರಾಯಪಟ್ಟರೆ ಈ ಅಧಿನಿಯಮದ ಮೇರೆಗೆ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಕಾನೂನಿನ ಮೇರೆಗೆ ಉದ್ಭವಿಸುವ ಯಾವುದೇ ಮೊಕದ್ದಮೆಯನ್ನು ಅಥವಾ ಮೊಕದ್ದಮೆಗಳ ವರ್ಗವನ್ನು ಯಾರೇ ರೆವಿನ್ಯೂ ಅಧಿಕಾರಿಯಿಂದ, ಅದೇ ಜಿಲ್ಲೆಯಲ್ಲಿರುವ ಅಥವಾ ಅದೇ ವಿಭಾಗದಲ್ಲಿ ಬೇರೊಂದು ಜಿಲ್ಲೆಯಲ್ಲಿರುವ ಹಾಗೂ ಆ ಬಗ್ಗೆ ವ್ಯವಹರಿಸಲು ಸಕ್ಷಮನಾದ ಬೇರೊಬ್ಬ ರೆವಿನ್ಯೂ ಅಧಿಕಾರಿಗೆ ವರ್ಗಾವಣೆ ಮಾಡಲು ಆದೇಶ ಮಾಡಬಹುದು.][1]

1. 2007ರ ಅಧಿನಿಯಮ 17ರ ಮೂಲಕ 5.1.2007 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1][(2)XXX][1].

1. 2003ರ ಅಧಿನಿಯಮ 21ರ ಮೂಲಕ 26.05.2003 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

(2) ಡೆಪ್ಯುಟಿ ಕಮಿಷನರನು, ಈ ಅಧಿನಿಯಮದ ಮೇರೆಗೆ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಬೇರೆ ಯಾವುದೇ ಕಾನೂನಿನ ಮೇರೆಗೆ ಉದ್ಭವಿಸುವ ಹಾಗೂ ತನ್ನ ಮುಂದೆ ಅಥವಾ ತನಗೆ ಅಧೀನನಾಗಿರುವ ಬೇರೆ ಯಾರೇ ರೆವಿನ್ಯೂ ಅಧಿಕಾರಿಯ ಮುಂದೆ ತನಿಖೆಗಾಗಿ ಅಥವಾ ತೀರ್ಮಾನಕ್ಕಾಗಿ ಇರುವ ಯಾವುದೇ ಮೊಕದ್ದಮೆಯನ್ನು ಅಥವಾ ಯಾವುದೇ ವರ್ಗದ ಮೊಕದ್ದಮೆಗಳನ್ನು ತನಗೆ ಅಧೀನನಾಗಿರುವ ಮತ್ತು ಅಂಥ ಮೊಕದ್ದಮೆಯ ಬಗ್ಗೆ ಅಥವಾ ಅಂಥ ಮೊಕದ್ದಮೆಗಳ ಬಗ್ಗೆ ವ್ಯವಹರಿಸಲು ಸಕ್ಷಮನಾದ ಬೇರೊಬ್ಬ ರೆವಿನ್ಯೂ ಅಧಿಕಾರಿಗೆ ವರ್ಗಾವಣೆ ಮಾಡಬಹುದು.

(3) ಡೆಪ್ಯುಟಿ ಕಮಿಷನರನು, ತನಗೆ ಅಧೀನನಾಗಿರುವ ಯಾರೇ ರೆವಿನ್ಯೂ ಅಧಿಕಾರಿಯ ಮುಂದೆ ಇರುವ ಹಾಗೂ ಈ ಅಧಿನಿಯಮದ ಮೇರೆಗೆ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಬೇರೆ ಯಾವುದೇ ಕಾನೂನಿನ ಮೇರೆಗೆ ಉದ್ಭವಿಸುವ ಯಾವುದೇ ಮೊಕದ್ದಮೆಯನ್ನು ಅಥವಾ ಯಾವುದೇ ವರ್ಗದ ಮೊಕದ್ದಮೆಗಳನ್ನು ತಾನು ಹಿಂತೆಗೆದುಕೊಳ್ಳಬಹುದು ಮತ್ತು ಅಂಥ ಮೊಕದ್ದಮೆಯ ಬಗ್ಗೆ ಅಥವಾ ಅಂಥ ವರ್ಗದ ಮೊಕದ್ದಮೆಗಳ ಬಗ್ಗೆ ತಾನೇ ವ್ಯವಹರಿಸಬಹುದು.

**28. ಸಾಕ್ಷ್ಯ ತೆಗೆದುಕೊಳ್ಳಲು, ಸಾಕ್ಷ್ಯವನ್ನು ಕೊಡುವುದಕ್ಕಾಗಿ ಮತ್ತು ದಸ್ತಾವೇಜುಗಳನ್ನು ಹಾಜರುಪಡಿಸುವುದಕ್ಕಾಗಿ ವ್ಯಕ್ತಿಗಳನ್ನು ಸಮನು ಮಾಡಲು ಅಧಿಕಾರ.–** (1) ತಹಸೀಲ್ದಾರನ ಅಥವಾ ತಮ್ಮ ತಮ್ಮ ಇಲಾಖೆಗಳಲ್ಲಿ [1][ಭೂ ದಾಖಲೆಗಳ ಸಹಾಯಕ ನಿರ್ದೇಶಕನ][1] ದರ್ಜೆಗೆ ಕಡಿಮೆಯಲ್ಲದ ಪ್ರತಿಯೊಬ್ಬ ರೆವಿನ್ಯೂ ಅಧಿಕಾರಿಯು ತಮ್ಮ ತಮ್ಮ ಇಲಾಖೆಗಳಲ್ಲಿ ತಾನು ಯಾವ ತನಿಖೆಯನ್ನು ಮಾಡಲು ಕಾನೂನುಬದ್ಧವಾಗಿ ಅಧಿಕಾರ ಪಡೆದಿರುವನೋ ಆ ಯಾವುದೇ ತನಿಖೆಯ ಉದ್ದೇಶಕ್ಕಾಗಿ, ಪ್ರಮಾಣ ಮಾಡಿಸಿ ಸಾಕ್ಷ್ಯ ತೆಗೆದುಕೊಳ್ಳಲು ಮತ್ತು ಪಕ್ಷಕಾರನೆಂದು ವಿಚಾರಣೆ ನಡೆಸುವುದಕ್ಕಾಗಿ ಅಥವಾ ಸಾಕ್ಷಿಯೆಂದು ಸಾಕ್ಷ್ಯ ತೆಗೆದುಕೊಳ್ಳಲು ಅಥವಾ ದಸ್ತಾವೇಜುಗಳನ್ನು ಹಾಜರುಪಡಿಸಲು ಯಾವ ವ್ಯಕ್ತಿಯ ಹಾಜರಾತಿಯು ಅವಶ್ಯವೆಂದು ತಾನು ಪರ್ಯಾಲೋಚಿಸುತ್ತಾನೆಯೋ ಅಂಥ ವ್ಯಕ್ತಿಯನ್ನು ಸಮನು ಮಾಡಲು ಅಧಿಕಾರವನ್ನು ಹೊಂದಿರತಕ್ಕದ್ದು.

1. 2003ರ ಅಧಿನಿಯಮ 21ರ ಮೂಲಕ 26.05.2003 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) ಉಪಪ್ರಕರಣ (1)ರ ಮೇರೆಗೆ, ಯಾರಿಗೆ ಸಮನು ಮಾಡಲಾಗಿದೆಯೋ ಯಾರೇವ್ಯಕ್ತಿಯು ಸಮನಿನಲ್ಲಿ ನಿರ್ದೇಶಿಸಿರುವಂತೆ ಖುದ್ದಾಗಿ ಅಥವಾ ಅಧಿಕೃತ ಏಜೆಂಟನ ಮೂಲಕ ಹಾಜರಾಗಲು ಬದ್ಧನಾಗಿರತಕ್ಕದ್ದು:

ಪರಂತು, ಸಿವಿಲ್ ಪ್ರಕ್ರಿಯಾ ಸಂಹಿತೆ, 1908ರ 132 ಮತ್ತು 133ನೇ ಪ್ರಕರಣಗಳಲ್ಲಿ ಹೇಳಿರುವ ವಿನಾಯಿತಿಗಳು, ಈ ಪ್ರಕರಣದ ಮೇರೆಗಿನ ಹಾಜರಾತಿಯ ಅಗತ್ಯತೆಗಳಿಗೆ ಅನ್ವಯವಾಗತಕ್ಕದ್ದು.

(3) ಪಕ್ಷಕಾರನೆಂದು ವಿಚಾರಣೆಗೊಳಗಾಗಲು ಅಥವಾ ಸಾಕ್ಷಿಯೆಂದು ಸಾಕ್ಷ್ಯಕೊಡಲು (1)ನೇ ಉಪಪ್ರಕರಣದ ಮೇರೆಗೆ ಯಾರಿಗೆ ಸಮನು ಮಾಡಲಾಗಿದೆಯೋ ಆ ಪ್ರತಿಯೊಬ್ಬ ವ್ಯಕ್ತಿಯು,–

(i) ಯಾವುದರ ಬಗ್ಗೆ ತನ್ನನ್ನು ವಿಚಾರಣೆ ಮಾಡಲಾಗುತ್ತಿದೆಯೋ ಅಥವಾ ತಾನು ಹೇಳಿಕೆ ಕೊಡುತ್ತಿರುವನೋ ಆ ಯಾವುದೇ ವಿಷಯದ ಬಗ್ಗೆ ಸತ್ಯವನ್ನು ಹೇಳಲು; ಮತ್ತು

(ii) ಅಗತ್ಯವಾಗಬಹುದಾದಂಥ ದಸ್ತಾವೇಜುಗಳನ್ನು ಹಾಜರುಪಡಿಸಲು, –
ಬದ್ಧನಾಗಿರತಕ್ಕದ್ದು.

(4) ದಸ್ತಾವೇಜನ್ನು ಹಾಜರುಪಡಿಸಲು ಮಾತ್ರವೇ ಯಾರಿಗೆ ಸಮನು ಮಾಡಲಾಗಿದೆಯೋ ಆ ಯಾರೇ ವ್ಯಕ್ತಿಯು ಅದನ್ನು ಹಾಜರುಪಡಿಸಲು ಖುದ್ದಾಗಿ ಹಾಜರಾಗುವುದರ ಬದಲಾಗಿ ಅಂಥ ದಸ್ತಾವೇಜನ್ನು ಹಾಜರುಪಡಿಸುವ ಏರ್ಪಾಟು ಮಾಡಿದರೆ ಅವನು ಸಮನನ್ನು ಪಾಲಿಸಿದನೆಂದು ಭಾವಿಸತಕ್ಕದ್ದು.

**29. ಸಮನಿನ ಒಳಾಂಶಗಳು ಮತ್ತು ಅದನ್ನು ಹೊರಡಿಸುವ ಹಾಗೂ ಜಾರಿ ಮಾಡುವ ರೀತಿ.–** (1) ಪ್ರತಿಯೊಂದು ಸಮನು ಲಿಖಿತದಲ್ಲಿದ್ದು, ದ್ವಿಪ್ರತಿಯಲ್ಲಿರತಕ್ಕದ್ದು ಮತ್ತು ಅದನ್ನು ಯಾವ ಉದ್ದೇಶಕ್ಕಾಗಿ ಹೊರಡಿಸಲಾಗಿದೆಯೋ ಆ ಉದ್ದೇಶವನ್ನು ಅದರಲ್ಲಿ ನಿರೂಪಿಸತಕ್ಕದ್ದು ಮತ್ತು ಅದನ್ನು ಹೊರಡಿಸುವ ಅಧಿಕಾರಿಯು ಅಥವಾ ಆ ಕಚೇರಿಯಲ್ಲಿ ಅವನಿಗೆ ಅಧೀನನಾಗಿರುವ ಹಾಗೂ ಈ ಬಗ್ಗೆ ಅವನಿಂದ ಅಧಿಕೃತನಾಗಿರುವ ಅಧಿಕಾರಿಯು ಅದಕ್ಕೆ ಸಹಿ ಹಾಕತಕ್ಕದ್ದು ಮತ್ತು ಅಂಥ ಅಧಿಕಾರಿಯ ಬಳಿಯಲ್ಲಿ ಮೊಹರು ಇದ್ದರೆ ಆ ಸಮನಿಗೆ ಆ ಮುದ್ರೆಯನ್ನು ಹಾಕತಕ್ಕದ್ದು; ಯಾರಿಗೆ ಸಮನು ಮಾಡಲಾಗಿದೆಯೋ ಆ ವ್ಯಕ್ತಿಯು ಅದರಲ್ಲಿ ಹೇಳಿರುವ ಸಮಯದಲ್ಲಿ ಮತ್ತು ಸ್ಥಳದಲ್ಲಿ ಸದರಿ ಅಧಿಕಾರಿಯ ಮುಂದೆ ಹಾಜರಾಗಲು ಅದು ಅಗತ್ಯಪಡಿಸತಕ್ಕದು ಮತ್ತು ಅವನ ಹಾಜರಾತಿಯ ಅಗತ್ಯವು ಸಾಕ್ಷ್ಯ ಕೊಡುವ ಉದ್ದೇಶಕ್ಕಾಗಿದೆಯೋ ಅಥವಾ ದಸ್ತಾವೇಜನ್ನು ಹಾಜರುಪಡಿಸುವುದಕ್ಕಾಗಿದೆಯೋ ಅಥವಾ ಅವೆರಡರ ಸಲುವಾಗಿದೆಯೇ ಎಂಬುದನ್ನು ಅದರಲ್ಲಿ ನಿರ್ದಿಷ್ಟಪಡಿಸಿರತಕ್ಕದ್ದು.

(2) ಯಾರಿಗೆ ಸಮನು ಮಾಡಲಾಗಿದೆಯೋ ಆ ವ್ಯಕ್ತಿಗೆ ಅಥವಾ ಅವನು ಸಿಗದಿದ್ದರೆ, ಅವನೊಂದಿಗೆ ವಾಸಿಸುವ ಅವನ ಕುಟುಂಬದ ಯಾರೇ ವಯಸ್ಕನಿಗೆ ಅದರ ಒಂದು ಪ್ರತಿಯನ್ನು ಕೊಡುವ ಅಥವಾ ತಲುಪಿಸುವ ಮೂಲಕ ಪ್ರತಿಯೊಂದು ಸಮನನ್ನು ಜಾರಿ ಮಾಡತಕ್ಕದ್ದು; ಅಂಥ ವಯಸ್ಕನು ಇರದಿದ್ದರೆ, ಸಮನು ಮಾಡಲಾದ ವ್ಯಕ್ತಿಯು ಸಾಮಾನ್ಯವಾಗಿ ವಾಸಿಸುವ ಅಥವಾ ಅವನು ಕೊನೆಯದಾಗಿ ವಾಸಿಸುತ್ತಿದ್ದ ಮನೆಯ ಎದ್ದು ಕಾಣುವ ಸ್ಥಳದಲ್ಲಿ ಸಮನಿನ ಒಂದು ಪ್ರತಿಯನ್ನು ಅಂಟಿಸುವುದರ ಮೂಲಕ ಅದನ್ನು ಜಾರಿ ಮಾಡಬಹುದು.

(3) ಯಾರಿಗೆ ಸಮನು ಮಾಡಲಾಗಿದೆಯೋ ಆ ವ್ಯಕ್ತಿಯ ಸಾಮಾನ್ಯ ನಿವಾಸವು ಬೇರೊಂದು ಜಿಲ್ಲೆಯಲ್ಲಿದ್ದರೆ, ಆ ಜಿಲ್ಲೆಯ ಡೆಪ್ಯುಟಿ ಕಮಿಷನರಿಗೆಅಂಚೆಯ ಮೂಲಕ ಸಮನನ್ನು ಕಳಿಸಬಹುದು ಮತ್ತು ಅವರು ಅದನ್ನು (2)ನೇ ಉಪಪ್ರಕರಣಕ್ಕನುಸಾರವಾಗಿ ಜಾರಿ ಮಾಡಿಸತಕ್ಕದ್ದು.

(4) ಉಪಪ್ರಕರಣ (2)ರಲ್ಲಿ ಅಥವಾ (3)ರಲ್ಲಿ ಏನೇ ಇದ್ದರೂ, ರೆವಿನ್ಯೂ ನ್ಯಾಯಾಲಯವು ತಾನಾಗಿಯೇ ಅಥವಾ ಪಕ್ಷಕಾರನಿಂದ ಅರ್ಜಿಯು ಬಂದ ಮೇಲೆ, ಮೊದಲ ಬಾರಿ ಆಗಲಿ ಅಥವಾ ಕೊನೆಯದಾಗಿ ಹೊರಡಿಸಿದ್ದ ಸಮನು ಜಾರಿ ಆಗದೆ ವಾಪಸ್ಸು ಬಂದಾಗಲಾಗಲಿ, ಮತ್ತೆ ಅದನ್ನು ತಲುಪಿಸುವುದಕ್ಕಾಗಿ ಮುಂಚೆಯೇ ಸಂದಾಯ ಮಾಡಿದ ರಿಜಿಸ್ಟ್ರು ಅಂಚೆಯ ಮೂಲಕ ಸಮನು ಜಾರಿ ಮಾಡಲು ನಿರ್ದೇಶಿಸಬಹುದು. ಯಾರಿಗೆ ಸಮನು ಮಾಡಲಾಗಿದೆಯೋ ಆ ವ್ಯಕ್ತಿಗೆ ಅಂಚೆ ಮೂಲಕ ಸಮನು ತಲುಪಿದ್ದಕ್ಕೆ ಆ ವ್ಯಕ್ತಿಯ ಸಹಿ ಇರುವ ಒಪ್ಪಿಗೆಯನ್ನು, ಅದರ ಮೇಲೆ ಅವನು ಸಹಿ ಹಾಕಿದನೆಂದು ತೋರಿಸುವ ದಿನದಂದು ಸಮನು ಮಾಡಲಾದ ವ್ಯಕ್ತಿಗೆ ಅದನ್ನು ತೃಪ್ತಿಕರವಾಗಿ ಜಾರಿ ಮಾಡಲಾಗಿದೆಯೆಂಬುದರ ಬಗ್ಗೆ ಮೊದಲ ನೋಟದ ರುಜುವಾತೆಂದು ಭಾವಿಸತಕ್ಕದ್ದು. ಅಂಚೆ ಲಕೋಟೆಯು ಜಾರಿಯಾಗದೆ ವಾಪಸ್ಸು ಬಂದರೆ, ಅದರ ಮೇಲೆ ಅಂಚೆ ಇಲಾಖೆಯ ಬಟವಾಡೆ ಜವಾನನು ಅಥವಾ ಇತರ ನೌಕರನು ಅಥವಾ ಅಧಿಕಾರಿಯು ಮಾಡಿದ್ದಾನೆಂದು ತಾತ್ಪರ್ಯವಾಗುವ ಹಿಂಬರಹವು, ಅದರಲ್ಲಿರುವ ಹೇಳಿಕೆಗಳ ಬಗ್ಗೆ ಮೊದಲ ನೋಟದ ಸಾಕ್ಷ್ಯವಾಗಿರತಕ್ಕದ್ದು.

**30. ನೋಟೀಸುಗಳನ್ನು ಜಾರಿ ಮಾಡುವ ವಿಧಾನ.–** (1) ಅನ್ಯಥಾ ಸ್ಪಷ್ಟವಾಗಿ ಉಪಬಂಧಿಸಿದ್ದ ಹೊರತು, ಈ ಅಧಿನಿಯಮದ ಮೇರೆಗಿನ ಪ್ರತಿಯೊಂದು ನೋಟೀಸನ್ನು ಅದನ್ನು ಯಾವ ವ್ಯಕ್ತಿಗೆ ಜಾರಿ ಮಾಡಬೇಕಾಗಿದೆಯೋ ಆ ವ್ಯಕ್ತಿಗೆ ಅಥವಾ ಅವನ ಏಜೆಂಟ ಯಾವನಾದರೂ ಇದ್ದರೆ ಅವನಿಗೆ, ಅದರ ಒಂದು ಪ್ರತಿಯನ್ನು ಕೊಡುವ ಅಥವಾ ತಲುಪಿಸುವ ಮೂಲಕ, ಅಥವಾ ಅಂಥ ನೋಟೀಸಿನಲ್ಲಿ ಉಲ್ಲೇಖಿಸಿದ ಭೂಮಿ ಯಾವುದಾದರೂ ಇದ್ದರೆ, ಅದರಲ್ಲಿ ಎದ್ದು ಕಾಣುವ ಸ್ಥಳದ ಮೇಲೆ ಅದರ ಪ್ರತಿಯನ್ನು ಅಂಟಿಸುವುದರ ಮೂಲಕ, ಜಾರಿ ಮಾಡತಕ್ಕದ್ದು.

(2) ಯಾವ ವ್ಯಕ್ತಿಗೆ ನೋಟೀಸು ಜಾರಿ ಮಾಡಬೇಕಾಗಿದೆಯೋ ಆ ವ್ಯಕ್ತಿಯು ಬೇರೆ ಯಾವುದೇ ಜಿಲ್ಲೆಯಲ್ಲಿ ವಾಸಿಸುತ್ತಿದ್ದರೆ, ನೋಟೀಸನ್ನು ಆ ಜಿಲ್ಲೆಯ ಡೆಪ್ಯುಟಿ ಕಮಿಷನರಿಗೆ ಅಂಚೆಯ ಮೂಲಕ ಕಳಿಸಬಹುದು, ಮತ್ತು ಅವನು (1)ನೆಯ ಉಪ ಪ್ರಕರಣಕ್ಕನುಸಾರವಾಗಿ ಅದನ್ನು ಜಾರಿ ಮಾಡಿಸತಕ್ಕದ್ದು.

(3) ಈ ಪ್ರಕರಣದ ಮೇರೆಗೆ ಜಾರಿ ಮಾಡಿದ ಯಾವುದೇ ನೋಟೀಸಿನಲ್ಲಿ ನಮೂದಿಸಿದ ಯಾರೇವ್ಯಕ್ತಿಯ ಹೆಸರಿನಲ್ಲಿ ಅಥವಾ ಹುದ್ದೆಯ ಹೆಸರಿನಲ್ಲಿ ಯಾವುದೇ ತಪ್ಪು ಇರುವ ಕಾರಣಕ್ಕಾಗಿ, ಅಂಥ ತಪ್ಪು ಗಣನಾರ್ಹವಾದ ಅನ್ಯಾಯವನ್ನುಂಟು ಮಾಡಿದ್ದ ಹೊರತು, ಆ ನೋಟೀಸು ಅನೂರ್ಜಿತವಾದುದೆಂದು ಭಾವಿಸತಕ್ಕದ್ದಲ್ಲ.

**31. ಸಾಕ್ಷಿಗಳು ಹಾಜರಾಗುವಂತೆ ಮಾಡುವ ವಿಧಾನ.–** ಯಾವುದೇ ವಿದ್ಯುಕ್ತ ಅಥವಾ ಸಂಕ್ಷಿಪ್ತ ತನಿಖೆಯಲ್ಲಿ ಸಾಕ್ಷಿಗಳು ಹಾಜರಾಗಬೇಕೆಂದು ಯಾರೇ ಪಕ್ಷಕಾರನು ಇಚ್ಛಿಸಿದರೆ, ಸಾಕ್ಷಿಗಳಿಗೆ ಸಮನು ಮಾಡಬೇಕೆಂದು ಅರ್ಜಿ ಸಲ್ಲಿಸುವ ಉದ್ದೇಶಗಳಿಗಾಗಿ ಸಿವಿಲ್ ಪ್ರಕ್ರಿಯಾ ಸಂಹಿತೆ, 1908ರಲ್ಲಿ ನಿಯಮಿಸಿದ ವಿಧಾನವನ್ನು ಅವನು ಅನುಸರಿಸತಕ್ಕದ್ದು.

**32. ಸಾಕ್ಷಿಗಳು ಹಾಜರಾಗಲು ಒತ್ತಾಯಪಡಿಸುವುದು ಮತ್ತು ಸಾಕ್ಷಿಗಳನ್ನು ಕಮಿಷನ್ನಿನ ಮೂಲಕ ವಿಚಾರಣೆ ಮಾಡುವುದು.–** (1) ಸಾಕ್ಷಿಯಾಗಿ ಹಾಜರಾಗಲು ಅಥವಾ ಯಾವುದೇ ದಸ್ತಾವೇಜನ್ನು ಹಾಜರುಪಡಿಸಲು ಯಾರೇ ವ್ಯಕ್ತಿಗೆ ಸಮನು ಜಾರಿ ಆಗಿದ್ದು ಅವನು ಸಮನನ್ನು ಪಾಲಿಸದಿದ್ದರೆ, ಸಮನು ಹೊರಡಿಸಿದ ಅಧಿಕಾರಿಯು,–

(ಎ) ಜಾಮೀನೀಯ ದಸ್ತಗಿರಿ ವಾರಂಟನ್ನು ಹೊರಡಿಸಹುದು;

(ಬಿ) ಹಾಜರಾತಿಯ ಬಗ್ಗೆ ಭದ್ರತೆಯನ್ನು ಒದಗಿಸಲು ಅವನಿಗೆ ಆದೇಶ ಮಾಡಬಹುದು; ಅಥವಾ

(ಸಿ) ಇಪ್ಪತ್ತು ರೂಪಾಯಿಗಳಿಗೆ ಮೀರಿದ ಜುಲ್ಮಾನೆಯನ್ನು ಅವನಿಗೆ ವಿಧಿಸಬಹುದು.

(2) ಉಪಪ್ರಕರಣ (1)ರಲ್ಲಿ ಏನೇ ಇದ್ದರೂ, ಯಾವ ವ್ಯಕ್ತಿಯ ಸಾಕ್ಷ್ಯವು ಅಗತ್ಯವಿದೆಯೋ ಅವನು ಹಾಜರಾಗಲು ರೋಗದಿಂದಾಗಿ ಅಥವಾ ದೌರ್ಬಲ್ಯದಿಂದಾಗಿ ಅಸಮರ್ಥನಾಗಿರುವಾಗ ಅಥವಾ ಸಿವಿಲ್ ಪ್ರಕ್ರಿಯಾ ಸಂಹಿತೆ, 1898ರ 132 ಅಥವಾ 133ನೇ ಪ್ರಕರಣದ ಮೇರೆಗೆ ನ್ಯಾಯಾಲಯದ ಮುಂದೆ ಅವನು ಖುದ್ದಾಗಿ ಹಾಜರಾಗುವುದನ್ನು ವಿನಾಯಿತಿಗೊಳಿಸಿರುವಾಗ, ಸಮನನ್ನು ಹೊರಡಿಸುವ ಅಧಿಕಾರಿಯು, ತಾನಾಗಿಯೇ ಅಥವಾ ಯಾವ ವ್ಯಕ್ತಿಯ ಸಾಕ್ಷ್ಯವನ್ನು ಅಪೇಕ್ಷಿಸಲಾಗಿದೆಯೋ ಅವನು ಅರ್ಜಿ ಸಲ್ಲಿಸಿದಾಗ ಅಂಥ ವ್ಯಕ್ತಿಯ ಹಾಜರಾತಿಗೆ ವಿನಾಯತಿ ಕೊಡಬಹುದು ಮತ್ತು ಅವನನ್ನು ವಿಚಾರಣೆ ಮಾಡುವ ಉದ್ದೇಶಕ್ಕಾಗಿ ಪ್ರತಿನಿಯೋಜಿತನಾದ ಅಧೀನ ಅಧಿಕಾರಿಗೆ ಕಾರ್ಯಾಜ್ಞೆ ನೀಡಿ, ಅಂಥ ವ್ಯಕ್ತಿಯನ್ನು ವಿಚಾರಣೆ ಮಾಡತಕ್ಕದ್ದೆಂದು ನಿರ್ದೇಶಿಸಬಹುದು.

**33. ವಿದ್ಯುಕ್ತ ವಿಚಾರಣೆ.–** (1) ಈ ಅಧಿನಿಯಮದ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಬೇರೆ ಯಾವುದೇ ಕಾನೂನಿನ ಮೂಲಕ ಅಥವಾ ಅದರ ಮೇರೆಗೆ ಯಾವುದೇ ಪ್ರಶ್ನೆಯನ್ನು ನಿರ್ಧರಿಸುವ ಸಲುವಾಗಿ ನಿಯಮಿಸಿದ ಯಾವುದೇ ವಿದ್ಯುಕ್ತ ವಿಚಾರಣೆಯಲ್ಲಿ, ತನಿಖೆ ನಡೆಸುವ ಅಧಿಕಾರಿಯು ಕನ್ನಡದಲ್ಲಿ ಅಥವಾ ಇಂಗ್ಲಿಷ್‌ನಲ್ಲಿ ಅಥವಾ ಆ ಜಿಲ್ಲೆಯಲ್ಲಿ ಅಥವಾ ಅದರ ಭಾಗದಲ್ಲಿ ಬಳಸಲು ರಾಜ್ಯ ಸರ್ಕಾರವು ಗೊತ್ತುಪಡಿಸಬಹುದಾದಂಥ ಭಾಷೆಯಲ್ಲಿ ಸಾಕ್ಷ್ಯವನ್ನು ಪೂರ್ತಿಯಾಗಿ ಬರೆದುಕೊಳ್ಳತಕ್ಕದ್ದು ಮತ್ತು ಅದಕ್ಕೆ ಅವನು ಸಹಿ ಹಾಕತಕ್ಕದ್ದು.

(2) ತನಿಖೆಯನ್ನು ನಡೆಸುವ ಅಧಿಕಾರಿಯು ದೈಹಿಕ ಅಶಕ್ತತೆಯಿಂದಾಗಿ ಅಥವಾ ಇತರ ಕಾರಣವನ್ನು ದಾಖಲಿಸಿ ಸ್ವತಃ ಸಾಕ್ಷ್ಯವನ್ನು ಬರೆದುಕೊಡಲಾಗದಿದ್ದರೆ, ಅಂಥ ಸಾಕ್ಷ್ಯವನ್ನು ತನ್ನ ಸಮಕ್ಷಮದಲ್ಲಿ ತನಗೆ ಕೇಳಿಸುವ ಹಾಗೆ ಮತ್ತು ತನ್ನ ಸ್ವಂತ ಮೇಲ್ವಿಚಾರಣೆಯಲ್ಲಿ ಹಾಗೂ ನಿರ್ದೇಶನದಲ್ಲಿ, ಪೂರ್ತಿಯಾಗಿ ಬರೆಸತಕ್ಕದ್ದು ಮತ್ತು ಅಂಥ ದಾಖಲೆಗೆ ಅವನು ಸಹಿ ಹಾಕತಕ್ಕದ್ದು.

(3) ವಿದ್ಯುಕ್ತ ವಿಚಾರಣೆಯ ನಂತರದ ಪ್ರತಿಯೊಂದು ತೀರ್ಮಾನವು ಅಥವಾ ಆದೇಶವು ಅದನ್ನು ಯಾವ ಆಧಾರಗಳ ಮೇಲೆ ಮಾಡಲಾಯಿತೋ ಅಥವಾ ಕೊಡಲಾಯಿತೋ ಆ ಆಧಾರಗಳ ಸಂಪೂರ್ಣ ನಿರೂಪಣೆಯನ್ನು ಒಳಗೊಂಡಿರತಕ್ಕದ್ದು; ಮತ್ತು ತೀರ್ಮಾನ ಮಾಡುವ, ಆದೇಶ ಮಾಡುವ ಅಧಿಕಾರಿಯು ಅದನ್ನು ಬರೆದು ಅದಕ್ಕೆ ಸಹಿ ಹಾಕತಕ್ಕದ್ದು ಅಥವಾ ಅಂಥ ಅಧಿಕಾರಿಯು ಅದನ್ನು ಹೇಳಿ ಬರೆಸಿದಾಗ ಆ ಬಗ್ಗೆ ಅವನು ಒಂದು ಪ್ರಮಾಣಪತ್ರವನ್ನು ತಾನು ಸಹಿ ಹಾಕಿಕೊಡತಕ್ಕದ್ದು.

**34. ಸಂಕ್ಷಿಪ್ತ ವಿಚಾರಣೆ.–** ಈ ಅಧಿನಿಯಮದ ಮೂಲಕ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಬೇರೆ ಯಾವುದೇ ಕಾನೂನಿನ ಮೂಲಕ ಅಥವಾ ಅದರ ಮೇರೆಗೆ ಯಾವುದೇ ಪ್ರಶ್ನೆಯನ್ನು ನಿರ್ಧರಿಸುವುದರ ಸಲುವಾಗಿ ಸಂಕ್ಷಿಪ್ತ ವಿಚಾರಣೆಯನ್ನು ನಿಯಮಿಸಿರುವಾಗ, ತನಿಖೆ ನಡೆಸುವ ಅಧಿಕಾರಿಯು, ಅಂಥ ತನಿಖೆಯು ಮುಂದುವರಿಯುತ್ತಿರುವಾಗಲೇ ಕನ್ನಡದಲ್ಲಿ ಅಥವಾ ಇಂಗ್ಲೀಷಿನಲ್ಲಿ ಅಥವಾ ರಾಜ್ಯ ಸರ್ಕಾರವು ಘೋಷಿಸಿದಂಥ ತಾಲೂಕಿನ ಅಥವಾ ಗ್ರಾಮದ ಬೇರೆ ಭಾಷೆಯಲ್ಲಿ ಸಾಕ್ಷ್ಯದ ಸಾರಾಂಶವನ್ನು ಮತ್ತು ಹಿತಾಸಕ್ತಿಯುಳ್ಳ ಪಕ್ಷಕಾರರು ಹೇಳಿದ ಮುಖ್ಯ ದೃಢೋಕ್ತಿಗಳನ್ನೊಳಗೊಂಡ ವ್ಯವಹರಣೆಗಳ ಟಿಪ್ಪಣಿಯನ್ನು, ತೀರ್ಮಾನವನ್ನು ಮತ್ತು ಅದಕ್ಕಿರುವ ಕಾರಣಗಳನ್ನು ತನ್ನ ಸ್ವಹಸ್ತದಿಂದಲೇ ಬರೆದುಕೊಳ್ಳತಕ್ಕದ್ದು:

ಪರಂತು, ಈ ಅಧಿನಿಯಮದಲ್ಲಿ ಸಂಕ್ಷಿಪ್ತವೆಂದು ನಿರ್ದೇಶಿಸಲಾದ ತನಿಖೆಯನ್ನು ವಿಧ್ಯುಕ್ತವಾದ ವಿಚಾರಣೆಗೆ ಅನ್ವಯವಾಗುವಂಥ ಯಾವುದೇ ಅಥವಾ ಎಲ್ಲ ಉಪಬಂಧಗಳ ಮೇರೆಗೆ ಅದನ್ನು ನಡೆಸುವುದು ಸೂಕ್ತವೆಂದು ಆ ಅಧಿಕಾರಿಯು ಭಾವಿಸಿದರೆ, ಹಾಗೆ ಮಾಡುವುದು ಯಾವ ಕಾಲದಲ್ಲಾದರೂ ಕಾನೂನು ಸಮ್ಮತವಾಗಿರತಕ್ಕದ್ದು.

**35. ವಿಧ್ಯುಕ್ತ ಮತ್ತು ಸಂಕ್ಷಿಪ್ತ ವಿಚಾರಣೆಯನ್ನು ನ್ಯಾಯಿಕ ವ್ಯವಹರಣೆಗಳು ಎಂದು ಭಾವಿಸುವುದು.–** ಈ ಅಧಿನಿಯಮದ ಮೇರೆಗಿನ ವಿಧ್ಯುಕ್ತ ಅಥವಾ ಸಂಕ್ಷಿಪ್ತ ವಿಚಾರಣೆಯನ್ನು ಭಾರತ ದಂಡ ಸಂಹಿತೆಯ 193, 219 ಮತ್ತು 228ನೇ ಪ್ರಕರಣಗಳ ಅರ್ಥದಲ್ಲಿ "ನ್ಯಾಯಿಕ ವ್ಯವಹರಣೆಗಳು" ಎಂದು ಭಾವಿಸತಕ್ಕದ್ದು, ಮತ್ತು ವಿಧ್ಯುಕ್ತ ಅಥವಾ ಸಂಕ್ಷಿಪ್ತ ವಿಚಾರಣೆಯನ್ನು ನಡೆಸುವ ಯಾರೇ ಅಧಿಕಾರಿಯನ್ನು ಅಥವಾ ಯಾರೇಪ್ರಾಧಿಕಾರಿಯನ್ನು ಅಂಥ ತನಿಖೆಯ ಉದ್ದೇಶಗಳಿಗಾಗಿ ಸಿವಿಲ್ ನ್ಯಾಯಾಲಯ ಎಂದು ಭಾವಿಸತಕ್ಕದ್ದು.

**36. ವಿಚಾರಣೆಯನ್ನು ಮತ್ತು ತೀರ್ಮಾನವನ್ನು ಬಹಿರಂಗವಾಗಿ ಮತ್ತು ನೋಟೀಸು ಕೊಟ್ಟ ನಂತರ ಮಾಡತಕ್ಕದ್ದು.–** (1) ಪ್ರತಿಯೊಂದು ವಿಚಾರಣೆಯನ್ನು ಅದು ವಿಧ್ಯುಕ್ತವಾದುದಾಗಲಿ ಅಥವಾ ಸಂಕ್ಷಿಪ್ತವಾದುದಾಗಲಿ ಬಹಿರಂಗವಾಗಿ ನಡೆಸತಕ್ಕದ್ದು ಮತ್ತು ಪಕ್ಷಕಾರರಿಗೆ ಅಥವಾ ಅವರ ಮಾನ್ಯತೆ ಪಡೆದ ಏಜೆಂಟರಿಗೆ, ಅವರು ಹಾಜರಾಗುವುದಕ್ಕಾಗಿ, ಯುಕ್ತ ನೋಟೀಸು ಕೊಡತಕ್ಕದ್ದು. ವಿಚಾರಣೆಯ ತರುವಾಯ ಮಾಡಲಾದ ಪ್ರತಿಯೊಂದು ಆದೇಶವನ್ನು ಪಕ್ಷಕಾರರಿಗೆ ಅಥವಾ ಅವರ ಮಾನ್ಯತೆ ಪಡೆದ ಏಜೆಂಟರಿಗೆ ಕೊಟ್ಟ ನೋಟೀಸಿನಲ್ಲಿ ಸೂಚಿಸಲಾದ ದಿನ ಬಹಿರಂಗ ನ್ಯಾಯಾಲಯದಲ್ಲಿ ಸಹಿ ಮಾಡಿ ಓದಿ ಹೇಳತಕ್ಕದ್ದು:

ಪರಂತು, ಆದೇಶವನ್ನು ಓದಿ ಹೇಳುವಾಗ, ನ್ಯಾಯಾಲಯದಲ್ಲಿ ಪಕ್ಷಕಾರನು ಅಥವಾ ಅವನ ಮಾನ್ಯತೆ ಪಡೆದ ಏಜೆಂಟನು ಹಾಜರಿರದಿದ್ದಲ್ಲಿ ಆ ತೀರ್ಮಾನವನ್ನೊಳಗೊಂಡಿರುವ ಆದೇಶದ ಸಾರವನ್ನು ಅಂಥ ಪಕ್ಷಕಾರನಿಗೆ ಅಥವಾ ಅವನ ಮಾನ್ಯತೆ ಪಡೆದ ಏಜೆಂಟನಿಗೆ ಅಂಚೆಯ ಮೂಲಕ ತಿಳಿಸತಕ್ಕದ್ದು.

(2) ವಿಧ್ಯುಕ್ತ ವಿಚಾರಣೆಯಲ್ಲಾಗಲಿ ಅಥವಾ ಸಂಕ್ಷಿಪ್ತ ವಿಚಾರಣೆಯಲ್ಲಾಗಲಿ, ಯಾವುದೇ ಮೊಕದ್ದಮೆಯ ಅಥವಾ ವ್ಯವಹರಣೆಯ ಯಾರೇ ಪಕ್ಷಕಾರನು, ಅವನಿಗೆ ಯುಕ್ತ ನೋಟೀಸನ್ನು ಅಥವಾ ಸಮನನ್ನು ಜಾರಿ ಮಾಡಿದ ನಂತರವೂ ವಿಚಾರಣೆಗಾಗಿ ಗೊತ್ತುಪಡಿಸಿದ ದಿನಾಂಕದಂದು ಹಾಜರಾಗದಿದ್ದರೆ ಅವನ ಗೈರುಹಾಜರಿಯಲ್ಲಿ, ಸಂದರ್ಭಾನುಸಾರ, ಮೊಕದ್ದಮೆಯನ್ನು ಅಥವಾ ವ್ಯವಹರಣೆಯನ್ನು ವಿಚಾರಣೆ ಮಾಡಬಹುದು ಮತ್ತು ತೀರ್ಮಾನಿಸಬಹುದು ಅಥವಾ ಹಾಗೆ ಗೈರು ಹಾಜರಾದುದಕ್ಕಾಗಿ ಅದನ್ನು ವಜಾ ಮಾಡಬಹುದು.

(3) ಉಪಪ್ರಕರಣ(2)ರ ಮೇರೆಗೆ ಯಾವ ಪಕ್ಷಕಾರನ ವಿರುದ್ಧ ಆದೇಶ ಮಾಡಲಾಗಿದೆಯೋ ಅವನು, ಯಾವುದಾದರೂ ಸಾಕಷ್ಟು ಕಾರಣದಿಂದ ವಿಚಾರಣೆಯ ಕಾಲದಲ್ಲಿ ಹಾಜರಿರಲು ತನಗೆ ಆಗಲಿಲ್ಲವೆಂಬ ಆಧಾರದ ಮೇಲೆ ಆ ಆದೇಶವನ್ನು ತಳ್ಳಿ ಹಾಕಲು, ಅಂಥ ಆದೇಶದ ದಿನಾಂಕದಿಂದ ಅಥವಾ ನೋಟೀಸು ಅಥವಾ ಸಮನು ಸರಿಯಾದ ರೀತಿಯಲ್ಲಿ ಜಾರಿಯಾಗಿರದ ಸಂದರ್ಭದಲ್ಲಿ ಅಂಥ ಆದೇಶವು ಅವನಿಗೆ ತಿಳಿದು ಬಂದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಅರ್ಜಿ ಸಲ್ಲಿಸಬಹುದು ಮತ್ತು ಅಂಥ ಆದೇಶವನ್ನು ಮಾಡಿದ ದಿನಾಂಕದಂದು ಹಾಜರಿದ್ದ ಪ್ರತಿಪಕ್ಷಕಾರನಿಗೆ ರೆವಿನ್ಯೂ ಅಧಿಕಾರಿಯು ನೋಟೀಸು ಕೊಟ್ಟ ತರುವಾಯ ಮತ್ತು ಅವಶ್ಯವೆಂದು ತಾನು ಪರ್ಯಾಲೋಚಿಸುವಂಥ ತನಿಖೆಯನ್ನು ನಡೆಸಿದ ನಂತರ ಹಾಗೆ ಮಾಡಿದ ಆದೇಶವನ್ನು ತಳ್ಳಿ ಹಾಕಬಹುದು ಮತ್ತು ಮೊಕದ್ದಮೆಯನ್ನು ಅದರ ಗುಣಾವಗುಣಗಳ ಆಧಾರದ ಮೇಲೆ ತೀರ್ಮಾನಿಸಬಹುದು.

**37. ವಿಧ್ಯುಕ್ತ ಅಥವಾ ಕ್ಷಿಪ್ರ ವಿಚಾರಣೆಗಳು.–** ಈ ಅಧಿನಿಯಮವು ವಿಧ್ಯುಕ್ತವಾಗಿ ಅಥವಾ ಕ್ಷಿಪ್ರವಾಗಿ ಆಗಬೇಕೆಂದು ಅಗತ್ಯಪಡಿಸಿರುವ ಅಥವಾ ಯಾರೇ ರೆವಿನ್ಯೂ ಅಧಿಕಾರಿಯು ತನ್ನ ಕಾನೂನುಬದ್ಧ ಕರ್ತವ್ಯಗಳ ನಿರ್ವಹಣೆಯ ಯಾವುದೇ ಕಾಲದಲ್ಲಿ ಅವಶ್ಯವೆಂದು ಭಾವಿಸಬಹುದಾದ ವಿಚಾರಣೆಯನ್ನು, ಅದಕ್ಕೆ ಅನ್ವಯವಾಗುವ ಹಾಗೂ ರಾಜ್ಯ ಸರ್ಕಾರವು ನಿಯಮಿಸಬಹುದಾದ ಸಾಮಾನ್ಯ ಅಥವಾ ವಿಶೇಷ ನಿಯಮಗಳಿಗನುಸಾರವಾಗಿ ನಡೆಸತಕ್ಕದ್ದು ಮತ್ತು ಅಂಥ ನಿಯಮಗಳಿಗೊಳಪಟ್ಟು, ಎಲ್ಲ ಅವಶ್ಯಕ ಸಂಗತಿಗಳನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ಮತ್ತು ಸಾರ್ವಜನಿಕ ಹಿತ ಸಾಧನೆಗಾಗಿ ಅತ್ಯುತ್ತಮವೆಂದು ಪರಿಗಣಿಸಬಹುದಾದಂಥ ರೀತಿಯಲ್ಲಿ ಆ ಅಧಿಕಾರಿಯು ತನ್ನ ವಿವೇಚನಾನುಸಾರ ತನಿಖೆ ನಡೆಸತಕ್ಕದ್ದು.

**38. ಅಳತೆ ಮೊದಲಾದ ಉದ್ದೇಶಕ್ಕಾಗಿ ಯಾವುದೇ ಭೂಮಿ ಅಥವಾ ಆವರಣದಲ್ಲಿ ಪ್ರವೇಶಿಸಲು ಅಧಿಕಾರ.–** ಅವಶ್ಯಕವಿದ್ದಾಗಲೆಲ್ಲ ಅಳತೆ ಮಾಡುವ, ಎಲ್ಲೆಗಳನ್ನು ಗೊತ್ತುಪಡಿಸುವ ಅಥವಾ ಪರಿಶೀಲಿಸುವ, ಮಣ್ಣಿನ ವರ್ಗೀಕರಣ ಮಾಡುವ ಅಥವಾ ಕಂದಾಯ ವ್ಯವಸ್ಥೆ ಮಾಡುವ ಉದ್ದೇಶಗಳಿಗಾಗಿ ಅಥವಾ ಈ ಅಧಿನಿಯಮದ ಅಥವಾ ಭೂ ಕಂದಾಯಕ್ಕೆ ಸಂಬಂಧಿಸಿತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಉಪಬಂಧಗಳ ಮೇರೆಗೆ, ತನ್ನ

ಹುದ್ದೆಯ ಕಾನೂನು ಸಮ್ಮತ ಅಧಿಕಾರಗಳ ಚಲಾವಣೆಗೆ ಸಂಬಂಧಿಸಿದ ಯಾವುದೇ ಇತರ ಉದ್ದೇಶಕ್ಕಾಗಿ ಯಾರೇ ರೆವಿನ್ಯೂ ಅಧಿಕಾರಿಯು ಮತ್ತು ತನ್ನ ಮೇಲ್ವಿಚಾರಣೆ ಹಾಗೂ ನಿಯಂತ್ರಣದಲ್ಲಿರುವ ತನ್ನ ನೌಕರರು ಮತ್ತು ಕೆಲಸಗಾರರು, ರಾಜ್ಯ ಸರ್ಕಾರಕ್ಕೆ ಸೇರಿರುವ ಅಥವಾ ಯಾರೇ ವ್ಯಕ್ತಿಗೆ ಸೇರಿರುವ ಯಾವುದೇ ಭೂಮಿಗೆ ಅಥವಾ ಆವರಣಕ್ಕೆ ಪ್ರವೇಶಿಸಬೇಕೆಂದು ನಿರ್ದೇಶಿತರಾದಾಗ, ಅವರು ರಾಜ್ಯ ಸರ್ಕಾರಕ್ಕೆ ಸೇರಿರುವ ಅಥವಾ ಯಾರೇ ವ್ಯಕ್ತಿಗೆ ಸೇರಿರುವ ಯಾವುದೇ ಭೂಮಿಯನ್ನು ಅಥವಾ ಆವರಣವನ್ನು ಪ್ರವೇಶಿಸಬಹುದು:

ಪರಂತು, ವಾಸದ ಮನೆಯಾಗಿ ಉಪಯೋಗಿಸುತ್ತಿರುವ ಯಾವುದೇ ಕಟ್ಟಡವನ್ನು ಅಥವಾ ವಾಸದ ಮನೆಗೆ ಹೊಂದಿಕೊಂಡಿರುವ ಆವೃತ ಅಂಗಳ ಅಥವಾ ತೋಟವನ್ನು ಅದರ ಅಧಿಭೋಗದಾರನ ಅನುಮತಿ ಪಡೆದ ಹೊರತು, ಅಂಥ ಅಧಿಭೋಗದಾರನಿಗೆ ಏಳು ದಿನಗಳಿಗೆ ಕಡಿಮೆಯಲ್ಲದ ಅವಧಿಗೆ ಮುಂಚಿತವಾಗಿ ನೋಟೀಸು ಕೊಟ್ಟಲ್ಲದೆ ಯಾರೇ ವ್ಯಕ್ತಿಯು ಪ್ರವೇಶಿಸತಕ್ಕದ್ದಲ್ಲ ಮತ್ತು ಹಾಗೆ ಪ್ರವೇಶಿಸುವಾಗ ಅಧಿಭೋಗದಾರನ ಸಾಮಾಜಿಕ ಹಾಗೂ ಮತೀಯ ಭಾವನೆಗಳಿಗೆ ಸೂಕ್ತ ಗೌರವ ಕೊಡತಕ್ಕದ್ದು.

**39. ಅಕ್ರಮವಾಗಿ ಭೂಮಿಯನ್ನು ಸ್ವಾಧೀನದಲ್ಲಿ ಇಟ್ಟುಕೊಂಡಿರುವ ಯಾರೇ ವ್ಯಕ್ತಿಯನ್ನು ಹೊರದೂಡುವ ರೀತಿ.–** ಡೆಪ್ಯುಟಿ ಕಮಿಷನರನು, ಅಕ್ರಮವಾಗಿ ಭೂಮಿಯನ್ನು ಸ್ವಾಧೀನದಲ್ಲಿ ಇಟ್ಟುಕೊಂಡಿರುವ ಯಾರೇ ವ್ಯಕ್ತಿಯನ್ನು ಹೊರದೂಡಬಹುದು ಅಥವಾ ಹೊರದೂಡತಕ್ಕದ್ದು ಎಂದು ಈ ಅಧಿನಿಯಮದ ಮೂಲಕ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೂಲಕ ಉಪಬಂಧಿಸಿರುವಾಗ ಅಥವಾ ಭೂಮಿಯ ಸ್ವಾಧೀನವನ್ನು ವಹಿಸಿಕೊಡಬೇಕೆಂದು ಯಾರೇ ವ್ಯಕ್ತಿಗೆ ಈ ಅಧಿನಿಯಮದ ಮೇರೆಗೆ ಆದೇಶ ಮಾಡಿದ್ದರೆ, ಕೆಳಕಂಡ ರೀತಿಯಲ್ಲಿ ಸಂದರ್ಭಾನುಸಾರ, ಹೊರದೂಡತಕ್ಕದ್ದು ಅಥವಾ ಅಂಥ ಆದೇಶವನ್ನು ಜಾರಿಗೊಳಿಸತಕ್ಕದ್ದು, ಎಂದರೆ–

(i) ನೋಟೀಸು ತಲುಪಿದ ತರುವಾಯ ಯುಕ್ತವೆಂದು ಕಂಡುಬರಬಹುದಾದಂಥ ಕಾಲದೊಳಗಾಗಿ ಭೂಮಿಯನ್ನು ತೆರವು ಮಾಡುವಂತೆ ಅಗತ್ಯಪಡಿಸುವ ನೋಟೀಸನ್ನು ಭೂಮಿಯ ಸ್ವಾಧೀನವನ್ನು ಹೊಂದಿರುವ ವ್ಯಕ್ತಿಗೆ ಅಥವಾ ವ್ಯಕ್ತಿಗಳಿಗೆ ಜಾರಿ ಮಾಡುವುದರ ಮೂಲಕ;

(ii) ಅಂಥ ನೋಟೀಸನ್ನು ಪಾಲಿಸದಿದ್ದರೆ, ಅದನ್ನು ತೆರವು ಮಾಡಲು ನಿರಾಕರಿಸಬಹುದಾದ ವ್ಯಕ್ತಿಯನ್ನು ಹೊರಗೆ ಹಾಕುವ ಮೂಲಕ ಅಥವಾ ಹಾಗೆ ಹೊರಗೆ ಹಾಕಲು ಒಬ್ಬ ಅಧೀನ ಅಧಿಕಾರಿಯನ್ನು ಪ್ರತಿನಿಯೋಜಿಸುವ ಮೂಲಕ; ಮತ್ತು

(iii) ಅಂಥ ವ್ಯಕ್ತಿಯನ್ನು ಹೊರಗೆ ಹಾಕುವ ಅಧಿಕಾರಿಗೆ ಯಾರೇ ವ್ಯಕ್ತಿಯು ಪ್ರತಿಭಟಿಸಿದರೆ ಅಥವಾ ಅಡ್ಡಿ ಮಾಡಿದರೆ, ಸಂದರ್ಭಾನುಸಾರ, ಡೆಪ್ಯುಟಿ ಕಮಿಷನರನು ಅಥವಾ ರೆವಿನ್ಯೂ ಅಧಿಕಾರಿಯು ಆ ಮೊಕದ್ದಮೆಯ ಸಂಗತಿಗಳ ಬಗ್ಗೆ ಒಂದು ಸಂಕ್ಷಿಪ್ತ ವಿಚಾರಣೆಯನ್ನು ನಡೆಸತಕ್ಕದ್ದು; ಮತ್ತು ಅಂಥ ಪ್ರತಿಭಟನೆಗೆ ಅಥವಾ ಅಡ್ಡಿಗೆ ಯಾವುದೇ ನ್ಯಾಯ ಸಮ್ಮತ ಕಾರಣವಿಲ್ಲವೆಂದು ಮತ್ತು ಅಂಥ ಪ್ರತಿಭಟನೆ ಹಾಗೂ ಅಡ್ಡಿಯು ಇನ್ನು ಮುಂದುವರಿಯುತ್ತಿದೆ ಎಂದು ಅವನಿಗೆ ಮನದಟ್ಟಾದರೆ, ಹಾಗೆ ಪ್ರತಿಭಟಿಸಿದ್ದಕಾಗಿ ಅಥವಾ ಅಡ್ಡಿಪಡಿಸಿದ್ದಕ್ಕಾಗಿ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ದಂಡನೆಗೆ ಸಂಬಂಧಿಸಿದ ಯಾವ ವ್ಯವಹರಣೆಗೆ ಆ ವ್ಯಕ್ತಿಯು ಗುರಿಯಾಗಬಹುದೋ ಆ ಯಾವುದೇ ವ್ಯವಹರಣೆಗೆ ಬಾಧಕವಾಗದಂತೆ, ಆ ಆದೇಶವನ್ನು ಪಾಲಿಸುವುದಕ್ಕೆ ಸಮಂಜಸವಾಗಿ ಅವಶ್ಯವಿರಬಹುದಾದಂಥ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಅಥವಾ ತೆಗೆದುಕೊಳ್ಳುವಂತೆ ಮಾಡಬೇಕೆಂದು ಮತ್ತು ಅಂಥ ಬಲವನ್ನು ಬಳಸಬಹುದೆಂದು ಅಥವಾ ಬಳಸುವಂತೆ ಮಾಡಬಹುದೆಂದು, ಆ ಅಧಿಕಾರಿಯು ಅಭಿಪ್ರಾಯಪಟ್ಟರೆ ಹಾಗೆ ಮಾಡಬಹುದು.

## ಅಧ್ಯಾಯ–IV

## [1][ಕರ್ನಾಟಕ ರೆವಿನ್ಯೂ ಅಪೀಲು ನ್ಯಾಯಾಧಿಕರಣದ][1] ರಚನೆ ಮತ್ತು ಅಧಿಕಾರಗಳು

1. 1973ರ ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶದ ಮೂಲಕ 1-11-1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

**40. ರೆವಿನ್ಯೂ ಅಪೀಲು ನ್ಯಾಯಾಧಿಕರಣದ ರಚನೆ.–** (1) ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ, [1][ಕರ್ನಾಟಕ ರೆವಿನ್ಯೂ ಅಪೀಲು ನ್ಯಾಯಾಧಿಕರಣ][1] ಎಂದು ಕರೆಯಲಾಗುವ ಅಪೀಲು ನ್ಯಾಯಾಧಿಕರಣವನ್ನು [1][ಕರ್ನಾಟಕ][1] ರಾಜ್ಯಕ್ಕಾಗಿ ರಚಿಸತಕ್ಕದ್ದು.

1. 1973ರ ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶದ ಮೂಲಕ 1-11-1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

(2) ರಾಜ್ಯ ಸರ್ಕಾರವು ನೇಮಕ ಮಾಡಿದ ಕೆಳಕಂಡ ಆರು ಸದಸ್ಯರನ್ನು ನ್ಯಾಯಾಧಿಕರಣವು ಒಳಗೊಂಡಿರತಕ್ಕದ್ದು, ಎಂದರೆ:-

(ಎ) [1][ರೀಜನಲ್ ಕಮೀಷನರ್][1] ದರ್ಜೆಯ ಅಧಿಕಾರಿ – ಅಧ್ಯಕ್ಷ ಮತ್ತು

1. 2007ರ ಅಧಿನಿಯಮ 17ರ ಮೂಲಕ 5.1.2007 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಬಿ) ಐವರು ಸದಸ್ಯರು, ಅವರಲ್ಲಿ, ಮೂವರು ಜಿಲ್ಲಾ ನ್ಯಾಯಾಧೀಶರಾಗಿರಬೇಕು ಮತ್ತು ಉಳಿದವರು ರೆವಿನ್ಯೂ ವಿಷಯಗಳಿಗೆ ಸಂಬಂಧಪಟ್ಟ ಆಡಳಿತದ ಅನುಭವವುಳ್ಳ ಡೆಪ್ಯುಟಿ ಕಮಿಷನರರ ದರ್ಜೆಗೆ ಕಡಿಮೆ ದರ್ಜೆಯವರಲ್ಲದ ಅಧಿಕಾರಿಗಳು.

(3) ನ್ಯಾಯಾಧಿಕರಣವು ಮಾಡಬೇಕಾದ ಕೆಲಸದಲ್ಲಿ ಹೆಚ್ಚಳವಾಗಿದೆಯೆಂಬ ಕಾರಣದಿಂದ ಅಥವಾ ಅದರಲ್ಲಿ ಕೆಲಸವು ಬಾಕಿ ಉಳಿದಿದೆಯೆಂಬ ಕಾರಣದಿಂದ ಅಥವಾ ಬೇರೆ ಕಾರಣದಿಂದ, ನ್ಯಾಯಾಧಿಕರಣದ ಸದಸ್ಯರ ಸಂಖ್ಯೆಯನ್ನು ತತ್ಕಾಲಕ್ಕೆ ಹೆಚ್ಚಿಸತಕ್ಕದ್ದೆಂದು ರಾಜ್ಯ ಸರ್ಕಾರಕ್ಕೆ ಕಂಡು ಬಂದರೆ, ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ, (2)ನೇ ಉಪಪ್ರಕರಣದ (ಬಿ) ಖಂಡದಲ್ಲಿ ನಿರ್ದಿಷ್ಟಪಡಿಸಿದ ಅರ್ಹತೆಗಳನ್ನುಳ್ಳ ವ್ಯಕ್ತಿಗಳನ್ನು, ರಾಜ್ಯ ಸರ್ಕಾರವು ನಿರ್ದಿಷ್ಟಪಡಿಸಬಹುದಾದಂಥ ಅವಧಿಯವರೆಗೆ ನ್ಯಾಯಾಧಿಕರಣದ ಹೆಚ್ಚಿನ ಸದಸ್ಯರನ್ನಾಗಿ ನೇಮಕ ಮಾಡಬಹುದು.

(4) [1][ಕರ್ನಾಟಕ][1] ರೆವಿನ್ಯೂ ಅಪೀಲು ನ್ಯಾಯಾಧಿಕರಣ ಅಧಿನಿಯಮ, 1957ರ ([1][ಕರ್ನಾಟಕ][1] ಅಧಿನಿಯಮ 1957ರ 34) ಮೇರೆಗೆ ರಚಿತವಾದ ಮತ್ತು ಈ ಅಧಿನಿಯಮವು ಜಾರಿಯಲ್ಲಿ ಬರುವುದಕ್ಕೆ ನಿಕಟ ಪೂರ್ವದಲ್ಲಿ, ಮೈಸೂರು ರೆವಿನ್ಯೂ ಅಪೀಲು ನ್ಯಾಯಾಧಿರಣವಾಗಿ ಕಾರ್ಯ ನಿರ್ವಹಿಸುತ್ತಿರುವ ಮೈಸೂರು ರೆವಿನ್ಯೂ ಅಪೀಲು ನ್ಯಾಯಾಧಿಕರಣವು, ಈ ಪ್ರಕರಣದ ಉಪಬಂಧಗಳಿಗನುಸಾರವಾಗಿ ನ್ಯಾಯಾಧಿಕರಣವು ಯುಕ್ತವಾಗಿ ರಚಿತವಾಗುವವರೆಗೆ ಈ ಅಧಿನಿಯಮದ ಉದ್ದೇಶಗಳಿಗಾಗಿ ನ್ಯಾಯಾಧಿಕರಣವಾಗಿ ಕಾರ್ಯನಿರ್ವಹಿಸುವುದನ್ನು ಮುಂದುವರಿಸತಕ್ಕದ್ದು.

1. 1973ರ ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶದ ಮೂಲಕ 1-11-1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

**41. ನ್ಯಾಯಾಧಿಕರಣದಿಂದ ವ್ಯವಹಾರ ನಿರ್ವಹಣೆ.-** (1) ಅಪೀಲಿಗೆ ಪುನರೀಕ್ಷಣೆಗೆ ಮತ್ತು ಇತರ ವ್ಯವಹರಣೆಗಳಿಗೆ ಸಂಬಂಧಪಟ್ಟ ಎಲ್ಲ ವಿಷಯಗಳಲ್ಲಿ, ನ್ಯಾಯಾಧಿಕರಣದ ಅಧಿಕಾರಗಳನ್ನು ಇಬ್ಬರು ಸದ್ಯರನ್ನುಳ್ಳ ನ್ಯಾಯಪೀಠವು ಚಲಾಯಿಸತಕ್ಕದ್ದು:

ಪರಂತು, ಯಾವುದೇ ಅಪೀಲಿನ, ಪುನರೀಕ್ಷಣೆಯ, ಉಲ್ಲೇಖದ ಅಥವಾ ಇತರ ವ್ಯವಹರಣೆಗಳ ವಿಚಾರಣೆಗಾಗಿ, ಮೂರು ಸದಸ್ಯರಿಗೆ ಕಡಿಮೆಯಲ್ಲದಷ್ಟು ಸದಸ್ಯರಿಂದ ಕೂಡಿದ ಪೂರ್ಣ ನ್ಯಾಯಪೀಠವನ್ನು ರಚಿಸುವುದು ವಿಹಿತವೆಂದು ಇಬ್ಬರು ಸದಸ್ಯರನ್ನುಳ್ಳ ನ್ಯಾಯಪೀಠವು ಭಾವಿಸಿದರೆ, ನ್ಯಾಯಾಧಿಕರಣದ ಅಧ್ಯಕ್ಷರು, ಅಂಥ ನ್ಯಾಯಪೀಠವನ್ನು ರಚಿಸತಕ್ಕದ್ದು:

ಮತ್ತು ಪರಂತು, ಪ್ರತಿಯೊಂದು ನ್ಯಾಯಪೀಠದಲ್ಲಿ ಒಬ್ಬರು ಜಿಲ್ಲಾ ನ್ಯಾಯಾಧೀಶರು ಮತ್ತು ರೆವಿನ್ಯೂ ವಿಷಯಕ್ಕೆ ಸಂಬಂಧಪಟ್ಟ ಆಡಳಿತದ ಅನುಭವವುಳ್ಳ ಒಬ್ಬರು ಅಧಿಕಾರಿಯು ಇರತಕ್ಕದ್ದು.

(2) ಉಪಪ್ರಕರಣ (1)ರಲ್ಲಿ ಏನೇ ಇದ್ದರೂ ನ್ಯಾಯಾಧಿಕರಣದ ಸದಸ್ಯನು ಈ ಮುಂದೆ ಹೇಳಿರುವ ವಿಷಯಗಳ ಬಗ್ಗೆ ನ್ಯಾಯಾಧಿಕರಣದ ಅಧಿಕಾರಗಳನ್ನು ಚಲಾಯಿಸಬಹುದು, ಎಂದರೆ:-

(i) ಅಪೀಲಿನ ಅಥವಾ ಪುನರೀಕ್ಷಣೆ ಅರ್ಜಿಯ ಅಂಗೀಕಾರ;

(ii) ಕಾನೂನು ನಿರ್ದಿಷ್ಟಪಡಿಸಿದ ಅವಧಿಯು ಕೊನೆಗೊಂಡ ತರುವಾಯ ಸಲ್ಲಿಸಿದ ಅಪೀಲಿನ ಅಥವಾ ಪುನರೀಕ್ಷಣಾ ಅರ್ಜಿಯ ಅಂಗೀಕಾರ;

(iii) ಅಪೀಲು, ಪುನರೀಕ್ಷಣೆ, ಉಲ್ಲೇಖ ಅಥವಾ ಇತರ ವ್ಯವಹರಣೆ ಇತ್ಯರ್ಥದಲ್ಲಿರುವಾಗ ತಡೆಯಾಜ್ಞೆಗಳು;

(iv) ಅಪೀಲುಗಳಲ್ಲಿ, ಪುನರೀಕ್ಷಣೆಗಳಲ್ಲಿ, ಉಲ್ಲೇಖಗಳಲ್ಲಿ ಅಥವಾ ಇತರ ವ್ಯವಹರಣೆಗಳಲ್ಲಿ ವಾದಕಾಲೀನ ಸ್ವರೂಪದ ಯಾವುದೇ ವಿಷಯ:

ಪರಂತು, ಅಪೀಲನ್ನು ಅಥವಾ ಅರ್ಜಿಯನ್ನು ತಿರಸ್ಕರಿಸಿದ ಆದೇಶದಿಂದ ಬಾಧಿತನಾದ ಯಾರೇವ್ಯಕ್ತಿಯು ಅಂಥ ಆದೇಶದ ಪುನರೀಕ್ಷಣೆಯ ಸಲುವಾಗಿ ಅರ್ಜಿಯನ್ನು ಸಲ್ಲಿಸಬಹುದು, ಆ ವಿಷಯವನ್ನು ಇಬ್ಬರು ಸದಸ್ಯರನ್ನುಳ್ಳ ನ್ಯಾಯಪೀಠವು ವಿಚಾರಣೆ ಮಾಡಿ ಇತ್ಯರ್ಥ ಮಾಡತಕ್ಕದ್ದು.

(3) ಇಬ್ಬರು ಅಥವಾ ಹೆಚ್ಚು ಸದಸ್ಯರನ್ನುಳ್ಳ ನ್ಯಾಯಪೀಠವು ಅಪೀಲನ್ನು, ಪುನರೀಕ್ಷಣೆಯನ್ನು, ಉಲ್ಲೇಖವನ್ನು ಅಥವಾ ಅರ್ಜಿಯನ್ನು ವಿಚಾರಣೆ ಮಾಡಿದಾಗ, ಆ ಸದಸ್ಯರ ಅಭಿಪ್ರಾಯಗಳೇನಾದರೂ ಇದ್ದರೆ ಅಥವಾ ಅಂಥ ಸದಸ್ಯರಲ್ಲಿ ಒಮ್ಮತ ಇದ್ದರೆ ಅದರಂತೆ, ಅಪೀಲನ್ನು, ಪುನರೀಕ್ಷಣೆಯನ್ನು, ಉಲ್ಲೇಖವನ್ನು ಅಥವಾ ಅರ್ಜಿಯನ್ನು ತೀರ್ಮಾನಿಸತಕ್ಕದ್ದು:

ಪರಂತು, ಅಪೀಲನ್ನು, ಮನರೀಕ್ಷಣೆಯನ್ನು, ಉಲ್ಲೇಖವನ್ನು ಅಥವಾ ಅರ್ಜಿಯನ್ನು ವಿಚಾರಣೆ ಮಾಡುವ ನ್ಯಾಯಪೀಠದಲ್ಲಿ ಇಬ್ಬರೇ ಸದ್ಯರಿದ್ದರೆ ಮತ್ತು ಮೊಕದ್ದಮೆಯ ತೀರ್ಮಾನಕ್ಕೆ ಮುಖ್ಯವಾದ ಯಾವುವೇ ಅಂಶದ ಬಗ್ಗೆ ಆ ನ್ಯಾಯಪೀಠದ ಸದಸ್ಯರು ಭಿನ್ನಾಭಿಪ್ರಾಯ ವ್ಯಕ್ತಪಡಿಸಿದರೆ, ಅವರು ಅಂಥ ಅಂಶವನ್ನು ನಿರೂಪಿಸತಕ್ಕದ್ದು ಮತ್ತು ನ್ಯಾಯಾಧಿಕರಣದ ಇನ್ನೊಬ್ಬ ಸದಸ್ಯನು ಮೊಕದ್ದಮೆಯ ಅಂಥ ಅಂಶವನ್ನು ಮಾತ್ರ ವಿಚಾರಣೆ ಮಾಡತಕ್ಕದ್ದು ಮತ್ತು ಮೊದಲು ವಿಚಾರಣೆ ಮಾಡಿದ ಸದಸ್ಯರೂ ಸೇರಿ ಸದಸ್ಯರ ಬಹುಮತ ಅಭಿಪ್ರಾಯಕ್ಕೆ ಅನುಸಾರವಾಗಿ ಅಂಥ ಅಂಶವನ್ನು ತೀರ್ಮಾನಿಸತಕ್ಕದ್ದು.

**42. ನ್ಯಾಯಾಧಿಕರಣದಉಪವೇಶನಗಳು.–** (1) ನ್ಯಾಯಾಧಿಕರಣದ ಕೇಂದ್ರಕಾರ್ಯ ಸ್ಥಳವು ಬೆಂಗಳೂರಿನಲ್ಲಿ ಇರತಕ್ಕದ್ದು.

(2) ಉಪಪ್ರಕರಣ (1)ರಲ್ಲಿ ಏನೇ ಇದ್ದರೂ ನ್ಯಾಯಾಧಿಕರಣದ ನ್ಯಾಯಪೀಠಗಳು ಕಾಲಕಾಲಕ್ಕೆ ಮತ್ತು ನಿಯಮಿಸಬಹುದಾದಂಥ ಷರತ್ತುಗಳಿಗೊಳಪಟ್ಟು, ನ್ಯಾಯಾಧಿಕರಣದ ಅಧ್ಯಕ್ಷರು ನಿರ್ದಿಷ್ಟಪಡಿಸಬಹುದಾದಂಥ ಸ್ಥಳಗಳಲ್ಲಿ ತಮ್ಮ ಕಾರ್ಯನಿರ್ವಹಣೆಗಾಗಿ ಉಪವೇಶನಗಳನ್ನು ನಡೆಸಬಹುದು.

**43. ನ್ಯಾಯಾಧೀಕರಣದ ಅಧಿಕಾರಗಳು.–** (1) ಅಪೀಲು, ನಿರ್ದೇಶ ಕೋರಿಕೆ ಅಥವಾ ಮನರೀಕ್ಷಣೆ ಇವುಗಳ ಬಗ್ಗೆ ಈ ಅಧಿನಿಯಮದ ಮೂಲಕ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನ ಮೂಲಕ ಅಥವಾ ಅದರ ಮೇರೆಗೆ ನ್ಯಾಯಾಧಿಕರಣದಲ್ಲಿ ನಿಹಿತವಾಗಿರುವಂಥ ಅಧಿಕಾರಗಳನ್ನು ಅದು ಚಲಾಯಿಸತಕ್ಕದ್ದು.

(2) ಈ ಅಧಿನಿಯಮವು ಪ್ರಾರಂಭವಾಗುವುದಕ್ಕೆ ಮುಂಚೆ [1][ಕರ್ನಾಟಕ][1] ರೆವಿನ್ಯೂ ಅಪೀಲು ನ್ಯಾಯಾಧಿಕರಣ ([1][ಕರ್ನಾಟಕ][1] ಅಧಿನಿಯಮ 1957ರ 24) ಅಧಿನಿಯಮ, 1957ರ ಮೇರೆಗೆ ರಚಿತವಾಗಿದ್ದ ನ್ಯಾಯಾಧಿಕರಣದಲ್ಲಿ ಯಾವುದೇ ಕಾನೂನಿನ ಮೇರೆಗೆ ನಿಹಿತವಾಗಿದ್ದ ಅಥವಾ ಅದು ಚಲಾಯಿಸಬಹುದಾಗಿದ್ದ ಎಲ್ಲ ಅಪೀಲು ವಿಚಾರಣೆಯ ಮತ್ತು ಮನರೀಕ್ಷಣೆಯ ಅಧಿಕಾರಗಳು 40ನೇ ಪ್ರಕರಣದ ಮೇರೆಗೆ ರಚಿತವಾದ ನ್ಯಾಯಾಧಿಕರಣಕ್ಕೆ ವರ್ಗಾವಣೆಯಾಗತಕ್ಕದ್ದು ಮತ್ತು ಅದು ಅವುಗಳನ್ನು ಚಲಾಯಿಸುವಂತಿರತಕ್ಕದ್ದು ಮತ್ತು ಮೈಸೂರು ರೆವಿನ್ಯೂ ಮಂಡಲಿಯ ಅಥವಾ ಮೈಸೂರು ರೆವಿನ್ಯೂ ಅಪೀಲು ನ್ಯಾಯಾಧಿಕರಣದ ಅಥವಾ [1][ಕರ್ನಾಟಕ ರೆವಿನ್ಯೂ ಅಪೀಲು ನ್ಯಾಯಾಧಿಕರಣದ][1] ಬಗ್ಗೆ ಯಾವುದೇ ಕಾನೂನಿನಲ್ಲಿ ಮಾಡಿದ ಯಾವುದೇ ಉಲ್ಲೇಖವು 40ನೇ ಪ್ರಕರಣದ ಮೇರೆಗೆ ರಚಿಸಲಾದ ನ್ಯಾಯಾಧಿಕರಣದ ಬಗ್ಗೆ ಮಾಡಿದ ಉಲ್ಲೇಖವೆಂದು ಅರ್ಥ ಮಾಡತಕ್ಕದ್ದು.

1. 1973ರ ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶದ ಮೂಲಕ 1–11–1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

(3) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೂಲಕ ಅಥವಾ ಅದರ ಮೇರೆಗೆ ರಾಜ್ಯ ಸರ್ಕಾರಕ್ಕೆ ಅಥವಾ ಇತರ ಪ್ರಾಧಿಕಾರಕ್ಕೆ ಅಥವಾ ಅಧಿಕಾರಿಗೆ ವಹಿಸಿಕೊಡಲಾದ ಯಾವುದೇ ಅಪೀಲು ವಿಚಾರಣೆಯ ಅಥವಾ ಮನರೀಕ್ಷಣಾ ಅಧಿಕಾರವನ್ನು ಅಥವಾ ಕಾರ್ಯವನ್ನು ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ ನ್ಯಾಯಾಧಿಕರಣಕ್ಕೆ ಪ್ರದಾನ ಮಾಡಬಹುದು ಅಥವಾ ವಹಿಸಿಕೊಡಬಹುದು ಮತ್ತು ಹಾಗೆ ಪ್ರದಾನ ಮಾಡಿದ ಅಧಿಕಾರಗಳನ್ನು ಚಲಾಯಿಸಲು ಅಥವಾ ವಹಿಸಿಕೊಟ್ಟ ಕಾರ್ಯಗಳನ್ನು ನಿರ್ವಹಿಸಲು ನ್ಯಾಯಾಧಿಕರಣವು ಸಕ್ಷಮವಾಗಿರತಕ್ಕದ್ದು.

**44. ಪುನರವಲೋಕನಾ ಅಧಿಕಾರ.–** (1) ನ್ಯಾಯಾಧಿಕರಣವು ತಾನೇ ಮಾಡಿದ ಯಾವುದೇ ಆದೇಶವನ್ನು ತಾನಾಗಿಯೇ ಅಥವಾ ಬಾಧಿತನಾದ ಯಾರೇ ಪಕ್ಷಕಾರನು ಅರ್ಜಿ ಸಲ್ಲಿಸಿದಾಗ ಮೇಲೆ ಪುನರವಲೋಕಿಸಬಹುದು ಮತ್ತು ಅದಕ್ಕೆ ಸಂಬಂಧಿಸಿದಂತೆ ಅವಶ್ಯವೆಂದು ತಾನು ಭಾವಿಸುವಂಥ ಆದೇಶಗಳನ್ನು ಮಾಡಬಹುದು:

ಪರಂತು, ಆ ನ್ಯಾಯಾಧಿಕರಣವು ಆದೇಶ ಮಾಡಿದ ಕಾಲಕ್ಕೆ, ಆ ಬಗ್ಗೆ ಸೂಕ್ತ ಜಾಗರೂಕತೆ ವಹಿಸಿದ್ದರೂ, ಅರ್ಜಿದಾರನಿಗೆ ಗೊತ್ತಿರದಿದ್ದ ಅಥವಾ ಆಗ ಅವನಿಂದ ಹಾಜರುಪಡಿಸಲಾಗದಿದ್ದಂಥ ಹೊಸದಾದ ಮತ್ತು ಮಹತ್ವದ ವಿಷಯವು ಅಥವಾ ಸಾಕ್ಷ್ಯವು ದೊರಕಿದೆಯೆಂದೂ ಅಥವಾ ದಾಖಲೆಯನ್ನು ನೋಡಿದ ಕೂಡಲೇ ಕಂಡು ಬರುವ ಯಾವುದೋ ಪ್ರಮಾದ ಅಥವಾ ತಪ್ಪು ಇದರಲ್ಲಿ ಇದೆಯೆಂದೂ ನ್ಯಾಯಾಧಿಕರಣಕ್ಕೆ ಮನದಟ್ಟಾದ ಹೊರತು' ಅಥವಾ ಬೇರೆ ಯಾವುದೇ ಸಾಕಷ್ಟು ಕಾರಣಕ್ಕಾಗಿ, ಅಂಥ ಯಾರೇಪಕ್ಷಕಾರನು ಸಲ್ಲಿಸಿದ ಅರ್ಜಿಯನ್ನು ನ್ಯಾಯಾಧಿಕರಣವು ಸ್ವೀಕರಿಸತಕ್ಕದ್ದಲ್ಲ:

ಮತ್ತು ಪರಂತು,–

(i) ಬಾಧಿತ ಪಕ್ಷಕಾರರಿಗೆ ನೋಟೀಸು ಕೊಟ್ಟಿದ್ದ ಹೊರತು, ಯಾವುದೇ ಆದೇಶವನ್ನು ವ್ಯತ್ಯಾಸಗೊಳಿಸತಕ್ಕದ್ದಲ್ಲ ಅಥವಾ ವ್ಯತಿರಿಕ್ತಗೊಳಿಸತಕ್ಕದ್ದಲ್ಲ, ಮತ್ತು

(ii) ಬಾಧಿತ ಪಕ್ಷಕಾರನು ಅರ್ಜಿಯನ್ನು ಸಲ್ಲಿಸಿದ ಹೊರತು ಖಾಸಗಿ ವ್ಯಕ್ತಿಗಳ ನಡುವಣ ಹಕ್ಕಿನ ಪ್ರಶ್ನೆಯ ಮೇಲೆ ಪರಿಣಾಮ ಬೀರುವಂಥ ಯಾವುದೇ ಆದೇಶವನ್ನು ಪುನರವಲೋಕಿಸತಕ್ಕದ್ದಲ್ಲ.

(2) (1)ನೇ ಉಪಪ್ರಕರಣದ ಮೇರೆಗೆ ಆದೇಶದ ಪುನರಾವಲೋಕನಕ್ಕಾಗಿ ಪ್ರತಿಯೊಂದು ಅರ್ಜಿಯನ್ನು ಆದೇಶದ ದಿನಾಂಕದಿಂದ ತೊಂಬತ್ತು ದಿನಗಳ ಅವಧಿಯೊಳಗಾಗಿ ಸಲ್ಲಿಸತಕ್ಕದ್ದು.

(3) ಕಾಲಪರಿಮಿತಿ ಅಧಿನಿಯಮ, 1963ರ 4ನೇ, 5ನೇ ಮತ್ತು 12ನೇ ಪ್ರಕರಣಗಳ ಉಪಬಂಧಗಳು ಈ ಪ್ರಕರಣದ ಮೇರೆಗೆ ಪುನರವಲೋಕನಕ್ಕಾಗಿ ಸಲ್ಲಿಸುವ ಅರ್ಜಿಗೆ ಅನ್ವಯವಾಗತಕ್ಕದ್ದು.

**45. ನ್ಯಾಯಾಧಿಕರಣದ ಆದೇಶಗಳ ಅಂತಿಮತೆ.–** ಯಾವುದೇ ಕಾನೂನಿನಲ್ಲಿ ಏನೇ ಇದ್ದರೂ, ಆದರೆ, 44ನೇ ಪ್ರಕರಣದ ಉಪಬಂಧಗಳಿಗೊಳಪಟ್ಟು, ನ್ಯಾಯಾಧಿಕರಣದ ಪ್ರತಿಯೊಂದು ತೀರ್ಮಾನವು ಅಂತಿಮವಾಗಿರತಕ್ಕದ್ದು ಮತ್ತು ಯಾವುದೇ ನ್ಯಾಯಾಲಯದಲ್ಲಿ ಅದನ್ನು ಪ್ರಶ್ನಿಸತಕ್ಕದಲ್ಲ.

**46. ವಿವರಣಪಟ್ಟಿಕೆ ಮುಂತಾದವುಗಳನ್ನು ತರಿಸಿಕೊಳ್ಳಲು ನ್ಯಾಯಾಧಿಕರಣದ ಅಧಿಕಾರಗಳು.–** ನ್ಯಾಯಧಿಕರಣವು, ತನಗಿರುವ ಅಪೀಲು ವಿಚಾರಣಾ ಅಥವಾ ಪುನರೀಕ್ಷಣೆಯ ಅಧಿಕಾರವ್ಯಾಪ್ತಿಗೆ ಒಳಪಟ್ಟಿರುವ ವಿಷಯಗಳ ಬಗ್ಗೆ, ಮುಂದೆ ಹೇಳಿರುವಂಥವುಗಳಲ್ಲಿ ಎಲ್ಲವನ್ನು ಅಥವಾ ಯಾವುದನ್ನಾದರೂ ಮಾಡಬಹುದು, ಎಂದರೆ:–

(ಎ) ತನ್ನ ಅಧಿಕಾರ ವ್ಯಾಪ್ತಿಗೊಳಪಟ್ಟಿರುವ ಪ್ರಾಧಿಕಾರಿಗಳಿಂದ ವಿವರಣ ಪಟ್ಟಿಕೆಗಳನ್ನು ತರಿಸಿಕೊಳ್ಳುವುದು;

(ಬಿ) ಅಂಥ ಪ್ರಾಧಿಕಾರಿಗಳ ಕಾರ್ಯಪದ್ಧತಿಗಳು ಮತ್ತು ಕಾರ್ಯವಿಧಾನಗಳು ಕರಾರುವಾಕ್ಕಾಗಿ ನಡೆಯುವಂತೆ ಮಾಡಲು ಸಾಮಾನ್ಯ ನಿರ್ದೇಶನಗಳನ್ನು ಹೊರಡಿಸುವುದು ಮತ್ತು ನಮೂನೆಗಳನ್ನು ನಿಯಮಿಸುವುದು:

ಪರಂತು, ಅಂಥ ನಿರ್ದೇಶನಗಳು ಮತ್ತು ನಮೂನೆಗಳು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಉಪಬಂಧಗಳಿಗೆ ಅಸಂಗತವಾಗಿರತಕ್ಕದ್ದಲ್ಲ.

**47. ನ್ಯಾಯಾಧಿಕರಣದ ವ್ಯವಹರಣೆಗಳು ನ್ಯಾಯಿಕ ವ್ಯವಹರಣೆಗಳಾಗಿರುವುದು.–** ಭಾರತ ದಂಡ ಸಂಹಿತೆಯ 193ನೇ ಮತ್ತು 228ನೇ ಪ್ರಕರಣಗಳ ಅರ್ಥದಲ್ಲಿ 196ನೇ ಪ್ರಕರಣದ ಉದ್ದೇಶದ ಸಲುವಾಗಿ ನ್ಯಾಯಾಧಿಕರಣದ ಮುಂದೆ ಇರುವ ಯಾವುದೇ ವ್ಯವಹರಣೆಯು ನ್ಯಾಯಿಕ ವ್ಯವಹರಣೆಯಾಗಿರತಕ್ಕದ್ದು ಮತ್ತು ನ್ಯಾಯಾಧಿಕರಣವನ್ನು ದಂಡ ಪ್ರಕ್ರಿಯಾ ಸಂಹಿತೆ, 1898ರ (1898ರ ಕೇಂದ್ರ ಅಧಿನಿಯಮ 5) 195ನೇ ಪ್ರಕರಣದ ಮತ್ತುXXXV ನೇ ಅಧ್ಯಾಯದ ಎಲ್ಲ ಉದ್ದೇಶಗಳಿಗಾಗಿ, ಸಿವಿಲ್ ನ್ಯಾಯಾಲಯ ಎಂದು ಭಾವಿಸತಕ್ಕದ್ದು.

**48. ವಿನಿಯಮಗಳನ್ನು ರಚಿಸಲು ಅಧಿಕಾರ.–** (1) ಸಾಮಾನ್ಯವಾಗಿ ನ್ಯಾಯಾಧಿಕರಣದ ಕಾರ್ಯಪದ್ಧತಿಯು ಮತ್ತು ಕಾರ್ಯವಿಧಾನ ಕರಾರುವಾಕ್ಕಾಗಿ ನಡೆಯುವುದಕ್ಕಾಗಿ ಮತ್ತು ನ್ಯಾಯಾಧಿಕರಣಕ್ಕೆ ಅಪೀಲನ್ನು ಮತ್ತು ಅರ್ಜಿಗಳನ್ನು ಯಾವ ಕಾಲದೊಳಗೆ ಸಲ್ಲಿಸಬಹುದೋ, ಆ ಕಾಲದ ಬಗ್ಗೆ ಸಂಬಂಧಿಸಿದ ಅಧಿನಿಯಮದಲ್ಲಿ ಯಾವುದೇ ಸ್ಪಷ್ಟ ಉಪಬಂಧ ಇರದಿದ್ದರೆ, ಆ ಕಾಲ, ಕಾಲಮಿತಿ ವಿನಿಯಮಗಳನ್ನೊಳಗೊಂಡು ನ್ಯಾಯಾಧಿಕರಣದ ವ್ಯವಹಾರದ ವಿಲೇವಾರಿಗಾಗಿ ಮತ್ತು ನ್ಯಾಯಾಧಿಕರಣದ ಮುಂದಿರುವ ಯಾವುದೇ ವ್ಯವಹರಣೆಗಳಿಗೆ ತಗಲುವ ಮತ್ತು ಅನುಷಂಗಿಕವಾದ ಖರ್ಚುಗಳ ಬಗ್ಗೆ, ನ್ಯಾಯಾಧಿಕರಣವು, ಮುಂಚಿತವಾಗಿಯೇ ಪ್ರಕಟಣೆ ಮಾಡಿದ ತರುವಾಯ ಮತ್ತು ರಾಜ್ಯ ಸರ್ಕಾರದಿಂದ ಮುಂಚಿತವಾಗಿಯೇ ಮಂಜೂರಾತಿಯನ್ನು ಪಡೆದು, ಈ ಅಧಿನಿಯಮದ ಉಪಬಂಧಗಳಿಗೆ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳಿಗೆ ಸುಸಂಗತವಾದ ವಿನಿಯಮಗಳನ್ನು ರಚಿಸತಕ್ಕದ್ದು.

(2) ಉಪಪ್ರಕರಣ (1)ರ ಮೇರೆಗೆ ರಚಿಸಿದ ವಿನಿಯಮಗಳನ್ನು ರಾಜ್ಯಪತ್ರದಲ್ಲಿ ಪ್ರಕಟಿಸತಕ್ಕದ್ದು.

## ಅಧ್ಯಾಯ–V
## ಅಪೀಲು ಮತ್ತು ಪುನರೀಕ್ಷಣೆ

**49. ಮೂಲ ಆದೇಶಗಳ ಮೇಲೆ ಅಪೀಲುಗಳು.–** ಅನ್ಯಥಾ ವ್ಯಕ್ತವಾಗಿ ಉಪಬಂಧಿಸಿರುವುದನ್ನುಳಿದು, ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿರುವ ನಿಯಮಗಳ ಮೇರೆಗೆ ಮಾಡಿದ ಪ್ರತಿಯೊಂದು ಮೂಲ ಆದೇಶದ ಮೇಲೆ [1][ಮತ್ತು ಸಿವಿಲ್ ಪ್ರಕ್ರಿಯಾ ಸಂಹಿತೆ 1908ರ (1908ರ ಕೇಂದ್ರ ಅಧಿನಿಯಮ 5) 54ನೇ ಪ್ರಕರಣದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಮಾಡಿದ ಪ್ರತಿಯೊಂದು ಆದೇಶದ][1] ಮೇಲೆ ಕೆಳಕಂಡಂತೆ ಎಂದರೆ,–

1. 1975ರ ಅಧಿನಿಯಮ 33ರ ಮೂಲಕ 10.7.1975 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(ಎ) ಅಸಿಸ್ಟೆಂಟ್ ಕಮಿಷನರನಿಗೆ ಅಧೀನನಾಗಿರುವ ರೆವಿನ್ಯೂ ಅಧಿಕಾರಿಯು, ಅವನಲ್ಲಿ [1][ಅಸಿಸ್ಟೆಂಟ್ ಕಮಿಷನರ್‌ರ ಅಥವಾ ಡೆಪ್ಯೂಟಿ ಕಮಿಷನರ್‌ರ ಅಧಿಕಾರಗಳು ನಿಹಿತವಾಗಿರಲಿ[2][ಅಥವಾ ನಿಯೋಜಿತವಾಗಿರಲಿ][2] ಅಥವಾ ಇಲ್ಲದಿರಲಿ,][1] ಆದೇಶವನ್ನು ಮಾಡಿದ್ದರೆ ಅಸಿಸ್ಟೆಂಟ್ ಕಮೀಷನರಿಗೆ;

1. 1975ರ ಅಧಿನಿಯಮ 33ರ ಮೂಲಕ 10.7.1975 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
2. 1976ರ ಅಧಿನಿಯಮ 22ರ ಮೂಲಕ 24.12.1975 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(ಬಿ) ಅಂಥ ಆದೇಶವನ್ನು ಅಸಿಸ್ಟೆಂಟ್ ಕಮಿಷನರನು ಮಾಡಿದ್ದರೆ ಅವನಲ್ಲಿ ಡೆಪ್ಯೂಟಿ ಕಮಿಷನರ್‌ರ ಅಧಿಕಾರಗಳು ನಿಹಿತವಾಗಿರಲಿ ಅಥವಾ ಇಲ್ಲದಿರಲಿ, ಡೆಪ್ಯೂಟಿ ಕಮೀಷನರನಿಗೆ;

[1][(ಸಿ) ಅಂಥ ಆದೇಶವನ್ನು ಡೆಪ್ಯೂಟಿ ಕಮಿಷನರ್ ಮಾಡಿದ್ದರೆ, ನ್ಯಾಯಾಧಿಕರಣಕ್ಕೆ;

[2][(ಡಿ) ಅಂಥ ಆದೇಶವನ್ನು ರೀಜನಲ್ ಕಮೀಷನರ್ ಮಾಡಿದ್ದರೆ, ನ್ಯಾಯಾಧಿಕರಣಕ್ಕೆ;][2]

1. 1975ರ ಅಧಿನಿಯಮ 33ರ ಮೂಲಕ 10.7.1975 ರಿಂದ ಜಾರಿಗೆ ಬರುವಂತೆ (ಸಿ) ಯಿಂದ (ಹೆಚ್) ವರೆಗಿನ ಖಂಡಗಳನ್ನು ಪ್ರತಿಯೋಜಿಸಲಾಗಿದೆ.
2. 2007ರ ಅಧಿನಿಯಮ 17ರ ಮೂಲಕ 5.1.2007 ರಿಂದ ಜಾರಿಗೆ ಬರುವಂತೆ (ಡಿ) ಖಂಡವನ್ನು ಸೇರಿಸಲಾಗಿದೆ.

(ಇ) ಅಂಥ ಆದೇಶವನ್ನು [1][ಭೂ ದಾಖಲೆಗಳ ಸಹಾಯಕ ನಿರ್ದೇಶಕರು ಅಥವಾ ಕಂದಾಯ ವ್ಯವಸ್ಥೆಯ ಸಹಾಯಕ ನಿರ್ದೇಶಕರ ದರ್ಜೆಗಿಂತಲೂ ಕಡಿಮೆ ದರ್ಜೆಯ ಮೋಜಣಿ ಅಧಿಕಾರಿಯು ಮಾಡಿದ್ದರೆ, ಸಂದರ್ಭಾನುಸಾರ, ಭೂ ದಾಖಲೆಗಳ ಸಹಾಯಕ ನಿರ್ದೇಶಕರಿಗೆ ಅಥವಾ ಕಂದಾಯ ವ್ಯವಸ್ಥೆಯ ಸಹಾಯಕ ನಿರ್ದೇಶಕರಿಗೆ;][1]

1. 2003ರ ಅಧಿನಿಯಮ 21ರ ಮೂಲಕ 26.05.2003 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಎಫ್) ಅಂಥ ಆದೇಶವನ್ನು [1][ಭೂ ದಾಖಲೆಗಳ ಸಹಾಯಕ ನಿರ್ದೇಶಕರು ಅಥವಾ ಕಂದಾಯ ವ್ಯವಸ್ಥೆಯ ಸಹಾಯಕ ನಿರ್ದೇಶಕರ ದರ್ಜೆಯ ಮೋಜಣಿ ಅಧಿಕಾರಿಯು ಮಾಡಿದ್ದರೆ ಸಂದರ್ಭಾನುಸಾರ, ಭೂ ದಾಖಲೆಗಳ ಜಂಟಿ ನಿರ್ದೇಶಕರಿಗೆ ಅಥವಾ ಕಂದಾಯ ವ್ಯವಸ್ಥೆಯ ಜಂಟಿ ನಿರ್ದೇಶಕರಿಗೆ;][1]

1. 2003ರ ಅಧಿನಿಯಮ 21ರ ಮೂಲಕ 26.05.2003 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಜಿ) ಅಂಥ ಆದೇಶವನ್ನು [1][ಭೂ ದಾಖಲೆಗಳ ಜಂಟಿ ನಿರ್ದೇಶಕರು ಅಥವಾ ಕಂದಾಯ ವ್ಯವಸ್ಥೆಯ ಜಂಟಿ ನಿರ್ದೇಶಕರು][1] ಮಾಡಿದ್ದರೆ, ಮೋಜಣಿ, ಕಂದಾಯ ವ್ಯವಸ್ಥೆ ಮತ್ತು ಭೂ ದಾಖಲೆಗಳ ನಿರ್ದೇಶಕರಿಗೆ;

1. 2003ರ ಅಧಿನಿಯಮ 21ರ ಮೂಲಕ 26.05.2003 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಹೆಚ್) ಅಂಥ ಆದೇಶವನ್ನು ಮೋಜಣಿ, ಕಂದಾಯ ವ್ಯವಸ್ಥೆ ಮತ್ತು ಭೂ ದಾಖಲೆಗಳ ನಿರ್ದೇಶಕರು ಮಾಡಿದ್ದರೆ ನ್ಯಾಯಾಧಿಕರಣಕ್ಕೆ.][1]

–ಅಪೀಲುಸಲ್ಲಿಸಲು ಅವಕಾಶ ಇರತಕ್ಕದ್ದು.

**50. ಎರಡನೆಯ ಅಪೀಲು.–** (1) 49ನೇ ಪ್ರಕರಣದ ಮೇರೆಗೆ ಮೊದಲನೆಯ ಅಪೀಲಿನಲ್ಲಿ ಮಾಡಿದ ಯಾವುದೇ ಆದೇಶದ ಬಗ್ಗೆ, ಈ ಕೆಳಕಂಡಂತೆ ಎಂದರೆ,–

(ಎ) ಅಂಥ ಆದೇಶವನ್ನು ಅಸಿಸ್ಟೆಂಟ್ ಕಮಿಷನರು ಮಾಡಿದ್ದರೆ, ಡೆಪ್ಯೂಟಿ ಕಮೀಷನರಿಗೆ;

[1][(ಬಿ) ಅಂಥ ಆದೇಶವನ್ನು ಡೆಪ್ಯೂಟಿ ಕಮಿಷನರು ಮಾಡಿದ್ದರೆ ನ್ಯಾಯಾಧಿಕರಣಕ್ಕೆ;

(©1) ಅಂಥ ಆದೇಶವನ್ನು ಕಂದಾಯ ವ್ಯವಸ್ಥೆಯ [2][ಸಹಾಯಕ ನಿರ್ದೇಶಕರು ಅಥವಾ ಭೂ ದಾಖಲೆಗಳ ಸಹಾಯಕ ನಿರ್ದೇಶಕರು][2] ಮಾಡಿದ್ದರೆ, ಮೋಜಣಿ, ಕಂದಾಯ ವ್ಯವಸ್ಥೆ ಮತ್ತು ಭೂ ದಾಖಲೆಗಳ ನಿರ್ದೇಶಕನಿಗೆ;][1]

1. 1975ರ ಅಧಿನಿಯಮ 33ರ ಮೂಲಕ 10.7.1975 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
2. 2003ರ ಅಧಿನಿಯಮ 21ರ ಮೂಲಕ 26.05.2003 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(¹) ಅಂಥ ಆದೇಶವನ್ನು [1][ಭೂ ದಾಖಲೆಗಳ ಜಂಟಿ ನಿರ್ದೇಶಕರು ಅಥವಾ ಕಂದಾಯ ವ್ಯವಸ್ಥೆಯ ಜಂಟಿ ನಿರ್ದೇಶಕರು][1] ಅಥವಾ [2][ಮೋಜಣಿ, ಕಂದಾಯ ವ್ಯವಸ್ಥೆ ಮತ್ತು ಭೂ ದಾಖಲೆಗಳ ನಿರ್ದೇಶಕರು][2] ಮಾಡಿದ್ದರೆ, ನ್ಯಾಯಾಧಿಕರಣಕ್ಕೆ;

1. 2003ರ ಅಧಿನಿಯಮ 21ರ ಮೂಲಕ 26.05.2003 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
2. 1975ರ ಅಧಿನಿಯಮ 33ರ ಮೂಲಕ 10.7.1975 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ

– ಎರಡನೆಯ ಅಪೀಲುಸಲ್ಲಿಸಲು ಅವಕಾಶ ಇರತಕ್ಕದ್ದು.

(2)ಎರಡನೆಯ ಅಪೀಲಿನ ಮೇಲೆ ಮಾಡಿದ ಆದೇಶವು ಅಂತಿಮವಾಗಿರತಕ್ಕದ್ದು.

**51. ಅಪೀಲುಗಳಿಗೆ ಕಾಲಪರಿಮಿತಿ.–** (ಎ) ಮೊದಲನೆಯ ಅಪೀಲಿನ ಸಂದರ್ಭದಲ್ಲಿ, ಯಾವ ಆದೇಶದ ವಿರುದ್ಧ ಅಪೀಲು ಮಾಡಲಾಗಿದೆಯೋ ಆ ಆದೇಶವನ್ನು ಮಾಡಿದ ದಿನಾಂಕದಿಂದ ಅರವತ್ತು ದಿನಗಳು ಕಳೆದ ತರುವಾಯ; ಮತ್ತು

(ಬಿ) ಎರಡನೇ ಅಪೀಲಿನ ಸಂದರ್ಭದಲ್ಲಿ, ಯಾವ ಆದೇಶದ ವಿರುದ್ಧ ಅಪೀಲು ಮಾಡಲಾಗಿದೆಯೋ ಆ ಆದೇಶವನ್ನು ಮಾಡಿದ ದಿನಾಂಕದಿಂದ ತೊಂಬತ್ತು ದಿನಗಳು ಕಳೆದ ತರುವಾಯ

–ಯಾವ ಅಪೀಲಿಗೂ ಅವಕಾಶವಿರತಕ್ಕದ್ದಲ್ಲ.

**52. ಕಾಲಪರಿಮಿತಿ ಅಧಿನಿಯಮದ ಅನ್ವಯ.–** ಈ ಅಧಿನಿಯಮದಲ್ಲಿ ಅನ್ಯಥಾ ಉಪ ಬಂಧಿಸಿರುವುದನ್ನುಳಿದು, ಕಾಲಪರಿಮಿತಿ ಅಧಿನಿಯಮ, 1963ರ (ಕೇಂದ್ರ ಅಧಿನಿಯಮ 1963ರ 36) 4ನೇ, 5ನೇ ಮತ್ತು 12ನೇ ಪ್ರಕರಣಗಳ ಉಪಬಂಧಗಳು ಯಥೋಚಿತ ವ್ಯತ್ಯಾಸದೊಂದಿಗೆ ಈ ಅಧಿನಿಯಮದ ಮೇರೆಗಿನ ಎಲ್ಲ ಅಪೀಲುಗಳಿಗೆ ಅನ್ವಯವಾಗತಕ್ಕದ್ದು.

**53. ಅಪೀಲು ಅರ್ಜಿಯ ಜತೆ ಆದೇಶದ ಪ್ರತಿ ಇರತಕ್ಕದ್ದು.–** ಯಾವ ಆದೇಶದ ಬಗ್ಗೆ ಅಪೀಲು ಮಾಡಲಾಗುತ್ತಿದೆಯೋ ಆ ಆದೇಶದ ಪ್ರಮಾಣಿತ ಪ್ರತಿಯನ್ನು ಸಲ್ಲಿಸುವ ಬಗ್ಗೆ ಅಪೀಲು ಪ್ರಾಧಿಕಾರಿಯು ವಿನಾಯಿತಿಯನ್ನು ಕೊಟ್ಟಿದ್ದ ಹೊರತು, ಅಂಥ ಪ್ರತಿಯನ್ನು ಅಪೀಲು ಅರ್ಜಿಯೊಂದಿಗೆ ಕಳಿಸತಕ್ಕದ್ದು.

**54. ಅಪೀಲು ಪ್ರಾಧಿಕಾರಿಯ ಅಧಿಕಾರಗಳು.–** ಯಾವ ಆದೇಶದ ಬಗ್ಗೆ ಅಪೀಲು ಮಾಡಲಾಗಿದೆಯೋ ಆ ಆದೇಶವನ್ನು ಅಪೀಲು ಪ್ರಾಧಿಕಾರಿಯು, ಕಾರಣಗಳನ್ನು ಲಿಖಿತದಲ್ಲಿ ದಾಖಲಿಸಿ ರದ್ದುಗೊಳಿಸಬಹುದು, ವ್ಯತಿರಿಕ್ತಗೊಳಿಸಬಹುದು, ಮಾರ್ಪಡಿಸಬಹುದು, ಅಥವಾ ಸ್ಥಿರೀಕರಿಸಬಹುದು ಅಥವಾ ಆದೇಶ ಮಾಡಿದ ಅಧಿಕಾರಿಗೆ ಅವನು ತಾನೇ ಆಗಲಿ ಅಥವಾ ತನ್ನ ಅಧೀನ ಅಧಿಕಾರಿಗಳ ಪೈಕಿ ಯಾರೇ ಆಗಲೀ ಅಪೀಲು ಪ್ರಾಧಿಕಾರಿಯು ನಿರ್ದಿಷ್ಟ ಪಡಿಸಬಹುದಾದಂಥ ಅಂಶಗಳ ಬಗ್ಗೆ ಮತ್ತಷ್ಟು ತನಿಖೆಯನ್ನು ಮಾಡಲು ಅಥವಾ ಹೆಚ್ಚಿನ ಸಾಕ್ಷ್ಯವನ್ನು ತೆಗೆದುಕೊಳ್ಳಲು ನಿರ್ದೇಶಿಸಬಹುದು ಅಥವಾ ಅಪೀಲು ಪ್ರಾಧಿಕಾರಿಯು ತಾನೇ ಅಂಥ ತನಿಖೆಯನ್ನು ಮಾಡಬಹುದು ಅಥವಾ ಅಂಥ ಹೆಚ್ಚಿನ ಸಾಕ್ಷ್ಯವನ್ನು ತೆಗೆದಕೊಳ್ಳಬಹುದು:

ಪರಂತು,–

(ಎ) ಯಾವ ರೆವಿನ್ಯೂ ಅಧಿಕಾರಿಯ ಆದೇಶದ ವಿರುದ್ಧ ಅಪೀಲು ಮಾಡಲಾಗಿದೆಯೋ ಆ ಅಧಿಕಾರಿಯು ಸ್ವೀಕರಿಸಬೇಕಾಗಿದ್ದ ಸಾಕ್ಷ್ಯವನ್ನು ಸ್ವೀಕರಿಸಲು ನಿರಾಕರಿಸಿದ್ದ ಹೊರತು; ಅಥವಾ

(ಬಿ) ಆದೇಶಗಳನ್ನು ಮಾಡಲು ಅಪೀಲು ಪ್ರಾಧಿಕಾರಿಗೆ ಸಹಾಯಕವಾಗುವಂತೆ ಯಾವುದೇ ದಸ್ತಾವೇಜನ್ನು ಹಾಜರುಪಡಿಸುವುದು ಅಥವಾ ಯಾವುದೇ ಸಾಕ್ಷಿಯನ್ನು ವಿಚಾರಣೆ ಮಾಡುವುದು ಅಗತ್ಯವೆನಿಸಿದ ಹೊರತು; ಅಥವಾ

(ಸಿ) ಯಾವುದೇ ಗಣನಾರ್ಹವಾದ ಕಾರಣಕ್ಕಾಗಿ ಅಂಥ ಹೆಚ್ಚಿನ ಸಾಕ್ಷ್ಯವನ್ನು ಅಥವಾ ದಸ್ತಾವೇಜನ್ನು ಹಾಜರುಪಡಿಸಲು ಅಥವಾ ಸಾಕ್ಷಿಯನ್ನು ವಿಚಾರಣೆ ಮಾಡಲು ಅಪೀಲು ಪ್ರಾಧಿಕಾರಿಯು ಅವಕಾಶ ಕೊಟ್ಟಿದ್ದ ಹೊರತು

–ಯಾವುದೇ ಹೆಚ್ಚಿನ ಸಾಕ್ಷ್ಯವನ್ನು, ಅದು ಬಾಯಿ ಮಾತಿನದಾಗಿರಲಿ ಅಥವಾ ದಸ್ತಾವೇಜಿನ ರೂಪದಲ್ಲಿರಲಿ, ತೆಗೆದುಕೊಳ್ಳಲು ನಿರ್ದೇಶಿಸತಕ್ಕದಲ್ಲ:

ಮತ್ತೂ ಪರಂತು, ಅಪೀಲು ಪ್ರಾಧಿಕಾರಿಯು ಹೆಚ್ಚಿನ ಸಾಕ್ಷ್ಯವನ್ನು ಹಾಜರುಪಡಿಸಲು ಅವಕಾಶ ಕೊಟ್ಟಾಗ, ಅಂಥ ಪ್ರಾಧಿಕಾರಿಯು ಹಾಗೆ ಸ್ವೀಕರಿಸಲು ಇರುವ ಕಾರಣಗಳನ್ನು ದಾಖಲಿಸತಕ್ಕದ್ದು.

**55. ಆದೇಶಗಳ ಜಾರಿಗೆ ತಡೆ.–** (1) ಆದೇಶವನ್ನು ಮಾಡಿದ ರೆವಿನ್ಯೂ ಅಧಿಕಾರಿಯು ಅಥವಾ ಅವನ ಹುದ್ದೆಯ ಉತ್ತರಾಧಿಕಾರಿಯು ಅಪೀಲಿಗಾಗಿ ನಿಯಮಿಸಿದ ಅವಧಿಯು ಮುಗಿಯುವುದಕ್ಕಿಂತ ಮುಂಚೆ ಯಾವುದೇ ಕಾಲದಲ್ಲಿ, ಅಪೀಲು ಸಲ್ಲಿಸುವುದಕ್ಕಾಗಿ ಮತ್ತು ಅಪೀಲು ಪ್ರಾಧಿಕಾರಿಯಿಂದ ತಡೆಯಾಜ್ಞೆ ಆದೇಶವನ್ನು ಪಡೆಯುವುದಕ್ಕಾಗಿ ಅಗತ್ಯವಾಗಬಹುದಾದಂಥ ಕಾಲದವರೆಗೆ, ಅಂಥ ಆದೇಶದ ಜಾರಿಯನ್ನು ತಡೆಯಲು ನಿರ್ದೇಶಿಸಬಹುದು.

(2) ಅಪೀಲು ಪ್ರಾಧಿಕಾರಿಯು, ಸೂಕ್ತವೆಂದು ತಾನು ಆಲೋಚಿಸುವಂಥ ಕಾಲದವರೆಗೆ ಅಥವಾ ಅಪೀಲು ತೀರ್ಮಾನವಾಗುವವರೆಗೆ, ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ, ಯಾವ ಆದೇಶದ ಬಗ್ಗೆ ಅಪೀಲು ಮಾಡಲಾಗಿದೆಯೋ ಆ ಆದೇಶದ ಜಾರಿಯನ್ನು ತಡೆಯುವಂತೆ ಯಾವುದೇ ಕಾಲದಲ್ಲಿ ನಿರ್ದೇಶಿಸಬಹುದು ಮತ್ತು ಸಾಕಷ್ಟು ಕಾರಣವನ್ನು ತೋರಿಸಿದಾಗ, ಯಾವ ಆದೇಶದ ತಡೆಗೆ ನಿರ್ದೇಶಿಸಲಾಗಿದೆಯೋ ಆ ಆದೇಶವನ್ನು ರದ್ದುಮಾಡಬಹುದು ಅಥವಾ ವ್ಯತ್ಯಸ್ಥಗೊಳಿಸಬಹುದು.

(3) ಈ ಪ್ರಕರಣದ ಉಪಬಂಧಗಳಿಗೆ ಅನುಸಾರವಾಗಿಯಲ್ಲದೆ ಯಾವುದೇ ಆದೇಶದ ಜಾರಿಯನ್ನು ತಡೆಯಲು ನಿರ್ದೇಶಿಸುವ ಯಾವುದೇ ಆದೇಶವನ್ನು ಮಾಡತಕ್ಕದ್ದಲ್ಲ.

**56. ಪುನರೀಕ್ಷಣಾ ಅಧಿಕಾರ.–** (1) ನ್ಯಾಯಾಧಿಕರಣವು, ಅಸಿಸ್ಟೆಂಟ್ ಕಮಿಷನರ ದರ್ಜೆಗೆ ಕಡಿಮೆ ದರ್ಜೆಯವರಲ್ಲದ ಯಾರೇ ರೆವಿನ್ಯೂ ಅಧಿಕಾರಿಯು ಮತ್ತು ಅವರವರ ಇಲಾಖೆಯಲ್ಲಿ [1][ಭೂ ದಾಖಲೆಗಳ ಉಪ ನಿರ್ದೇಶಕರ][1] ಅಥವಾ ಸಹಾಯಕ ಕಂದಾಯ ವ್ಯವಸ್ಥೆಯ ಅಧಿಕಾರಿಯ ದರ್ಜೆಗೆ ಕಡಿಮೆ ದರ್ಜೆಯವರಲ್ಲದ ಯಾರೇಮೋಜಣಿ ಅಧಿಕಾರಿಯು, ಈ ಅಧಿನಿಯಮದ ಮೇರೆಗೆ [1][ಅಥವಾ ಸಿವಿಲ್ ಪ್ರಕ್ರಿಯಾ ಸಂಹಿತೆ, 1908ರ (ಕೇಂದ್ರ ಅಧಿನಿಯಮ 1908ರ 5) 54ನೇ ಪ್ರಕರಣದ ಮೇರೆಗೆ][1] ಯಾರೇ ಅಧೀನ ಅಧಿಕಾರಿಯು ಮಾಡಿದ ಯಾವುದೇ ತನಿಖೆಯ ಅಥವಾ ಕೈಗೊಂಡ ಕ್ರಮಗಳ ದಾಖಲೆಗಳನ್ನು ಅಂಥ ಅಧಿಕಾರಿಯು ಕೈಗೊಂಡ ಕ್ರಮಗಳ ಕಾನೂನು ಸಮ್ಮತತೆ ಅಥವಾ ಔಚಿತ್ಯದ ಬಗ್ಗೆ ಸಂದರ್ಭಾನುಸಾರ, ಅದು ಅಥವಾ ತಾನು ಮನದಟ್ಟು ಮಾಡಿಕೊಳ್ಳುವ ಸಲುವಾಗಿ ತರಿಸಿಕೊಳ್ಳಬಹುದು ಹಾಗೂ ಪರೀಕ್ಷಿಸಬಹುದು.

1. 1975ರ ಅಧಿನಿಯಮ 33ರ ಮೂಲಕ 10.7.1975 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1][ಪರಂತುಕ**XXX**][1],

1. 1975ರ ಅಧಿನಿಯಮ 33ರ ಮೂಲಕ 10.7.1975 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

[1][**ವಿವರಣೆ:–** ಈ ಉಪಪ್ರಕರಣದ ಉದ್ದೇಶಗಳಿಗಾಗಿ,–

(i) ವಿಶೇಷ ಡೆಪ್ಯೂಟಿ ಕಮಿಷನರು, ಡೆಪ್ಯೂಟಿ ಕಮಿಷನರಿಗೆ ಅಧೀನನಾಗಿರುವುದಿಲ್ಲವೆಂದು ಭಾವಿಸತಕ್ಕದ್ದು; ಮತ್ತು

(ii) ಎಲ್ಲಾ ರೆವಿನ್ಯೂ ಅಧಿಕಾರಿಗಳು ನ್ಯಾಯಾಧಿಕರಣಕ್ಕೆ ಅಧೀನರಾಗಿರುವುದಾಗಿ ಭಾವಿಸತಕ್ಕದ್ದು.][1]

1. 1975ರ ಅಧಿನಿಯಮ 33ರ ಮೂಲಕ 10.7.1975 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ

[1][(1ಎ)**XXX**][1],

1. 1975ರ ಅಧಿನಿಯಮ 33ರ ಮೂಲಕ 10.7.1975 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

(2) ಯಾವುದೇ ಮೊಕದ್ದಮೆಯಲ್ಲಿ ಯಾವುದೇ ತೀರ್ಮಾನವನ್ನು ಅಥವಾ ಆದೇಶವನ್ನು ಅಥವಾ ಹಾಗೆ ತರಿಸಿಕೊಂಡ ವ್ಯವಹರಣೆ–ಇವುಗಳನ್ನು ಮಾರ್ಪಡಿಸುವುದು, ರದ್ದುಗೊಳಿಸುವುದು ಅಥವಾ ವ್ಯತಿರಿಕ್ತ ಗೊಳಿಸುವುದು ಅಗತ್ಯವೆಂದು ನ್ಯಾಯಾಧಿಕರಣಕ್ಕೆ[1][**XXX**][1] ಅಥವಾ ಮೇಲೆ ಹೇಳಿದಂಥ ಅಧಿಕಾರಿಗೆ ಕಂಡು ಬಂದರೆ, ನ್ಯಾಯಾಧಿಕರಣವು[1][**XXX**][1] ಅಥವಾ ಅಂಥ ಅಧಿಕಾರಿಯು ಸೂಕ್ತವೆಂದು ಭಾವಿಸಬಹುದಾದಂಥ ಆದೇಶವನ್ನು ಮಾಡಬಹುದು:

1. 1970ರ ಅಧಿನಿಯಮ 5ರ ಮೂಲಕ 23.10.1969 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ ಮತ್ತು 1975ರ ಅಧಿನಿಯಮದ 33ರ ಮೂಲಕ 2000 ಅಧಿನಿಯಮ 22ರ ಮೂಲಕ 10.7.1975 ರ ಮೂಲಕ ತಿದ್ದುಪಡಿಯಾದಂತೆ ಬಿಟ್ಟುಬಿಡಲಾಗಿದೆ.

ಪರಂತು, ಹಿತಾಸಕ್ತಿಯುಳ್ಳ ಪಕ್ಷಕಾರರಿಗೆ ನೋಟೀಸನ್ನು ಜಾರಿ ಮಾಡಿದ ಹೊರತು ಮತ್ತು ಅಹವಾಲು ಹೇಳಿಕೊಳ್ಳಲು ಅವರಿಗೆ ಅವಕಾಶ ಕೊಟ್ಟ ಹೊರತು ಯಾವುದೇ ಆದೇಶವನ್ನು ಮಾರ್ಪಡಿಸತಕ್ಕದ್ದಲ್ಲ, ರದ್ದುಗೊಳಿಸತಕ್ಕದ್ದಲ್ಲ ಅಥವಾ ವ್ಯತಿರಿಕ್ತಗೊಳಿಸತಕ್ಕದ್ದಲ್ಲ.

[1][(3) ಈ ಪ್ರಕರಣದ ಮೇರೆಗೆ ಯಾವುದೇ ಅರ್ಜಿಯನ್ನು ಪುನರೀಕ್ಷಣೆಗಾಗಿ ಸ್ವೀಕರಿಸತಕ್ಕದ್ದಲ್ಲ ಮತ್ತು ಈ ಅಧ್ಯಾಯದ ಮೇರೆಗೆ ಯಾವ ಆದೇಶದ ವಿರುದ್ಧ ಅಪೀಲನ್ನು ಸಲ್ಲಿಸಲಾಗಿದೆಯೋ ಆ ಯಾವುದೇ ಆದೇಶದ ವಿರುದ್ಧ ಅಂಥ ಅರ್ಜಿ ಸಲ್ಲಿಸಿದಾಗ ಪುನರೀಕ್ಷಣೆ ಮಾಡಲು ಯಾವುದೇ ಅಧಿಕಾರವನ್ನು ಚಲಾಯಿಸತಕ್ಕದ್ದಲ್ಲ ಮತ್ತು ಪುನರೀಕ್ಷಣೆಗಾಗಿ ಸಲ್ಲಿಸಿದ ಯಾವುದೇ ಅರ್ಜಿಯನ್ನು ಅದನ್ನು ಅಂಥ ಆದೇಶದ ದಿನಾಂಕದಿಂದ ನಾಲ್ಕು ತಿಂಗಳುಗಳ ಅವಧಿಯೊಳಗೆ ಸಲ್ಲಿಸಿದ್ದ ಹೊರತು ಸ್ವೀಕರಿಸತಕ್ಕದ್ದಲ್ಲ:

ಪರಂತು, (1)ನೇ ಉಪಪ್ರಕರಣದಲ್ಲಿ ಹೇಳಿರುವ, ಯಾರೇ ರೆವಿನ್ಯೂ ಅಧಿಕಾರಿಯು ಅಥವಾ ಮೋಜಣಿ ಅಧಿಕಾರಿಯು, ಯಾವ ಆದೇಶದ ವಿರುದ್ಧ ಈ ಅಧ್ಯಾಯದ ಮೇರೆಗೆ ಯಾವ ಅಪೀಲು ದಾಖಲಾಗಿಲ್ಲವೋ ಆ ಯಾವುದೇ ಆದೇಶದ ಬಗ್ಗೆ ಪುನರೀಕ್ಷಣೆ ಮಾಡಬೇಕೆಂದು ಕೋರಿದ ಆ ಆದೇಶದ ದಿನಾಂಕದಿಂದ ಮೂರು ವರ್ಷಗಳೊಳಗೆ ಯಾವುದೇ ಸಮಯದಲ್ಲಿ ಈ ಪ್ರಕರಣದ ಮೇರೆಗಿನ ಅಧಿಕಾರವನ್ನು ಚಲಾಯಿಸಬಹುದು.

**ವಿವರಣೆ:–** ಈ ಪ್ರಕರಣದ ಉದ್ದೇಶಕ್ಕಾಗಿ ಕಾಲ ಪರಿಮಿತಿಯ ಅವಧಿಯನ್ನು ಲೆಕ್ಕ ಮಾಡುವಾಗ, ಈ ಪ್ರಕರಣದ ಮೇರೆಗಿನ ಯಾವುದೇ ವ್ಯವಹರಣೆಯನ್ನು ಯಾವುದೇ ನ್ಯಾಯಾಲಯದ ಆದೇಶದ ಅಥವಾ ನಿರ್ಬಂಧಕಾಜ್ಞೆಯ ಮೂಲಕ ತಡೆಹಿಡಿದಿದ್ದರೆ ಅಂಥ ಅವಧಿಯನ್ನು ಬಿಟ್ಟುಬಿಡತಕ್ಕದ್ದು.][1]

1. 1975ರ ಅಧಿನಿಯಮ 33ರ ಮೂಲಕ 10.7.1975 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ

2.

**57. ಈ ಅಧಿನಿಯಮದ ಮೇರೆಗೆ ಸುಸ್ಪಷ್ಟವಾಗಿ ಅಂತಿಮವಾದುದೆಂದು ಮಾಡಿದ ಆದೇಶಗಳು.–** ರೆವಿನ್ಯೂ ಅಧಿಕಾರಿಯ ಆದೇಶವು ಅಂತಿಮವಾಗಿರತಕ್ಕದ್ದೆಂದು ಈ ಅಧಿನಿಯಮದಲ್ಲಿ ಘೋಷಿಸಿರುವಾಗ, ಅಂಥ ಆದೇಶದ ವಿರುದ್ಧ ಅಪೀಲು ಇರುವುದಿಲ್ಲವೆಂಬುದೇ ಅಂಥ ಪದಾವಳಿಯ ಅರ್ಥವೆಂದು ಭಾವಿಸತಕ್ಕದ್ದು, ಅಂಥ ಯಾವುದೇ ಆದೇಶವನ್ನು ಮಾರ್ಪಡಿಸಲು, ರದ್ದುಗೊಳಿಸಲು ಅಥವಾ ವ್ಯತಿರಿಕ್ತಗೊಳಿಸಲು 56ನೇ ಪ್ರಕರಣದ ಉಪಬಂಧಗಳ ಮೇರೆಗೆ ನ್ಯಾಯಾಧಿಕರಣವು ಮಾತ್ರ ಸಕ್ಷಮವಾಗಿರತಕ್ಕದ್ದು.

**58. ಆದೇಶಗಳ ತಿದ್ದುಪಡಿ.–** ಯಾವುದೇ ಆಕಸ್ಮಿಕ ಕೈತಪ್ಪಿನಿಂದಾಗಿ ಅಥವಾ ಲೋಪದಿಂದಾಗಿ ಆದೇಶಗಳಲ್ಲಿ ಉಂಟಾಗುವ ಅಥವಾ ಲೆಕ್ಕದಲ್ಲಿಯ ತಪ್ಪುಗಳನ್ನು ಆದೇಶ ಮಾಡುವ ರೆವಿನ್ಯೂ ಅಧಿಕಾರಿಯು ಅಥವಾ ಹುದ್ದೆಯಲ್ಲಿ ಅವನ ಉತ್ತರಾಧಿಕಾರಿಯಾಗಿರುವ ಯಾರೇ ಅಧಿಕಾರಿಯು, ತಾನಾಗಿಯೇ ಅಥವಾ ಸಂಬಂಧಿಸಿದ ಪಕ್ಷಕಾರರಲ್ಲಿ ಯಾರಾದರೊಬ್ಬರು ಅರ್ಜಿ ಸಲ್ಲಿಸಿದಾಗ ಯಾವ ಕಾಲದಲ್ಲಾದರೂ ತಿದ್ದಬಹುದು:

ಪರಂತು, ಪಕ್ಷಕಾರರಿಗೆ ಅಹವಾಲು ಹೇಳಿಕೊಳ್ಳಲು ಯುಕ್ತ ಅವಕಾಶ ಕೊಡದೆ ಅಂಥ ಯಾವುದೇ ತಿದ್ದುಪಡಿಯನ್ನು ಮಾಡತಕ್ಕದ್ದಲ್ಲ.

**59. ನ್ಯಾಯ ವಿಫಲತೆಯನ್ನು ಉಂಟುಮಾಡದ ತಪ್ಪು ಅಥವಾ ಅಕ್ರಮದ ಕಾರಣದಿಂದ ಆದೇಶವನ್ನು ವ್ಯತಿರಿಕ್ತಗೊಳಿಸಲಾಗದು.–** ಅಪೀಲಿನಲ್ಲಿ ಅಥವಾ ಪುನರೀಕ್ಷಣೆಯಲ್ಲಿ ರೆವಿನ್ಯೂ ಅಧಿಕಾರಿಯು ಮಾಡಿದ ಯಾವುದೇ ಆದೇಶವನ್ನು ಈ ಅಧಿನಿಯಮದ ಮೇರೆಗಿನ, ಸಮನು, ನೋಟೀಸು, ಉದ್ಘೋಷಣೆ, ವಾರಂಟು ಅಥವಾ ಆದೇಶ ಅಥವಾ ಇತರ ಯಾವುದೇ ವ್ಯವಹರಣೆಗಳು ಇವುಗಳಲ್ಲಿರುವ ಪ್ರಮಾದ, ಲೋಪ ಅಥವಾ ಅಕ್ರಮದ ಕಾರಣದಿಂದಾಗಿ ಅಂಥ ಪ್ರಮಾದ, ಲೋಪ ಅಥವಾ ಅಕ್ರಮವು, ವಸ್ತುಶಃ ನ್ಯಾಯ ವಿಫಲತೆಯನ್ನು ಉಂಟುಮಾಡಿದ ಹೊರತು, ವ್ಯತಿರಿಕ್ತಗೊಳಿಸತಕ್ಕದ್ದಲ್ಲ ಅಥವಾ ಮಾರ್ಪಡಿಸತಕ್ಕದಲ್ಲ.

## ಅಧ್ಯಾಯ–VI
## ರೆವಿನ್ಯೂ ಅಧಿಕಾರ ವ್ಯಾಪ್ತಿ

**60. ಪರಿಭಾಷೆಗಳು.–** ಈ ಅಧ್ಯಾಯದಲ್ಲಿ ಸಂದರ್ಭಕ್ಕೆ ಬೇರೆ ಅರ್ಥದ ಅಗತ್ಯವಿರದಿದ್ದರೆ,–

(ಎ) 'ಭೂಮಿ' ಎಂಬುದರಲ್ಲಿ ಗ್ರಾಮಗಳು, ಪಟ್ಟಣಗಳು ಮತ್ತು ನಗರಗಳು, ನಿವೇಶನಗಳು, ಮರಗಳು, ಬೆಳೆಯುವ ಪೈರು ಮತ್ತು ಹುಲ್ಲು, ಮರಗಳಲ್ಲಿರುವ ಹಣ್ಣು ಮತ್ತು ಮರದ ಹಾಲು, ದಾರಿಯ ಹಕ್ಕುಗಳು, ದೋಣಿಯ ಹಾಯ್ಗಡ ಮತ್ತು ಮತ್ಸ್ಯ ಕ್ಷೇತ್ರ–ಇವು ಸೇರುತ್ತವೆ;

(ಬಿ) "ಭೂಕಂದಾಯ" ಎಂದರೆ, ಯಾರೇ ವ್ಯಕ್ತಿಯು ಹೊಂದಿರುವ ಅಥವಾ ಅವನಲ್ಲಿ ನಿಹಿತವಾಗಿರುವ ಭೂಮಿಗೆ ಅವನಿಂದ ಸರ್ಕಾರವು ಅಥವಾ ಸರ್ಕಾರದ ಪರವಾಗಿ ಹಣದ ರೂಪದಲ್ಲಿ ಅಥವಾ ವಸ್ತು ರೂಪದಲ್ಲಿ ಸ್ವೀಕರಿಸಿದಅಥವಾ ಕ್ಲೇಮು ಮಾಡಬಹುದಾದ ಎಲ್ಲ ಮೊಬಲಗುಗಳು ಮತ್ತು ಸಂದಾಯಗಳು, ಮತ್ತು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಉಪಬಂಧಗಳ ಮೇರೆಗೆ ಸಂದಾಯ ಮಾಡಬೇಕಾದ ಯಾವುದೇ ಕರ, ಉಪಕರ, ದರ[1][ಮತ್ತು ಇತರ ತೆರಿಗೆಗಳು ಇವುಗಳನ್ನು ಭೂಕಂದಾಯ ಒಳಗೊಳ್ಳುತ್ತದೆ.][1]

1. 1965ರ ಅಧಿನಿಯಮ 9ರ ಮೂಲಕ 1.4.1964 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ

**61. ರೆವಿನ್ಯೂ ನ್ಯಾಯಾಲಯಗಳ ಅನನ್ಯ ಅಧಿಕಾರವ್ಯಾಪ್ತಿ ಮತ್ತು ಸಿವಿಲ್ ನ್ಯಾಯಾಲಯಗಳ ಅಧಿಕಾರ ವ್ಯಾಪ್ತಿಗೆ ಪ್ರತಿಬಂಧ.–** (1) ಈ ಅಧಿನಿಯಮದಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಕಾನೂನಿನಲ್ಲಿ ಅನ್ಯಥಾ ಉಪಬಂಧಿಸಿರುವುದನ್ನುಳಿದು, ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ, ಯಾವ ವಿಷಯವನ್ನು ನಿರ್ಧರಿಸಲು,ತೀರ್ಮಾನಿಸಲು ಅಥವಾ ಇತ್ಯರ್ಥ ಮಾಡಲು ರೆವಿನ್ಯೂ ನ್ಯಾಯಾಲಯಕ್ಕೆ ಅಧಿಕಾರ ಕೊಡಲಾಗಿದೆಯೋ ಆ

ವಿಷಯವನ್ನು ನಿರ್ಧರಿಸಲು, ತೀರ್ಮಾನಿಸಲು ಅಥವಾ ವಿಲೇ ಮಾಡಲು ಆ ನ್ಯಾಯಾಲಯಕ್ಕೆ ಅಧಿಕಾರವ್ಯಾಪ್ತಿ ಇರತಕ್ಕದ್ದು ಮತ್ತು ಅಂಥ ಯಾವುದೇ ವಿಷಯದ ಬಗ್ಗೆ ಯಾವುದೇ ಸಿವಿಲ್ ನ್ಯಾಯಾಲಯವು ಅಧಿಕಾರವ್ಯಾಪ್ತಿಯನ್ನು ಹೊಂದಿರತಕ್ಕದ್ದಲ್ಲ.

(2) ಈ ಮುಂದೆ ನಿರ್ದಿಷ್ಟಪಡಿಸಿರುವ ವಿನಾಯಿತಿಗೊಳಪಟ್ಟು, ಯಾವುದೇ ಸಿವಿಲ್ ನ್ಯಾಯಾಲಯವು ಕೆಳಕಂಡ ಯಾವುವೇ ವಿಷಯಗಳ ಬಗ್ಗೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರತಕ್ಕದ್ದಲ್ಲ, ಎಂದರೆ:–

(ಎ) ಯಾವುದೇ ಹುದ್ದೆಗೆ ಅಥವಾ ಸೇವೆಗೆ ಸಂಬಂಧಪಟ್ಟ ಯಾವುದೇ ಸ್ವತ್ತಿನ ಬಗ್ಗೆ ಸರ್ಕಾರದ ವಿರುದ್ಧ ಕ್ಲೇಮುಗಳು;

(ಬಿ) (i) ಈ ಅಧಿನಿಯಮದ ಮೇರೆಗೆ ನಿರ್ಧರಣೆ ಮಾಡಿದ ಭೂಕಂದಾಯದ ಮೊಬಲಗು ಅಥವಾ ಅದರ ಹೊರೆ ಅಥವಾ;

(ii) ಕಂದಾಯ ನಿರ್ಧರಣೆಯ ಅಥವಾ ವಿಧಿಸುವಿಕೆಯ ರೀತಿ ಅಥವಾ ಯಾವ ತತ್ವದ ಮೇರೆಗೆ ಅಂಥ ಕಂದಾಯ ನಿರ್ಧರಣೆಯನ್ನು ಅಥವಾ ವಿಧಿಸುವಿಕೆಯನ್ನು ಗೊತ್ತುಪಡಿಸಲಾಗಿದೆಯೋ ಆ ತತ್ವ; ಅಥವಾ

(iii) ಮೋಜಣಿಯ ಅಥವಾ ಕಂದಾಯದ ವ್ಯವಸ್ಥೆಯ ಅಧಿಸೂಚನೆಯ ಕಾನೂನು ಸಮ್ಮತತೆ ಅಥವಾ ಪರಿಣಾಮ

– ಇವುಗಳ ಬಗ್ಗೆ ಆಕ್ಷೇಪಣೆಗಳು:

(ಸಿ) ಈ ಅಧಿನಿಯಮದ ಮೇರೆಗೆ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನ ಮೇರೆಗೆ ಭೂಕಂದಾಯದ ಅಥವಾ ಭೂಕಂದಾಯದ ಬಾಕಿಗಳಂತೆ ವಸೂಲು ಆಗಬೇಕಾಗಿರುವ ಬೇರೆ ತಗಾದೆಗಳ ವಸೂಲಿಯ ಬಗೆಗಿನ ಯಾವುವೇ ವ್ಯವಹರಣೆಗಳಿಗೆ ಸಂಬಂಧಿಸಿದ ಅಥವಾ ಅವುಗಳಿಂದ ಉದ್ಭವಿಸುವ ಕ್ಲೇಮುಗಳು;

(ಡಿ) ಭೂಕಂದಾಯ ಬಾಕಿಗಳ ಬಗ್ಗೆ ಆದ ಹರಾಜನ್ನು, ಮೋಸದ ಕಾರಣದ ಹೊರತು ಅಕ್ರಮ, ತಪ್ಪುಅಥವಾ ಇತರ ಯಾವುದೇ ಕಾರಣಕ್ಕಾಗಿ ತಳ್ಳಿಹಾಕಲು ಮಾಡಿದ ಕ್ಲೇಮುಗಳು;

(ಇ) (i) ಕಂದಾಯಕ್ಕೆ ಹೊಣೆಗಾರನೆಂದು ಅಥವಾ ಪ್ರಧಾನ ಹಿಡುವಳಿದಾರ, ಕನಿಷ್ಠ ಹಿಡುವಳಿದಾರ, ಅಧಿಭೋಗದಾರ, ಅಡಮಾನದಾರ, ಭೂಮಾಲೀಕ ಅಥವಾ ಗೇಣಿದಾರ–ಎಂದು ರೆವಿನ್ಯೂ ಮೋಜಣಿಯ ಅಥವಾ ಕಂದಾಯ ನಿರ್ಧರಣೆಯ ದಾಖಲೆಗಳಲ್ಲಿ ಅಥವಾ ಯಾವುದೇ ಭೂದಾಖಲೆಗಳಲ್ಲಿ ನಮೂದಿಸಿಕೊಳ್ಳಲು; ಅಥವಾ

(ii) ರೆವಿನ್ಯೂ ಮೋಜಣಿ ಅಥವಾ ಕಂದಾಯ ನಿರ್ಧರಣೆಯ ಯಾವುದೇ ದಾಖಲೆಯಲ್ಲಿ ಯಾವುದೇ ನಮೂದನೆಯನ್ನು ಮಾಡಿಕೊಳ್ಳಲು; ಅಥವಾ

(iii) ಅಂಥ ಯಾವುದೇ ನಮೂದನೆಯನ್ನು ಬಿಟ್ಟುಬಿಡುವಂತೆ ಮಾಡಲು ಅಥವಾ ತಿದ್ದುಪಡಿ ಮಾಡಿಸಿಕೊಳ್ಳಲು

– ಸರ್ಕಾರಕ್ಕೆ ಸಲ್ಲಿಸಿದ ಕ್ಲೇಮುಗಳು;

(ಎಫ್) ಈ ಅಧಿನಿಯಮದ ಮೇರೆಗೆ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ಯಾವುದೇ ಎಸ್ಟೇಟಿನ ವಿಭಜನೆಯಾದಾಗ ಭೂಮಿಯ ಹಂಚಿಕೆ ಅಥವಾ ಭೂಕಂದಾಯವನ್ನು ಗೊತ್ತು ಮಾಡುವಿಕೆ;

(ಜಿ) (i) ಭೂಕಂದಾಯವನ್ನು ಪೂರ್ತಿಯಾಗಿ ಅಥವಾ ಭಾಗಶಃ ಸಂದಾಯ ಮಾಡದೆ ಭೂಮಿಯನ್ನು ಹೊಂದಿರಲು; ಅಥವಾ

(ii) ಭೂಕಂದಾಯದ ಮೇಲೆ ಹೊರಿಸಿದ ಅಥವಾ ಭೂಕಂದಾಯದಿಂದ ಮಾಡಬೇಕಾಗಿರುವ ಸಂದಾಯಗಳನ್ನು ಸ್ವೀಕರಿಸಲು; ಅಥವಾ

(iii) ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನ ಉಪಬಂಧಗಳ ಮೇರೆಗೆ ಸಂದಾಯವಾಗಬೇಕಾಗಿರುವ ಯಾವುದೇ ಉಪಕರವನ್ನು ಅಥವಾ ದರವನ್ನು ತಳ್ಳಿ ಹಾಕಲು; ಅಥವಾ

(iv) ಸರ್ಕಾರಕ್ಕೆ ಸೇರಿದ ಬೀಳು ಅಥವಾ ಖಾಲಿ ಭೂಮಿಯ ಅಧಿಭೋಗಕ್ಕೆ ಸಂಬಂಧಿಸಿದಂತೆ

– ಸರ್ಕಾರಕ್ಕೆ ಸಲ್ಲಿಸಿದ ಕ್ಲೇಮುಗಳು;

(ಹೆಚ್) ಈ ಅಧಿನಿಯಮದ ಮೇರೆಗೆ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ಗೊತ್ತುಪಡಿಸಿದ ಎಲ್ಲೆಗಳ ಬಗ್ಗೆ ಅಥವಾ ಎಲ್ಲೆ ಗುರುತುಗಳ ಅಥವಾ ಮೋಜಣಿ ಗುರುತುಗಳ ಬಗ್ಗೆ ಅಂಥ ಕಾನೂನಿನ ಮೇರೆಗೆ ಸಕ್ಷಮ ಅಧಿಕಾರಿಯು ಮಾಡಿದ ಯಾವುದೇ ಆದೇಶವನ್ನು ತಳ್ಳಿ ಹಾಕುವ ಬಗ್ಗೆ ಕ್ಲೇಮುಗಳು:

ಪರಂತು, –

(ಎ) ಯಾರೇ ವ್ಯಕ್ತಿಯ ಅಥವಾ ವ್ಯಕ್ತಿಗಳ ವರ್ಗದ ಪರವಾಗಿ ಮೊದಲು ಇಲ್ಲದಿದ್ದ ಯಾವುದೇ ವಿನಾಯಿತಿಯನ್ನು ಸುಸ್ಪಷ್ಟವಾಗಿ ಕಲ್ಪಿಸಿದ, ಅಥವಾ ಅಂಥ ವಿನಾಯಿತಿಯನ್ನು ಸರ್ಕಾರಿ ದಾಖಲೆಯಲ್ಲಿ ತೋರಿಸಲಾಗಿದೆಯೆಂಬ ಅಥವಾ ನಿರ್ದಿಷ್ಟ ವರ್ಷಗಳ ಅವಧಿಯಲ್ಲಿ ಆ ವಿನಾಯತಿಯು ಇತ್ತು ಎಂಬ ಕಾರಣದ ಮೇಲೆ ಸ್ಪಷ್ಟವಾಗಿ ಸ್ಥಿರೀಕರಿಸುವ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ; ಅಥವಾ

(ಬಿ) ಅಂಥ ವಿನಾಯಿತಿಯನ್ನು ಸ್ಪಷ್ಟವಾಗಿ ಕಲ್ಪಿಸಿರುವ ಅಥವಾ ಸ್ಥಿರೀಕರಿಸಿರುವ ಸರ್ಕಾರವು ನೀಡಿರುವ ಯಾವುದೇ ಲಿಖಿತ ಮಂಜೂರಾತಿಯ ಮೇರೆಗೆ

– ಕಂದಾಯದ ಸಂದಾಯಕ್ಕೆ ಪೂರ್ತಿಯಾಗಿ ಅಥವಾ ಭಾಗಶಃ ವಿನಾಯಿತಿ ಇರುವ ಭೂಮಿಯನ್ನು ತಾನು ಹೊಂದಿದ್ದೇನೆಂದು ಯಾರೇ ವ್ಯಕ್ತಿಯು ಕ್ಲೇಮು ಮಾಡಿದರೆ, ಅಂಥ ಕ್ಲೇಮನ್ನು ಸಿವಿಲ್ ನ್ಯಾಯಾಲಯವು ನ್ಯಾಯಿಕ ಗಮನಕ್ಕೆ ತೆಗೆದುಕೊಳ್ಳತಕ್ಕದ್ದು.

**62. ಕೆಲವು ದಾವೆಗಳ ಉಳಿಸುವಿಕೆಗಳು.–** ಈ ಕೆಳಗಿನ ದಾವೆಗಳ ಪೈಕಿ ಯಾವುದೇ ದಾವೆಯನ್ನು ವಿಚಾರಣೆಗೆ ತೆಗೆದುಕೊಳ್ಳಲು 61ನೇ ಪ್ರಕರಣದಲ್ಲಿರುವುದು ಯಾವುದೂ ಸಿವಿಲ್ ನ್ಯಾಯಾಲಯವನ್ನು ಪ್ರತಿಬಂಧಿಸುವುದೆಂದು ಭಾವಿಸತಕ್ಕದ್ದಲ್ಲ; ಎಂದರೆ:

(ಎ) ಭೂಕಂದಾಯವೆಂದು ಕ್ಲೇಮು ಮಾಡಲಾದ ಅಥವಾ ಪ್ರತಿಭಟಿಸಿ ಅಥವಾ ಸಂದಾಯ ಮಾಡಿದ ಅಥವಾ ಯಾವ ಮೊಬಲಗನ್ನು ವಸೂಲು ಮಾಡಲು ರಾಜ್ಯ ಸರ್ಕಾರವು ಅಧಿಕಾರ ನೀಡಿರುವುದೋ ಆ ಮೊಬಲಗಿಗಿಂತ ವಸೂಲು ಮಾಡಿದ ಮೊಬಲಗು ಹೆಚ್ಚಾಗಿದೆಯೆಂಬ ಅಥವಾ ಅಂಥ ಮೊಬಲಗನ್ನು ಅಂಥ ಕ್ಲೇಮಿಗೆ, ಸಂದಾಯಕ್ಕೆ ಅಥವಾ ವಸೂಲಿಗೆ ಮುಂಚೆಯೇ ಪೂರ್ತಿಯಾಗಿ ಅಥವಾ ಭಾಗಶಃ ಸಂದಾಯ ಮಾಡಲಾಗಿದೆಯೆಂಬ ಅಥವಾ ವಾದಿಯು ಅಥವಾ ಅವನನ್ನು ಪ್ರತಿನಿಧಿಸುವ ವ್ಯಕ್ತಿಯು ಅಂಥ ಮೊಬಲಗಿಗೆ ಹೊಣೆಗಾರನಾದ ವ್ಯಕ್ತಿಯಲ್ಲ ಎಂಬ ಕಾರಣದ ಮೇಲೆ ಅಂಥ ಮೊಬಲಗಿನ ಬಗ್ಗೆ ವಿವಾದ ಎತ್ತಿ ರಾಜ್ಯ ಸರ್ಕಾರದ ವಿರುದ್ಧ ಹೂಡಿದ ದಾವೆಗಳು;

(ಬಿ) ಯಾವುದೇ ಭೂದಾಖಲೆಯಲ್ಲಿರುವ ಯಾವುದೇ ನಮೂದನೆಯಿಂದಾಗಿ ಯಾವುದೇ ಖಾಸಗಿ ಹಕ್ಕಿನ ಮೇಲೆ ಪರಿಣಾಮವಾಗಬಹುದಾಗಿದ್ದರೂ, ಅಂಥ ಖಾಸಗಿ ಹಕ್ಕನ್ನು ಸ್ಥಾಪಿಸುವ ಉದ್ದೇಶಕ್ಕಾಗಿ ಖಾಸಗಿ ವ್ಯಕ್ತಿಗಳ ನಡುವಣ ದಾವೆಗಳು;

(ಸಿ) ಪೂರ್ತಿ ಸರ್ವೇ ನಂಬರಿನ ಅಥವಾ ಸರ್ವೇ ನಂಬರಿನ ಪೋಡಿನ ಅಥವಾ ಅದರ ಭಾಗ ಆಗಿರುವ ಯಾವುದೇ ಭೂಮಿಯ ಸ್ವಾಧೀನಕ್ಕಾಗಿ ಖಾಸಗಿ ವ್ಯಕ್ತಿಗಳ ನಡುವಣ ದಾವೆಗಳು.

**63. ಸರ್ಕಾರದ ವಿರುದ್ಧ ಯಾವುದೇ ದಾವೆಯನ್ನು ಅಥವಾ ಇತರ ವ್ಯವಹರಣೆಯನ್ನು ಹೂಡುವುದಕ್ಕೆ ಮುಂಚೆ ವಾದಿಯು ಅಪೀಲು ಮಾಡಿಕೊಳ್ಳಲು ತನಗಿರುವ ಹಕ್ಕನ್ನು ಪೂರ್ತಿಯಾಗಿ ಬಳಸಿಕೊಳ್ಳತಕ್ಕದ್ದು.–** ರಾಜ್ಯ ಸರಕಾರದ ಅಥವಾ ರೆವಿನ್ಯೂ ಅಧಿಕಾರಿಯ ಯಾವುದೇ ಕಾರ್ಯದ ಅಥವಾ ಕಾರ್ಯಲೋಪದ ಕಾರಣದಿಂದಾಗಿ ರಾಜ್ಯ ಸರ್ಕಾರದ ವಿರುದ್ಧ ಯಾವುದೇ ದಾವೆಯನ್ನು ಅಥವಾ ಇತರ ವ್ಯವಹರಣೆಯನ್ನು ವಾದಿಯು ಹೂಡುವುದಕ್ಕೂ ಮೊದಲು ತತ್ಕಾಲದಲ್ಲಿ ಜಾರಿಯಲ್ಲಿರುವ ಕಾನೂನಿನ ಮೇರೆಗೆ ಅವಕಾಶವಿರುವಂಥ ಎಲ್ಲ ಅಪೀಲುಗಳನ್ನು, ಅಂಥ ದಾವೆಯನ್ನು ಅಥವಾ ವ್ಯವಹರಣೆಯನ್ನು ಯಾವ ಕಾಲದೊಳಗೆ ಹೂಡಲು ಅವಕಾಶ ಸಾಧ್ಯವಿತ್ತೋ ಆ ಕಾಲಪರಿಮಿತಿಯೊಳಗೇ ವಾದಿಯು ಹೂಡಿದ್ದಾನೆಂದು ಅವನು ಸಿದ್ಧಪಡಿಸಿದ ಹೊರತು, ಯಾವ ಸಿವಿಲ್ ನ್ಯಾಯಾಲಯವೂ ಅಂಥ ದಾವೆಯನ್ನು ಅಥವಾ ವ್ಯವಹರಣೆಯನ್ನು ವಿಚಾರಣೆಗೆ ತೆಗೆದುಕೊಳ್ಳತಕ್ಕದ್ದಲ್ಲ.

**64. ಉಚ್ಚ ನ್ಯಾಯಾಲಯದ ತೀರ್ಮಾನಕ್ಕಾಗಿ ಪ್ರಶ್ನೆಗಳನ್ನು ಒಪ್ಪಿಸಲು ನ್ಯಾಯಾಧಿಕರಣದ ಅಧಿಕಾರ.–**(1) ಈ ಅಧ್ಯಾಯದಲ್ಲಿ ಉಪಬಂಧ ಇಲ್ಲದಿದ್ದರೂ, ಸಿವಿಲ್ ನ್ಯಾಯಾಲಯವು ವಿಚಾರಣೆಗೆ ತೆಗೆದುಕೊಳ್ಳಬಹುದಾಗಿದ್ದ ಮತ್ತು ವಿಲೇ ಮಾಡಬಹುದಾಗಿದ್ದ ಯಾವುದೇ ಮೊಕದ್ದಮೆಯಲ್ಲಿ ಅಥವಾ ಅಂಥ ಮೊಕದ್ದಮೆಯಲ್ಲಿ ಮಾಡಿದ ಆದೇಶದ ವಿರುದ್ಧ ಸಲ್ಲಿಸಿದ ಯಾವುದೇ ಅಪೀಲಿನಲ್ಲಿ ಅಥವಾ ನಡೆಯುತ್ತಿರುವ ಇತರ ವ್ಯವಹರಣೆಯಲ್ಲಿ, ಉದ್ಭವಿಸಿದ ಯಾವುದೇ ಪ್ರಶ್ನೆ ಮೇಲೆ ನ್ಯಾಯಾಧಿಕರಣವು ತಾನಾಗಿಯೇ ಅಥವಾ ಹಿತಾಸಕ್ತಿಯುಳ್ಳ ಪಕ್ಷಕಾರನು ಅರ್ಜಿ ಸಲ್ಲಿಸಿದಾಗ, ಉಚ್ಚ ನ್ಯಾಯಾಲಯದ ತೀರ್ಮಾನವನ್ನು ಪಡೆಯಲಿಚ್ಛಿಸಿದರೆ, ನ್ಯಾಯಾಧಿಕರಣವು ಅಂಥ ಪ್ರಶ್ನೆಯನ್ನು ರೂಪಿಸಿ ಅದನ್ನು ಉಚ್ಚ ನ್ಯಾಯಾಲಯದ ತೀರ್ಮಾನಕ್ಕಾಗಿ ಒಪ್ಪಿಸಬಹುದು.

(2) ಒಪ್ಪಿಸಿದ ಆ ಪ್ರಶ್ನೆಯ ವಿಚಾರಣೆಗಾಗಿ ಉಚ್ಚ ನ್ಯಾಯಾಲಯವು ಶೀಘ್ರದಲ್ಲಿಯೇ ಒಂದು ದಿನವನ್ನು ಗೊತ್ತುಪಡಿಸತಕ್ಕದ್ದು ಮತ್ತು ಅಂಥ ದಿನದ ನೋಟೀಸನ್ನು ನ್ಯಾಯಾಲಯದ ಭವನದಲ್ಲಿ ಇರಿಸತಕ್ಕದ್ದು. ಮೊಕದ್ದಮೆಯ ಪಕ್ಷಕಾರರು ಖುದ್ದಾಗಿ ಅಥವಾ ತಮ್ಮ ನ್ಯಾಯವಾದಿಗಳ ಮುಖಾಂತರ ಹಾಜರಾಗಬಹುದು ಮತ್ತು ಉಚ್ಚ ನ್ಯಾಯಾಲಯವು ಅವರ ವಾದವನ್ನು ಕೇಳತಕ್ಕದ್ದು.

(3) ಉಚ್ಚ ನ್ಯಾಯಾಲಯವು ಮೊಕದ್ದಮೆಯಲ್ಲಿನ ವಾದವನ್ನು ಕೇಳಿ ಪರ್ಯಾಲೋಚಿಸಿದ ತರುವಾಯ, ತನ್ನ ತೀರ್ಮಾನದ ಒಂದು ಪ್ರತಿಯನ್ನು ಕಾರಣಗಳೊಂದಿಗೆ ಮತ್ತು ನ್ಯಾಯಾಲಯದ ಮೊಹರು ಹಾಕಿ ನ್ಯಾಯಾಧಿಕರಣಕ್ಕೆ ಕಳಿಸಿಕೊಡತಕ್ಕದ್ದು ಮತ್ತು ಸರ್ವೋಚ್ಚ ನ್ಯಾಯಾಲಯಕ್ಕೆ ಸಲ್ಲಿಸಬಹುದಾದ ಯಾವುದೇ ಅಪೀಲಿಗೊಳಪಟ್ಟು, ಆ ಮೊಕದ್ದಮೆಯನ್ನು ಅಂಥ ತೀರ್ಮಾನಕ್ಕನುಗುಣವಾಗಿ ವಿಲೆ ಮಾಡತಕ್ಕದ್ದು.

(4) ಉಪಪ್ರಕರಣ (1)ರ ಮೇರೆಗೆ ಒಪ್ಪಿಸಿದ ಯಾವುದೇ ಪ್ರಶ್ನೆಯನ್ನು ಅಪೂರ್ಣವಾಗಿ ರೂಪಿಸಲಾಗಿದೆಯೆಂದು ಉಚ್ಚ ನ್ಯಾಯಾಲಯವು ಭಾವಿಸಿದರೆ, ಅದನ್ನು ತಿದ್ದುಪಡಿಗಾಗಿ ವಾಪಸ್ಸು ಕಳಿಸಬಹುದು.

(5) ಹಾಗೆ ಉಲ್ಲೇಖ ಮಾಡಿದ ಕಾರಣದಿಂದಾಗಿ ಯಾವುದಾದರೂ ಖರ್ಚುಗಳಾಗಿದ್ದರೆ, ಆ ಬಗ್ಗೆ ಉಚ್ಚ ನ್ಯಾಯಾಲಯವು ಪ್ರತಿಯೊಂದು ಮೊಕದ್ದಮೆಯಲ್ಲಿ ನಿರ್ದೇಶಿಸುವ ರೀತಿಯಲ್ಲಿ ವ್ಯವಹರಿಸತಕ್ಕದ್ದು.

**65. ಅಧಿಕಾರ ವ್ಯಾಪ್ತಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಉಚ್ಚ ನ್ಯಾಯಾಲಯಕ್ಕೆ ಒಪ್ಪಿಸಲು ಸಿವಿಲ್ ನ್ಯಾಯಾಲಯದ ಅಧಿಕಾರ.–** (1) ಸಿವಿಲ್ ನ್ಯಾಯಾಲಯದಲ್ಲಿ ಹೂಡಿದ ಯಾವುದೇ ದಾವೆಯಲ್ಲಿ ಅಥವಾ ಸಲ್ಲಿಸಿದ ಯಾವುದೇ ಅಪೀಲಿನಲ್ಲಿ, ನ್ಯಾಯಾಧೀಶನು ಅಂಥ ದಾವೆಯನ್ನು ಅಥವಾ ಅಪೀಲನ್ನು ವಿಚಾರಣೆಗೆ ತೆಗೆದುಕೊಳ್ಳಲು ಮತ್ತು ವಿಲೆ ಮಾಡಲು ಈ ಅಧ್ಯಾಯದ ಪ್ರಕಾರ ತನಗೆ ಅಧಿಕಾರವ್ಯಾಪ್ತಿ ಇಲ್ಲವೆಂದು ಸಂದೇಹಪಟ್ಟರೆ, ಆ ವಿಷಯವನ್ನು ಅವನು ಉಚ್ಚ ನ್ಯಾಯಾಲಯಕ್ಕೆ ಒಪ್ಪಿಸಬಹುದು.

(2) ಉಲ್ಲೇಖ ಮಾಡಿದ್ದ ನ್ಯಾಯಾಧೀಶರಿಗೆ ಆ ಮೊಕದ್ದಮೆಯನ್ನು ಮುಂದುವರಿಸಲು ಅಥವಾ ವಾದಪತ್ರವನ್ನು ವಾಪಸ್ಸು ಮಾಡಲು ಉಚ್ಚ ನ್ಯಾಯಾಲಯವು ಆದೇಶ ಮಾಡಬಹುದು.

(3) ಅಂಥ ಯಾವುದೇ ಉಲ್ಲೇಖದ ಮೇಲೆ ಉಚ್ಚ ನ್ಯಾಯಾಲಯವು ಮಾಡಿದ ಆದೇಶವು ಸರ್ವೋಚ್ಚ ನ್ಯಾಯಾಲಯಕ್ಕೆ ಅಪೀಲನ್ನು ಸಲ್ಲಿಸುವುದಾದರೆ ಆ ಅಪೀಲಿನ ತೀರ್ಮಾನಕ್ಕೆ ಒಳಪಟ್ಟು ಅಂತಿಮವಾಗಿರತಕ್ಕದ್ದು.

**66. ನ್ಯಾಯಪೀಠದ ರಚನೆ.–** 64ನೆಯ ಪ್ರಕರಣದ ಅಥವಾ 65ನೆಯ ಪ್ರಕರಣದ ಮೇರೆಗಿನ ಪ್ರತಿಯೊಂದು ಉಲ್ಲೇಖವನ್ನು ಇಬ್ಬರಿಗಿಂತ ಕಡಿಮೆ ಇರದ ಉಚ್ಚ ನ್ಯಾಯಾಲಯದ ನ್ಯಾಯಾಧೀಶರನ್ನು ಒಳಗೊಂಡ ನ್ಯಾಯಪೀಠವು ವಿಚಾರಣೆ ಮಾಡತಕ್ಕದ್ದು.

## ಅಧ್ಯಾಯ–VII

## ಭೂಮಿ ಮತ್ತು ಭೂ ಕಂದಾಯ

### ಭೂಮಿ

**67. ಸರ್ಕಾರಿ ರಸ್ತೆ, ಇತ್ಯಾದಿಗಳು ಮತ್ತು ಇತರರಿಗೆ ಸೇರಿರದ ಎಲ್ಲ ಭೂಮಿಗಳು ಸರ್ಕಾರಕ್ಕೆ ಸೇರುತ್ತವೆ.–** (1) ಎಲ್ಲ ಸಾರ್ವಜನಿಕ ರಸ್ತೆಗಳು, ಬೀದಿಗಳು, ಓಣಿಗಳು ಮತ್ತು ಹಾದಿಗಳು, ಸೇತುವೆಗಳು, ನೀರಿನ ಹಳ್ಳಗಳು, ಒಡ್ಡುಗಳು ಮತ್ತು ಅವುಗಳ ಮೇಲೆ ಅಥವಾ ಪಕ್ಕದಲ್ಲಿರುವ ಬೇಲಿಗಳು, ಮತ್ತು ಸಮುದ್ರದ ಮತ್ತು ಬಂದರುಗಳ ತಳಗಳು ಮತ್ತು ನೀರಿನ ಏರುಮಟ್ಟದ ಗುರುತಿನ ಕೆಳಗಿನ ಮತ್ತು ನದಿಗಳ ಚಾಚುಗಳು, ತೊರೆಗಳು, ನಾಲೆಗಳು, ಸರೋವರಗಳು ಮತ್ತು ಕೆರೆಗಳು ಮತ್ತು ಎಲ್ಲ ಕಾಲುವೆಗಳು ಮತ್ತು ಸಣ್ಣ ಹೊಳೆಗಳು ಮತ್ತು ಎಲ್ಲ ನಿಂತ ಮತ್ತು ಹರಿಯುತ್ತಿರುವ ನೀರಿನ ತಳಗಳು ಮತ್ತು ವ್ಯಕ್ತಿಗಳಿಗೆ ಅಥವಾ ಸ್ವತ್ತನ್ನು ಹೊಂದಿರಲು ಕಾನೂನು ಸಮ್ಮತವಾಗಿ ಅರ್ಹರಾಗಿರುವ ವ್ಯಕ್ತಿಗಳ ಸಮೂಹಕ್ಕೆ ಸೇರಿರದ ಎಲ್ಲ ಭೂಮಿಗಳು, ಅವು ಎಲ್ಲಿಯೇ ಇರಲಿ ಮತ್ತು ಅವುಗಳಲ್ಲಿ ಅಥವಾ ಅವುಗಳ ಮೇಲೆ ಅಂಥ ವ್ಯಕ್ತಿಗಳ ಹಕ್ಕುಗಳನ್ನು ಸ್ಥಾಪಿಸಬಹುದಾದಷ್ಟರ ಮಟ್ಟಿಗೆ ಹೊರತುಪಡಿಸಿ, ಮತ್ತು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಅನ್ಯಥಾ ಉಪಬಂಧಿಸಬಹುದಾದುದನ್ನು ಹೊರತು ಪಡಿಸಿ, ಅವುಗಳಲ್ಲಿ ಅಥವಾ ಅವುಗಳ ಮೇಲೆ ಅಥವಾ ಅವುಗಳಿಗೆ ಸಂಬಂಧಿಸಿದ ಎಲ್ಲ ಹಕ್ಕುಗಳೊಂದಿಗೆ, ಅವು ರಾಜ್ಯ ಸರಕಾರದ ಸ್ವತ್ತಾಗಿರುತ್ತವೆ ಮತ್ತು ಸ್ವತ್ತಾಗಿರುವುವು ಎಂದು ಈ ಮೂಲಕ ಘೋಷಿಸಲಾಗಿದೆ.

**ವಿವರಣೆ:-** ಈ ಪ್ರಕರಣದಲ್ಲಿ, "ನೀರಿನ ಏರು ಮಟ್ಟದ ಗುರುತು" ಎಂದರೆ, ವರ್ಷದ ಯಾವುದೇ ಋತುವಿನಲ್ಲಿ ಸಾಮಾನ್ಯವಾಗಿ ನೀರು ಉಕ್ಕೇರಿ ಮುಟ್ಟಿದ ಅತ್ಯುನ್ನತ ಮಟ್ಟ.

(2) ರಾಜ್ಯ ಸರ್ಕಾರವು ಅಥವಾ ಅದರ ಪರವಾಗಿ ಅಥವಾ ರಾಜ್ಯ ಸರ್ಕಾರದ ವಿರುದ್ಧವಾಗಿ ಯಾರೇ ವ್ಯಕ್ತಿಯು ಯಾವುದೇ ಸ್ವತ್ತನ್ನು ಅಥವಾ ಯಾವುದೇ ಸ್ವತ್ತಿನಲ್ಲಿ ಅಥವಾ ಸ್ವತ್ತಿನ ಮೇಲಿನ ಹಕ್ಕನ್ನು ಕ್ಲೇಮು ಮಾಡಿರುವಲ್ಲಿ, ಡೆಪ್ಯುಟಿ ಕಮಿಷನರು ಅಥವಾ ಡೆಪ್ಯುಟಿ ಕಮಿಷನರರ ದರ್ಜೆಗೆ ಕಡಿಮೆ ಇರದ ದರ್ಜೆಯ ಮೋಜಣಿ ಅಧಿಕಾರಿಯು ಕ್ರಮಾನುಸಾರವಾದ ತನಿಖೆಯ ತರುವಾಯ ಆ ಕ್ಲೇಮನ್ನು ತೀರ್ಮಾನಿಸುವ ಆದೇಶವನ್ನು ಮಾಡುವುದು ಕಾನೂನು ಬದ್ಧವಾಗಿರತಕ್ಕದ್ದು.

(3) ಉಪ ಪ್ರಕರಣ (2)ರ ಮೇರೆಗೆ ಮಾಡಿದ ಆದೇಶದಿಂದ ಅಥವಾ ಆ ಆದೇಶದ ವಿರುದ್ಧ ಸಲ್ಲಿಸಿದ ಅಪೀಲಿನಲ್ಲಿ ಅಥವಾ ಆ ಆದೇಶದ ಪುನರೀಕ್ಷಣೆಯಲ್ಲಿ ಮಾಡಿದ ಆದೇಶದಿಂದ ಬಾಧಿತನಾದ ಯಾರೇವ್ಯಕ್ತಿಯು ಅಂಥ ಆದೇಶದ ದಿನಾಂಕದಿಂದ ಒಂದು ವರ್ಷದ ಅವಧಿಯೊಳಗಾಗಿ ಆದೇಶವನ್ನು ವಿರೋಧಿಸಲು ಸಿವಿಲ್ ದಾವೆಯನ್ನು ಹೂಡಬಹುದು ಮತ್ತು ಆ ಸಿವಿಲ್ ದಾವೆಯಲ್ಲಿ ಆದ ಅಂತಿಮ ಅಂತಿಮ ತೀರ್ಮಾನಕ್ಕೆ ಪಕ್ಷಕಾರರಿಗೆ ಬದ್ಧರಾಗಿರತಕ್ಕದ್ದು.

**68. ಸಾರ್ವಜನಿಕರ ಬಳಕೆಗೆ ಅಗತ್ಯವಿರದಂಥ ಸಾರ್ವಜನಿಕ ರಸ್ತೆ, ಬೀದಿ, ಓಣಿ ಅಥವಾ ಹಾದಿ ಇವುಗಳಲ್ಲಿ ಅಥವಾ ಇವುಗಳ ಮೇಲೆ ಸಾರ್ವಜನಿಕರಿಗೆ ಮತ್ತು ವ್ಯಕ್ತಿಗಳಿಗೆ ಇರುವ ಹಕ್ಕುಗಳು ನಿಂತುಹೋಗುವಿಕೆ.-** (1) ರಾಜ್ಯ ಸರ್ಕಾರದ ಸ್ವತ್ತಾಗಿರುವ ಯಾವುದೇ ಸಾರ್ವಜನಿಕ ರಸ್ತೆ, ಬೀದಿ, ಓಣಿ ಅಥವಾ ಹಾದಿ ಇವುಗಳು ಪೂರ್ತಿಯಾಗಿ ಅಥವಾ ಭಾಗಶಃ ಸಾರ್ವಜನಿಕರ ಬಳಕೆಗೆ ಅಗತ್ಯವಾಗಿಲ್ಲವೆಂದು ರಾಜ್ಯ ಸರ್ಕಾರಕ್ಕೆ ಕಂಡು ಬಂದಾಗ, ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ, ಹಾಗೆಂದು ಘೋಷಿಸಬಹುದು ಮತ್ತು ಸಂದರ್ಭಾನುಸಾರ, ಅಂಥ ಯಾವುದೇ ರಸ್ತೆ, ಬೀದಿ, ಓಣಿ ಅಥವಾ ಹಾದಿ ಅಥವಾ ಅವುಗಳ ಯಾವುದೇ ಭಾಗದಲ್ಲಿ ಅಥವಾ ಅವುಗಳ ಮೇಲೆ ಇರುವ ಸಾರ್ವಜನಿಕರ ಹಾಗೂ ಎಲ್ಲ ವ್ಯಕ್ತಿಗಳ ಹಕ್ಕುಗಳೂ ನಿಂತು ಹೋಗತಕ್ಕದ್ದೆಂದು ಪ್ರಸ್ತಾಪಿಸಲಾಗಿದೆಯೆಂದು ಆ ಘೋಷಣೆಯಲ್ಲಿ ನಿರೂಪಿಸಿರತಕ್ಕದ್ದು ಅಂಥ ಅಧಿಸೂಚನೆಯು ಪ್ರಕಟವಾದ ಮೇಲೆ, ಡೆಪ್ಯುಟಿ ಕಮಿಷನರು, ಸಾಧ್ಯವಿದ್ದಷ್ಟು ಬೇಗನೆ, ಅಂಥ ಘೋಷಣೆಯ ಬಗ್ಗೆ ಸಾರ್ವಜನಿಕ ನೋಟೀಸನ್ನು ಸಂದರ್ಭಾನುಸಾರ ಅಂಥ ರಸ್ತೆ, ಬೀದಿ, ಓಣಿ ಅಥವಾ ಹಾದಿ ಅಥವಾ ಅವುಗಳ ಭಾಗದ ಮೇಲೆ ಅಥವಾ ಅವುಗಳ ಸಮೀಪದಲ್ಲಿನ ಅನುಕೂಲವಾದ ಸ್ಥಳಗಳಲ್ಲಿ ಪ್ರಕಟಿಸುವಂತೆ ಮಾಡತಕ್ಕದ್ದು. ಅಂಥ ಘೋಷಣೆಯಲ್ಲಿ ಮತ್ತು ನೋಟೀಸನ್ನು ಕಾರ್ಯ ಸಾಧ್ಯವಾದಷ್ಟು ಮಟ್ಟಿಗೆ, ಅಂಥ ರಸ್ತೆ, ಬೀದಿ, ಓಣಿ ಅಥವಾ ಹಾದಿ ಅಥವಾ ಅವುಗಳ ಭಾಗವು ಇರುವ ಸ್ಥಳವನ್ನು ಮತ್ತು ಅವುಗಳ ಎಲ್ಲೆಗಳನ್ನು ನಿರ್ದಿಷ್ಟಪಡಿಸತಕ್ಕದ್ದು, ಮತ್ತು ಮೇಲೆ ಹೇಳಿದ ಪ್ರಸ್ತಾಪಗಳಿಗೆ ಆಕ್ಷೇಪಣೆಗಳೇನಾದರೂ ಇದ್ದರೆ ತಿಳಿಸಬೇಕೆಂದು ಕೇಳತಕ್ಕದ್ದು.

(2) ಅಂಥ ರಸ್ತೆ, ಬೀದಿ, ಓಣಿ ಅಥವಾ ಹಾದಿ ಅಥವಾ ಅವುಗಳ ಯಾವುದೇ ಭಾಗ ಇವುಗಳಲ್ಲಿ ಅಥವಾ ಇವುಗಳ ಮೇಲೆ ಸಾರ್ವಜನಿಕ ಹೆದ್ದಾರಿಯ ಹಕ್ಕಿನ ಜೊತೆಗೆ ಯಾವುದೇ ಹಿತಾಸಕ್ತಿಯನ್ನು ಅಥವಾ ಹಕ್ಕನ್ನು ಉಳ್ಳ ಅಥವಾ ಆ ಪ್ರಸ್ತಾಪದಿಂದ ಪ್ರತಿಕೂಲ ಪರಿಣಾಮಕ್ಕೊಳಗಾಗಬಹುದಾದ ಸಂಭವವಿರುವ ಇತರ ಯಾವುದೇ ಹಿತಾಸಕ್ತಿಯನ್ನು ಅಥವಾ ಹಕ್ಕನ್ನು ಉಳ್ಳ ಯಾರೇ ಸಾರ್ವಜನಿಕ ವ್ಯಕ್ತಿಯು ಅಥವಾ ಯಾರೇ ವ್ಯಕ್ತಿಯು, (1)ನೇ ಉಪ ಪ್ರಕರಣದ ಮೇರೆಗೆ ಅಧಿಸೂಚನೆಯನ್ನು ಹೊರಡಿಸಿದ ತರುವಾಯದ [1][ಒಂದು ತಿಂಗಳೊಳಗಾಗಿ][1], ಆ ಪ್ರಸ್ತಾಪದ ಬಗ್ಗೆ ತನಗಿರುವ ಆಕ್ಷೇಪಗಳು, ತನ್ನ ಹಿತಾಸಕ್ತಿಯ ಅಥವಾ ಹಕ್ಕಿನ ಸ್ವರೂಪ, ಮತ್ತು ಅದರಿಂದ ತಾನು ಪ್ರತಿಕೂಲ ಪರಿಣಾಮಕ್ಕೊಳಗಾಗಬಹುದಾದ ರೀತಿ ಮತ್ತು ಅಂಥ ಹಿತಾಸಕ್ತಿಯ ಅಥವಾ ಹಕ್ಕಿನ ಬಗೆಗಿನ ಪರಿಹಾರಕ್ಕೆ ಸಂಬಂಧಿಸಿದ ತನ್ನ ಕ್ಲೇಮಿನ ಮೊಬಲಗು ಮತ್ತು ವಿವರಗಳು ಇವುಗಳನ್ನು ಬರಹದಲ್ಲಿ ಡೆಪ್ಯುಟಿ ಕಮಿಷನರಿಗೆ ತಿಳಿಸಬಹುದು:

ಪರಂತು, ಯಾರೇ ವ್ಯಕ್ತಿಯು ಸದರಿ ಅವಧಿಯೊಳಗಾಗಿ ಹಾಗೆ ಲಿಖಿತದಲ್ಲಿ ತಿಳಿಸದಿರಲು ಸಾಕಷ್ಟು ಕಾರಣವಿತ್ತೆಂಬ ಬಗ್ಗೆ ಡೆಪ್ಯುಟಿ ಕಮಿಷನರಿಗೆ ಮನದಟ್ಟಾದರೆ, ಅವರು ಅಂಥ ವ್ಯಕ್ತಿಗೆ (1)ನೇ ಉಪ ಪ್ರಕರಣದ ಮೇರೆಗೆ, ಅಧಿಸೂಚನೆಯನ್ನು ಹೊರಡಿಸಿದ ಬಳಿಕ [1][ಒಂದು ತಿಂಗಳ][1] ತರುವಾಯ, ಹಾಗೆ ಬರಹದಲ್ಲಿ ತಿಳಿಸಲು ಅವಕಾಶ ಕೊಡಬಹುದು.

(3) ಡೆಪ್ಯುಟಿ ಕಮಿಷನರರನು, (2)ನೇ ಉಪ ಪ್ರಕರಣದ ಮೇರೆಗೆ ತನಗೆ ಬರಹದಲ್ಲಿ ತಿಳಿಸಿರುವ ಪ್ರತಿಯೊಬ್ಬ ವ್ಯಕ್ತಿಗೆ, ಖುದ್ದಾಗಿ ಅಥವಾ ವಕೀಲನ ಮೂಲಕ ಅಹವಾಲು ಹೇಳಿಕೊಳ್ಳಲು ಅವಕಾಶ ಕೊಡತಕ್ಕದ್ದು ಮತ್ತು ಅವಶ್ಯವೆಂದು ತಾನು ಅಲೋಚಿಸುವಂಥ ರೀತಿಯಲ್ಲಿ ಆ ಎಲ್ಲ ವ್ಯಕ್ತಿಗಳ ಅಹವಾಲು ಕೇಳಿದ ತರುವಾಯ ಮತ್ತು ಮುಂದಿನ ತನಿಖೆ ಮಾಡುದಾದರೂ ಇದ್ದರೆ, ಅದನ್ನು ಮಾಡಿದ ತರುವಾಯ, ಪ್ರಸ್ತಾಪಿತವಾದಂತೆ ಸಾರ್ವಜನಿಕರ ಹಾಗೂ ಮೊದಲು

ಹೇಳಿದಂಥ ವ್ಯಕ್ತಿಗಳ ಹಕ್ಕು ನಿಂತುಹೋಗುವುದರಿಂದ ಉಂಟಾಗಬಹುದಾದಂಥ ಗಣನಾರ್ಹವಾದ ನಷ್ಟ ಅಥವಾ ಹಾನಿಯ ಬಗ್ಗೆ ಯಾವುದೇ ಸಂದರ್ಭದಲ್ಲಿ, ಏನಾದರೂ ನಷ್ಟ ಪರಿಹಾರವನ್ನು ಕೊಡಬೇಕೆಂದು ಅವರು ಅಭಿಪ್ರಾಯಪಟ್ಟರೆ ಅದರ ಮೊತ್ತವನ್ನು ನಿರ್ಧರಿಸತಕ್ಕದ್ದು, ಭೂಸ್ವಾಧೀನ ಅಧಿನಿಯಮ, 1894ರ (ಕೇಂದ್ರ ಅಧಿನಿಯಮ 1894ರ 1) 9ನೇ, 10ನೇ ಮತ್ತು 11ನೇ ಪ್ರಕರಣದ ಉಪಬಂಧಗಳು, ಈ ಉಪ ಪ್ರಕರಣದ ಮೇರೆಗೆ ಡೆಪ್ಯುಟಿ ಕಮಿಷನರು ನಡೆಸಿದ ವ್ಯವಹರಣೆಗಳಿಗೆ ಸಾಧ್ಯವಿರುವಷ್ಟರ ಮಟ್ಟಿಗೆ, ಅನ್ವಯವಾಗತಕ್ಕದ್ದು.

(4) ಡೆಪ್ಯುಟಿ ಕಮಿಷನರು ತಾನು ನಡೆಸಿದ ವ್ಯವಹರಣೆಗಳ ದಾಖಲೆಯನ್ನು, ತನಗೆ ಯಾವುದಾದರೂ ಆಕ್ಷೇಪಣೆಗಳು ಬಂದಿದ್ದರೆ, ಆ ಬಗ್ಗೆ ತನ್ನ ಶಿಫಾರಸ್ಸುಗಳನ್ನೊಳಗೊಂಡ ವರದಿಯನ್ನು ಯಾರೇ ಇಂತಿಷ್ಟು ವ್ಯಕ್ತಿಗೆ ನಷ್ಟ ಪರಿಹಾರ ಮೊತ್ತವನ್ನು ಸಂದಾಯ ಮಾಡಬಹುದಾಗಿದೆಯೆಂದು ಅಭಿಪ್ರಾಯಪಡುವರೋ ಆ ಮೊತ್ತವನ್ನು ಸೂಚಿಸಿ, ರಾಜ್ಯ ಸರಕಾರಕ್ಕೆ ಒಪ್ಪಿಸತಕ್ಕದ್ದು.

(5) ರಾಜ್ಯ ಸರ್ಕಾರವು, ವ್ಯವಹರಣೆಗಳ ದಾಖಲೆಯನ್ನು ಮತ್ತು ಉಪಪ್ರಕರಣ (4)ರ ಮೇರೆಗೆ ವರದಿಯನ್ನೇನಾದರೂ ಸಲ್ಲಿಸಿದ್ದರೆ ಅದನ್ನು, ಪರ್ಯಾಲೋಚಿಸಿದ ತರುವಾಯ, (1)ನೇ ಉಪಪ್ರಕರಣದ ಮೇರೆಗಿನ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿದ ಸಾರ್ವಜನಿಕ ರಸ್ತೆ, ಬೀದಿ, ಓಣಿ ಅಥವಾ ಹಾದಿ ಅಥವಾ ಅವುಗಳ ಭಾಗಗಳು ಸಾರ್ವಜನಿಕ ಬಳಕೆಗೆ ಅಗತ್ಯವಿಲ್ಲವೆಂದು ರಾಜ್ಯ ಸರ್ಕಾರಕ್ಕೆ ಮನದಟ್ಟಾದರೆ, ಅಂಥ ರಸ್ತೆ, ಬೀದಿ, ಓಣಿ ಅಥವಾ ಹಾದಿಗಳಲ್ಲಿ ಅಥವಾ ಅವುಗಳ ಭಾಗಗಳಲ್ಲಿ ಅಥವಾ ಅವುಗಳ ಮೇಲೆ ಇರುವ ಸಾರ್ವಜನಿಕರ ಹಾಗೂ ಎಲ್ಲ ವ್ಯಕ್ತಿಗಳ ಎಲ್ಲ ಹಕ್ಕುಗಳು ನಿಂತುಹೋಗಿವೆ ಎಂದು ಘೋಷಣೆಯನ್ನು ಸರಕಾರಿ ಗೆಜೆಟ್‌ನಲ್ಲಿ ಪ್ರಕಟಿಸತಕ್ಕದ್ದು; ಮತ್ತು ಆ ತರುವಾಯ ಅಂಥ ಎಲ್ಲ ಹಕ್ಕುಗಳು ನಿಂತುಹೋಗತಕ್ಕದ್ದು ಮತ್ತು ಅಂಥ ಘೋಷಣೆಯ ದಿನಾಂಕದಿಂದ ಅಂಥ ರಸ್ತೆ, ಬೀದಿ, ಓಣಿ ಅಥವಾ ಹಾದಿ ಅಥವಾ ಅವುಗಳ ಭಾಗಗಳು ರಾಜ್ಯ ಸರ್ಕಾರದ ವಿಲೇ ಮಾಡುವ ಅಧಿಕಾರಕ್ಕೊಳಪಟ್ಟಿರತಕ್ಕದ್ದು.

(6) ನಷ್ಟ ಪರಿಹಾರದ ಮೊಬಲಗಿನ ಬಗ್ಗೆ ಮತ್ತು ಅಂಥ ನಷ್ಟ ಪರಿಹಾರವನ್ನೇನಾದರೂ, ಯಾರಿಗೆ ಸಂದಾಯ ಮಾಡಬೇಕಾಗಿದೆಯೋ, ಆ ವ್ಯಕ್ತಿಯ ಬಗ್ಗೆ ಡೆಪ್ಯುಟಿ ಕಮಿಷನರ ತೀರ್ಮಾನವು, Vನೇ ಅಧ್ಯಾಯದ ಮೇರೆಗೆ ಅವಕಾಶವಿರುವ ಅಪೀಲುಗಳಿಗೆ ಅಥವಾ ಪುನರೀಕ್ಷಣೆಗಳಿಗೆ ಒಳಪಟ್ಟು ಅಂತಿಮವಾಗಿರತಕ್ಕದ್ದು. ಮತ್ತು ಅದಕ್ಕನುಸಾರವಾಗಿ ಡೆಪ್ಯುಟಿ ಕಮಿಷನರು ಅಂಥ ವ್ಯಕ್ತಿಗಳಿಗೆ ಅದನ್ನು ಸಂದಾಯಮಾಡತಕ್ಕದ್ದು.

1. 2020ರ ಅಧಿನಿಯಮ 22ರ ಮೂಲಕ ದಿನಾಂಕ: 15.10.2020ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][**69. 67ನೇ ಪ್ರಕರಣದ ಮೇರೆಗೆ ರಾಜ್ಯ ಸರ್ಕಾರಕ್ಕೆ ಸೇರಿರುವ ಭೂಮಿಗಳ ಅಥವಾ ಇತರ ಸ್ವತ್ತಿನ ವಿಲೇವಾರಿ.–** ಈ ಸಂಬಂಧದಲ್ಲಿ ಮಾಡಬಹುದಾದಂತಹ ನಿಯಮಗಳಿಗೊಳಪಟ್ಟು, [2][ರಾಜ್ಯ ಸರ್ಕಾರವು, ರೀಜನಲ್ ಕಮೀಷನರು,][2] [3][**XXX**][3], ಡೆಪ್ಯುಟಿ ಕಮಿಷನರು ತಾಲ್ಲೂಕು ಅಥವಾ ತಾಲ್ಲೂಕುಗಳ ಆಡಳಿತವನ್ನು ಹೊಂದಿರುವ ಅಸಿಸ್ಟೆಂಟ್ ಕಮಿಷನರು, ಮತ್ತು ತಹಶೀಲದಾರನು 67ನೇ ಪ್ರಕರಣದ ಮೇರೆಗೆ ಅಥವಾ ಅನ್ಯಥಾ ರಾಜ್ಯ ಸರ್ಕಾರಕ್ಕೆ ಸೇರಿದ ಭೂಮಿಯನ್ನು ಅಥವಾ ಇತರ ಸ್ವತ್ತನ್ನು ಬೇಸಾಯ, ಕೈಗಾರಿಕೆ ಅಥವಾ ಯಾವುದೇ ಸಾರ್ವಜನಿಕ ಉಪಯುಕ್ತತೆಯ ಉದ್ದೇಶಗಳಿಗಾಗಿ ಮತ್ತು XII ಅಧ್ಯಾಯದ ಉಪಬಂಧಗಳಿಗೊಳಪಟ್ಟು ಕಟ್ಟಡಗಳ ರಚನೆಯ ಸಲುವಾಗಿ ವಿಲೇ ಮಾಡಬಹುದು.][1]

1. 1970ರ ಅಧಿನಿಯಮ 5ರ ಮೂಲಕ 23.10.1969 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
2. 2007ರ ಅಧಿನಿಯಮ 17ರ ಮೂಲಕ 5.1.2007 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
3. 2003ರ ಅಧಿನಿಯಮ 21ರ ಮೂಲಕ 26.05.2003 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

[1][**69ಎ. ರಾಜ್ಯ ಸರ್ಕಾರಕ್ಕೆ ಸೇರಿರುವ ಭೂಮಿಗಳನ್ನು ಅಥವಾ ಇತರ ಸ್ವತ್ತನ್ನು ಬಹಿರಂಗ ಹರಾಜಿನ ಮೂಲಕ ವಿಲೇವಾರಿ ಮಾಡುವುದು.**–(1) *ಅಧಿನಿಯಮದ 69ನೇ ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಈ ಬಗ್ಗೆ* ನಿಯಮಿಸಬಹುದಾದಂಥ ನಿಯಮಗಳಿಗೆ ಒಳಪಟ್ಟು, ರಾಜ್ಯ ಸರ್ಕಾರವು ಅಥವಾ ಅಧಿಕೃತ ಅಧಿಕಾರಿಯು, ರಾಜ್ಯ ಸರ್ಕಾರಕ್ಕೆ ಸೇರಿದ ಬೆಲೆಯುಳ್ಳ ಭೂಮಿಯನ್ನು ಅಥವಾ ಇತರ ಸ್ವತ್ತನ್ನು 67ನೇ ಪ್ರಕರಣದ ಮೇರೆಗೆ ಅಥವಾ ಬಹಿರಂಗ ಹರಾಜಿನ ಮೂಲಕ ವಿಲೇ ಮಾಡಬಹುದು.

ಪರಂತು, ಈ ಪ್ರಕರಣದ ಮೇರೆಗೆ ಪಾರಂಪರಿಕ ನಿವೇಶನಗಳು ಮತ್ತು ಕಟ್ಟಡಗಳು ಅಥವಾ ಸ್ಮಾರಕಗಳನ್ನು ವಿಲೇ ಮಾಡತಕ್ಕದ್ದಲ್ಲ.

[2][ಮತ್ತು ಪರಂತು, ನಗರ ಪ್ರದೇಶಗಳಲ್ಲಿನ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಗಳಿಂದ 18 ಕಿಲೋ ಮೀಟರುಗಳವರೆಗಿನ, ಇತರ ನಗರ ಪಾಲಿಕೆಗಳ ವ್ಯಾಪ್ತಿಗಳಿಂದ 5 ಕಿಲೋ ಮೀಟರುಗಳವರೆಗಿನ ಭೂ ಬಂಧಿತ ಸರ್ಕಾರಿ ಖರಾಬು ಭೂಮಿಯನ್ನು 68ನೇ ಪ್ರಕರಣದ ಅಡಿಯಲ್ಲಿ ಸಾರ್ವಜನಿಕ ಹಕ್ಕನ್ನು

ಅಂತ್ಯಗೊಳಿಸುವಿಕೆಯ ತರುವಾಯ ಸರ್ಕಾರವು ನಿಯಮಿಸಬಹುದಾದ ಅಂಥ ವಿಧಾನದಲ್ಲಿ, ಆದರೆ ಚಾಲ್ತಿಯಲ್ಲಿರುವ ಮಾರುಕಟ್ಟೆ ಮಾರ್ಗಸೂಚಿ ಮೌಲ್ಯಕ್ಕೆ ಕಡಿಮೆಯಲ್ಲದ ಅಂಥ ದರಗಳಲ್ಲಿ ವಿಲೇವಾರಿ ಮಾಡಬಹುದು:

ಅಲ್ಲದೆ ಪರಂತು, ಕರ್ನಾಟಕ ಭೂ ಕಂದಾಯ (ಎರಡನೇ ತಿದ್ದುಪಡಿ) ಅಧಿನಿಯಮ, 2020ರ ಪ್ರಾರಂಭಕ್ಕೆ ಮೊದಲು ಸೊಸೈಟಿಗಳಿಗೆ, ಧರ್ಮಾರ್ಥ ಅಥವಾ ಧಾರ್ಮಿಕ ಸಂಸ್ಥೆಗಳಿಗೆ ಅಥವಾ ಶೈಕ್ಷಣಿಕ ಸಂಸ್ಥೆಗಳಿಗೆ ಅಥವಾ ಕೃಷಿ ಅಥವಾ ಇತರ ಉದ್ದೇಶಗಳಿಗೆ ಹದಿನೈದು ವರ್ಷಗಳಿಗಿಂತ ಹೆಚ್ಚಿಗೆ ಗುತ್ತಿಗೆ ನೀಡಿದ ಸರ್ಕಾರಿ ಭೂಮಿಗಳ ಮಂಜೂರಾತಿಯನ್ನು ಸರ್ಕಾರಕ್ಕೆ ಅಗತ್ಯವಿಲ್ಲವೆಂದು ಖಚಿತಪಡಿಸಿಕೊಂಡ ತರುವಾಯ ಏಕಕಾಲ ಕ್ರಮಜರುಗಿಸುವಿಕೆಯಂತೆ ನಿಯಮಿಸಬಹುದಾದ ಅಂಥ ವಿಧಾನದಲ್ಲಿ, ಅಂಥ ದರಗಳಲ್ಲಿ, ಅದೇ ಉದ್ದೇಶಕ್ಕಾಗಿಯಾದಲ್ಲಿ, ಚಾಲ್ತಿಯಲ್ಲಿರುವ ಮಾರುಕಟ್ಟೆ ಮೌಲ್ಯ ಮಾರ್ಗಸೂಚಿಗಳಿಗೆ ಕಡಿಮೆಯಲ್ಲದ ದರದಲ್ಲಿ, ಇತರ ಉದ್ದೇಶಕ್ಕಾಗಿಯಾದಲ್ಲಿ, ಚಾಲ್ತಿಯಲ್ಲಿರುವ ಮಾರುಕಟ್ಟೆ ಮಾರ್ಗಸೂಚಿ ಮೌಲ್ಯಕ್ಕೆ ಕಡಿಮೆಯಲ್ಲದ ದುಪ್ಪಟ್ಟು ದರದಲ್ಲಿ ಸರ್ಕಾರವು ವಿಲೇವಾರಿ ಮಾಡತಕ್ಕದ್ದು.][2]

(2) ಡೆಪ್ಯೂಟಿ ಕಮೀಷನರ್ ಅಥವಾ ಅಧಿಕೃತ ಅಧಿಕಾರಿಯು, ಸ್ಥಿರ ಸ್ವತ್ತಿನ ಮಾರಾಟದ ದಿನಾಂಕದಿಂದ ಮೂವತ್ತು ದಿನಗಳ ಮುಕ್ತಾಯದ ತರುವಾಯ (1)ನೇ ಉಪ ಪ್ರಕರಣದ ಮೇರೆಗೆ ಆದೇಶದ ಮೂಲಕ ಮಾರಾಟವನ್ನು ಸ್ಥಿರೀಕರಿಸಬಹುದು.

**ವಿವರಣೆ.–** ಈ ಪ್ರಕರಣದ ಉದ್ದೇಶಕ್ಕಾಗಿ ಬೆಲೆಯುಳ್ಳ ಭೂಮಿ ಎಂದರೆ ಅಂಥ ಭೂಮಿಯನ್ನು ಹರಾಜಿಗಿಟ್ಟಿದ್ದರೆ ಸಾಮಾನ್ಯ ಬೆಲೆಗಿಂತ ಹೆಚ್ಚಿನ ಬೆಲೆಗೆ ಮಾರಾಟವಾಗುವ ಭೂಮಿ.][1]

1. 2007ರ ಅಧಿನಿಯಮ 18ರ ಮೂಲಕ 10.5.2007 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
2. 2020ರ ಅಧಿನಿಯಮ 44ರ ಮೂಲಕ ದಿನಾಂಕ: 19.10.2020ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

**70. ಗಣಿ ಮತ್ತು ಖನಿಜೋತ್ಪತ್ತಿಗಳ ಬಗೆಗಿನ ಹಕ್ಕು ಸರ್ಕಾರದಲ್ಲಿ ನಿಹಿತವಾಗಿರುವುದು.–** ಈ ಅಧಿನಿಯಮವು ಪ್ರಾರಂಭವಾಗುವುದಕ್ಕೆ ಮೊದಲು ಜಾರಿಯಲ್ಲಿದ್ದ ಯಾವುದೇ ಕಾನೂನಿನಲ್ಲಿ [1][ಏನೇ ಒಳಗೊಂಡಿದ್ದರೂ][1] ಅಥವಾ ತತ್ಕಾಲದಲ್ಲಿ ಸರ್ಕಾರವು ಅಥವಾ ಸರ್ಕಾರದ ಪರವಾಗಿ ನೀಡಿದ ಯಾವುದೇ ಮಂಜೂರಾತಿಯ ಅಥವಾ ಬರೆದುಕೊಟ್ಟ ಯಾವುದೇ ವರ್ಗಾವಣೆ ಲಿಖಿತದ ನಿಬಂಧನೆಗಳ ಮೇರೆಗೆ, ಗಣಿ, ಖನಿಜ ಮತ್ತು ಖನಿಜೋತ್ಪತ್ತಿ ಇವುಗಳ ಬಗೆಗಿನ ಹಕ್ಕು ರಾಜ್ಯ ಸರ್ಕಾರದಲ್ಲಿ ಸಂಪೂರ್ಣವಾಗಿ ನಿಹಿತವಾಗಿರತಕ್ಕದ್ದು ಮತ್ತು ಗಣಿ ಮತ್ತು ಖನಿಜಗಳ ನಿಯಂತ್ರಣ ಮತ್ತು ಅಭಿವೃದ್ಧಿ ಅಧಿನಿಯಮ, 1957 (ಕೇಂದ್ರ ಅಧಿನಿಯಮ 1957ರ 67)ರ ಉಪಬಂಧಗಳಿಗೊಳಪಟ್ಟು, ಅಂಥ ಹಕ್ಕುಗಳ ಯುಕ್ತ ಅನುಭೋಗ ಅಥವಾ ವಿಲೇವಾರಿಯ ಬಗ್ಗೆ ಅವಶ್ಯಕವಾದ ಎಲ್ಲ ಅಧಿಕಾರಗಳನ್ನು ರಾಜ್ಯ ಸರ್ಕಾರವು ಹೊಂದಿರತಕ್ಕದ್ದು.

1. 1993ರ ಅಧಿನಿಯಮ 20ರ ಮೂಲಕ 1.4.1964 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**71. ವಿಶೇಷ ಉದ್ದೇಶಗಳಿಗಾಗಿ ಭೂಮಿಗಳನ್ನು ಮೀಸಲಿಡಬಹುದು ಮತ್ತು ಮೀಸಲಿಟ್ಟಿದ್ದಾಗ ಡೆಪ್ಯುಟಿ ಕಮಿಷನರ ಮಂಜೂರಾತಿಯಿಲ್ಲದೆ ಅವುಗಳನ್ನು ಇತರ ರೀತಿ ಬಳಸತಕ್ಕದ್ದಲ್ಲ.–** ರಾಜ್ಯ ಸರ್ಕಾರದ ಸಾಮಾನ್ಯ ಆದೇಶಗಳಿಗೊಳಪಟ್ಟು, ಈ ಅಧಿನಿಯಮದ ಮೇರೆಗಿನ ಮೋಜಣಿಯ ಕಾರ್ಯಗಳು ನಡೆಯುತ್ತಿರುವಾಗ, ಮೋಜಣಿ ಅಧಿಕಾರಿಗಳು ಮತ್ತು ಇತರ ಯಾವುದೇ ಕಾಲದಲ್ಲಿ ಡೆಪ್ಯುಟಿ ಕಮಿಷನರು ಯಾವುದೇ ಗ್ರಾಮದಲ್ಲಿ ಅಥವಾ ಗ್ರಾಮದ ಭಾಗದಲ್ಲಿ ಆ ಗ್ರಾಮದ ದನಗಳಿಗೆ ಉಚಿತ ಗೋಮಾಳಕ್ಕಾಗಿ ಮೀಸಲು ಕಾಡುಗಳಿಗಾಗಿ ಮತ್ತು ಇತರ ಯಾವುದೇ ಸಾರ್ವಜನಿಕ ಉದ್ದೇಶಕ್ಕಾಗಿ, ರಾಜ್ಯ ಸರ್ಕಾರದ ಸ್ವತ್ತಾಗಿರುವ ಮತ್ತು ಯಾರೇ ವ್ಯಕ್ತಿಯ ಅಥವಾ ವ್ಯಕ್ತಿಗಳ ಸಮೂಹದ ಕಾನೂನು ಬದ್ಧ ಅಧಿಭೋಗದಲ್ಲಿರದ ಭೂಮಿಗಳನ್ನು ಮೀಸಲು ಇಡಬಹುದು; ಮತ್ತು ಅಂಥ ಯಾವುದೇ ಉದ್ದೇಶಕ್ಕಾಗಿ ವಿಶೇಷವಾಗಿ ಮೀಸಲಿಡಲಾದ ಭೂಮಿಗಳನ್ನು ಡೆಪ್ಯುಟಿ ಕಮಿಷನರ ಮಂಜೂರಾತಿ ಇಲ್ಲದೆ ಇತರ ರೀತಿಯಲ್ಲಿ ಬಳಸತಕ್ಕದ್ದಲ್ಲ, ಮತ್ತು 69ನೇ ಪ್ರಕರಣದ ಮೇರೆಗೆ ಭೂಮಿಗಳನ್ನು ವಿಲೇವಾರಿ ಮಾಡುವಾಗ ಇಂಥ ಎಲ್ಲ ವಿಶೇಷ ಮೀಸಲುಗಳಿಗೆ ತಕ್ಕ ಗಮನವನ್ನು ಕೊಡತಕ್ಕದ್ದು.

**72. ಗೋಮಾಳಗಳ ಬಳಕೆಗೆ ವ್ಯವಸ್ಥೆ.–** ಉಚಿತ ಗೋಮಾಳ ಭೂಮಿಗಳು ಯಾವ ಗ್ರಾಮ ಅಥವಾ ಗ್ರಾಮಗಳಿಗೆ ಸೇರಿವೆಯೋ ಅಥವಾ ಅವುಗಳನ್ನು ಮೀಸಲಾಗಿಡಲಾಗಿದೆಯೋ ಅಂಥ ಉಚಿತ ಗೋಮಾಳ ಭೂಮಿಗಳಲ್ಲಿ ಮೇಯಿಸುವ ಹಕ್ಕು, ಅಂಥ ಗ್ರಾಮದ ಅಥವಾ ಗ್ರಾಮಗಳ ದನಗಳಿಗೆ ಮಾತ್ರ ಅನ್ವಯವಾಗತಕ್ಕದ್ದು ಮತ್ತು ರಾಜ್ಯ ಸರ್ಕಾರವು ಸಾಮಾನ್ಯವಾಗಿ ಅಥವಾ ವಿಶಿಷ್ಟ ಸಂದರ್ಭಕ್ಕಾಗಿ ಮಾಡಿದ ನಿಯಮಗಳ ಅಥವಾ ಆದೇಶಗಳ ಮೂಲಕ ಅವುಗಳನ್ನು ವ್ಯವಸ್ಥೆಗೊಳಿಸತಕ್ಕದ್ದು. ಮೇಯಿಸುವ ಸದರಿ ಹಕ್ಕಿನ ಬಗ್ಗೆ ಯಾವುದೇ ವಿವಾದ ಉಂಟಾದಲ್ಲಿ ಡೆಪ್ಯುಟಿ ಕಮಿಷನರ ತೀರ್ಮಾನವು ಅಂತಿಮವಾಗಿರತಕ್ಕದ್ದು.

**73. ಕೆಲವು ಭೂಮಿಗಳಿಂದ ಅನಧಿಕೃತವಾಗಿ ಸಾಗಿಸಿದ ನೈಸರ್ಗಿಕ ಉತ್ಪನ್ನದ ಮೌಲ್ಯದ ವಸೂಲಿ.–** (1) ವಿಶೇಷ ಉದ್ದೇಶಕ್ಕಾಗಿ ಮೀಸಲಿಡಲಾದ ಭೂಮಿಯಿಂದ ಅಥವಾ ಸರಕಾರದ ಸ್ವತ್ತಾಗಿರುವ ಯಾವುದೇ ಭೂಮಿಯಿಂದ ಯಾವುದೇ ನೈಸರ್ಗಿಕ ಉತ್ಪನ್ನವನ್ನು ಅನಧಿಕೃತವಾಗಿ ಸಾಗಿಸುವ ಯಾರೇ ವ್ಯಕ್ತಿಯು, ಅಂಥ ಅನಧಿಕೃತ ಸಾಗಣೆಗಾಗಿ ಈ ಅಧಿನಿಯಮದ ಮೇರೆಗೆ ಹೊಣೆಯಾಗಬಹುದಾದ ಯಾವುದೇ ದಂಡನೆಯ ಜೊತೆಗೆ ನೈಸರ್ಗಿಕ ಉತ್ಪನ್ನದ ಮೌಲ್ಯಕ್ಕೆ ರಾಜ್ಯ ಸರ್ಕಾರಕ್ಕೆ ಹೊಣೆಗಾರರಾಗಿರತಕ್ಕದ್ದು ಹಾಗೂ ಈ ಮೌಲ್ಯವನ್ನು ಭೂಕಂದಾಯದ ಬಾಕಿಯಂತೆ ವಸೂಲ್ಮಾಡತಕ್ಕದ್ದು ಮತ್ತು ಹಾಗೆ ಅನಧಿಕೃತವಾಗಿ ಸಾಗಿಸಿರುವುದಕ್ಕಾಗಿ ಅವನ ವಿರುದ್ಧ ಹೂಡಬಹುದಾದ ಯಾವುದೇ ಕ್ರಿಮಿನಲ್ ವ್ಯವಹರಣೆಗಳಿಗೂ ಅವನು ಗುರಿಯಾಗತಕ್ಕದ್ದು.

(2) ಅಂಥ ನೈಸರ್ಗಿಕ ಉತ್ಪನ್ನದ ಮೌಲ್ಯದ ಬಗ್ಗೆ [1][ತಹಶೀಲ್ದಾರನ][1] ತೀರ್ಮಾನವು ಅಂತಿಮವಾಗಿರತಕ್ಕದ್ದು.

1. 1970ರ ಅಧಿನಿಯಮ 5ರ ಮೂಲಕ 23.10.1969 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**74. ಮೋಜಣಿ ವ್ಯವಸ್ಥೆ ಆಗದಿರುವ ಗ್ರಾಮದಲ್ಲಿನ ಮರಗಳ ಬಗ್ಗೆ ಹಕ್ಕು.–** ಈ ಅಧಿನಿಯಮದ ಮೇರೆಗೆ ಅಥವಾ ಈ ಅಧಿನಿಯಮದಿಂದ ನಿರಸಿತವಾಗಿರುವ ಅಧಿನಿಯಮಗಳ ಪೈಕಿ ಯಾವುದೇ ಅಧಿನಿಯಮದ ಮೇರೆಗೆ ಮೋಜಣಿ ವ್ಯವಸ್ಥೆ ಆಗಿರದ ಯಾವುದೇ ಗ್ರಾಮದಲ್ಲಿ ಅಥವಾ ಗ್ರಾಮದ ಭಾಗಗಳಲ್ಲಿ, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ಸರಕಾರವು ಕಾಯ್ದಿರಿಸಿದ ಮರಗಳನ್ನುಳಿದು ಇತರ ಎಲ್ಲ ಮರಗಳ ಬಗೆಗಿನ ಹಕ್ಕು, ಅಂಥ ಮರಗಳು ರಾಜ್ಯ ಸರ್ಕಾರದ ಸ್ವತ್ತಾಗಿದ್ದ ಹೊರತು, ಅವು ಇರುವ ಭೂಮಿಯ ಅಧಿಭೋಗದಾರನು ಯಾರಾದರೂ ಇದ್ದರೆ, ಅವನಲ್ಲಿ ನಿಹಿತವಾಗಿದೆಯೆಂದು ಭಾವಿಸತಕ್ಕದ್ದು.

**75. ಮೋಜಣಿ ವ್ಯವಸ್ಥೆ ಆಗಿರುವ ಗ್ರಾಮಗಳಲ್ಲಿನ ಮರಗಳ ಬಗ್ಗೆ ಹಕ್ಕು.–** (1) ಈ ಅಧಿನಿಯಮದ ಪ್ರಾರಂಭಕ್ಕೆ ಮೊದಲು ಆರಂಭಿಕ ಮೋಜಣಿ ವ್ಯವಸ್ಥೆಯನ್ನು ಯಾವುದೇ ಗ್ರಾಮದಲ್ಲಿ ಅಥವಾ ಗ್ರಾಮದ ಭಾಗಗಳಲ್ಲಿ ಪೂರ್ಣಗೊಳಿಸಲಾಗಿದ್ದಲ್ಲಿ, ರಾಜ್ಯ ಸರ್ಕಾರವು ಅಥವಾ ಮೋಜಣಿ ಅಧಿಕಾರಿಯು, ಅಂಥ ಮೋಜಣಿ ವ್ಯವಸ್ಥೆಯ ಕಾಲದಲ್ಲಿ ಅಥವಾ ಆ ಸುಮಾರಿನಲ್ಲಿ ಮಾಡಿದ ಸ್ಪಷ್ಟ ಆದೇಶದ ಮೂಲಕವಾಗಲಿ ಅಥವಾ ಅಂಥಾ ವ್ಯವಸ್ಥೆಯ ಕಾಲದಲ್ಲಿ ಅಥವಾ ಆ ತರುವಾಯದ ಯಾವುದೇ ಕಾಲದಲ್ಲಿ ಮಾಡಿದ ಮತ್ತು ಪ್ರಕಟಿಸಿದ ಅಧಿಸೂಚನೆಯ ಮೂಲಕವಾಗಲಿ ಕಾಯ್ದಿರಿಸಿದ ಮರಗಳ ಹೊರತು, ಯಾವುದೇ ಭೂಮಿಯಲ್ಲಿರುವ ಎಲ್ಲ ಮರಗಳ ಮೇಲೆ ರಾಜ್ಯ ಸರ್ಕಾರಕ್ಕಿರುವ ಹಕ್ಕನ್ನು ಅಧಿಭೋಗದಾರನಿಗೆ ಕೊಡಲಾಗಿದೆಯೆಂದು ಭಾವಿಸತಕ್ಕದ್ದು.

(2) ಯಾವುದೇ ಗ್ರಾಮದಲ್ಲಿ ಅಥವಾ ಗ್ರಾಮ ಭಾಗದಲ್ಲಿ, ಈ ಅಧಿನಿಯಮವು ಅನುಮೋದಿತವಾಗುವುದಕ್ಕೆ ಮೊದಲು ಅಥವಾ ತರುವಾಯ ಕೈಕೊಳ್ಳಲಾಗಿದ್ದ ಆರಂಭಿಕ ಮೋಜಣಿ ವ್ಯವಸ್ಥೆಯ ಕೆಲಸವನ್ನು ಈ ಅಧಿನಿಯಮವು ಅನುಮೋದಿತವಾದ ತರುವಾಯ ಪೂರ್ಣಗೊಳಿಸಿದ್ದರೆ ಅಂಥ ಮೋಜಣಿ ವ್ಯವಸ್ಥೆಯ ಕಾಲಕ್ಕೆ ಅಥವಾ ಆ ಸುಮಾರಿಗೆ ಅಥವಾ ಅಂಥ ಗ್ರಾಮದ ಅಥವಾ ಗ್ರಾಮ ಭಾಗದ ಮೋಜಣಿ ವ್ಯವಸ್ಥೆಯು ಪೂರ್ಣವಾಗುವುದಕ್ಕಿಂತ ಮೊದಲು ಯಾವುದೇ ಕಾಲದಲ್ಲಿ ಸಾಮಾನ್ಯವಾಗಿ ಮಾಡಿದ ಮತ್ತು ಪ್ರಕಟಿಸಿದ ಅಧಿಸೂಚನೆಯ ಮೂಲಕ, ರಾಜ್ಯ ಸರ್ಕಾರವು ಯಾವುದೇ ಭೂಮಿಯಲ್ಲಿರುವ ಎಲ್ಲ ಮರಗಳ ಮೇಲೆ ತನಗಿರುವ ಹಕ್ಕನ್ನು ಕಾಯ್ದಿರಿಸಿರಬಹುದಾದಷ್ಟರ ಮಟ್ಟಿಗೆ ಹೊರತು, ಆ ಹಕ್ಕನ್ನು ಅಂಥ ಭೂಮಿಯ ಅಧಿಭೋಗದಾರನಿಗೆ ಕೊಡಲಾಗಿದೆಯೆಂದು ಭಾವಿಸತಕ್ಕದ್ದು.

(3) ಭೂಮಿಯು ಇರುವ ಯಾವುದೇ ಗ್ರಾಮದ ಅಥವಾ ಗ್ರಾಮ ಭಾಗದ ಮೋಜಣಿ ವ್ಯವಸ್ಥೆಯು ಪೂರ್ಣಗೊಂಡ ತರುವಾಯ ಅಂಥ ಭೂಮಿಯನ್ನು ಅಧಿಭೋಗಿಸಲು ಅನುಮತಿ ಕೊಟ್ಟಿರುವಾಗ ಅಥವಾ ಆ ತರುವಾಯ ಅನುಮತಿಯನ್ನು ಕೊಡಬೇಕಾಗಿರುವಾಗ, ಅಂಥ ಅನುಮತಿ ಕೊಡುವ ಕಾಲಕ್ಕೆ ಸ್ಪಷ್ಟವಾಗಿ ಕಾಯ್ದಿರಿಸಿದ ಅಥವಾ ಆ ತರುವಾಯ ಕಾಯ್ದಿರಿಸಿದ ಅಥವಾ ಸದರಿ ಗ್ರಾಮದ ಅಥವಾ ಗ್ರಾಮ ಭಾಗದ ಆರಂಭಿಕ ಮೋಜಣಿ ವ್ಯವಸ್ಥೆಯ ಕಾಲಕ್ಕೆ ಅಥವಾ ಆ ಸುಮಾರಿಗೆ ಈ ಪ್ರಕರಣದಲ್ಲಿ ಹಿಂದೆ ಹೇಳಿರುವ ಉಪಬಂಧಗಳ ಪೈಕಿ ಯಾವುದೇ ಉಪಬಂಧದ ಮೇರೆಗೆ ಕಾಯ್ದಿರಿಸಿದ ಮತ್ತು ಆ ಭೂಮಿಯಲ್ಲಿ ಬೆಳೆಯುವಂತಹ ಎಲ್ಲ ಮರಗಳ ಮೇಲೆ ರಾಜ್ಯ ಸರ್ಕಾರಕ್ಕಿರುವ ಹಕ್ಕನ್ನು ಬಿಟ್ಟು ಕೊಡುವುದೂ ಸೇರಿದೆಯೆಂದು ಭಾವಿಸತಕ್ಕದ್ದು.

**76. ಮರಗಳು ಮತ್ತು ಕಾಡುಗಳು ಸರ್ಕಾರದಲ್ಲಿ ನಿಹಿತವಾಗಿರುವುದು.–** 75ನೇ ಪ್ರಕರಣದ ಉಪಬಂಧಗಳ ಮೇರೆಗೆ ವಿಶೇಷವಾಗಿ ಕಾಯ್ದಿರಿಸಿರುವ ಎಲ್ಲ ಮರಗಳ ಬಗೆಗಿನ ಹಕ್ಕು ಮತ್ತು ಸ್ವತ್ತನ್ನು ಹೊಂದಿರಲು ಸಮರ್ಥನಾದ ಯಾರೇ ವ್ಯಕ್ತಿಯ ಅಥವಾ ವ್ಯಕ್ತಿ ಸಮೂಹದ ಸ್ವತ್ತಾಗಿರಬಹುದಾದಷ್ಟರ ಮಟ್ಟಿಗೆ ಹೊರತುಪಡಿಸಿ, ಎಲ್ಲಿಯಾದರೂ ಬೆಳೆಯುವ ಎಲ್ಲ ಮರಗಳು, ಕುರುಚಲು ಗಿಡ, ಕಾಡು ಅಥವಾ ಇತರ ನೈಸರ್ಗಿಕ ಉತ್ಪನ್ನ ಇವುಗಳ ಮೇಲಿನ ಹಕ್ಕುಗಳು ರಾಜ್ಯ ಸರ್ಕಾರದಲ್ಲಿ

ನಿಹಿತವಾಗಿವೆ; ಮತ್ತು ಅಂಥ ಮರಗಳು, ಕುರುಚಲು ಗಿಡ, ಕಾಡು ಅಥವಾ ಇತರ ನೈಸರ್ಗಿಕ ಉತ್ಪನ್ನ ಇವುಗಳನ್ನು ರಾಜ್ಯ ಸರಕಾರವು ಕಾಲಕಾಲಕ್ಕೆ ನಿರ್ದೇಶಿಸಬಹುದಾದಂಥ ರೀತಿಯಲ್ಲಿ ರಕ್ಷಿಸತಕ್ಕದ್ದು ಅಥವಾ ವಿಲೇವಾರಿ ಮಾಡತಕ್ಕದ್ದು.

**77. ರಸ್ತೆ ಬದಿಯ ಮರಗಳು.–** ಯಾರೇ ವ್ಯಕ್ತಿಗೆ ಸೇರಿರುವ ಭೂಮಿಯ ಮೇಲೆ ಮತ್ತು ರಾಜ್ಯ ಸರ್ಕಾರದಿಂದ ಅಥವಾ ಅದರ ಆದೇಶದ ಮೇರೆಗೆ ಮತ್ತು ಅದರ ವೆಚ್ಚದಲ್ಲಿ ನೆಟ್ಟು ಬೆಳೆಸಿರುವ ರಸ್ತೆ ಬದಿಯ ಎಲ್ಲ ಮರಗಳು ಮತ್ತು ರಾಜ್ಯ ಸರ್ಕಾರಕ್ಕೆ ಸೇರಿರುವ ಯಾವುದೇ ರಸ್ತೆಯ ಬದಿಗಿರುವ ಮತ್ತು ಸ್ಥಳೀಯ ಪ್ರಾಧಿಕಾರದ ವೆಚ್ಚದಲ್ಲಿ ನೆಟ್ಟು ಬೆಳೆಸಲಾದ ಎಲ್ಲ ಮರಗಳು ರಾಜ್ಯ ಸರ್ಕಾರದಲ್ಲಿ ನಿಹಿತವಾಗಿವೆ; ಆದರೆ, ಅಂಥ ಮರಗಳು ಒಣಗಿಹೋದಾಗ, ಅಥವಾ ಗಾಳಿಯಿಂದ ಉರುಳಿ ಬಿದ್ದಾಗ, ಅಥವಾ [1][ತಹಸೀಲ್ದಾರನ][1] ಆದೇಶದ ಮೇರೆಗೆ ಅವುಗಳನ್ನು ಕಡಿದುಹಾಕಿದಾಗ, ಅವುಗಳ ಮರಮುಟ್ಟು ಅವು ಬೆಳೆದಿದ್ದ ಭೂಮಿಯ ಹಿಡುವಳಿದಾರನ ಸ್ವತ್ತಾಗಿರತಕ್ಕದ್ದು. ಮತ್ತು ಅಂಥ ಮರಗಳ ಸವರಿದ ರೆಂಬೆಗಳೂ ಸೇರಿ ಅವುಗಳನ್ನು ಬಳಸುವ ಅಧಿಕಾರವು ಕೂಡ ಸದರಿ ಹಿಡುವಳಿದಾರನಲ್ಲಿ ನಿಹಿತವಾಗತಕ್ಕದ್ದು:

ಪರಂತು, [1][ತಹಸೀಲ್ದಾರನ][1] ಆದೇಶವಿಲ್ಲದೆ ಅಂಥ ಮರಗಳನ್ನು ಸವರತಕ್ಕದಲ್ಲ.

1. 1970ರ ಅಧಿನಿಯಮ 5ರ ಮೂಲಕ 23.10.1969 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**78. ಅನಧಿಕೃತವಾಗಿ ಬಳಸಿಕೊಂಡ ಮರ, ಇತ್ಯಾದಿಗಳ ಮೌಲ್ಯದ ವಸೂಲಿ.–** (1) ಸರ್ಕಾರದ ಸ್ವತ್ತಾಗಿರುವ ಯಾವುದೇ ಮರವನ್ನು ಅಥವಾ ಅದರ ಯಾವುದೇ ಭಾಗವನ್ನು ಅನಧಿಕೃತವಾಗಿ ಕೆಡವತಕ್ಕ ಮತ್ತು ಉಪಯೋಗಿಸತಕ್ಕ ಅಥವಾ ಅದೇ ವರ್ಣನೆಯದಾಗಿರುವ ಅಥವಾ ಆಗಿರದ ಇತರ ಯಾವುದೇ ನೈಸರ್ಗಿಕ ಉತ್ಪನ್ನವನ್ನು ತನ್ನ ಹಿಡುವಳಿಯಿಂದ ಸಾಗಿಸುವ ಯಾರೇ ವ್ಯಕ್ತಿಯು ಅದರ ಮೌಲ್ಯದ ಬಗ್ಗೆ ರಾಜ್ಯ ಸರಕಾರಕ್ಕೆ ಹೊಣೆಗಾರನಾಗಿರತಕ್ಕದ್ದು ಮತ್ತು ಭೂಮಿಯ ಅಧಿಭೋಗಕ್ಕಾಗಿ ಅಥವಾ ಅನ್ಯಥಾ ಮತ್ತು ಸರ್ಕಾರದ ಸ್ವತ್ತನ್ನು ಬಳಸಿದ ಬಗ್ಗೆ ಅವನ ವಿರುದ್ಧ ಯಾವುದೇ ಕ್ರಿಮಿನಲ್ ವ್ಯವಹರಣೆ ಹೂಡಬಹುದಾಗಿದ್ದರೂ, ಈ ಅಧಿನಿಯಮದ ಉಪಬಂಧಗಳ ಮೇರೆಗೆ ಅವನು ಹೊಣೆಗಾರನಾಗಬಹುದಾಗಿರುವ ಯಾವುದೇ ದಂಡದ ಜೊತೆಗೆ, ಸದರಿ ಮೌಲ್ಯವು ಅವನಿಂದ ಭೂಕಂದಾಯದ ಬಾಕಿಯಂತೆ ವಸೂಲಿ ಮಾಡತಕ್ಕದ್ದು.

(2) ಅಂಥ ಯಾವುದೇ ಮರದ ಅಥವಾ ಅದರ ಭಾಗದ ಅಥವಾ ಇತರ ನೈಸರ್ಗಿಕ ಉತ್ಪನ್ನದ ಮೌಲ್ಯದ ಬಗ್ಗೆ [1][ತಹಸೀಲ್ದಾರನ][1] ತೀರ್ಮಾನವು ಅಂತಿಮವಾಗಿರತಕ್ಕದ್ದು.

1. 1970ರ ಅಧಿನಿಯಮ 5ರ ಮೂಲಕ 23.10.1969 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**79. ಮನೆಬಳಕೆ ಅಥವಾ ಇತರ ಉದ್ದೇಶಗಳಿಗಾಗಿ ಸೌದೆ ಅಥವಾ ಮರಮುಟ್ಟಿನ ಸರಬರಾಜಿನ ನಿಯಂತ್ರಣ.–** (1) ಮನೆ ಬಳಕೆಗಾಗಿ ಅಥವಾ ಇತರ ಉಪಯೋಗಗಳಿಗಾಗಿ ಸೌದೆ ಅಥವಾ ಮರಗಳನ್ನು ಕಡಿಯುವ ಬಗ್ಗೆ ಗ್ರಾಮಸ್ಥರಿಗೆ ಅಥವಾ ಕೆಲವು ವ್ಯಕ್ತಿಗಳ ವರ್ಗಗಳಿಗೆ ಇರುವ ಕೆಲವು ವಿಶೇಷಾಧಿಕಾರಗಳಿಗೊಳಪಟ್ಟು, ಯಾವ ಗ್ರಾಮದಲ್ಲಿ ಅಥವಾ ಭೂಮಿಯಲ್ಲಿ ಇರುವ ಮರಗಳ ಬಗ್ಗೆ ರಾಜ್ಯ ಸರ್ಕಾರಕ್ಕೆ ಅಧಿಕಾರಗಳನ್ನು 75ನೇ ಪ್ರಕರಣದ ಮೇರೆಗೆ ಕಾಯ್ದಿರಿಸಲಾಗಿದೆಯೋ ಅಂಥ ಯಾವುದೇ ಗ್ರಾಮದಲ್ಲಿ ಅಥವಾ ಭೂಮಿಯಲ್ಲಿ ಮತ್ತು ಅಂಥ ವಿಶೇಷಾಧಿಕಾರಕ್ಕೊಳಪಟ್ಟು ಮೀಸಲು ಕಾಡುಗಳ ಸಲುವಾಗಿ 71ನೇ ಪ್ರಕರಣದ ಮೇರೆಗೆ ಮೀಸಲಿರಿಸಿದ ಯಾವುದೇ ಭೂಮಿಯಲ್ಲಿ ಮತ್ತು ವರ್ಗಾವಣೆ ಮಾಡಿದ ಯಾವುದೇ ಭೂಮಿಯ ಬಗ್ಗೆ ಇಂಥ ವಿಶೇಷಾಧಿಕಾರಗಳು ಅಸ್ತಿತ್ವದಲ್ಲಿರುವ ಇತರ ಎಲ್ಲ ಸಂದರ್ಭಗಳಲ್ಲಿ, ಸದರಿ ವಿಶೇಷಾಧಿಕಾರಗಳನ್ನು ಚಲಾಯಿಸುವುದನ್ನು ನಿಯಮಿಸಬಹುದಾದಂಥ ನಿಯಮಗಳಿಂದ, ಅಥವಾ ಸರ್ವಸಾಮಾನ್ಯವಾಗಿ ಅಥವಾ ಯಾವುದೇ ವಿಶಿಷ್ಟ ಪ್ರಸಂಗಕ್ಕಾಗಿ ಡೆಪ್ಯುಟಿ ಕಮಿಷನರು ಅಥವಾ ರಾಜ್ಯ ಸರ್ಕಾರವು ನಿರ್ದೇಶಿಸಬಹುದಾದಂಥ ಬೇರೆ ಅಧಿಕಾರಿಯು ಮಾಡಿದ ಆದೇಶಗಳಿಂದ ನಿಯಂತ್ರಿಸತಕ್ಕದ್ದು. ಅಂಥ ವಿಶೇಷಾಧಿಕಾರಗಳನ್ನು ಚಲಾಯಿಸುವ ವಿಧಾನದ ಅಥವಾ ಕಾಲದ ಬಗ್ಗೆ ವಿವಾದ ಉಂಟಾದ ಯಾವುದೇ ಸಂದರ್ಭದಲ್ಲಿ, ಡೆಪ್ಯುಟಿ ಕಮಿಷನರ ಅಥವಾ ಅಂಥ ಅಧಿಕಾರಿಯ ತೀರ್ಮಾನವು ಅಂತಿಮವಾಗಿರತಕ್ಕದ್ದು.

(2) ಉಪಪ್ರಕರಣ(1)ರಲ್ಲಿ ಏನೇ ಇದ್ದರೂ, ಆದರೆ ರಾಜ್ಯ ಸರ್ಕಾರವು ಕಾಲಕಾಲಕ್ಕೆ ಹೊರಡಿಸ ಬಹುದಾದಂಥ ಸಾಮಾನ್ಯ ಅಥವಾ ವಿಶೇಷ ಆದೇಶಗಳಿಗೊಳಪಟ್ಟು, ರೂಢಿಯಂತೆ ಅಂಥ ಯಾವುದೇ ಆದೇಶದ ಮೇರೆಗೆ, ಅನುಭೋಗಿಸಲಾಗುತ್ತಿರುವ ವಿಶೇಷಾಧಿಕಾರಗಳು ಅಂದರೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ಕುಮಕಿ ಭೂಮಿಗಳು, ಬಾಣಿ ಭೂಮಿಗಳು ಮತ್ತು ಕಾಣೆ ಭೂಮಿಗಳು, ಉತ್ತರ ಕನ್ನಡ ಜಿಲ್ಲೆಯಲ್ಲಿನ ಬೆಟ್ಟ ಭೂಮಿಗಳು, ಮತ್ತು ಹಾಡಿ ಭೂಮಿಗಳು, ಮೈಸೂರು ಪ್ರದೇಶದಲ್ಲಿನ ಕಾನು ಮತ್ತು ಸೊಪ್ಪಿನ ಬೆಟ್ಟ ಭೂಮಿಗಳು, ಕೊಡಗಿನ ಜಮ್ಮಾ ಮತ್ತು ಬಾಣೆ ಭೂಮಿಗಳು

ಮತ್ತು [1][ಗುಲ್ಬರ್ಗಾ ಪ್ರದೇಶದಲ್ಲಿ][1][2][ಮೋಟಸ್ಥಳ ತರಿ ಭೂಮಿಗಳು][2]–ಇವುಗಳ ಬಗೆಗಿನ ವಿಶೇಷಾಧಿಕಾರಗಳು ಮುಂದುವರಿಯತಕ್ಕದ್ದು.

1. 1973ರ ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶದ ಮೂಲಕ 1–11–1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.
2. 1965ರ ಅಧಿನಿಯಮ 9ರ ಮೂಲಕ 1.4.1964 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

## ಭೂ ಕಂದಾಯ

**80. ವಿಶೇಷವಾಗಿ ವಿನಾಯಿತಿಯಾದ ಭೂಕಂದಾಯದ ಹೊರತು ಭೂಕಂದಾಯದ ಸಂದಾಯಕ್ಕೆ ಎಲ್ಲ ಭೂಮಿ ಹೊಣೆಯಾಗಿರುವುದು.–** ಬೇಸಾಯಕ್ಕಾಗಿ ಅಥವಾ ಇತರ ಉದ್ದೇಶಕ್ಕಾಗಿ ಬಳಸುತ್ತಿರುವ ಎಲ್ಲ ಭೂಮಿಯ ಬಗ್ಗೆ ಮತ್ತು[1][ಅದು ಎಲ್ಲಿಯೇ ಇರಲಿ, ಕೊಡಗು ಜಿಲ್ಲೆಯಲ್ಲಿ ಅಧಿಭೋಗದಾರನು ಹೊಂದಿರುವ ಪರಭಾರೆ ಮಾಡದ ಜುಮ್ಮಾ ಬಾಣೆ ಭೂಮಿಯೂ ಸೇರಿದಂತೆ][1] ಸರ್ಕಾರದೊಂದಿಗೆ ಮಾಡಿಕೊಂಡಿರುವ ಯಾವುದೇ ವಿಶೇಷ ಕರಾರಿನ ಉಪಬಂಧಗಳ ಮೇರೆಗೆ ಅಥವಾ ಈ ಅಧಿನಿಯಮದ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಯಾವುದೇ ಉಪಬಂಧದ ಮೇರೆಗೆ ಪೂರ್ತಿಯಾಗಿ ವಿನಾಯಿತಿಗೊಳಿಸಬಹುದಾಗಿರುವಂಥದನ್ನು ಹೊರತುಪಡಿಸಿ, ಈ ಅಧಿನಿಯಮದ ಉಪಬಂಧಗಳಿಗನುಸಾರವಾಗಿ, ರಾಜ್ಯ ಸರ್ಕಾರಕ್ಕೆ ಭೂಕಂದಾಯವನ್ನು ಸಂದಾಯ ಮಾಡತಕ್ಕದ್ದು.

[2][ಪರಂತು, ರಾಜ್ಯ ಸರ್ಕಾರವು, ಅಧಿಸೂಚನೆ ಅಥವಾ ಆದೇಶದ ಮೂಲಕ ಮತ್ತು ಅದರಲ್ಲಿ ಯಾವುವಾದರೂ ಷರತ್ತುಗಳನ್ನು ನಿರ್ದಿಷ್ಟಪಡಿಸುವುದಿದ್ದರೆ ಆ ಯಾವುದೇ ಷರತ್ತುಗಳಿಗೆ ಒಳಪಟ್ಟು ಕಾರಣಗಳನ್ನು ಲಿಖಿತದಲ್ಲಿ ದಾಖಲು ಮಾಡಿ ಯಾವುದೇ ಪ್ರದೇಶದಲ್ಲಿರುವ ಅಥವಾ ಪ್ರದೇಶಗಳಲ್ಲಿರುವ ಅಥವಾ ಅದರ ಯಾವುದೇ ಭಾಗದಲ್ಲಿರುವ ಯಾವುದೇ ವರ್ಗದ ಭೂಮಿಗಳನ್ನು ಪೂರ್ವಾನ್ವಯವಾಗಲಿ ಅಥವಾ ತರುವಾಯವಾಗಲಿ ಭೂ ಕಂದಾಯದ ಸಂದಾಯದಿಂದ ವಿನಾಯಿತಿಗೊಳಿಸಬಹುದು.][2]

1. 2013ರ ಅಧಿನಿಯಮ 11ರ ಮೂಲಕ 1.2.2013 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
2. 1985ರ ಅಧಿನಿಯಮ 10ರ ಮೂಲಕ 1.4.1964 ರಿಂದ ಜಾರಿಗೆ ಬರುವಂತೆ ಪರಂತುಕವನ್ನು ಸೇರಿಸಲಾಗಿದೆ.

**81. ನೆರೆಮಣ್ಣಿನ ಭೂಮಿ ಮತ್ತು ಅದರ ಬಗೆಗಿನ ಕಂದಾಯದ ಹೊಣೆ.–** (1) ಯಾವುದೇ ಕಾನೂನು, ರೂಢಿ ಅಥವಾ ಆಚರಣೆ ಇವುಗಳಲ್ಲಿ ತದ್ವಿರುದ್ಧವಾದುದು ಏನೇ ಇದ್ದರೂ, ಎಲ್ಲ ನೆರೆಮಣ್ಣಿನ ಭೂಮಿಗಳು, ಹೊಸದಾಗಿ ರೂಪುಗೊಂಡ ನಡುಗಡ್ಡೆಗಳು ನೀರು ಒಣಗಿದ ನದಿ ಅಂಗಳಗಳು ರಾಜ್ಯ ಸರ್ಕಾರದಲ್ಲಿ ನಿಹಿತವಾಗಿರತಕ್ಕದ್ದು. ಆದರೆ, ಅದರ ವಿಸ್ತೀರ್ಣವು ಒಂದು ಎಕರೆಗೆ ಮೀರದಿದ್ದರೆ ಮತ್ತು ಮೀರುವವರೆಗೆ, ಇಂಥ ನೆರೆ ಮಣ್ಣಿನ ಭೂಮಿಯು ರೂಪಗೊಂಡಿರುವ ದಂಡೆಯ ಅಥವಾ ತೀರದ ಹಿಡುವಳಿದಾರನು ಅಥವಾ ಅಧಿಭೋಗದಾರನು, ಅದರ ತಾತ್ಕಾಲಿಕ ಬಳಕೆಗೆ ಹಕ್ಕುಳ್ಳವನಾಗಿರತಕ್ಕದ್ದು. ಹಾಗೆ ಮೀರಿದ್ದರೆ ಅಂಥ ಭೂಮಿಯು, ನಡುಗಡ್ಡೆಯು ಅಥವಾ ನದಿ ಅಂಗಳವು 92ನೇ ಪ್ರಕರಣದ ಉಪಬಂಧಗಳಿಗೊಳಪಟ್ಟು, ಡೆಪ್ಯುಟಿ ಕಮಿಷನರ ವಿಲೇಗೆ ಒಳಪಟ್ಟಿರತಕ್ಕದ್ದು.

(2) ಉಪಪ್ರಕರಣ (1)ರ ಮೇರೆಗೆ ಹಂಗಾಮಿಯಾಗಿ ಬಳಕೆಯಲ್ಲಿರುವ ಅವಧಿಯಲ್ಲಿ ಯಾವುವೇ ನೆರೆಮಣ್ಣಿನ ಭೂಮಿಗಳು, ಹೊಸ ದಾರಿ ರೂಪಿತವಾದ ನಡುಗಡ್ಡೆಗಳು ಅಥವಾ ನೀರು ಒಣಗಿದ ನದಿ ಅಂಗಳಗಳು–ಇವುಗಳ ಬಗ್ಗೆ ಯಾವುದೇ ಭೂ ಕಂದಾಯವನ್ನು ವಿಧಿಸತಕ್ಕದ್ದಲ್ಲ.

**82. ಪ್ರವಾಹದಿಂದಾದ ನಷ್ಟದ ಸಂದರ್ಭಗಳಲ್ಲಿ ಭೂಕಂದಾಯದ ಮಾಫಿ.–** ಅರ್ಧ ಎಕರೆ ವಿಸ್ತೀರ್ಣಕ್ಕೆ ಕಡಿಮೆಯಾಗಿರದ ಭೂಮಿಯ ಯಾವುದೇ ಭಾಗವು ಪ್ರವಾಹದಿಂದ ನಷ್ಟವಾದರೆ, ನಿಯಮಿಸಬಹುದಾದಂಥ ನಿಯಮಗಳಿಗೊಳಪಟ್ಟು, ಅಂಥ ಭೂಮಿಯ ಬಗ್ಗೆ ಭೂಕಂದಾಯವನ್ನು ಸಂದಾಯ ಮಾಡುವ ಪ್ರತಿಯೊಬ್ಬ ಹಿಡುವಳಿದಾರನು ಭೂಕಂದಾಯದ ಇಳಿಕೆಗೆ ಹಕ್ಕುಳ್ಳವನಾಗಿರತಕ್ಕದ್ದು.

**83. ಕಂದಾಯ ನಿರ್ಣಯದ ರೀತಿ, ಬೇಸಾಯೇತರ ಕಂದಾಯದ ಪರಿವರ್ತನೆ ಮತ್ತು ಕೆಲವು ಉದ್ದೇಶಗಳಿಗಾಗಿ ಭೂಮಿಯ ಬಳಕೆಯನ್ನು ನಿಷೇಧಿಸುವುದು.–** (1) ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಅನ್ಯಥಾ ಉಪಬಂಧಿಸಿರುವುದನ್ನುಳಿದು, ಈ ಅಧಿನಿಯಮದ ಮೇರೆಗೆ ಯಾವುದೇ ಭೂಮಿಯ ಬಗ್ಗೆ ವಿಧಿಸಲಾಗುವ ಭೂಕಂದಾಯವನ್ನು, ಬೇಸಾಯದ ಉದ್ದೇಶಕ್ಕಾಗಿ ಆ ಭೂಮಿಯು ಬಳಕೆಯಾಗುವುದನ್ನು ಗಮನಿಸಿ ನಿರ್ಧರಿಸತಕ್ಕದ್ದು ಅಥವಾ ನಿರ್ಧರಿಸಲಾಗಿದೆಯೆಂದು ಭಾವಿಸತಕ್ಕದ್ದು.

(2) ಬೇಸಾಯವಲ್ಲದ ಇತರ ಯಾವುದೇ ಉದ್ದೇಶಕ್ಕಾಗಿ ಹೊಂದಿರುವ ಅಥವಾ ಬಳಸಿರುವ ಯಾವುದೇ ಭೂಮಿಯನ್ನು ಬೇಸಾಯದ ಉದ್ದೇಶಕ್ಕಾಗಿ ಬದಲಿಸಿಕೊಂಡರೆ ಅಥವಾ ಬಳಸಿದರೆ, ಅದಕ್ಕೆ ಕಂದಾಯವನ್ನು ಮನ್ನಾ ಮಾಡಿದ್ದರೂ ಅಥವಾ ಬೇಸಾಯವಲ್ಲದ ಇತರ ಯಾವುದೇ ಉದ್ದೇಶಕ್ಕಾಗಿ ಕಂದಾಯವನ್ನು ನಿರ್ಧರಿಸಿದರೂ, ಬೇಸಾಯದ ಉದ್ದೇಶಕ್ಕಾಗಿ ಬಳಸಿದಂಥ ಭೂಮಿಯ ಬಗ್ಗೆ ನಿಯಮಿಸಬಹುದಾದಂಥ ದರಗಳ ಮೇರೆಗೆ ಮತ್ತು ಅಂಥ ನಿಯಮಗಳಿಗೆ ಒಳಪಟ್ಟು, ಆ ಭೂಮಿಯ ಬಗ್ಗೆ ಭೂಕಂದಾಯವನ್ನು ಸಂದಾಯ ಮಾಡತಕ್ಕದ್ದು.

(3) ಯಾವುದೇ ಭೂಮಿಯನ್ನು, –

(ಎ) ವಾಸದ ಮನೆಗಳ ಉದ್ದೇಶಕ್ಕಾಗಿ;

(ಬಿ) ಕೈಗಾರಿಕೆ ಅಥವಾ ವಾಣಿಜ್ಯದ ಉದ್ದೇಶಗಳಿಗಾಗಿ; ಅಥವಾ

(ಸಿ) ಇತರ ಯಾವುದೇ ಬೇಸಾಯೇತರ ಉದ್ದೇಶಕ್ಕಾಗಿ

– ಬಳಸುವುದಕ್ಕೆ ಸಂಬಂಧಿಸಿ, ಈ ಅಧಿನಿಯಮವು ಪ್ರಾರಂಭವಾಗುವುದಕ್ಕೆ ಮೊದಲು ಜಾರಿಯಲ್ಲಿದ್ದ ಯಾವುದೇ ಅಧಿನಿಯಮದ ಅಥವಾ ಕಾನೂನಿನ ಮೇರೆಗೆ ಆ ಭೂಮಿಯ ಮೇಲೆ ವಿಧಿಸಲಾಗುವ ಮತ್ತು ನಿರ್ಧರಿಸಿದ ಅಥವಾ ನಿರ್ಧರಿಸಲಾಗಿದೆಯೆಂದು ಭಾವಿಸಿದ ಭೂಕಂದಾಯವನ್ನು, ಈ ಅಧಿನಿಯಮದಲ್ಲಿ ಏನೇ ಇದ್ದರೂ, (4)ನೇ ಉಪಪ್ರಕರಣದ ಉಪಬಂಧಗಳಿಗನುಸಾರವಾಗಿ ಅಂಥ ಕಂದಾಯವು ಪರಿವರ್ತಿತವಾಗಿದ್ದ ಹೊರತು, ಈ ಅಧಿನಿಯಮವು ಪ್ರಾರಂಭವಾಗುವ ಕಾಲದಲ್ಲಿ ಯಾವ ದರದ ಪ್ರಕಾರ ವಿಧಿಸಲಾಗಿತ್ತೋ ಅಥವಾ ವಿಧಿಸಬಹುದಾಗಿತ್ತೋ ಅದರ ಪ್ರಕಾರ ವಿಧಿಸುವುದು ಮುಂದುವರಿಯತಕ್ಕದ್ದು.

(4) ಬೇಸಾಯವಲ್ಲದ ಇತರ ಯಾವುದೇ ಉದ್ದೇಶಕ್ಕಾಗಿ ಬಳಸಿದ ಯಾವುದೇ ಭೂಮಿಗೆ ಸಂಬಂಧಿಸಿ, ಈ ಅಧಿನಿಯಮವು ಪ್ರಾರಂಭವಾಗುವುದಕ್ಕೆ ಮೊದಲು ಜಾರಿಯಲ್ಲಿರುವ ಯಾವುದೇ ಅಧಿನಿಯಮದ ಅಥವಾ ಕಾನೂನಿನ ಮೂಲಕ ಅಥವಾ ಅವುಗಳ ಮೇರೆಗೆ ವಾರ್ಷಿಕವಾಗಿ ಸಂದಾಯ ಮಾಡಬೇಕಾಗಿರುವ ಭೂಕಂದಾಯವನ್ನು ವಿಧಿಸಬಹುದಾಗಿತ್ತೋ ಅಥವಾ ವಿಧಿಸಲಾಗಿದೆಯೋ ಅಂಥ ಭೂಕಂದಾಯವನ್ನು, ನಿಯಮಿಸಬಹುದಾದಂಥ ನಿಯಮಗಳಿಗನುಸಾರವಾಗಿ ಅಂಥ ವಾರ್ಷಿಕ ಕಂದಾಯದ ಮೊಬಲಗಿನ ಐದರಷ್ಟಕ್ಕೆ ಸಮನಾದ ಮೊಬಲಗನ್ನು ರಾಜ್ಯ ಸರಕಾರಕ್ಕೆ ಸಂದಾಯ ಮಾಡುವುದರ ಮೂಲಕ ಪರಿವರ್ತಿಸಬಹುದು ಮತ್ತು ಅಂಥ ಪರಿವರ್ತನೆಯಾದ ಮೇಲೆ ಅಂಥ ಭೂಮಿಗೆ ಅಂಥ ವಾರ್ಷಿಕ ಭೂಕಂದಾಯದಿಂದ ವಿನಾಯಿತಿ ಇರತಕ್ಕದ್ದು.

(5) [1][ತಹಶೀಲ್ದಾರನು][1] ಅಥವಾ ಮೋಜಣಿ ಅಧಿಕಾರಿಯು, ಈ ಬಗ್ಗೆ ನಿಯಮಿಸಬಹುದಾದಂಥ ನಿಯಮಗಳಿಗೊಳಪಟ್ಟು, ಭೂಕಂದಾಯಕ್ಕೆ ಹೊಣೆಯಾಗಿರುವ ಯಾವುದೇ ಭೂಮಿಯ ಬಳಕೆಯನ್ನು ಕೆಲವು ಉದ್ದೇಶಗಳಿಗಾಗಿ ಪ್ರತಿಬಂಧಿಸಬಹುದು ಮತ್ತು ಅಂಥ ಯಾವುದೇ ಪ್ರತಿಬಂಧಿತ ಉದ್ದೇಶಕ್ಕಾಗಿ ಅದನ್ನು ಬಳಸುವ ಅಥವಾ ಬಳಸಲು ಯತ್ನಿಸುವ ಯಾರೇ ಹಿಡುವಳಿದಾರನನ್ನು ಅಥವಾ ಇತರ ವ್ಯಕ್ತಿಯನ್ನು ಸಂಕ್ಷಿಪ್ತ ಕ್ರಮದ ಮೂಲಕ ಹೊರದೂಡಬಹುದು.

1. 1970ರ ಅಧಿನಿಯಮ 5ರ ಮೂಲಕ 23.10.1969 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**84. ಭೂಕಂದಾಯವನ್ನು ಯಾರು ಗೊತ್ತುಪಡಿಸಬೇಕು.**–(1) ಭೂಕಂದಾಯ ಸಂದಾಯದಿಂದ ಪೂರ್ತಿಯಾಗಿ ವಿನಾಯಿತಿ ಪಡೆದಿರದ ಮತ್ತು Xನೇ ಅಧ್ಯಾಯದ ಮೇರೆಗೆ ಭೂಕಂದಾಯವನ್ನು ಗೊತ್ತುಪಡಿಸಿರದ ಎಲ್ಲ ಭೂಮಿಗಳ ಮೇಲೆ, ಈ ಬಗ್ಗೆ ರಾಜ್ಯ ಸರ್ಕಾರವು ರಚಿಸಬಹುದಾದಂಥ ನಿಯಮಗಳಿಗೊಳಪಟ್ಟು, ರಾಜ್ಯ ಸರ್ಕಾರವು ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ನಿರ್ದಿಷ್ಟಪಡಿಸ ಬಹುದಾದಂಥ ಪರಮಾವಧಿ ಮೀರದಂಥ ಅವಧಿಗೆ ಭೂಕಂದಾಯದಂತೆ ಸಂದಾಯಮಾಡಬೇಕಾದ ಕಂದಾಯವನ್ನು, ಡೆಪ್ಯುಟಿ ಕಮಿಷನರು ಗೊತ್ತುಪಡಿಸತಕ್ಕದ್ದು ಮತ್ತು ಅಂಥ ಭೂಕಂದಾಯ ನಿರ್ಧರಣೆಗನುಸಾರವಾಗಿ ಬರಬೇಕಾದ ಮೊಬಲಗುಗಳನ್ನು ಅಂಥ ಎಲ್ಲ ಭೂಮಿಗಳ ಮೇಲೆ ವಿಧಿಸತಕ್ಕದ್ದು:

ಪರಂತು, ಯಾವ ಭೂಮಿಗಳು ಭೂಕಂದಾಯದಿಂದ ಭಾಗಶಃ ವಿನಾಯಿತಿ ಹೊಂದಿರುವುವೋ, ಅಥವಾ ಯಾವ ಭೂಮಿಗಳ ಭೂಕಂದಾಯದ ಸಂದಾಯದ ಹೊಣೆಯು ವಿಶೇಷ ಷರತ್ತುಗಳಿಗೆ ಅಥವಾ ನಿರ್ಬಂಧಗಳಿಗೊಳಪಟ್ಟಿದೆಯೋ, ಆ ಭೂಮಿಗಳ ಬಗ್ಗೆ ಕಂದಾಯವನ್ನು ಗೊತ್ತುಪಡಿಸುವಾಗ ಮತ್ತು ಕಂದಾಯವನ್ನು ವಿಧಿಸುವಾಗ ಸದರಿ ಹಕ್ಕುಗಳ ಸ್ವರೂಪಕ್ಕನುಸಾರವಾಗಿ ಕಾನೂನು ಸಮ್ಮತವಾಗಿ ಅಸ್ತಿತ್ವದಲ್ಲಿರುವ ಎಲ್ಲ ಹಕ್ಕುಗಳಿಗೆ ಗಮನಕೊಡತಕ್ಕದ್ದು:

ಮತ್ತೂ ಪರಂತು, ಪೂರ್ತಿಯಾಗಿ ಅಥವಾ ಭಾಗಶಃ ಭೂಕಂದಾಯದ ಸಂದಾಯದಿಂದ ವಿನಾಯಿತಿಯನ್ನು ಪಡೆದ ಯಾವುದೇ ಭೂಮಿಯ ಬಗ್ಗೆ, ಇರುವ ಅಂಥ ವಿನಾಯಿತಿಯು ಕೊನೆಗೊಂಡ ಸಂದರ್ಭದಲ್ಲಿ, ಅಂಥ ಭೂಮಿಯ ಬಗ್ಗೆ ಇದ್ದ ವಿನಾಯಿತಿಯು ಕೊನೆಗೊಂಡ ದಿನಾಂಕದಿಂದ ಅಥವಾ ಡೆಪ್ಯುಟಿ ಕಮಿಷನರು ಸೂಕ್ತವೆಂದು ತಾನು ಭಾವಿಸಬಹುದಾದಂಥ ಆ ತರುವಾಯದ ಯಾವುದೇ ದಿನಾಂಕದಿಂದ ಅಂಥ ಭೂಮಿಯ ಬಗ್ಗೆ ಭೂಕಂದಾಯವಾಗಿ ಸಂದಾಯ ಮಾಡಬೇಕಾಗುವ ಮೊಬಲಗನ್ನು ಅವರು ಗೊತ್ತುಪಡಿಸುವುದು ಕಾನೂನುಬದ್ಧವಾಗಿರತಕ್ಕದ್ದು.

(2) ಉಪಪ್ರಕರಣ (1)ರ ಮೇರೆಗೆ ಯಾವುದೇ ಭೂಮಿಯ ಕಂದಾಯವನ್ನು ಗೊತ್ತು ಮಾಡಿರುವ ಅವಧಿಯು ಕೊನೆಗೊಂಡ ತರುವಾಯ, ಈ ಬಗ್ಗೆ ರಾಜ್ಯ ಸರಕಾರವು ಮಾಡಿದ ನಿಯಮಗಳಿಗನುಸಾರವಾಗಿ, ಡೆಪ್ಯುಟಿ ಕಮಿಷನರು ಕಾಲಕಾಲಕ್ಕೆ ಅದನ್ನು ಪರಿಷ್ಕರಿಸಬಹುದು. ಹಾಗೆ ಪರಿಷ್ಕರಿಸಲಾದ ಕಂದಾಯವನ್ನು ರಾಜ್ಯ ಸರ್ಕಾರವು ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಪರಮಾವಧಿ ಅವಧಿಗೆ ಮೀರದ ಅವಧಿಯವರೆಗೆ ಪ್ರತಿಯೊಂದು ಸಲ ಗೊತ್ತುಪಡಿಸತಕ್ಕದ್ದು.

**85. ವರ್ಗಾವಣೆಯಾದ ಭೂಮಿಗಳ ರಿಜಿಸ್ಟರು.–** ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಉಪಬಂಧಗಳ ಮೇರೆಗೆ ಯಾವ ಭೂಮಿಗಳ ವರ್ಗಾವಣೆಯನ್ನು ಸ್ಥಿರಪಡಿಸಲಾಗಿದೆಯೋ ಅಥವಾ ಅದಕ್ಕೆ ಮನ್ನಣೆ ಕೊಡಲಾಗಿದೆಯೋ ಅಂಥ ಎಲ್ಲ ಭೂಮಿಗಳ ಬಗ್ಗೆ ಒಂದು ರಿಜಿಸ್ಟರನ್ನು, ರಾಜ್ಯ ಸರ್ಕಾರವು ಕಾಲಕಾಲಕ್ಕೆ ನಿಯಮಿಸಬಹುದಾದಂಥ ನಮೂನೆಯಲ್ಲಿ, ಡೆಪ್ಯುಟಿ ಕಮಿಷನರು ಇಡತಕ್ಕದ್ದು; ಮತ್ತು ಹಾಗೆ ವರ್ಗಾವಣೆ ಮಾಡಲಾದ ಅಂಥ ಯಾವುದೇ ಭೂಮಿಗಳ ಸಂಬಂಧದಲ್ಲಿ ಕೊಡಲಾದ ಸನ್ನದು ಶಾಶ್ವತವಾಗಿ ಕಳೆದುಹೋಗಿದೆ ಅಥವಾ ನಾಶವಾಗಿದೆಯೆಂಬ ಬಗ್ಗೆ ಡೆಪ್ಯುಟಿ ಕಮಿಷನರಿಗೆಮನದಟ್ಟು ಮಾಡಿಕೊಟ್ಟಾಗ, ಅದನ್ನು ನಿಯಮಗಳಿಗೆ ಮತ್ತು ನಿಯಮಿಸಬಹುದಾದಂಥ ಫೀಜುಗಳ ಸಂದಾಯಕ್ಕೆ ಒಳಪಟ್ಟು, ಅದಕ್ಕೆ ಹಕ್ಕುಳ್ಳವನೆಂದು ಡೆಪ್ಯುಟಿ ಕಮಿಷನರು ಭಾವಿಸಬಹುದಾದಂಥ ಯಾರೇ ವ್ಯಕ್ತಿಗೆ ಸದರಿ ರಿಜಿಸ್ಟರಿನಿಂದ ಒಂದು ಪ್ರಮಾಣಿತ ಉದ್ಧೃತ ಭಾಗವನ್ನು ಕೊಡಬಹುದು ಮತ್ತು ಕಳೆದು ಹೋಗಿವೆಯೆಂದು ಅಥವಾ ನಾಶವಾಗಿದೆಯೆಂದು ಹೇಳಲಾಗಿರುವ ಸನ್ನದಿನ ಬದಲಾಗಿ ಅದನ್ನು ಕೊಡಲಾಗಿದೆಯೆಂದು ಅದರ ಮೇಲೆ ಅವರು ಬರೆಯತಕ್ಕದ್ದು, ಮತ್ತು ಹಕ್ಕಿನ ಬಗ್ಗೆ ಸದರಿ ಸನ್ನದು ಹೇಗೆ ಕಾನೂನು ಸಮ್ಮತವಾಗಿತ್ತೋ ಹಾಗೆಯೇ ಇದನ್ನೂ ಕಾನೂನು ಸಮ್ಮತವಾದ ರುಜುವಾತೆಂದು ಭಾವಿಸತಕ್ಕದ್ದು.

**86. ಕಂದಾಯ ನಿರ್ಧರಣೆಯನ್ನು ಮಾಡುವ ಬಗ್ಗೆ.–** ಭೂಮಿಯ ಪ್ರತಿಯೊಂದು ಭಾಗದ ಅಥವಾ ಸರ್ವೆ ನಂಬರಿನ ಭೂಕಂದಾಯದ ನಿರ್ಧರಣೆಯನ್ನು, ಈ ಅಧಿನಿಯಮದ ಉಪಬಂಧಗಳ ಮೇರೆಗೆ ಆ ಭೂಕಂದಾಯದ ಬಗ್ಗೆ ರಾಜ್ಯ ಸರ್ಕಾರಕ್ಕೆ ಮುಖ್ಯವಾಗಿ ಜವಾಬ್ದಾರನಾಗಿರುವ ವ್ಯಕ್ತಿಗೆ ತಿಳಿವಳಿಕೆ ಕೊಟ್ಟು ಮಾಡತಕ್ಕದ್ದು.

**87. ಭೂಕಂದಾಯವು ಭೂಮಿಯ ಮೇಲಿನ ಪ್ರಪ್ರಥಮ ಹೊಣೆ.–** (1) ಯಾರೇ ಭೂ ಹಿಡುವಳಿದಾರನಿಂದ ಭೂಮಿಯ ಬಗ್ಗೆ ಬರಬೇಕಾದ ಭೂಕಂದಾಯದ ಬಾಕಿಗಳು ಆ ಹಿಡುವಳಿಯ ಮೇಲಿನ ಮತ್ತು ಅದರ ಪ್ರತಿಯೊಂದು ಭಾಗದ ಮೇಲಿನ ಪ್ರಪ್ರಥಮ ಹೊಣೆ ಆಗಿರತಕ್ಕದ್ದು; ಅದನ್ನು ಸಂದಾಯ ಮಾಡಲು ತಪ್ಪಿದರೆ ಅದರಲ್ಲಿ ಇರುವ ಎಲ್ಲ ಮರಗಳು, ಬೆಳೆಗಳು, ಕಟ್ಟಡಗಳು ಮತ್ತು ಆ ಭೂಮಿಗೆ ಸೇರಿದಂತಿರುವ ಅಥವಾ ಆ ಭೂಮಿಗೆ ಸೇರಿದಂತಿರುವ ಯಾವುದೇ ವಸ್ತುವಿಗೆ ಶಾಶ್ವತವಾಗಿ ಲಗತ್ತಾಗಿರುವ ವಸ್ತುಗಳು–ಇವುಗಳ ಮೇಲೆ ಅಧಿಭೋಗದಾರನಿಗೆ ಅಥವಾ ಹಿಡುವಳಿದಾರನಿಗೆ ಇರುವ ಎಲ್ಲ ಹಕ್ಕುಗಳೊಂದಿಗೆ ಅಧಿಭೋಗವು ಅಥವಾ ಹಿಡುವಳಿಯು ಮುಟ್ಟುಗೋಲಿಗೆ ಗುರಿಯಾಗತಕ್ಕದ್ದು ಮತ್ತು ಈ ಬಗ್ಗೆ [1][ತಹಶೀಲ್ದಾರನು][1] ಆದೇಶವನ್ನು ಮಾಡಬಹುದು.

1. 1970ರ ಅಧಿನಿಯಮ 5ರ ಮೂಲಕ 23.10.1969 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) ಉಪ ಪ್ರಕರಣ (1)ರ ಮೇರೆಗೆ ಮುಟ್ಟುಗೋಲಿನ ಆದೇಶ ಮಾಡಿದ ಮೇಲೆ, [1][ತಹಶೀಲ್ದಾರನು][1] 10ನೇ ಪ್ರಕರಣದ ಉಪಬಂಧಗಳಿಗೊಳಪಟ್ಟು, ಅಧಿಭೋಗದ ಹಕ್ಕನ್ನು ಅಥವಾ ಹಿಡುವಳಿಯನ್ನು ಮಾರಾಟ ಮಾಡುವ ಮೂಲಕ ಬಾಕಿಯಿರುವ ಎಲ್ಲ ಮೊಬಲಗನ್ನು ವಸೂಲು ಮಾಡಿಕೊಳ್ಳಬಹುದು ಅಥವಾ ಈ ಬಗ್ಗೆ ರಾಜ್ಯ ಸರ್ಕಾರವು ರಚಿಸಿದ ನಿಯಮಗಳ ಮೇರೆಗೆ ಅಂಥ ಅಧಿಭೋಗದ ಹಕ್ಕು ಅಥವಾ ಹಿಡುವಳಿಯನ್ನು ಇತರ ರೀತಿಯಲ್ಲಿ ವಿಲೇವಾರಿ ಮಾಡಬಹುದು.

1. 1970ರ ಅಧಿನಿಯಮ 5ರ ಮೂಲಕ 23.10.1969 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(3) ಅಂಥ ಅಧಿಭೋಗದ ಹಕ್ಕನ್ನು ಅಥವಾ ಹಿಡುವಳಿಯನ್ನು ಬಾಕಿದಾರನಿಗೆ ಅದನ್ನು ಮರಳಿ ವಹಿಸಿಕೊಡುವುದನ್ನು ಹೊರತುಪಡಿಸಿ, (2)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ನಿಯಮಗಳ ಮೇರೆಗೆ ಮೇಲೆ ಹೇಳಿದಂಥ ರೀತಿಯಲ್ಲಿ ಮಾರಾಟದ ಮೂಲಕವಾಗಲಿ ಅಥವಾ ಇತರ ರೀತಿಯಲ್ಲಿಯಾಗಲಿ ವಿಲೇವಾರಿ ಮಾಡಿದಾಗ, [1][ತಹಶೀಲ್ದಾರನು][1] ಅನ್ಯಥಾ ನಿರ್ದೇಶಿಸದಿದ್ದರೆ, ಅಧಿಭೋಗದಾರನು ಅಥವಾ ಹಿಡುವಳಿದಾರನು ಅಥವಾ ಹಕ್ಕುದಾರರಾದ ಅವನ ಪೂರ್ವಜರ ಪೈಕಿ ಯಾರಾದರೂ ಸರ್ಕಾರವನ್ನುಳಿದು ಇತರ ಯಾರೇವ್ಯಕ್ತಿಯ ಪರವಾಗಿ ಹೊರಿಸಿದ ಅಥವಾ ಅಂಥ ಅಧಿಭೋಗದಾರನ ಅಥವಾ ಹಿಡುವಳಿದಾರನ ಮೇಲೆ ಇತರ ಯಾವುದೇ ರೀತಿಯಲ್ಲಿ ಇರುವ ಎಲ್ಲ ಹಿಡುವಳಿಯ ಸ್ವರೂಪಗಳು, ಹಕ್ಕುಗಳು, ಋಣಭಾರಗಳು ಮತ್ತು ನ್ಯಾಯ ಸಮ್ಮತ ಹೊಣೆಗಾರಿಕೆಗಳು–ಇವುಗಳಿಂದ, ಅಂಥ ಅಧಿಭೋಗದ ಅಥವಾ ಹಿಡುವಳಿಯ ಸಂಬಂಧದಲ್ಲಿ ವರ್ಗಾವಣೆ ಮಾಡಲಾದ ಹಿಡುವಳಿಗಳಲ್ಲಿನ ಕದೀಮ ಗೇಣಿದಾರರ ಅಥವಾ ಖಾಯಂ ಗೇಣಿದಾರರ ಹಕ್ಕುಗಳಿಗೆ ಬಾಧಕವಾಗದಂತೆ, ಆ ಅಧಿಭೋಗವು ಅಥವಾ ಹಿಡುವಳಿಯು ವಿಮುಕ್ತವಾಗಿದೆ ಎಂದು ಭಾವಿಸತಕ್ಕದ್ದು.

1. 1970ರ ಅಧಿನಿಯಮ 5ರ ಮೂಲಕ 23.10.1969 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**88. ಮುಟ್ಟುಗೋಲು ಹಾಕಿಕೊಂಡ ಹಿಡುವಳಿಗಳನ್ನು ಸ್ವಾಧೀನಕ್ಕೆ ತೆಗೆದುಕೊಳ್ಳಬಹುದು ಮತ್ತು ಇತರ ರೀತಿಯಲ್ಲಿ ವಿಲೇವಾರಿ ಮಾಡಬಹುದು.–** ಸಂದಾಯ ಮಾಡಲು ತಪ್ಪುವುದರಿಂದಾಗಿ ಅಥವಾ 87ನೇ ಪ್ರಕರಣದ ಮೇರೆಗೆ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ಅಂಥ ಮುಟ್ಟುಗೋಲಿಗೆ ಕಾರಣವಾಗುವ ಇತರ ಲೋಪದಿಂದಾಗಿ ಹಿಡುವಳಿಯು ಮುಟ್ಟುಗೋಲು ಅದಲ್ಲಿ, [1][ತಹಶೀಲ್ದಾರನು][1] ಅಂಥ ಹಿಡುವಳಿಯನ್ನು ಕೂಡಲೇ ಸ್ವಾಧೀನಕ್ಕೆ ತೆಗೆದುಕೊಳ್ಳಬಹುದು ಮತ್ತು ಕೊಂಡುಕೊಂಡವನ ಅಥವಾ ಈ ಅಧಿನಿಯಮದ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನು ಉಪಬಂಧಗಳಿಗನುಸಾರವಾಗಿ ಅದನ್ನು ಹೊಂದಲು ಹಕ್ಕಿರುವ ಇತರ ಯಾರೇ ವ್ಯಕ್ತಿಯ ಸ್ವಾಧೀನಕ್ಕೆ ಕೊಡುವ ಮೂಲಕ ಅದನ್ನು ವಿಲೇವಾರಿ ಮಾಡಬಹುದು.

1. 1970ರ ಅಧಿನಿಯಮ 5ರ ಮೂಲಕ 23.10.1969 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**89. ರಸೀದಿಗಳು.–** (1) ಭೂಕಂದಾಯವನ್ನು ಸ್ವೀಕರಿಸುವ ಪ್ರತಿಯೊಬ್ಬ ರೆವಿನ್ಯೂ ಅಧಿಕಾರಿಯು, ಅದನ್ನು ತಾನು ಸ್ವೀಕರಿಸುವ ಕಾಲದಲ್ಲಿ, ನಿಯಮಿಸಿದ ನಮೂನೆಯಲ್ಲಿ ಅದರ ಬಗ್ಗೆ ರಸೀದಿಯನ್ನು ಬರೆದುಕೊಡತಕ್ಕದ್ದು.

(2) ಗೇಣಿ ಅಥವಾ ಭೂಕಂದಾಯದ ಬಗ್ಗೆ ಬರಬೇಕಾದ ಯಾವುದೇ ಮೊಬಲಗನ್ನು ಯಾರೇ ಕನಿಷ್ಠ ಹಿಡುವಳಿದಾರನಿಂದ ನೇರವಾಗಿ ಸ್ವೀಕರಿಸಲು ಹಕ್ಕಿರುವ ಪ್ರತಿಯೊಬ್ಬ ವರಿಷ್ಠ ಹಿಡುವಳಿದಾರನು, ಅಂಥ ಮೊಬಲಗನ್ನು ತಾನು ಸ್ವೀಕರಿಸುವ ಕಾಲದಲ್ಲಿ, ಅಂಥ ಕನಿಷ್ಠ ಹಿಡುವಳಿದಾರನಿಗೆ ನಿಯಮಿಸಿದ ನಮೂನೆಯಲ್ಲಿ ಅದರ ಬಗ್ಗೆ ರಸೀದಿಯನ್ನು ಬರೆದುಕೊಡತಕ್ಕದ್ದು.

**90. ರಸೀದಿಗಳನ್ನು ಕೊಡಲು ತಪ್ಪಿದಲ್ಲಿ ದಂಡ.–** 89ನೇ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವಂಥ ಯಾರೇ ವ್ಯಕ್ತಿಯು, ಡೆಪ್ಯುಟಿ ಕಮಿಷನರ ಸಮಕ್ಷಮದಲ್ಲಿ ನಡೆದ ಸಂಕ್ಷಿಪ್ತ ವಿಚಾರಣೆಯ ತರುವಾಯ, ಸ್ವೀಕರಿಸಿದ ಯಾವ ಮೊಬಲಗಿನ ಬಗ್ಗೆ ಕ್ರಮಬದ್ಧ ರೀತಿಯಲ್ಲಿ ರಸೀದಿಯನ್ನು ಕೊಟ್ಟಿಲ್ಲವೋ ಅಂಥ ಮೊಬಲಗಿನ ಮೂರರಷ್ಟಕ್ಕೆ ಮೀರದಂತೆ, ಡೆಪ್ಯುಟಿ ಕಮಿಷನರು ನಿರ್ದಿಷ್ಟಪಡಿಸಬಹುದಾದಂಥ ಮೊಬಲಗನ್ನು ಜುಲ್ಮಾನೆಯಾಗಿ ಸಂದಾಯ ಮಾಡಲು ಹೊಣೆಗಾರನಾಗಿರತಕ್ಕದ್ದು.

## [1][ಅಧ್ಯಾಯ–VIIಎ

1. 1986ರ ಅಧಿನಿಯಮ 20ರ ಮೂಲಕ 13.5.1986 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

## ಇನ್ನೊಬ್ಬರ ಭೂಮಿಯ ಮೂಲಕ ಜಲಮಾರ್ಗಗಳ ನಿರ್ಮಾಣ

**90ಎ. ಇತರ ವ್ಯಕ್ತಿಗಳಿಗೆ ಸೇರಿದ ಭೂಮಿಯ ಮೂಲಕ ಜಲಮಾರ್ಗಗಳ ನಿರ್ಮಾಣ.–** (1) ರಾಜ್ಯ ಸರ್ಕಾರ ಅಥವಾ ಸಹಕಾರಿ ಬೇಸಾಯ ಸಂಘ ಅಥವಾ ಯಾರೇ ವ್ಯಕ್ತಿಯು (ಇನ್ನು ಮುಂದೆ ಈ ಅಧ್ಯಾಯದಲ್ಲಿ ಅಭ್ಯರ್ಥಿ ಎಂದು ಕರೆಯಲಾಗಿದೆ) ಜಲಮೂಲದಿಂದ ಕೃಷಿ ಉದ್ದೇಶಕ್ಕಾಗಿ ನೀರನ್ನು ಪಡೆಯಲು ಜಲಮಾರ್ಗವನ್ನು ನಿರ್ಮಾಣ ಮಾಡಲು ಬಯಸಿದರೆ, ಆ ವ್ಯಕ್ತಿ ಅಥವಾ ರಾಜ್ಯಸರ್ಕಾರ ಅಥವಾ ಅಂಥ ಬೇಸಾಯ ಸಂಘವು ಅದಕ್ಕಾಗಿ ಹಕ್ಕುಳ್ಳವರಾಗಿರುತ್ತಾರೆ. ಆದರೆ, ಅಂಥ ಜಲಮಾರ್ಗವು, ಇತರ ವ್ಯಕ್ತಿಗೆ (ಇನ್ನು ಮುಂದೆ ಈ ಅಧ್ಯಾಯದಲ್ಲಿ ನೆರೆಯ ಹಿಡುವಳಿದಾರ ಎಂದು ಕರೆಯಲಾಗಿದೆ) ಸೇರಿದ ಅಥವಾ ಸ್ವಾಧೀನದಲ್ಲಿರುವ ಯಾವುದೇ ಅಂಥ ಭೂಮಿಯ ಮೂಲಕ

ನಿರ್ಮಾಣವಾಗಬೇಕಾಗಿದ್ದರೆ ಮತ್ತು ಅರ್ಜಿದಾರ ಹಾಗೂ ನೆರೆಯ ಹಿಡುವಳಿದಾರನ ಮಧ್ಯ ಅಂಥ ನಿರ್ಮಾಣಕ್ಕಾಗಿ ಯಾವುದೇ ಖಾಸಗಿ ಒಪ್ಪಂದ ಏರ್ಪಡದಿದ್ದರೆ, ಜಲಮಾರ್ಗವನ್ನು ನಿರ್ಮಿಸಲು ಬಯಸುವ ವ್ಯಕ್ತಿಯು ತಹಶೀಲ್ದಾರನಿಗೆ ನಿಗದಿ ನಮೂನೆಯಲ್ಲಿ ಅರ್ಜಿಯನ್ನು ಸಲ್ಲಿಸಬಹುದು.

**ವಿವರಣೆ.–** ಈ ಅಧ್ಯಾಯದ ಉದ್ದೇಶಕ್ಕಾಗಿ, "ಸಹಕಾರಿ ಬೇಸಾಯ ಸಂಘ ಎಂದರೆ, ಕರ್ನಾಟಕ ಭೂ ಸುಧಾರಣಾ ಅಧಿನಿಯಮ, 1961 (1962ರ ಕರ್ನಾಟಕ ಅಧಿನಿಯಮ 10) ರಲ್ಲಿ ಪರಿಭಾಷಿಸಿದಂಥ ಸಹಕಾರಿ ಬೇಸಾಯ ಸಂಘ ಹಾಗೂ "ನೆರೆಯ ಹಿಡುವಳಿದಾರ" ಎಂದರೆ, ಭೂಮಿಯ ಒಡೆಯನಾಗಿರುವ ಯಾರೇ ವ್ಯಕ್ತಿ ಮತ್ತು ಅವನ ಮೂಲಕ ಅಥವಾ ಅವನ ಅಧೀನದಲ್ಲಿ ಹಿಡುವಳಿದಾರರಾಗಿರುವ ಎಲ್ಲಾ ವ್ಯಕ್ತಿಗಳನ್ನು ಒಳಗೊಳ್ಳುತ್ತದೆ.

(2) ಅರ್ಜಿಯನ್ನು ಸ್ವೀಕರಿಸಿದ ಮೇಲೆ, ತಹಶೀಲ್ದಾರನು, ವಿಚಾರಣೆ ಮಾಡಿದ ತರುವಾಯ ಮತ್ತು ಅರ್ಜಿಗೆ ಯಾವುದೇ ಆಕ್ಷೇಪಣೆಯನ್ನು ಸಲ್ಲಿಸಲು ನೆರೆಯ ಹಿಡುವಳಿದಾರನಿಗೆ ಮತ್ತು ಭೂಮಿಯ ಹಿತಾಸಕ್ತಿ ಹೊಂದಿರುವ ಎಲ್ಲಾ ಇತರ ವ್ಯಕ್ತಿಗಳಿಗೆ ಒಂದು ಅವಕಾಶವನ್ನು ಕೊಟ್ಟ ತರುವಾಯ, ಅರ್ಜಿದಾರನಿಗೆ ಸೇರಿದ ಭೂಮಿಯನ್ನು ಸಂಪೂರ್ಣವಾಗಿ ಮತ್ತು ಸಮರ್ಥವಾಗಿ ಕೃಷಿಗಾಗಿ ಬಳಸಿಕೊಳ್ಳುವುದಕ್ಕೆಜಲ ಮಾರ್ಗವನ್ನು ನಿರ್ಮಿಸುವುದು ಅಗತ್ಯವಿರುವುದೆಂದು ಕಂಡು ಬಂದರೆ, ಈ ಮುಂದಿನ ಷರತ್ತುಗಳಿಗೆ ಒಳಪಟ್ಟು ಜಲ ಮಾರ್ಗವನ್ನು ನಿರ್ಮಿಸಲು ಅರ್ಜಿದಾರನಿಗೆ ಅನುಮತಿಸುವುದಕ್ಕಾಗಿ ನೆರೆಯ ಹಿಡುವಳಿದಾರನಿಗೆ ಲಿಖಿತ ಆದೇಶದ ಮೂಲಕ ನಿರ್ದೇಶನ ನೀಡಸಬಹುದು, ಎಂದರೆ,–

(ಎ) ಜಲ ಮಾರ್ಗವನ್ನು, ಪಕ್ಷಕಾರರು ಒಪ್ಪಂದ ಮಾಡಿಕೊಂಡಂತೆ, ಅಂಥ ನಿರ್ದೇಶನದಂತೆ ಮತ್ತು ರೀತಿಯಲ್ಲಿ ಅಥವಾ ಅಂಥ ಒಪ್ಪಂದ ವಿಫಲವಾದರೆ, ಅಂಥ ಭೂಮಿಯ ಮೂಲಕ ಅದನ್ನು ನಿರ್ಮಿಸುವುದರಿಂದ ಸಾಧ್ಯವಾದಷ್ಟು ಮಟ್ಟಿಗೆ ಸಣ್ಣ ಪ್ರಮಾಣದ ಹಾನಿಗೆ ಸೀಮಿತವಾಗುವ ಹಾಗೆ ತಹಶೀಲ್ದಾರನು ನಿರ್ದೇಶಿಸಿದಂತೆ ನಿರ್ಮಿಸತಕ್ಕದ್ದು.

(ಬಿ) ಜಲಮಾರ್ಗವು ಕೊಳವೆಗಳನ್ನು ಒಳಗೊಂಡಿರುವಂಥ ಕಡೆಗಳಲ್ಲಿ, ಆ ಕೊಳವೆಗಳನ್ನು ಭೂಮಿಯ ಮೇಲ್ಮೈಯಿಂದ ಎರಡು ಅಡಿಗಳಿಗಿಂತ ಕಡಿಮೆಯಿಲ್ಲದಷ್ಟು ಆಳದಲ್ಲಿ ಹಾಕತಕ್ಕದ್ದು.

(ಸಿ) ಜಲಮಾರ್ಗವು, ನೀರು ಕಾಲುವೆಯಂತಾಗುವುದಾದರೆ; ಆ ಕಾಲುವೆಯ ಐದು ಅಡಿಗಳಿಗಿಂತ ಹೆಚ್ಚು ಅಗಲವಾಗಿರತಕ್ಕದ್ದಲ್ಲ.

(ಡಿ) ಯುಕ್ತವೆಂದು ತಹಶೀಲ್ದಾರನು ನಿರ್ಧರಿಸಬಹುದಾದ, ಎಂದರೆ,–

(i) ಜಲ ಮಾರ್ಗದ ನಿರ್ಮಾಣವು ಅಂಥ ಭೂಮಿಗೆ ತೀವ್ರವಾಗಿ ಧಕ್ಕೆ ಉಂಟುಮಾಡುವ ಕಾರಣದಿಂದ ಅಂಥ ಭೂಮಿಗೆ ಉಂಟಾಗುವ ಯಾವುದೇ ಹಾನಿಗಾಗಿ ಅಂಥ ನಷ್ಟಪರಿಹಾರವನ್ನು ನಿರ್ಧರಿಸಿದರೆ; ಮತ್ತು

(ii) ಅಂಥ ವಾರ್ಷಿಕ ಗೇಣಿಯನ್ನು ನಿರ್ಧರಿಸಿದರೆ

– ಆ ನಷ್ಟ ಪರಿಹಾರವನ್ನು ಮತ್ತು ವಾರ್ಷಿಕ ಗೇಣಿಯನ್ನು ಅರ್ಜಿದಾರನು ನೆರೆಯ ಹಿಡುವಳಿದಾರನಿಗೆ ಸಂದಾಯ ಮಾಡತಕ್ಕದ್ದು.

(ಇ) ಅರ್ಜಿದಾರನು, ಜಲಮಾರ್ಗವನ್ನು ಉತ್ತಮ ಸ್ಥಿತಿಯಲ್ಲಿರುವಂತೆ ಹಾಗೂ ದುರಸ್ತಿ ಕಾರ್ಯ ಸೂಕ್ತವಾಗಿ ನಡೆಯುವಂತೆ ನೋಡಿಕೊಳ್ಳತಕ್ಕದ್ದು.

(ಎಫ್) ಅರ್ಜಿದಾರನು ನಿಯಮಿಸಿದ ಅವಧಿಯೊಳಗೆ ನೆರೆಯ ಹಿಡುವಳಿದಾರನೊಂದಿಗೆ ನಿಯಮಿಸಿದ ನಮೂನೆಯಲ್ಲಿ ಒಪ್ಪಂದವನ್ನು ಮಾಡಿಕೊಳ್ಳತಕ್ಕದ್ದು.

(ಜಿ) ನಿಯಮಿಸಬಹುದಾದಂಥ ಅಥವಾ ಯುಕ್ತವೆಂದು ತಹಶೀಲ್ದಾರನು ಭಾವಿಸಬಹುದಾದಂಥ ಇತರ ಷರತ್ತುಗಳನ್ನು ವಿಧಿಸತಕ್ಕದ್ದು.

(3) ಉಪ ಪ್ರಕರಣ (2)ರ ಮೇರೆಗೆ ಮಾಡಿದ ಆದೇಶವು ನೆರೆಯ ಹಿಡುವಳಿದಾರನ ಹಾಗೂ ಭೂಮಿಯಲ್ಲಿ ಹಿತಾಸಕ್ತಿ ಹೊಂದಿರುವ ಎಲ್ಲಾ ಇತರ ವ್ಯಕ್ತಿಗಳ ನಡುವೆ ನಷ್ಟಪರಿಹಾರದ ಮೊತ್ತವನ್ನು ಹೇಗೆ ಹಂಚಿಕೆ ಮಾಡತಕ್ಕದೆಂದು ನಿರ್ದೇಶಿಸತಕ್ಕದ್ದು.

(4) ಉಪ ಪ್ರಕರಣ (2)ರ ಮೇರೆಗೆ ಮಾಡಿದ ಆದೇಶವು, (2)ನೇ ಉಪ ಪ್ರಕರಣದ (ಎಫ್) ಖಂಡದ ಮೇರೆಗೆ ಅಗತ್ಯಪಡಿಸಿದಂತೆ ಅರ್ಜಿದಾರನು ಒಪ್ಪಂದವನ್ನು ಮಾಡಿಕೊಂಡ ತರುವಾಯ, ಸಹಾಯಕರುಗಳು ಅಥವಾ ಕೆಲಸಗಾರರೊಂದಿಗೆ ಆದೇಶದಲ್ಲಿ ನಿರ್ದಿಷ್ಟಪಡಿಸಲಾದ ಭೂಮಿಯನ್ನು ಪ್ರವೇಶಿಸುವ ಉದ್ದೇಶಕ್ಕಾಗಿ ಮತ್ತು ಜಲ ಮಾರ್ಗದ ನಿರ್ಮಾಣಕ್ಕೆ ಅವಶ್ಯವಾಗಬಹುದಾದಂಥ ಎಲ್ಲ ಕೆಲಸವನ್ನು ಮಾಡಲು ಮತ್ತು ಅದರ ದುರಸ್ತಿ ಅಥವಾ ನಿರ್ವಹಣೆಗಾಗಿ ಅವನಿಗೆ ಅಥವಾ ಯಾರೇ ಏಜೆಂಟನಿಗೆ ಅಥವಾ ಅವನು ನಿಯೋಜಿಸಿದ ಇತರ ವ್ಯಕ್ತಿಗಳಿಗೆ ಸಂಪೂರ್ಣ ಅಧಿಕಾರವನ್ನು ನೀಡತಕ್ಕದ್ದು.

**90ಬಿ. ಗೇಣಿ ಸಂದಾಯ ಮಾಡುವುದಕ್ಕೆ ಮತ್ತು ಜಲ ಮಾರ್ಗವನ್ನು ಸುಸ್ಥಿತಿಯಲ್ಲಿಡುವುದಕ್ಕೆ ವಿಫಲವಾಗುವುದು.–** 90ಎ ಪ್ರಕರಣದ (2)ನೇ ಉಪ ಪ್ರಕರಣದ ಮೇರೆಗೆ ಅರ್ಜಿದಾರನ ಪರವಾಗಿ ಆದೇಶ ಮಾಡಿದ್ದಾಗ,–

(ಎ) ಪರಿಹಾರದ ಮೊತ್ತವನ್ನು ಅಥವಾ ಗೇಣಿಯ ಮೊತ್ತವನ್ನು ಸಂದಾಯ ಮಾಡಲು ವಿಫಲನಾದರೆ, ಅದಕ್ಕೆ ಹಕ್ಕುಳ್ಳ ವ್ಯಕ್ತಿಯು ತಹಸೀಲ್ದಾರನಿಗೆ ಅರ್ಜಿ ಸಲ್ಲಿಸಿದಾಗ ಭೂ ಕಂದಾಯದ ಬಾಕಿಯಂತೆ ವಸೂಲಿ ಮಾಡತಕ್ಕದ್ದು.

(ಬಿ) ಜಲಮಾರ್ಗವನ್ನು ಉತ್ತಮ ಸ್ಥಿತಿಯಲ್ಲಿ ನಿರ್ವಹಿಸಲು ಮತ್ತು ದುರಸ್ತಿಗಳನ್ನು ಯೋಗ್ಯ ಸ್ಥಿತಿಯಲ್ಲಿಡಲು ವಿಫಲನಾದರೆ, ಅವನು ಅಂಥ ವಿಫಲತೆಯ ಕಾರಣದಿಂದ ಉಂಟಾದ ಯಾವುದೇ ಹಾನಿಗಾಗಿ, ತಹಸೀಲ್ದಾರನು ನಿರ್ಧರಿಸಬಹುದಾದಂಥ ನಷ್ಟಪರಿಹಾರವನ್ನು ಸಂದಾಯ ಮಾಡುವುದಕ್ಕೆ ಹೊಣೆಗಾರನಾಗತಕ್ಕದ್ದು.

**90ಸಿ. ಜಲಮಾರ್ಗವನ್ನು ತೆಗೆದುಹಾಕುವುದು ಅಥವಾ ನಿಲ್ಲಿಸುವುದು.–** (1) ವ್ಯಕ್ತಿಯು, 90ಎ ಪ್ರಕರಣದ ಮೇರೆಗೆ ಅವನಿಗೆ ಪ್ರದತ್ತವಾದ ಅಧಿಕಾರದ ಮೇರೆಗೆ ನಿರ್ಮಿಸಿರುವ ಜಲಮಾರ್ಗವನ್ನು ತೆಗೆದುಹಾಕಲು ಅಥವಾ ನಿಲ್ಲಿಸಲು ಉದ್ದೇಶಿಸಿದ್ದರೆ, ಅವನು ತಹಶೀಲ್ದಾರನಿಗೆ ಮತ್ತು ನೆರೆಯ ಹಿಡುವಳಿದಾರನನಿಗೆ ನೋಟೀಸನ್ನು ನೀಡಿದ ತರುವಾಯ ಹಾಗೆ ಮಾಡಬಹುದು.

(2) ಅಂಥ ಜಲಮಾರ್ಗವನ್ನು ತೆಗೆದುಹಾಕಿದ ಅಥವಾ ನಿಲ್ಲಿಸಿದ ಸಂದರ್ಭದಲ್ಲಿ, ನೀರನ್ನು ತೆಗೆದುಕೊಂಡಿರುವ ವ್ಯಕ್ತಿಯು ಹೆಚ್ಚು ವಿಳಂಬ ಮಾಡದೆ ಅವನ ಸ್ವಂತ ಖರ್ಚಿನಲ್ಲಿ ಅಂಥ ಭೂಮಿಯನ್ನು ಮೊದಲಿದ್ದ ಸ್ಥಿತಿಗೆ ತರತಕ್ಕದ್ದು. ಅವನು ಹಾಗೆ ಮಾಡಲು ತಪ್ಪಿದರೆ, ನೆರೆಯ ಹಿಡುವಳಿದಾರನು, ಭೂಮಿಯನ್ನು, ಅದರ ಮೂಲಸ್ಥಿತಿಗೆ ತರಲು ಅಂಥ ವ್ಯಕ್ತಿಯನ್ನು ಅಗತ್ಯಪಡಿಸಲು ತಹಶೀಲ್ದಾರನಿಗೆ ಅರ್ಜಿಸಲ್ಲಿಸಬಹುದು.][1]

## ಅಧ್ಯಾಯ–VIII

## ವರ್ಗಾವಣೆಯಾಗಿರದ ಭೂಮಿಗಳ ಮಂಜೂರಾತಿ, ಉಪಯೋಗ ಮತ್ತು ಬಿಟ್ಟು ಕೊಡುವಿಕೆ

**91. ಅಧಿಭೋಗದಲ್ಲಿರದ ಭೂಮಿಯನ್ನು ಷರತ್ತುಗಳ ಮೇಲೆ ಮಂಜೂರು ಮಾಡಬಹುದು.–** ಈ ಬಗ್ಗೆ ರಾಜ್ಯ ಸರ್ಕಾರವು ರಚಿಸಬಹುದಾದಂಥ ನಿಯಮಗಳಿಗೊಳಪಟ್ಟು, ವರ್ಗಾವಣೆಯಾಗಿರದ ಭೂಮಿಯ ಬಗೆಗಿನ ಬೆಲೆಯನ್ನು ಸಂದಾಯ ಮಾಡಬೇಕೆಂದು ಡೆಪ್ಯುಟಿ ಕಮಿಷನರು ಅಗತ್ಯಪಡಿಸಬಹುದು ಅಥವಾ ಅದನ್ನು ಹರಾಜಿನ ಮೂಲಕ ಮಾರಾಟ ಮಾಡಬಹುದು ಮತ್ತು 93ನೇ ಪ್ರಕರಣದ ಮೇರೆಗೆ ಅಂಥ ಭೂಮಿಯನ್ನು ಅಧಿಬೋಗಿಸಲು ಅನುಮತಿ ಕೊಡುವುದಕ್ಕೆ ಮುಂಚೆ ಸೂಕ್ತವೆಂದು ತಾನು ಭಾವಿಸುವಂಥ ಷರತ್ತುಗಳಿಗೆ ಒಳಪಡಿಸಿ ಅದನ್ನು ಮಂಜೂರು ಮಾಡಬಹುದು. ಅಂಥ ಭೂಮಿಗೆ ಬೆಲೆ ಯಾವುದಾದರೂ ಇದ್ದರೆ, ಅದರಲ್ಲಿ 75ನೇ ಪ್ರಕರಣದ ಉಪಬಂಧಗಳ ಮೇರೆಗೆ ವಿಶೇಷವಾಗಿ ಕಾಯ್ದಿರಿಸಿರದ ಎಲ್ಲ ಮರಗಳ ಮೇಲೆ ಸರ್ಕಾರಕ್ಕಿರುವ ಹಕ್ಕಿನ ಬೆಲೆಯೂ ಸೇರಿರತಕ್ಕದ್ದು ಮತ್ತು ಭೂಕಂದಾಯದ ಬಾಕಿಯಂತೆ ಅದು ವಸೂಲೀಯವಾಗಿರತಕ್ಕದ್ದು.

**92. ಸರ್ಕಾರದಲ್ಲಿ ನಿಹಿತವಾಗಿರುವ ಮೆಕ್ಕಲುಮಣ್ಣಿನ ಭೂಮಿಯ ಮಂಜೂರಾತಿ.–** (1) 81ನೇ ಪ್ರಕರಣದ ಮೇರೆಗೆ ರಾಜ್ಯ ಸರಕಾರದಲ್ಲಿ ನಿಹಿತವಾಗಿರುವ ಯಾವುದೇ ಮೆಕ್ಕಲುಮಣ್ಣಿನ ಭೂಮಿಯನ್ನು, ಸರ್ಕಾರಿ ವರಮಾನದ ಹಿತದೃಷ್ಟಿಯಿಂದ ವಿಲೇವಾರಿ ಮಾಡಬಹುದಾಗಿದೆಯೆಂದು ಡೆಪ್ಯುಟಿ ಕಮಿಷನರಿಗೆ ಕಂಡುಬಂದರೆ, ಅವನು ಯಾವ ದಂಡೆಯಲ್ಲಿ ಅಥವಾ ತೀರದಲ್ಲಿ ಅಂಥ ಮೆಕ್ಕಲುಮಣ್ಣಿನ ಭೂಮಿಯ ರೂಪುಗೊಂಡಿರುವುದೋ ಅದರ ಹಿಡುವಳಿದಾರನು ಅಥವಾ ಅಧಿಭೋಗದಾರನು, ಯಾರಾದರೂ ಇದ್ದರೆ, ಅವನಿಗೆ ಅಂಥ ಭೂಮಿಯನ್ನು ನೀಡತಕ್ಕದ್ದು.

(2) ಹಾಗೆ ನೀಡಿದ ಭೂಮಿಯ ಬೆಲೆಯು ಅದರ ವಾರ್ಷಿಕ ಭೂಕಂದಾಯದ ಮೂರರಷ್ಟಕ್ಕೆ ಮೀರತಕ್ಕದ್ದಲ್ಲ.

(3) ಹಾಗೆ ನೀಡಿದ ಭೂಮಿಯನ್ನು ಸದರಿ ಹಿಡುವಳಿದಾರನು ಅಥವಾ ಅಧಿಭೋಗದಾರನು ನಿರಾಕರಿಸಿದರೆ ಡೆಪ್ಯುಟಿ ಕಮಿಷನರು ಭೂಮಿಯನ್ನು ಅದರ ಬೆಲೆಯ ಬಗೆಗಿನ ಯಾವ ನಿರ್ಬಂಧಗಳೂ ಇಲ್ಲದೆ 91ನೇ ಪ್ರಕರಣದ ಮೇರೆಗೆ ವಿಲೇ ಮಾಡಬಹುದು.

**93. ಅಧಿಭೋಗದಲ್ಲಿರುವ ಭೂಮಿಯನ್ನು ತೆಗೆದುಕೊಳ್ಳುವುದಕ್ಕೆ ಅನುಮತಿ.–** (1) ಯಾರೇ ವ್ಯಕ್ತಿಯು ಅಧಿಭೋಗದಲ್ಲಿರದ ಮತ್ತು ವರ್ಗಾವಣೆಯಾಗಿರದ ಭೂಮಿಯನ್ನು ಅದನ್ನು ಅಧಿಭೋಗಕ್ಕೆ ತೆಗೆದುಕೊಳ್ಳುವುದಕ್ಕೂ

ಮೊದಲು, ಅಂಥ ಭೂಮಿಯು ಇರುವ ತಾಲ್ಲೂಕಿನ ತಹಸೀಲ್ದಾರನ ಅನುಮತಿಯನ್ನು ಬರಹದಲ್ಲಿ ಪಡೆದುಕೊಂಡ ಹೊರತು ತೆಗೆದುಕೊಳ್ಳತಕ್ಕದ್ದಲ್ಲ.

(2) 91ನೇ ಪ್ರಕರಣದ ಉಪಬಂಧಗಳಿಗೆ ಮತ್ತು ಈ ಬಗ್ಗೆ ರಾಜ್ಯ ಸರ್ಕಾರವು ಮಾಡಬಹುದಾದಂಥ ನಿಯಮಗಳಿಗೆ ಒಳಪಟ್ಟು, ಅಧಿಭೋಗದಲ್ಲಿರದ ಭೂಮಿಯನ್ನು ಸ್ವಾಧೀನಕ್ಕೆ ತೆಗೆದುಕೊಳ್ಳಲಿಚ್ಛಿಸುವ ಯಾರೇ ವ್ಯಕ್ತಿಗೆ (1)ನೇ ಉಪಪ್ರಕರಣದ ಮೇರೆಗೆ ಅಗತ್ಯವಿರುವ ಅನುಮತಿಯನ್ನು ತಹಶೀಲ್ದಾರನು ಕೊಡಬಹುದು.

**94. ಭೂಮಿಯ ಅನಧಿಕೃತ ಅಧಿಭೋಗಕ್ಕಾಗಿ ದಂಡಗಳು.–** (1) ವಿಶೇಷ ಉದ್ದೇಶಕ್ಕಾಗಿ ಮೀಸಲಿಟ್ಟಿರುವ ಯಾವುದೇ ಭೂಮಿಯನ್ನು ಅಥವಾ ವರ್ಗಾವಣೆಯಾಗಿರದ ಮತ್ತು ಅಧಿಭೋಗದಲ್ಲಿರದ ಯಾವುದೇ ಭೂಮಿಯನ್ನು ಅನಧಿಕೃತವಾಗಿ ಯಾರೇ ವ್ಯಕ್ತಿಯು ಸ್ವಾಧೀನಕ್ಕೆ ತೆಗೆದುಕೊಂಡರೆ ಅವನು ಮತ್ತು ಯಾವ ಭೂಮಿಯ ಬಳಕೆಗೆ ಅಥವಾ ಅಧಿಭೋಗಕ್ಕೆ ಹಕ್ಕಿರದ ಅಥವಾ ಇರುವ ಹಕ್ಕನ್ನು ಕಳೆದುಕೊಂಡಿರುವ ಯಾರೇ ವ್ಯಕ್ತಿಯು, ಅಂಥ ಭೂಮಿಯನ್ನು ಬಳಸಿದರೆ ಅಥವಾ ಅಧಿಭೋಗಿಸಿದರೆ, ಅವನು ಹಾಗೆ ಅನಧಿಕೃತವಾಗಿ ಅಧಿಭೋಗಿಸಿದ ಪ್ರತಿಯೊಂದು ವರ್ಷಕ್ಕಾಗಿ ಅದೇ ಗ್ರಾಮದಲ್ಲಿ ಅದೇ ಉದ್ದೇಶಕ್ಕಾಗಿ ಬಳಸಿದ ಅದೇ ವಿಸ್ತೀರ್ಣದ ಅದೇ ಬಗೆಯ ಭೂಮಿಗೆ ವಿಧಿಸಬಹುದಾದಂಥ ಭೂಕಂದಾಯದ ಎರಡರಷ್ಟು ಮೊಬಲಗನ್ನು ಸಂದಾಯ ಮಾಡತಕ್ಕದ್ದು ಮತ್ತು ಡೆಪ್ಯುಟಿ ಕಮಿಷನರನ ವಿವೇಚನಾನುಸಾರ ಹಾಗೆ ಅನಧಿಕೃತವಾಗಿ ಅಧಿಭೋಗಿಸಿದ ಪ್ರತಿಯೊಂದು ವರ್ಷಕ್ಕಾಗಿ, ಅಂಥ ಅಧಿಭೋಗವು ಬೇಸಾಯದ ಉದ್ದೇಶಕ್ಕಾಗಿದ್ದರೆ, ಪ್ರತಿಯೊಂದು ಎಕರೆಗೆ ಐದು ನೂರು ರೂಪಾಯಿಗಳಿಗೆ ಮೀರದ, ಮತ್ತು ಅಂಥ ಅಧಿಭೋಗವು ಬೇಸಾಯೇತರ ಉದ್ದೇಶಕ್ಕಾಗಿದ್ದರೆ, ಪ್ರತಿಯೊಂದು ಎಕರೆಗೆ ಒಂದು ಸಾವಿರ ರೂಪಾಯಿಗೆ ಮೀರದ ಜುಲ್ಮಾನೆಗೆ ಕೂಡ ಹೊಣೆಗಾರನಾಗಿರತಕ್ಕದ್ದು.

[1][(2) ಡೆಪ್ಯುಟಿ ಕಮಿಷನರನು, (1)ನೇ ಉಪಪ್ರಕರಣದ ಮೇರೆಗೆ ಭೂ ಕಂದಾಯದ ಮೊಬಲಗು ಮತ್ತು ಜುಲ್ಮಾನೆ ಇವುಗಳನ್ನು ನಿರ್ಧರಿಸುವಲ್ಲಿ ವರ್ಷದ ಭಾಗದ ಅಧಿಭೋಗವನ್ನು ಪೂರ್ತಿ ವರ್ಷದ್ದೆಂದು ಲೆಕ್ಕ ಹಾಕತಕ್ಕದ್ದು.][1]

1. 1994ರ ಅಧಿನಿಯಮ 33ರ ಮೂಲಕ 6.7.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(3) [1][ಕರ್ನಾಟಕ][1] ಸಾರ್ವಜನಿಕ ಆವರಣಗಳ (ಅನಧಿಕೃತ ಅಧಿಭೋಗದಾರರನ್ನು ಹೊರದೂಡುವಿಕೆ) ಅಧಿನಿಯಮ, 1961 ([1][ಕರ್ನಾಟಕ][1] ಅಧಿನಿಯಮ 1962ರ 3)ರಲ್ಲಿ ಏನೇ ಇದ್ದರೂ, ಅಂಥ ಭೂಮಿಯನ್ನು ಅನಧಿಕೃತವಾಗಿ ಅಧಿಭೋಗಿಸುವ, ಯಾರೇ ವ್ಯಕ್ತಿಯನ್ನು ಡೆಪ್ಯುಟಿ ಕಮಿಷನರನು ಕೂಡಲೇ ಹೊರದೂಡತಕ್ಕದ್ದು ಮತ್ತು ಮರಗಳೂ ಸೇರಿ, ಅಂಥ ಭೂಮಿಯಲ್ಲಿ ಬೆಳೆಸಿದ ಬೆಳೆಯು ಮುಟ್ಟುಗೋಲಿಗೆ ಗುರಿಯಾಗತಕ್ಕದ್ದಾಗಿರುತ್ತದೆ ಮತ್ತು ಯಾವುದೇ ಹಿಡುವಳಿಯನ್ನು ಮತ್ತು ಅದರ ಮೇಲೆ ರಚಿಸಿದ ಯಾವುದೇ ಕಟ್ಟಡವನ್ನು ಡೆಪ್ಯುಟಿ ಕಮಿಷನರನು ಯುಕ್ತವೆಂದು ಭಾವಿಸಬಹುದಾದಂಥ ಬರಹದ ಮೂಲಕ ಕೊಟ್ಟ ನೋಟೀಸಿನ ತರುವಾಯ ಆ ವ್ಯಕ್ತಿಯು ತೆಗೆದು ಹಾಕದಿದ್ದರೆ, ಅದು ಮುಟ್ಟುಗೋಲಿಗೆ ಅಥವಾ ಕೂಡಲೇ ತೆಗೆದು ಹಾಕುವಿಕೆಗೆ ಕೂಡ ಗುರಿಯಾಗತಕ್ಕದ್ದು.

1. 1973ರ ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶದ ಮೂಲಕ 1-11-1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

(4) ಈ ಪ್ರಕರಣದ ಮೇರೆಗಿನ ಮುಟ್ಟುಗೋಲಿನ ಬಗ್ಗೆ ಡೆಪ್ಯುಟಿ ಕಮಿಷನರು ನಿರ್ಣಯಿಸತಕ್ಕದ್ದು ಮತ್ತು ಹಾಗೆ ಮುಟ್ಟುಗೋಲಾದ ಯಾವುದೇ ಸ್ವತ್ತನ್ನು ಡೆಪ್ಯುಟಿ ಕಮಿಷನರು ನಿರ್ದೇಶಿಸಬಹುದಾದಂತೆ ವಿಲೇ ಮಾಡತಕ್ಕದ್ದು ಮತ್ತು ಈ ಪ್ರಕರಣದ ಮೇರೆಗಿನ ಒತ್ತುವರಿಯನ್ನು ತೆಗೆದು ಹಾಕುವ ಬಗೆಗಿನ ಖರ್ಚು ಭೂಕಂದಾಯದ ಬಾಕಿಯಂತೆ ವಸೂಲು ಮಾಡಿಕೊಳ್ಳುವಂಥದ್ದಾಗಿರತಕ್ಕದ್ದು.

[1][**94ಎ.ಸಮಿತಿ, ಮುಂತಾದವನ್ನು ರಚಿಸುವ ಮೂಲಕ ಅನಧಿಕೃತ ಅಧಿಭೋಗದ ಕೆಲವು ಪ್ರಕರಣಗಳನ್ನು ಸಕ್ರಮಗೊಳಿಸುವುದು.**–(1) ಗೊತ್ತುಪಡಿಸಬಹುದಾದಂಥ ನಿಯಮಗಳಿಗೆ ಒಳಪಟ್ಟು, ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ, (4)ನೇ ಉಪಪ್ರಕರಣದ ಮೇರೆಗೆ ಭೂ ಮಂಜೂರಾತಿಯ ಉದ್ದೇಶಕ್ಕಾಗಿ ಒಬ್ಬರು ವಿಧಾನಸಭೆಯ ಸದಸ್ಯರನ್ನು ಒಳಗೊಂಡ [2][ಐದು ಸದಸ್ಯರನ್ನು ಮೀರದಂಥ][2] ಸಮಿತಿಯನ್ನು [3][ವಿಧಾನಸಭೆಯ ಪ್ರತಿಯೊಂದು ಚುನಾವಣಾ ಕ್ಷೇತ್ರಕ್ಕೆ][3] ರಚಿಸತಕ್ಕದ್ದು.

(2) ಸಂಬಂಧಪಟ್ಟ ತಾಲೂಕಿನ ತಹಶಿಲ್ದಾರನು ಸಮಿತಿಯ ಕಾರ್ಯದರ್ಶಿಯಾಗಿರತಕ್ಕದ್ದು.

[3][(2ಎ) ಉಪ-ಪ್ರಕರಣ(4)ರ ಮೇರೆಗೆ ಭೂಮಿಯನ್ನು ಮಂಜೂರು ಮಾಡುವ ಉದ್ದೇಶಕ್ಕಾಗಿ ತಾಲೂಕಿಗೆ ಒಂದಕ್ಕಿಂತ ಹೆಚ್ಚಿಗೆ ಸಮಿತಿಗಳನ್ನು ರಚಿಸುವುದು ಅವಶ್ಯಕವೆಂದು ರಾಜ್ಯ ಸರ್ಕಾರವು ಅಭಿಪ್ರಾಯಪಟ್ಟರೆ, ರಾಜ್ಯ ಸರ್ಕಾರವು ಗೊತ್ತುಪಡಿಸಬಹುದಾದಂತೆ, ಐವರನ್ನು ಮೀರದ ಸದಸ್ಯರನ್ನೊಳಗೊಂಡ ಒಂದು ಅಥವಾ ಒಂದಕ್ಕಿಂತ ಹೆಚ್ಚಿನ ಸಮಿತಿಗಳನ್ನು ರಚಿಸಬಹುದು ಮತ್ತು ರಾಜ್ಯ ಸರ್ಕಾರವು, ಸದಸ್ಯರ ಪೈಕಿಯಿಂದ ಒಬ್ಬರನ್ನು ಅಧ್ಯಕ್ಷರನ್ನಾಗಿ ಹಾಗೂ ಇನ್ನೊಬ್ಬರನ್ನು ಸಮಿತಿಯ ಕಾರ್ಯದರ್ಶಿಯಾಗಿ ನಾಮನಿರ್ದೇಶನ ಮಾಡತಕ್ಕದ್ದು. ಒಂದು ಹೆಚ್ಚುವರಿ ಸಮಿತಿಯನ್ನು ರಚಿಸಿದಾಗ, ಡೆಪ್ಯೂಟಿ ಕಮಿಷನರ್‌ನು, ಸಮಿತಿಯ ಹಾಗೂ ಹೆಚ್ಚುವರಿ ಸಮಿತಿಯು ಕಾರ್ಯವ್ಯಾಪ್ತಿಯನ್ನು ನಿರ್ಧರಿಸತಕ್ಕದ್ದು ಹಾಗು ಸಂಬಂಧಪಟ್ಟ ಸಮಿತಿಗೆ ಬಾಕಿಯಿರುವ ವಿಷಯಗಳನ್ನು ವರ್ಗಾವಣೆ ಮಾಡತಕ್ಕದ್ದು.][3]

(3) [4][ಸಮಿತಿಯು ಅಥವಾ ಹೆಚ್ಚುವರಿ ಸಮಿತಿಯು][4] ಗೊತ್ತುಪಡಿಸಬಹುದಾದಂಥ ಕಾರ್ಯವಿಧಾನವನ್ನು ಅನುಸರಿಸತ್ಕದ್ದು.

(4) [6][2005ನೇ ಜನವರಿ ಒಂದನೇ ದಿನಾಂಕಕ್ಕೆ][6] (ಇಲ್ಲಿ ಇನ್ನು ಮುಂದೆ ಸದರಿ ದಿನಾಂಕವೆಂದು ಉಲ್ಲೇಖಿಸಿದೆ) ಮುಂಚೆ ಯಾರೇ ವ್ಯಕ್ತಿಯು ಭೂಮಿಯನ್ನು ಅಥವಾ ಅದರ ಭಾಗವನ್ನು ಅನಧಿಕೃತವಾಗಿ ಸ್ವಾಧೀನ ಹೊಂದಿದ್ದು, ಆ ಪ್ರಕರಣದ ಮೇರೆಗೆ ಹೊರದೂಡಲು ಅರ್ಹನಾಗಿದ್ದರೆ ಮತ್ತು ಗೊತ್ತುಪಡಿಸಿದ ಷರತ್ತುಗಳನ್ನು (ಅವನು ಹೊಂದಿರುವ ಹಾಗೂ ಅನಧಿಕೃತವಾಗಿ ಅಧಿಭೋಗಿಸಿದ ಭೂಮಿಯ ವಿಸ್ತೀರ್ಣವು ಒಳಗೊಂಡು) ಅವನು ಈಡೇರಿಸಿದರೆ, (1)ನೇ ಉಪ-ಪ್ರಕರಣದ ಮೇರೆಗೆ ರಚಿಸಿದ ಸಮಿತಿಯು [3][ಅಥವಾ (2ಎ) ಉಪ ಪ್ರಕರಣದ ಮೇರೆಗೆ ರಚಿಸಿದ ಹೆಚ್ಚುವರಿ ಸಮಿತಿಯು][3], ಗೊತ್ತುಪಡಿಸಬಹುದಾದಂಥ ನಿಯಮಗಳೇನಾದರೂ ಇದ್ದರೆ ಅವುಗಳಿಗೆ ಒಳಪಟ್ಟು ಮತ್ತು [6][ಕರ್ನಾಟಕ ಭೂಕಂದಾಯ (ತಿದ್ದುಪಡಿ) ಅಧಿನಿಯಮ, 2018 (ಇಲ್ಲಿ ಇನ್ನು ಮುಂದೆ ತಿದ್ದುಪಡಿ ಅಧಿನಿಯಮವೆಂದು ಉಲ್ಲೇಖಿಸಿದೆ) ಜಾರಿಗೆ ಬಂದ ದಿನಾಂಕದಿಂದ ಒಂದು ವರ್ಷದ ಅವಧಿಯೊಳಗಾಗಿ][6] ಗೊತ್ತುಪಡಿಸಬಹುದಾದಂಥ ಶುಲ್ಕಗಳೊಂದಿಗೆ ಮತ್ತು (5)ನೇ ಉಪ-ಪ್ರಕರಣದ ಮೇರಗೆ ಸಂದಾಯ ಮಾಡಬೇಕಾದ ಮೊತ್ತವನ್ನು ಸಂದಾಯ ಮಾಡಿದ ಮೇಲೆ, ಅಂಥ ನಮೂನೆಯಲ್ಲಿ ಅಂಥ ಭೂಮಂಜೂರಾತಿಗಾಗಿ ಅರ್ಜಿ ಸಲ್ಲಿಸಿದ ಮೇಲೆಮಂಜೂರು ಮಾಡುವುದಕ್ಕೆ 94ನೇ ಪ್ರಕರಣದಲ್ಲಿರುವುದಾವುದೂ ಅಡ್ಡಿಯಾಗತಕ್ಕದ್ದಲ್ಲ.

ಪರಂತು, ಅಂಥ ವ್ಯಕ್ತಿಯು ಈಗಾಗಲೇ ಹೊಂದಿರುವ ಭೂಮಿಯ ಜೊತೆಗೆ ಹಾಗೆ ಮಂಜೂರು ಮಾಡಿದ ಭೂಮಿಯು 'ಡಿ' ವರ್ಗದ ಅಥವಾ ಅದಕ್ಕೆ ಸಮನಾದ ಭೂಮಿಯು ಎರಡು ಹೆಕ್ಟೇರ್‌ಗಳನ್ನು ಮೀರತಕ್ಕದ್ದಲ್ಲ:

ಮತ್ತು ಪರಂತು, ಕೆಳಗಿನ ಕೋಷ್ಟಕದ (2)ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಿದ ನಗರಗಳ ಮತ್ತು ನಗರ ಸಭೆಗಳ ಸರಹದ್ದುಗಳ ಒಳಗಿರುವ ಮತ್ತು ಅದರ (3)ನೇ ಅಂಕಣದ ಎದುರಿಗೆ ಮಾಡಿರುವ ನಮೂದುಗಳಲ್ಲಿ ನಿರ್ದಿಷ್ಟಪಡಿಸಿದಂಥ ಸರಹದ್ದುಗಳ ಅಂತರದೊಳಗಿರುವ ಪ್ರದೇಶಗಳಲ್ಲಿ ಯಾವುದೇ ಭೂಮಿಯನ್ನು ಮಂಜೂರು ಮಾಡತಕ್ಕದ್ದಲ್ಲ;

**[6][ಕೋಷ್ಟಕ**

| ಕ್ರಮ ಸಂಖ್ಯೆ | ಸ್ಥಳಗಳು | ಅಂತರಗಳು |
|---|---|---|
| (1) | (2) | (3) |
| 1. | ಕರ್ನಾಟಕ ನಗರ ಪಾಲಿಕೆಗಳ ಅಧಿನಿಯಮ, 1976ರ ಅಡಿಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ | 18 ಕಿ.ಮೀ |
| 2. | ಕರ್ನಾಟಕ ನಗರ ಪಾಲಿಕೆಗಳ ಅಧಿನಿಯಮ, 1976ರ ಉಪಬಂಧಗಳ ಅಡಿಯಲ್ಲಿ ಅನುಕ್ರಮವಾಗಿ ಬರುವ ಬೆಳಗಾವಿ, ಕಲಬುರ್ಗಿ, ಹುಬ್ಬಳ್ಳಿ-ಧಾರವಾಡ, ಮಂಗಳೂರು ಮತ್ತು ಮೈಸೂರು ನಗರಗಳು;<br>ಮತ್ತು<br>ಕರ್ನಾಟಕ ನಗರ ಪಾಲಿಕೆಗಳ ಅಧಿನಿಯಮ, 1976ರ ಉಪಬಂಧಗಳ ಅಡಿಯಲ್ಲಿ ಬರುವ ಇತರ ನಗರ ಪಾಲಿಕೆಗಳು | 10 ಕಿ.ಮೀ |
| 3. | ಕರ್ನಾಟಕ ಪೌರಸಭೆಗಳ ಅಧಿನಿಯಮ, 1964ರ ಉಪಬಂಧಗಳ ಅಡಿಯಲ್ಲಿ ಬರುವ ಎಲ್ಲಾ ನಗರ ಪೌರಸಭೆಗಳು (CMC) | 5 ಕಿ.ಮೀ. |

| | | |
|---|---|---|
| 4. | ಕರ್ನಾಟಕ ಪೌರಸಭೆಗಳ ಅಧಿನಿಯಮ, 1964ರ ಉಪಬಂಧಗಳ ಅಡಿಯಲ್ಲಿನ ಎಲ್ಲಾ ಪೌರಸಭೆಗಳು (TMC) ಮತ್ತು ಪಟ್ಟಣ ಪಂಚಾಯಿತ್‌ಗಳು | 3 ಕಿ.ಮೀ. |

ಪರಂತು, ಈ ಅಧಿನಿಯಮದ ಅಡಿಯಲ್ಲಿ ಅಂಥ ಭೂಮಿಯು,-

(ಎ) ನೈಸರ್ಗಿಕ ಕಾಲುವೆಗಳು ಅಥವಾ ನದಿ ಕಣಿವೆ ಪ್ರದೇಶಗಳ ಸಾಲಿನಲ್ಲಿ ಇದ್ದರೆ;

(ಬಿ) ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರಕ್ಕೆ ಯಾವುದೇ ಸ್ಥಳೀಯ ಪ್ರಾಧಿಕಾರ ಅಥವಾ ಶಾಸನಾತ್ಮಕ ಅಥವಾ ಶಾಸನಾತ್ಮಕವಲ್ಲದ ನಿಕಾಯಕ್ಕೆ ಸೇರಿದ್ದರೆ;

(ಸಿ) ಅಸ್ತಿತ್ವದಲ್ಲಿರುವ ಅಥವಾ ಉದ್ದೇಶಿತ ರಸ್ತೆಗಳ, ಒಳ ಅಥವಾ ಹೊರ ವರ್ತುಲ ರಸ್ತೆಗಳ, ರಾಷ್ಟ್ರೀಯ ಹೆದ್ದಾರಿಗಳ, ಅಗಲೀಕರಣಕ್ಕಾಗಿ ಉದ್ದೇಶಿಸಿದ ವರ್ತುಲ ರಸ್ತೆಯಲ್ಲಿ ಹಾದುಹೋಗುವ ಬೈಪಾಸುಗಳನ್ನು ಒಳಗೊಂಡು ಮತ್ತು ರೈಲ್ವೆ ಲೈನುಗಳ, ಟ್ರಾಮ್ ಮಾರ್ಗಗಳ, ಅಧಿಕ ವೇಗ ಸಾರಿಗೆ ವ್ಯವಸ್ಥೆ ಯೋಜನೆಗಳ, ಸಂಪರ್ಕಗಳ ಮತ್ತು ಇತರ ನಾಗರೀಕ ಸೌಲಭ್ಯಗಳ ಅಥವಾ ಸಾರ್ವಜನಿಕ ಉಪಯೋಗಗಳ ಮಾರ್ಗಗಳಲ್ಲಿ ಬಂದರೆ;

(ಡಿ) ಉದ್ಯಾನಗಳು, ಆಟದ ಮೈದಾನಗಳು ಅಥವಾ ಯಾವುದೇ ನಾಗರೀಕ ಸೌಲಭ್ಯ ಒದಗಿಸಲು ಇರುವ ಮುಕ್ತ ಜಾಗಗಳಿಗೆ ಮೀಸಲಾಗಿದ್ದರೆ;

(ಇ) ನೆರೆಯವರ ಸ್ವತ್ತು, ಮಳೆನೀರು ಹರಿವು, ಕೆರೆ ದಂಡೆ ಪ್ರದೇಶಗಳ ಕಡೆಗೆ ಒತ್ತಲ್ಪಟ್ಟಿದ್ದರೆ; ಅಥವಾ

(ಎಫ್) ಭೂಸ್ವಾಧೀನಕ್ಕಾಗಿ ಉದ್ದೇಶಿಸಿದ ಅಥವಾ ರಾಜ್ಯ ಸರ್ಕಾರ ಅಥವಾ ಯಾವುದೇ ಸ್ಥಳೀಯ ಪ್ರಾಧಿಕಾರ, ರಾಜ್ಯ ಸರ್ಕಾರದ ಶಾಸನಾತ್ಮಕ ಅಥವಾ ಶಾಸನಾತ್ಮಕವಲ್ಲದ ನಿಕಾಯಗಳ ಯಾವುದೇ ಉದ್ದೇಶಿತ ಯೋಜನೆಗಾಗಿ ಅವಶ್ಯವಿರುವ ಜಾಗದಲ್ಲಿದ್ದರೆ,

– ಅಂಥ ಭೂಮಿಯನ್ನು ಸಕ್ರಮಗೊಳಿಸತಕ್ಕದ್ದಲ್ಲ][6]

[3][ಪರಂತು, 1990 ರ ಏಪ್ರಿಲ್ 14ನೇ ದಿನಾಂಕಕ್ಕೆ ಮುಂಚೆ, ಐವತ್ತು ಸಾವಿರ ಜನಸಂಖ್ಯೆಗಿಂತ ಕಡಿಮೆ ಜನಸಂಖ್ಯೆ ಹೊಂದಿರುವ ನಗರ ಸಭೆಯ ಸರಹದ್ದಿನಿಂದ ಐದು ಕಿ.ಮೀ. ಅಂತರದೊಳಗೆ ಅನಧಿಕೃತವಾಗಿ ಭೂಮಿಯನ್ನು ಅಧಿಭೋಗಿಸಿದ ವ್ಯಕ್ತಿಯು, ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ಅಧಿನಿಯಮ, 1994 ಜಾರಿಗೆ ಬಂದ ದಿನಾಂಕದಿಂದ ಮೂರು ತಿಂಗಳೊಳಗಾಗಿ ಅಂಥ ಮಂಜೂರಾತಿಗಾಗಿ ಅರ್ಜಿಯನ್ನು ಸಲ್ಲಿಸತಕ್ಕದ್ದು.][3]

ಪರಂತು, ಅರಣ್ಯ ಭೂಮಿಗಳು, ಪ್ಲಾಂಟೇಷನ್ ಭೂಮಿಗಳು ಅಥವಾ 79ನೇ ಪ್ರಕರಣದ (2)ನೇ ಉಪ ಪ್ರಕರಣದಲ್ಲಿನ ಭೂಮಿಗಳಿಗೆ ಈ ಪ್ರಕರಣವು ಅನ್ವಯವಾಗತಕ್ಕದ್ದಲ್ಲ.

**ವಿವರಣೆ:**– ಈ ಪ್ರಕರಣದ ಉದ್ದೇಶಗಳಿಗಾಗಿ, 'ಡಿ' ವರ್ಗದ ಭೂಮಿ ಎಂದರೆ, ಕರ್ನಾಟಕ ಭೂ ಸುಧಾರಣೆಗಳ ಅಧಿನಿಯಮ, 1961ರ 1ನೇ ಅನುಸೂಚಿಯಲ್ಲಿ ಹೇಳಿರುವ ಸೂತ್ರಕ್ಕೆ ಅನುಸಾರವಾಗಿ ನಿರ್ದಿಷ್ಟಪಡಿಸಿದಂತೆ ಮತ್ತು ಗೊತ್ತುಪಡಿಸಿದಂತೆ ಒಂದು ಅಥವಾ ಹೆಚ್ಚಿನ ವರ್ಗಗಳ ಭೂಮಿಯನ್ನು ಒಳಗೊಂಡ 'ಡಿ' ವರ್ಗದ ಅಥವಾ ಅದಕ್ಕೆ ಸಮನಾದ ವಿಸ್ತೀರ್ಣವನ್ನು ಹೊಂದಿದ ಭೂಮಿ.

(5) ಉಪ-ಪ್ರಕರಣ(1)ರ [3][(2ಎ) ಉಪ-ಪ್ರಕರಣದ][3] ಮೇರೆಗೆ ಭೂಮಿಯನ್ನು ಮಂಜೂರು ಮಾಡುವುದಕ್ಕೆ ಸಂದಾಯ ಮಾಡಬೇಕಾದ ಮೊತ್ತವು ಗೊತ್ತುಪಡಿಸಬಹುದಾದಂತೆ ಇರತಕ್ಕದ್ದು.

(6) ಈ ಹಿಂದಿನ ಉಪ ಪ್ರಕರಣದಲ್ಲಿ ಏನೆ ಒಳಗೊಂಡಿದ್ದರೂ,-

[4][(ಎ) ಸಂಬಂಧಪಟ್ಟ ತಹಶೀಲ್ದಾರನು, ಸಂದರ್ಭಾನುಸಾರ ಸಮಿತಿಯ ಅಥವಾ ಹೆಚ್ಚುವರಿ ಸಮಿತಿಯು ಶಿಫಾರಸುಗಳನ್ನೇನಾದರೂ ಮಾಡಿದ್ದರೆ, ಅದರಂತೆ ಭೂ ಮಂಜೂರಾತಿ ಆದೇಶವನ್ನು ಹೊರಡಿಸತಕ್ಕದ್ದು ಮತ್ತು ಸಾಗುವಳಿ ಚೀಟಿಯನ್ನು ನೀಡತಕ್ಕದ್ದು, ಸಂದಾಯ ಮಾಡಬೇಕಾದ ಯಾವುದಾದರೂ ಮೊತ್ತವನ್ನು ಸಂದಾಯ ಮಾಡಬೇಕಾಗಿದ್ದರೆ, ಮೂರು ಸಮಾನ ಕಂತುಗಳಲ್ಲಿ ಸಂದಾಯ ಮಾಡತಕ್ಕದ್ದು, ಅದರಲ್ಲಿ ಮೊದಲನೇ ಕಂತನ್ನು ಮಂಜೂರಾತಿ ಆದೇಶ ತಲುಪಿದ ದಿನಾಂಕದಿಂದ ಮೂವತ್ತು ದಿನಗಳ ಅವಧಿಯು ಮುಗಿಯುವುದಕ್ಕೂ ಮುಂಚೆ ಮತ್ತು ಉಳಿದಿರುವ ಎರಡು ಕಂತುಗಳನ್ನು ಗೊತ್ತುಪಡಿಸಬಹುದಾದಂಥ ಅವಧಿಯೊಳಗೆ ಸಂದಾಯ ಮಾಡತಕ್ಕದ್ದು; ಮತ್ತು][4]

[5][(ಬಿ) XXX][5]

(ಸಿ) ಮಂಜೂರು ಮಾಡಿದ ಭೂಮಿಯ ಮೇಲೆ ಮರಗಳೇನಾದರೂ ಇದ್ದರೆ ಮತ್ತು ಅಂಥ ಭೂಮಿಯಲ್ಲಿ ಗ್ರಾನೈಟ್ ಇದ್ದರೆ ಸರ್ಕಾರಕ್ಕೆ ಸೇರಿದಂತೆ ಮುಂದುವರಿಯತಕ್ಕದ್ದು. ಸೂಕ್ತವೆಂದು ತಾನು ಭಾವಿಸಬಹುದಾದಂಥ ರೀತಿಯಲ್ಲಿ ವಿವೇಚನಾನುಸಾರ ಅದನ್ನು ಸರ್ಕಾರವು ವಿಲೇ ಮಾಡಬಹುದು.][1]

1. 1991ರ ಅಧಿನಿಯಮ 2ರ ಮೂಲಕ 20.03.1991 ರಿಂದ ಜಾರಿಗೆ ಬರುವಂತೆ ಅಧಿಸೂಚನೆಯ ಮೂಲಕ ಸೇರಿಸಲಾಗಿದೆ, ಅಧಿಸೂಚನೆಯ ಪಾಠವು ಅಧಿನಿಯಮದ ಕೊನೆಯಲ್ಲಿದೆ.
2. 1991ರ ಅಧಿನಿಯಮ 21ರ ಮೂಲಕ 7.8.1991 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ. ಅಧಿಸೂಚನೆಯ ಪಾಠವು ಅಧಿನಿಯಮದ ಕೊನೆಯಲ್ಲಿದೆ.
3. 1994ರ ಅಧಿನಿಯಮ 33ರ ಮೂಲಕ 6.7.1994ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
4. 1994ರ ಅಧಿನಿಯಮ 33ರ ಮೂಲಕ 6.7.1994 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
5. 1994ರ ಅಧಿನಿಯಮ 33ರ ಮೂಲಕ 6.7.1994 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.
6. 2018ರ ಅಧಿನಿಯಮ 11ರ ಮೂಲಕ 17.3.2018 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][**94ಬಿ. ಕೆಲವು ಪ್ರಕರಣಗಳಲ್ಲಿ ಭೂ ಮಂಜೂರಾತಿ.–** (1) ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ, ಡೆಪ್ಯೂಟಿ ಕಮಿಷನರ್ ಅಥವಾ ಈ ಬಗ್ಗೆ ರಾಜ್ಯ ಸರ್ಕಾರದಿಂದ ಅಧಿಕೃತಗೊಂಡ ಇತರ ಅಧಿಕಾರಿಗೆ, ಸೂಕ್ತವೆಂದು ತಾನು ಭಾವಿಸಬಹುದಾಂಥ ವಿಚಾರಣೆಯನ್ನು ನಡೆಸಿದ ತರುವಾಯ ಯಾರೇ ವ್ಯಕ್ತಿಯು.–

1. 1998ರ ಅಧಿನಿಯಮ 22ರ ಮೂಲಕ 1.11.1998 ರಿಂದ ಜಾರಿಗೆ ಬರುವಂತೆ ಅಧಿಸೂಚನೆಯ ಮೂಲಕ 94ಬಿ ಪ್ರಕರಣವನ್ನು ಸೇರಿಸಲಾಗಿದೆ. ಅಧಿಸೂಚನೆಯ ಪಾಠವು ಅಧಿನಿಯಮದ ಕೊನೆಯಲ್ಲಿದೆ.

(i) 1990 ರ ಏಪ್ರಿಲ್ ಹದಿನಾಲ್ಕನೇ ದಿನಾಂಕಕ್ಕೆ ಮುಂಚೆ, 79ನೇ ಪ್ರಕರಣದ (2)ನೇ ಉಪ–ಪ್ರಕರಣದಲ್ಲಿ ಉಲ್ಲೇಖಿಸಿದ ಭೂಮಿಯೂ ಸೇರಿದಂತೆ ಯಾವುದೇ ಭೂಮಿಯನ್ನು ಅನಧಿಕೃತವಾಗಿ ಅಧಿಭೋಗ ಹೊಂದಿದ್ದು 94ನೇ ಪ್ರಕರಣದ ಮೇರೆಗೆ ಹೊರಹಾಕುವುದಕ್ಕೆ ಗುರಿಯಾಗುತ್ತಾನೆಂದು; ಮತ್ತು

(ii) ಪ್ರಕರಣ 94ಎ ಮೇರೆಗೆ ಅಂಥ ಭೂಮಿಯನ್ನು ಮಂಜೂರು ಮಾಡಿಸಿಕೊಳ್ಳುವುದಕ್ಕೆ ಅರ್ಹನಾಗಿದ್ದು, ಅದರಲ್ಲಿ ನಿರ್ದಿಷ್ಟಪಡಿಸಿದ ಅವಧಿಯೊಳಗೆ ಸದರಿ ಪ್ರಕರಣದ (4)ನೇ ಉಪ–ಪ್ರಕರಣದ ಮೇರೆಗೆ ಅಂಥ ಮಂಜೂರಾತಿಗಾಗಿ ಅರ್ಜಿ ಸಲ್ಲಿಸಲು ವಿಫಲನಾಗಿದ್ದಾನೆಂದು; ಮತ್ತು

ಪರಂತು, ಈ ಖಂಡದಲ್ಲಿ ಇರುವುದು ಯಾವುದೂ, ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ಅಧಿನಿಯಮ, 1997ರ ಕಾರಣದಿಂದ ಭೂಮಿಯನ್ನು ಮಂಜೂರು ಮಾಡುವುದಕ್ಕೆ ಅರ್ಹನಾಗಿರುವ ವ್ಯಕ್ತಿಗೆ ಅನ್ವಯವಾಗತಕ್ಕದ್ದಲ್ಲ;

(iii) ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ಅಧಿನಿಯಮ, 1997 ಜಾರಿಗೆ ಬಂದ ದಿನಾಂಕದಂದು ಅಂಥ ಭೂಮಿಯ ವಾಸ್ತವಿಕ ಸ್ವಾಧೀನತೆಯು ಮುಂದುವರಿದಿದ್ದಾನೆಂದು;

ಮನವರಿಕೆಯಾದರೆ ಆ ಅಧಿಕಾರಿಯು, [1][ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ಅಧಿನಿಯಮ, 2000 ಜಾರಿಗೆ ಬಂದ ದಿನಾಂಕದಿಂದ [8][[7][[6][[5][[4][[3][[2][ಇಪ್ಪತ್ತೆರಡು ವರ್ಷಗಳೊಳಗೆ][1]][2]][3]][4]][5]][6]][7]][8] ಮತ್ತು ನಿಗದಿಪಡಿಸಬಹುದಾದಂಥ ನಿಯಮಗಳಿಗೆ ಒಳಪಟ್ಟು ಸಂದರ್ಭಾನುಸಾರ, 94ಎ ಪ್ರಕರಣದ ಮೇರೆಗೆ ರಚಿಸಿದ ಸಮಿತಿಗೆ ಅಥವಾ ಹೆಚ್ಚುವರಿ ಸಮಿತಿಗೆ ಶಿಫಾರಸ್ಸುಗಳನ್ನು ಮಾಡಬಹುದು ಮತ್ತು ಅಂಥ ಸಮಿತಿಯ ಶಿಫಾರಸನ್ನು ಸ್ವೀಕರಿಸಿದ ಮೇಲೆ ಅಂಥ ವ್ಯಕ್ತಿಗೆ ಭೂಮಿಯನ್ನು ಮಂಜೂರು ಮಾಡಬಹುದು;

1. 2000ದ ಅಧಿನಿಯಮ 15ರ ಮೂಲಕ 27.4.2000 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
2. 2006ರ ಅಧಿನಿಯಮ 18ರ ಮೂಲಕ 27.4.2000 ರಿಂದ ಜಾರಿಗೆ ಬರುವಂತೆ ಯಾವಾಗಲೂ ಪ್ರತಿಯೋಜಿಸಲಾಗಿದೆಯೆಂದು ಭಾವಿಸಲಾಗಿದೆ.
3. 2009ರ ಅಧಿನಿಯಮ 23ರ ಮೂಲಕ 1.11.1998 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸತಕ್ಕದ್ದು ಹಾಗೂ ಪ್ರತಿಯೋಜಿಸಲಾಗಿದೆಯೆಂದು ಯಾವಾಗಲೂ ಭಾವಿಸಲಾಗಿದೆ.
4. 2012ರ ಅಧಿನಿಯಮ 9ರ ಮೂಲಕ 13.1.2012 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
5. 2014ರ ಅಧಿನಿಯಮ 26ರ ಮೂಲಕ ಅಧಿಸೂಚನೆಯಲ್ಲಿ 28.8.2014 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
6. 2017ರ ಅಧಿನಿಯಮ 11ರ ಮೂಲಕ ಅಧಿಸೂಚನೆಯಲ್ಲಿ 28.2.2017 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
7. 2018ರ ಅಧಿನಿಯಮ 27ರ ಮೂಲಕ ದಿನಾಂಕ: 29.12.2018ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
8. 2020ರ ಅಧಿನಿಯಮ 22ರ ಮೂಲಕ ದಿನಾಂಕ: 15.10.2020ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

ಪರಂತು, ಅದೇ ಭೂಮಿಯನ್ನು ಮಂಜೂರು ಮಾಡುವುದಕ್ಕೆ ಯಾರೇ ಇತರ ವ್ಯಕ್ತಿಯು 94ಎ ಪ್ರಕರಣದ ಮೇರೆಗೆ ಅರ್ಜಿ ಸಲ್ಲಿಸಿದ್ದು, ಆ ಪ್ರಕರಣದ ಮೇರೆಗೆ ಪರಿಗಣಿಸಲು ಬಾಕಿ ಇದ್ದರೆ, ಸಂದರ್ಭಾನುಸಾರ, ಸಮಿತಿಯು ಅಥವಾ ಹೆಚ್ಚುವರಿ ಸಮಿತಿಯು, ಈ ಉಪ–ಪ್ರಕರಣದ ಮೇರೆಗೆ ಭೂಮಿಯನ್ನು ಮಂಜೂರು ಮಾಡುವುದಕ್ಕೂ ಮುಂಚೆ ಅಂಥ ಇತರೆ ವ್ಯಕ್ತಿಯ ಕ್ಲೇಮನ್ನು ಪರಿಶೀಲಿಸತಕ್ಕದ್ದು:

ಮತ್ತೂ ಪರಂತು, ಈ ಪ್ರಕರಣದ ಮೇರೆಗೆ ಯಾವುದೇ ಭೂಮಿಯನ್ನು ಮಂಜೂರು ಮಾಡಲು, ಅರಣ್ಯ ಸಂರಕ್ಷಣೆ ಅಧಿನಿಯಮ, 1980 (1980ರ ಕೇಂದ್ರ ಅಧಿನಿಯಮ 69) 2ನೇ ಪ್ರಕರಣದ ಮೇರೆಗೆ ಕೇಂದ್ರ ಸರ್ಕಾರದಿಂದ

ಮುಂಚಿತವಾಗಿಯೇ ಅನುಮೋದನೆ ಪಡೆಯುವ ಅಗತ್ಯ ಇದ್ದರೆ, ಹಾಗೆ ಅನುಮತಿ ಪಡೆಯದೆ ಅಂಥ ಮಂಜೂರಾತಿಯನ್ನು ಮಾಡತಕ್ಕದ್ದಲ್ಲ.

(2) 94ಎ ಪ್ರಕರಣದ (4)ನೇ ಉಪ-ಪ್ರಕರಣದಲ್ಲಿರುವ ಕೋಷ್ಟಕ ಹಾಗೂ ವಿವರಣೆ ಮತ್ತು (5)ನೇ ಹಾಗೂ (6)ನೇ ಉಪ-ಪ್ರಕರಣಗಳೂ ಒಳಗೊಂಡಂತೆ ಮೊದಲನೆಯ ಪರಂತುಕದ, ಎರಡನೆಯ ಪರಂತುಕದ ಉಪಬಂಧಗಳು, (1)ನೇ ಉಪ-ಪ್ರಕರಣದ ಮೇರೆಗೆ ಮಾಡಿದ ಭೂ ಮಂಜೂರಾತಿಗೆ ಯಥೋಚಿತ ವ್ಯತ್ಯಾಸಗಳೊಂದಿಗೆ ಅನ್ವಯವಾಗತಕ್ಕದ್ದು.

(3) ಈ ಪ್ರಕರಣದಲ್ಲಿ ಏನೇ ಇದ್ದರೂ, 79ನೇ ಪ್ರಕರಣದ (2)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಿದ ಯಾವುದೇ ಭೂಮಿಯನ್ನು ಹೊರತುಪಡಿಸಿ, ಅರಣ್ಯ ಭೂಮಿಯೆಂದು ವರ್ಗೀಕರಿಸಿದ ಅರಣ್ಯ ಭೂಮಿಗೆ ಅನ್ವಯವಾಗತಕ್ಕದ್ದಲ್ಲ.][1]

[2][[1][**94ಸಿ ಅಧಿಭೋಗದ ಭೂಮಿಯಲ್ಲಿ ವಾಸದ ಮನೆಯನ್ನು ಕಟ್ಟಿಕೊಂಡಿದ್ದರೆ ಪ್ರಕರಣದಲ್ಲಿ ಭೂ ಮಂಜೂರಾತಿ.**- ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ ಮತ್ತು ಈ ಪ್ರಕರಣದಲ್ಲಿ ಇಲ್ಲಿ ಇನ್ನು ಮುಂದೆ ಉಪಬಂಧಿಸಿರುವುದನ್ನು ಹೊರತುಪಡಿಸಿ, ಗೊತ್ತುಪಡಿಸಿದ ಪ್ರಾಧಿಕಾರಕ್ಕೆ, [4][2015ರ ಜನವರಿ ಮೊದಲನೇ ದಿನಕ್ಕೆ][4] ಮುಂಚೆ, ಯಾರೇ ವ್ಯಕ್ತಿಯು, ಸರ್ಕಾರಕ್ಕೆ ಸೇರಿದ ಯಾವುದೇ ಭೂಮಿಯನ್ನು ಅನಧಿಕೃತವಾಗಿ ಸ್ವಾಧೀನದಲ್ಲಿಟ್ಟುಕೊಂಡಿದ್ದಾನೆಂದು ಮತ್ತು ಅಂಥ ಭೂಮಿಯಲ್ಲಿ ವಾಸದ ಮನೆಯನ್ನು ಕಟ್ಟಿಕೊಂಡಿದ್ದಾನೆಂದು, ಸೂಕ್ತವೆಂದು ತಾನು ಭಾವಿಸುವಂಥ, ವಿಚಾರಣೆಯನ್ನು ನಡೆಸಿದ ತರುವಾಯ ಮನದಟ್ಟಾದಲ್ಲಿ, ಆ ಪ್ರಾಧಿಕಾರವು ಅಂಥ ವ್ಯಕ್ತಿಯು ತನಗೆ ಅರ್ಜಿ ಸಲ್ಲಿಸಿದಾಗ, ನಿಯಮಿಸಬಹುದಾದ ಅಂಥ ಅವಧಿಯೊಳಗೆ, ಅಂಥ ಫೀಜಿನೊಂದಿಗೆ ಅಂಥ ನಮೂನೆಯಲ್ಲಿ ಮತ್ತು ಅಂಥ ಮೊತ್ತವನ್ನು ಸಂದಾಯ ಮಾಡಿದ ಮೇಲೆ, ಅಂಥ ವಿಧಾನದಲ್ಲಿ ಮತ್ತು ಈ ಮುಂದಿನ ಷರತ್ತುಗಳಿಗೆ ಮತ್ತು ನಿಯಮಿಸಬಹುದಾದಂಥ ಇತರ ನಿರ್ಬಂಧಗಳಿಗೆ ಮತ್ತು ಷರತ್ತುಗಳಿಗೆ ಒಳಪಟ್ಟು ಮಂಜೂರಾತಿ ಆದೇಶದಲ್ಲಿ ನಿರ್ದಿಷ್ಟಪಡಿಸಬೇಕಾದ ಮನೆಯು ಆವರಿಸಿರುವಷ್ಟು ಭೂಮಿಗೆ ಮಂಜೂರಾತಿಯನ್ನು ನೀಡಬಹುದು, ಎಂದರೆ:-

(i) [4][2015ರ ಜನವರಿ ಮೊದಲನೇ ದಿನಕ್ಕೆ][4] ಮುಂಚೆ ವಾಸದ ಮನೆಯನ್ನು ಕಟ್ಟಿಕೊಂಡಿರುವುದಕ್ಕಾಗಿ ರುಜುವಾತನ್ನು ಅರ್ಜಿದಾರನು ಸಲ್ಲಿಸತಕ್ಕದ್ದು;

(ii) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ರಾಜ್ಯದಲ್ಲಿನ ನಗರ ಪಾಲಿಕೆಗಳು, ಸಿಎಂಸಿಗಳು, ಟಿಎಂಸಿಗಳ ಅಧಿಕಾರ ವ್ಯಾಪ್ತಿಯ ಮಿತಿಗಳೊಳಗೆ ಬರುವ ರಾಜ್ಯ ಸರ್ಕಾರಕ್ಕೆ ಸೇರಿದ ಭೂಮಿಯ ಮೇಲೆ ಅನಧಿಕೃತವಾಗಿ ಕಟ್ಟಿದ ಯಾವುದೇ ಮನೆಯನ್ನು ಸಕ್ರಮಗೊಳಿಸತಕ್ಕದ್ದಲ್ಲ;

(iii) ಅಂಥ ಭೂಮಿಯ ಮಂಜೂರಾತಿಗಾಗಿ ಅರ್ಜಿಯನ್ನು ಸಲ್ಲಿಸಿದ ವ್ಯಕ್ತಿಗೆ ಅಥವಾ ಆತನ ಕುಟುಂಬದ ಯಾರೇ ಸದಸ್ಯನಿಗೆ ಯಾವ ಭೂಮಿಗಾಗಿ ಅರ್ಜಿಯನ್ನು ಸಲ್ಲಿಸಲಾಗಿದೆಯೋ ಆ ಭೂಮಿಯು ಇರುವ ನಗರ ಅಥವಾ ಗ್ರಾಮೀಣ ಪ್ರದೇಶದೊಳಗೆ ಯಾವುದೇ ಕಟ್ಟಡ ಅಥವಾ ನಿವೇಶನವು ಇದ್ದರೆ ಆ ಭೂಮಿಗೆ ಮಂಜೂರಾತಿಯನ್ನು ನೀಡತಕ್ಕದ್ದಲ್ಲ;

(iv) ಯಾರೇ ವ್ಯಕ್ತಿಯು, ತನ್ನ ಹೆಸರಿನಲ್ಲಿ ಅಥವಾ ತನ್ನ ಕುಟುಂಬದ ಯಾರೇ ಸದಸ್ಯನ ಹೆಸರಿನಲ್ಲಿ ಒಂದಕ್ಕಿಂತ ಹೆಚ್ಚಿನ ವಾಸದ ಮನೆ ಕಟ್ಟಿಕೊಳ್ಳಲು, ಭೂಮಿಯ ಮಂಜೂರಾತಿಗೆ ಅರ್ಹನಾಗತಕ್ಕದ್ದಲ್ಲ;

**ವಿವರಣೆ:-** ಈ ಖಂಡದ ಉದ್ದೇಶಕ್ಕಾಗಿ "ಕುಟುಂಬದ ಸದಸ್ಯರು" ಎಂದರೆ ಗಂಡ, ಹೆಂಡತಿ, ಅವಿವಾಹಿತ ಹೆಣ್ಣುಮಕ್ಕಳು ಮತ್ತು ಸಂದರ್ಭಾನುಸಾರ ಅಪ್ರಾಪ್ತ ವಯಸ್ಕ ಗಂಡುಮಕ್ಕಳು.

(v) ಹಾಗೆ ಮಂಜೂರಾದ ಭೂಮಿಯನ್ನು ಮಂಜೂರಾತಿ ಆದೇಶವನ್ನು ಸ್ವೀಕರಿಸಿದ ದಿನಾಂಕದಿಂದ ಹದಿನೈದು ವರ್ಷಗಳ ಅವಧಿಗಾಗಿ ಪರಭಾರೆ ಮಾಡತಕ್ಕದ್ದಲ್ಲ;

(vi) ಮಂಜೂರಾತಿ ಪಡೆದವನು ಕಟ್ಟಡವನ್ನು ವಾಸದ ಮನೆಗಾಗಿ ಹೊರತು ಯಾವುದೇ ಇತರ ಉದ್ದೇಶಕ್ಕಾಗಿ ಬಳಸತಕ್ಕದ್ದಲ್ಲ.

(vi ಎ) ಕೆಳಗಿನ ಕೋಷ್ಟಕದ (2)ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಿದ ನಗರಗಳು ಮತ್ತು ನಗರಪುರಸಭೆಗಳ ಸರಹದ್ದುಗಳ ಒಳಗೆ ಇರುವ ಪ್ರದೇಶಗಳಲ್ಲಿ ಮತ್ತು (3)ನೇ ಅಂಕಣದ ಎದುರಿಗಿರುವ ನಮೂದುಗಳಲ್ಲಿ

ನಿರ್ದಿಷ್ಟಪಡಿಸಿದ ಅಂಥ ಸರಹದ್ದುಗಳಿಂದ ಅಷ್ಟು ದೂರದ ಅಂತರದೊಳಗೆ ಇರುವ ಯಾವುದೇ ಭೂಮಿಯನ್ನು ಮಂಜೂರು ಮಾಡತಕ್ಕದ್ದಲ್ಲ ;

**ಕೋಷ್ಟಕ**

| ಕ್ರಮ ಸಂಖ್ಯೆ | ಸ್ಥಳಗಳು | ಅಂತರಗಳು |
|---|---|---|
| (1) | (2) | (3) |
| 1. | ಕರ್ನಾಟಕ ನಗರ ಪಾಲಿಕೆಗಳ ಅಧಿನಿಯಮ, 1976ರ ಅಡಿಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ | 18 ಕಿ.ಮೀ.ಗಳು |
| 2. | ಕರ್ನಾಟಕ ನಗರ ಪಾಲಿಕೆಗಳ ಅಧಿನಿಯಮ, 1976ರ ಉಪಬಂಧಗಳ ಅಡಿಯಲ್ಲಿ ಅನುಕ್ರಮವಾಗಿ ಬೆಳಗಾವಿ, ಗುಲ್ಬರ್ಗಾ, ಹುಬ್ಬಳ್ಳಿ, ಧಾರವಾಡ, ಮಂಗಳೂರು ಮತ್ತು ಮೈಸೂರು ನಗರಗಳು | 10 ಕಿ.ಮೀ.ಗಳು |
| 3. | ಕರ್ನಾಟಕ ಪೌರಸಭೆಗಳ ಅಧಿನಿಯಮ, 1964ರ ಅಡಿಯಲ್ಲಿಯ ಎಲ್ಲಾ ನಗರ ಮುನಿಸಿಪಾಲಿಟಿಗಳು | 5 ಕಿ.ಮೀ.ಗಳು |

(vi ಬಿ) ಕರ್ನಾಟಕ ನಗರ ಪಾಲಿಕೆಗಳ ಅಧಿನಿಯಮ, 1976ರ ಅಡಿಯಲ್ಲಿ ಇತರ ನಗರ ಪಾಲಿಕೆಗಳ ಹೊರಗಿನ 10 ಕಿ.ಮೀ.ಗಳವರೆಗಿನ ಸರಹದ್ದು ಯಾವುದೇ ಭೂಮಿಯನ್ನು ಮಂಜೂರು ಮಾಡತಕ್ಕದ್ದಲ್ಲ.

(vi ಸಿ) ತಾಲೂಕು ಪುರಸಭೆಗಳು ಮತ್ತು ಪಟ್ಟಣ ಗ್ರಾಮಪಂಚಾಯತಿಗಳ ಹೊರಗಿನ ವರ್ತುಲದಿಂದ 3 ಕಿ.ಮೀ.ಗಳ ಸರಹದ್ದಿನ ಒಳಗೆ ಇರುವ ಅನಧಿಕೃತ ಕಟ್ಟಡಗಳನ್ನು ಸಕ್ರಮಗೊಳಿಸತಕ್ಕದ್ದಲ್ಲ ;

(vi ಡಿ) ಆಶ್ರಯ ವಸತಿ ಯೋಜನೆಗಳ ಅಡಿಯಲ್ಲಿ ಅರ್ಹತೆಗಾಗಿ ಪ್ರಸ್ತುತ ಸರ್ಕಾರಿ ಅನುಮೋದಿತ ಷರತ್ತುಗಳು ಒಟ್ಟಾಗಿ ಅನ್ವಯವಾಗತಕ್ಕದ್ದು ;

(vi ಇ) ಕಟ್ಟಿದ ಮನೆಯು ವಾಸ್ತವಿಕವಾಗಿ ಆವರಿಸಿಕೊಂಡಿರುವ ಜಾಗ ಅಥವಾ [3][4000 ಚದರ ಅಡಿಯವರೆಗೆ[13] ನಿರ್ಮಿತ ಮನೆಯ ಜಾಗ ಇದರಲ್ಲಿ ಯಾವುದು ಕಡಿಮೆ ವಿಸ್ತೀರ್ಣದ್ದೋ ಅದನ್ನು ಸಕ್ರಮಗೊಳಿಸತಕ್ಕದ್ದು."

(vii) ಸ್ವಾಧೀನದಲ್ಲಿರುವ ಯಾವ ಭೂಮಿಯಲ್ಲಿ ವಾಸದ ಮನೆ ಇರುವುದೋ ಆ ಭೂಮಿಯನ್ನು,-

(ಎ) ನೈಸರ್ಗಿಕ ಒಳಚರಂಡಿಗಳ ಮಾರ್ಗದಲ್ಲಿ ಅಥವಾ ಕಾಲುವೆ ಹರಿವಿನ ದಾರಿಯಲ್ಲಿ ಇದ್ದರೆ;

(ಬಿ) ರಾಜ್ಯ ಸರ್ಕಾರದ ಅಥವಾ ಯಾವುದೇ ಸ್ಥಳೀಯ ಪ್ರಾಧಿಕಾರದ ಒಡೆತನದ ಅಥವಾ ನಿಯಂತ್ರಣದ ಪ್ರಾಧಿಕಾರಕ್ಕೆ ಸೇರಿದ್ದಲ್ಲಿ;

(ಸಿ) ಪ್ರಸ್ತುತ ಅಥವಾ ಪ್ರಸ್ತಾಪಿತ ರಸ್ತೆಗಳಿಗೆ, ಒಳಗಿನ ಅಥವಾ ಹೊರಗಿನ ವರ್ತುಲ ರಸ್ತೆಗಳಿಗೆ, ರಾಷ್ಟ್ರೀಯ ಹೆದ್ದಾರಿಗಳಿಗೆ, ಅಗಲೀಕರಣಕ್ಕಾಗಿ ಪ್ರಸ್ತಾಪಿಸಲಾದುವುಗಳೂ ಒಳಗೊಂಡಂತೆ ವರ್ತುಲ ರಸ್ತೆಗಳಲ್ಲಿರುವ ಬೈಪಾಸ್‌ಗೆ ಮತ್ತು ರೈಲ್ವೆ ಲೈನುಗಳಿಗೆ, ಟ್ರಾಮ್‌ವೇಗಳಿಗೆ, ಸಮೂಹ ಕ್ಷಿಪ್ರ ಸಾರಿಗೆ ಪದ್ಧತಿ ಯೋಜನೆಗಳಿಗೆ, ಸಂಪರ್ಕಗಳಿಗೆ ಮತ್ತು ಇತರ ನಾಗರಿಕ ಸೌಲಭ್ಯಗಳಿಗೆ ಅಥವಾ ಸಾರ್ವಜನಿಕ ಉಪಯುಕ್ತತೆಗಳಿಗೆ ಅಡ್ಡಿ ಅಡಚಣೆ ಉಂಟು ಮಾಡುತ್ತಿದ್ದರೆ;

(ಡಿ) ಅಂಥ ಭೂಮಿಯು ಅರಣ್ಯ ಭೂಮಿಯಾಗಿದ್ದಲ್ಲಿ;

(ಇ) ಅಂಥ ಭೂಮಿಯು ಬೇರೊಬ್ಬ ವ್ಯಕ್ತಿಗೆ ಸೇರಿದ್ದೂ ಅದರ ಮೇಲೆ ಅರ್ಜಿದಾರನಿಗೆ ಹಕ್ಕು ಇರದಿದ್ದರೆ ;

(ಎಫ್) ಅಂಥ ಭೂಮಿಯನ್ನು ಉದ್ಯಾನವನಗಳು, ಆಟದ ಮೈದಾನಗಳು, ಮುಕ್ತ ಸ್ಥಳಗಳು ಅಥವಾ ಯಾವುದೇ ನಾಗರಿಕ ಸೌಕರ್ಯಗಳನ್ನು ಒದಗಿಸುವುದಕ್ಕಾಗಿ ಮೀಸಲಿಟ್ಟಿದ್ದರೆ;

(ಜಿ) ಅಂಥ ಭೂಮಿಯು ಅಕ್ಕಪಕ್ಕದವರ ಸ್ವತ್ತಿಗೆ, ಬಿರುಮಳೆಯ ನೀರು ಹರಿದುಹೋಗುವ ಒಳಚರಂಡಿಗೆ, ಕೆರೆ ಏರಿ ಪ್ರದೇಶಗಳಿಗೆ, ನದಿ ದಡಕ್ಕೆ ಅಥವಾ ನದಿಪಾತ್ರಗಳಿಗೆ ಮತ್ತು ಕಾಲುವೆಗಳಿಗೆ ಹೊಂದಿಕೊಂಡಿದ್ದರೆ ಅಥವಾ ಹೈಟೆನ್ಷನ್ ವಿದ್ಯುಚ್ಛಕ್ತಿ ಲೈನ್‌ಗಳ ಕೆಳಗಿದ್ದರೆ;

(ಎಚ್) ಪಾರಂಪರಿಕ ಸ್ಮಾರಕಗಳಿಗೆ, ವಿಮಾನ ನಿಲ್ದಾಣಗಳಿಗೆ ಮತ್ತು ಸೇನಾ ನಿಬಂಧನೆಗಳಿಗೆ ಸಂಬಂಧಿಸಿದಂತೆ ವಲಯ ನಿಬಂಧನೆಗಳಲ್ಲಿ ಇಂತಿಷ್ಟೇ ಎತ್ತರ ಇರಬೇಕೆಂದು ನಿರ್ದಿಷ್ಟಪಡಿಸಿ ನಿರ್ಬಂಧಗಳಿಗೆ ವಿರುದ್ಧವಾಗಿ ಅಂಥ ಭೂಮಿಯನ್ನು ಬಳಕೆ ಮಾಡುತ್ತಿದ್ದರೆ;

(ಐ) ಭೂಮಿಯು ಹೈಟೆನ್‌ಷನ್ ಲೈನ್‌ಗಳಿಗೆ ಅಥವಾ ಬೆಂಕಿ ಆಕಸ್ಮಿಕ ಶಮನದ ಕ್ರಮಗಳಿಗೆ ಕೊಟ್ಟಿರುವ ಯಾವುದೇ ಅನುಮತಿಗೆ ಅಂಥ ಅನುಗುಣವಾಗಿರದಿದ್ದರೆ;

(ಜೆ) ಅಂಥ ಭೂಮಿಯು ಭಾರತ ಸರ್ಕಾರದ ಪರಿಸರ ಮತ್ತು ಅರಣ್ಯ ಮಂತ್ರಾಲಯದ, ಕರಾವಳಿ ವಲಯ ನಿಬಂಧನೆ ವ್ಯಾಪ್ತಿಗೆ ಒಳಪಟ್ಟಿರುವ ಪ್ರದೇಶದಲ್ಲಿದ್ದರೆ,

– ಅಂಥ ಭೂಮಿಯನ್ನು ಮಂಜೂರು ಮಾಡತಕ್ಕದ್ದಲ್ಲ:

ಪರಂತು, ಭೂ ಬಳಕೆಯ ಬದಲಾವಣೆಗೆ ಸಂಬಂಧಿಸಿದಂತೆ ಆಗಿರುವ ಉಲ್ಲಂಘನೆಯನ್ನು ಸಾಧ್ಯವಾದಷ್ಟು ಮಟ್ಟಿಗೆ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961ರ (1963ರ ಕರ್ನಾಟಕ ಅಧಿನಿಯಮ 11) 14–ಎ ಪ್ರಕರಣಕ್ಕೆ ಅನುಸಾರವಾಗಿ ಸಕ್ರಮಗೊಳಿಸತಕ್ಕದ್ದು.][1]][2]

1. 1999ರ ಅಧಿನಿಯಮ 26ರ ಮೂಲಕ 1.1.2000 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ, ಅಧಿಸೂಚನೆಯ ಪಾಠವು ಅಧಿನಿಯಮದ ಕೊನೆಯಲ್ಲಿದೆ.
2. 2013ರ ಅಧಿನಿಯಮ 51ರ ಮೂಲಕ 11.7.2013 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
3. 2015ರ ಅಧಿನಿಯಮ 31ರ ಮೂಲಕ 13.8.2015 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
4. 2017ರ ಅಧಿನಿಯಮ 50ರ ಮೂಲಕ 16.12.2017 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][**94ಸಿಸಿ. ನಗರ ಪ್ರದೇಶದಲ್ಲಿನ ಅಧಿಭೋಗದ ಭೂಮಿಯಲ್ಲಿನ ವಾಸದ ಮನೆಯ ನಿರ್ಮಾಣದ ಪ್ರಕರಣದಲ್ಲಿ ಭೂ ಮಂಜೂರಾತಿ.–** ಈ ಅಧಿನಿಯಮದಲ್ಲಿ ಏನೇ ಇದ್ದರೂ ಮತ್ತು ಈ ಪ್ರಕರಣದಲ್ಲಿ ಇಲ್ಲಿ ಇನ್ನು ಮುಂದೆ ಉಪಬಂಧಿಸಿದುದನ್ನು ಹೊರತುಪಡಿಸಿ, ಗೊತ್ತುಪಡಿಸಿದ ಪ್ರಾಧಿಕಾರಕ್ಕೆ, ತಾನು ಸೂಕ್ತವೆಂದು ಭಾವಿಸುವ ಅಂಥ ವಿಚಾರಣೆಯನ್ನು ನಡೆಸಿದ ತರುವಾಯ [3][2015ರ ಜನವರಿ ಮೊದಲನೇ ದಿನಕ್ಕೆ][3]ಮೊದಲು, ಯಾರೇ ವ್ಯಕ್ತಿಯು, ನಗರ ಪ್ರದೇಶದಲ್ಲಿರುವ ಸರ್ಕಾರಕ್ಕೆ ಸೇರಿದ ಯಾವುದೇ ಕಂದಾಯ ಭೂಮಿಯನ್ನು ಅನಧಿಕೃತವಾಗಿ ಸ್ವಾಧೀನದಲ್ಲಿಟ್ಟುಕೊಂಡಿದ್ದಾನೆಂದು ಮತ್ತು ಅಂಥ ಭೂಮಿಯ ಮೇಲೆ ವಾಸದ ಮನೆಯನ್ನು ಕಟ್ಟಿಕೊಂಡಿದ್ದಾನೆಂದು, ಸೂಕ್ತವೆಂದು ತಾನು ಭಾವಿಸುವಂಥ ವಿಚಾರಣೆಯನ್ನು ನಡೆಸಿದ ತರುವಾಯ, ಮನದಟ್ಟಾದಲ್ಲಿ, ಅಂಥ ವ್ಯಕ್ತಿಯು, ಗೊತ್ತುಪಡಿಸಬಹುದಾದ ಅಂಥ ಅವಧಿಯೊಳಗೆ, ಅಂಥ ಫೀಜಿನೊಂದಿಗೆ ಅಂಥ ನಮೂನೆಯಲ್ಲಿ ಮತ್ತು ಅಂಥ ಮೊತ್ತವನ್ನು ಸಂದಾಯ ಮಾಡಿ ತನಗೆ ಅರ್ಜಿ ಸಲ್ಲಿಸಿದಾಗ ಗೊತ್ತುಪಡಿಸಬಹುದಾದಂಥ ವಿಧಾನದಲ್ಲಿ ಹಾಗೂ ಈ ಮುಂದಿನ ಷರತ್ತುಗಳಿಗೆ ಮತ್ತು ನಿಯಮಿಸಬಹುದಾದ ಅಂಥ ಇತರ ನಿರ್ಬಂಧಗಳಿಗೆ ಮತ್ತು ಷರತ್ತುಗಳಿಗೆ ಒಳಪಟ್ಟು, ಮಂಜೂರಾತಿ ಆದೇಶದಲ್ಲಿ ನಿರ್ದಿಷ್ಟಪಡಿಸಿ ಆ ಮನೆಯು ಆವರಿಸಿರುವಷ್ಟು, ಆ ಭೂಮಿಗೆ ಮಂಜೂರಾತಿಯನ್ನು ನೀಡಬಹುದು, ಎಂದರೆ:–

(i) ಅರ್ಜಿದಾರನು [3][2015ರ ಜನವರಿ ಮೊದಲನೇ ದಿನಕ್ಕೆ][3]ಮೊದಲು ವಾಸದ ಮನೆಯನ್ನು ಕಟ್ಟಿಕೊಂಡಿರುವುದಕ್ಕಾಗಿ ರುಜುವಾತನ್ನು ಸಲ್ಲಿಸತಕ್ಕದ್ದು;

(ii) ವಾಸದ ಮನೆ ಇರದ ಯಾವುದೇ ಖಾಲಿ ಭೂಮಿಯನ್ನು ಸಕ್ರಮಗೊಳಿಸತಕ್ಕದ್ದಲ್ಲ;

(iii) ಅಂಥ ಭೂಮಿಯ ಮಂಜೂರಾತಿಗಾಗಿ ಅರ್ಜಿಯನ್ನು ಸಲ್ಲಿಸಿದ ವ್ಯಕ್ತಿಗೆ ಅಥವಾ ಆತನ ಕುಟುಂಬದ ಯಾರೇ ಸದಸ್ಯನಿಗೆ, ಯಾವ ಭೂಮಿಗಾಗಿ ಅರ್ಜಿಯನ್ನು ಸಲ್ಲಿಸಲಾಗಿದೆಯೋ ಆ ಭೂಮಿಯು ಇರುವ ನಗರ ಪ್ರದೇಶದೊಳಗೆ ಯಾವುದೇ ಕಟ್ಟಡ ಅಥವಾ ನಿವೇಶನವು ಇದ್ದಲ್ಲಿ ಆ ಭೂಮಿಗೆ ಮಂಜೂರಾತಿಯನ್ನು ನೀಡತಕ್ಕದ್ದಲ್ಲ;

(iv) ಯಾರೇ ವ್ಯಕ್ತಿಯು, ತನ್ನ ಹೆಸರಿನಲ್ಲಿಯಾಗಲೀ ಅಥವಾ ತನ್ನ ಕುಟುಂಬದ ಯಾರೇ ಸದಸ್ಯನ ಹೆಸರಿನಲ್ಲಿಯಾಗಲೀ ಒಂದಕ್ಕಿಂತ ಹೆಚ್ಚಿನ ವಾಸದ ಮನೆ ಕಟ್ಟಿಕೊಳ್ಳಲು, ಭೂಮಿಯ ಮಂಜೂರಾತಿಗೆ ಅರ್ಹನಾಗತಕ್ಕದ್ದಲ್ಲ.

**ವಿವರಣೆ:–** ಈ ಖಂಡದ ಉದ್ದೇಶಕ್ಕಾಗಿ "ಕುಟುಂಬದ ಸದಸ್ಯರು" ಎಂದರೆ ಗಂಡ, ಹೆಂಡತಿ, ಅವಿವಾಹಿತ ಹೆಣ್ಣುಮಕ್ಕಳು ಮತ್ತು ಸಂದರ್ಭಾನುಸಾರ ಅಪ್ರಾಪ್ತ ವಯಸ್ಕ ಗಂಡುಮಕ್ಕಳು.

(v) ಹಾಗೆ ಮಂಜೂರಾದ ಭೂಮಿಯನ್ನು ಮಂಜೂರಾತಿ ಆದೇಶವನ್ನು ಸ್ವೀಕರಿಸಿದ ದಿನಾಂಕದಿಂದ ಹದಿನೈದು ವರ್ಷಗಳ ಅವಧಿಗಾಗಿ ಪರಭಾರೆ ಮಾಡತಕ್ಕದ್ದಲ್ಲ;

(vi) ಮಂಜೂರಾತಿ ಪಡೆದವನು ಕಟ್ಟಡವನ್ನು ವಾಸದ ಮನೆಯ ಉದ್ದೇಶಕ್ಕಾಗಿ ಹೊರತು ಇತರ ಯಾವುದೇ ಉದ್ದೇಶಕ್ಕಾಗಿ ಬಳಸತಕ್ಕದ್ದಲ್ಲ.

(vii) ನಗರ ಪಾಲಿಕೆಗೆ ಅಥವಾ ಪುರಸಭೆಗಳಿಗೆ ಅಥವಾ ನಗರ ಸ್ಥಳೀಯ ಸಂಸ್ಥೆಗಳಿಗೆ ಅಥವಾ ಅಭಿವೃದ್ಧಿ ಪ್ರಾಧಿಕಾರಗಳಿಗೆ ಅಥವಾ ನಗರಗಳು ಮತ್ತು ನಗರ ಪ್ರದೇಶಗಳ ಮಿತಿಗಳೊಳಗೆ ಬರುವ ಪಟ್ಟಣ ಪಂಚಾಯತಿಗಳೂ ಒಳಗೊಂಡಂಥ ನಗರ ಯೋಜನಾ ಪ್ರಾಧಿಕಾರಗಳಿಗೆ ಸೇರಿದ ಪ್ರದೇಶಗಳಲ್ಲಿನ ಭೂಮಿಯಲ್ಲಿ ಕಟ್ಟಿರುವ ಯಾವುದೇ ವಾಸದ ಮನೆಗೆ ಮಂಜೂರಾತಿ ನೀಡತಕ್ಕದ್ದಲ್ಲ.

(viii) ನಿವೇಶನದಲ್ಲಿರುವ ಅಥವಾ ಪ್ಲಾಟ್‌ನಲ್ಲಿರುವ ವಾಸದ ಮನೆಯ ಮೇಲುಪಾಯ ಅಥವಾ ವಾಸದ ಮನೆಯು ಇರುವ ಪ್ಲಾಟ್ ಅಥವಾ ಆ ಮನೆಯ ವಾಸ್ತವಿಕ ನಿರ್ಮಿತ ಜಾಗ 20'X30' ಅಡಿಯನ್ನು ಮೀರಿರದಿದ್ದರೆ ಅಥವಾ ಇವುಗಳಲ್ಲಿ ಯಾವುದು ಕಡಿಮೆ ವಿಸ್ತೀರ್ಣವೋ ಅದನ್ನು ಸಕ್ರಮಗೊಳಿಸತಕ್ಕದ್ದು.

[2][ಪರಂತು, ಕೆಳಕಂಡ ಕೋಷ್ಠಕದ (3) ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಿದಂಥ ಅಂತರದೊಳಗೆ ಇರುವ ಪ್ರದೇಶಗಳಲ್ಲಿ,ಕೋಷ್ಠಕದ ಅಂಕಣ (2) ರಲ್ಲಿ ನಿರ್ದಿಷ್ಟಪಡಿಸಿದ ಪೌರಸಭಾ ನಿಗಮಗಳ, ಪುರಸಭೆಗಳ ಮತ್ತು ಪಟ್ಟಣ ಪಂಚಾಯತ್‌ಗಳ ಸರಹದ್ದುಗಳಿಂದ ಗೊತ್ತುಪಡಿಸಿರುವ ಅಂತರಗಳೊಳಗೆ ಇರುವ ಜಾಗಗಳಲ್ಲಿ ಕಟ್ಟಿಕೊಂಡಿರುವ 30X40 ಅಳತೆಯಷ್ಟರ ನಿವೇಶನದಲ್ಲಿ ಅಥವಾ ಪ್ಲಾಟ್‌ನಲ್ಲಿ ಇರುವವಾಸದ ಮನೆ ಅಥವಾ ವಾಸದ ಮನೆಯ ವಾಸ್ತವಿಕ ನಿರ್ಮಿತ ಜಾಗ ಇವುಗಳಲ್ಲಿ ಯಾವುದು ಕಡಿಮೆಯೋ ಅದನ್ನು ಈ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಇತರ ಷರತ್ತುಗಳನ್ನು ಈಡೇರಿಸುವುದಕ್ಕೆ ಒಳಪಟ್ಟು ಮಂಜೂರು ಮಾಡಬಹುದು.][2]

(ix) ಯಾವ ಭೂಮಿಯಲ್ಲಿ ವಾಸದ ಮನೆಯು ಇರುವುದೋ ಆ ಭೂಮಿಯು,-

(ಎ) ನೈಸರ್ಗಿಕ ಒಳಚರಂಡಿಗಳ ಅಥವಾ ಕಾಲುವೆ ಹರಿವಿನ ದಾರಿಯಲ್ಲಿ ಇದ್ದಲ್ಲಿ;

(ಬಿ) ರಾಜ್ಯ ಸರ್ಕಾರದ ಅಥವಾ ಯಾವುದೇ ಸ್ಥಳೀಯ ಪ್ರಾಧಿಕಾರದ ಒಡೆತನದ ಅಥವಾ ನಿಯಂತ್ರಣದ ಪ್ರಾಧಿಕಾರಕ್ಕೆ ಸೇರಿದ್ದಲ್ಲಿ;

(ಸಿ) ಪ್ರಸ್ತುತ ಅಥವಾ ಪ್ರಸ್ತಾಪಿತ ರಸ್ತೆಗಳಿಗೆ, ಒಳಗಿನ ಅಥವಾ ಹೊರಗಿನ ವರ್ತುಲ ರಸ್ತೆಗಳಿಗೆ, ರಾಷ್ಟ್ರೀಯ ಹೆದ್ದಾರಿಗಳಿಗೆ, ಅಗಲೀಕರಣಕ್ಕಾಗಿ ಪ್ರಸ್ತಾಪಿಸಲಾದುವುಗಳೂ ಒಳಗೊಂಡಂತೆ ವರ್ತುಲ ರಸ್ತೆಗಳ ಬೈಪಾಸ್‌ಗೆ ಮತ್ತು ರೈಲ್ವೆ ಲೈನುಗಳಿಗೆ, ಟ್ರಾಮ್‌ವೇಗಳಿಗೆ, ಸಮೂಹ ಕ್ಷಿಪ್ರ ಸಾರಿಗೆ ಪದ್ಧತಿ ಯೋಜನೆಗಳಿಗೆ, ಸಂಪರ್ಕಗಳಿಗೆ ಮತ್ತು ಇತರ ನಾಗರಿಕ ಸೌಲಭ್ಯಗಳಿಗೆ ಅಥವಾ ಸಾರ್ವಜನಿಕ ಉಪಯುಕ್ತತೆಗಳಿಗೆ ಅಡ್ಡಿ ಅಡಚಣೆ ಉಂಟು ಮಾಡುತ್ತಿದ್ದರೆ;

(ಡಿ) ನಿವೇಶನವನ್ನು ಅಥವಾ ಪ್ಲಾಟನ್ನು ಆವರಿಸಿಕೊಂಡಿರುವ ಭೂಮಿಯ ಗೊತ್ತುಪಡಿಸಿದ ಮಿತಿಗಿಂತ ಹೆಚ್ಚಾಗಿದ್ದರೆ;

(ಇ) ಅರಣ್ಯ ಭೂಮಿಯಾಗಿದ್ದರೆ;

(ಎಫ್) ಅಂಥ ಭೂಮಿಯು ಬೇರೊಬ್ಬ ವ್ಯಕ್ತಿಗೆ ಸೇರಿದ್ದು, ಅರ್ಜಿದಾರನಿಗೆ ಅದರ ಮೇಲೆ ಹಕ್ಕು ಇರದಿದ್ದರೆ ;

(ಜಿ) ಅಂಥ ಭೂಮಿಯನ್ನು ಉದ್ಯಾನವನಗಳು, ಆಟದ ಮೈದಾನಗಳು, ಮುಕ್ತ ಸ್ಥಳಗಳು ಅಥವಾ ಯಾವುದೇ ನಾಗರಿಕ ಸೌಕರ್ಯಗಳನ್ನು ಒದಗಿಸುವುದಕ್ಕಾಗಿ ಮೀಸಲಿಟ್ಟಿದ್ದರೆ;

(ಹೆಚ್) ಅಂಥ ಭೂಮಿಯು ಅಕ್ಕಪಕ್ಕದವರ ಸ್ವತ್ತಿಗೆ, ಬಿರುಮಳೆಯ ನೀರು ಹರಿದುಹೋಗುವ ಒಳಚರಂಡಿಗೆ, ಕೆರೆ ಏರಿಪ್ರದೇಶಗಳಿಗೆ, ನದಿ ದಡಕ್ಕೆ ಅಥವಾ ನದಿಪಾತ್ರಗಳಿಗೆ ಮತ್ತು ಕಾಲುವೆಗಳಿಗೆ ಹೊಂದಿಕೊಂಡಿದ್ದರೆ ಅಥವಾ ಹೈಟೆನ್ಷನ್ ವಿದ್ಯುಚ್ಛಕ್ತಿ ಲೈನ್‌ಗಳ ಕೆಳಗಿದ್ದರೆ;

(ಐ) ಅಂಥ ಭೂಮಿಯನ್ನು ಪಾರಂಪರಿಕ ಸ್ಮಾರಕಗಳಿಗೆ, ವಿಮಾನನಿಲ್ದಾಣಗಳಿಗೆ ಮತ್ತು ಸೇನಾ ನಿಬಂಧನೆಗಳಿಗೆ ಸಂಬಂಧಿಸಿದಂತೆ ವಲಯ ನಿಬಂಧನೆಗಳಲ್ಲಿ ನಿರ್ದಿಷ್ಟಪಡಿಸಿದ ನಿಬಂಧನೆಗಳಲ್ಲಿ ಎತ್ತರ ಇಂತಿಷ್ಟೇ ಇರಬೇಕೆಂದು ನಿರ್ದಿಷ್ಟಪಡಿಸಿದ ಎತ್ತರದ ನಿರ್ಬಂಧಗಳಿಗೆ ವಿರುದ್ಧವಾಗಿ ಬಳಕೆ ಮಾಡುತ್ತಿದ್ದರೆ;

(ಜೆ) ಹೈಟೆನ್ಷನ್ ಲೈನ್‌ಗಳಿಗೆ ಅಥವಾ ಬೆಂಕಿಶಾಮಕ ಕ್ರಮಗಳಿಗೆ ಕೊಟ್ಟಿರುವ ಯಾವುದೇ ಅನುಮತಿಗೆ ಅನುಗುಣವಾಗಿ ಅಂಥ ಭೂಮಿಯು ಇರದಿದ್ದರೆ;

(ಕೆ) ಭಾರತ ಸರ್ಕಾರದ ಪರಿಸರ ಮತ್ತು ಅರಣ್ಯ ಮಂತ್ರಾಲಯದ ಕರಾವಳಿ ವಲಯ ನಿಬಂಧನೆಗೆ ಒಳಪಟ್ಟಿರುವ ಪ್ರದೇಶದಲ್ಲಿದ್ದರೆ,

– ಆ ಭೂಮಿಯನ್ನು ಮಂಜೂರು ಮಾಡತಕ್ಕದ್ದಲ್ಲ.

ಪರಂತು, ಭೂ ಬಳಕೆಯ ಬದಲಾವಣೆಗೆ ಸಂಬಂಧಿಸಿದಂತೆ ಆಗಿರುವ ಉಲ್ಲಂಘನೆಯನ್ನು ಸಾಧ್ಯವಾದಷ್ಟು ಮಟ್ಟಿಗೆ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961ರ (1963ರ ಕರ್ನಾಟಕ ಅಧಿನಿಯಮ 11) 14–ಎ ಪ್ರಕರಣಕ್ಕೆ ಅನುಸಾರವಾಗಿ ಮತ್ತು ಪ್ರತಿಯೊಂದು ನಗರ ಪಾಲಿಕೆಯ, ಪುರಸಭೆಗಳ, ನಗರ ಸ್ಥಳೀಯ ಸಂಸ್ಥೆಗಳ, ಅಭಿವೃದ್ಧಿ ಪ್ರಾಧಿಕಾರಗಳ ಮತ್ತು ನಗರ ಯೋಜನಾ ಪ್ರಾಧಿಕಾರದ ಮಂಜೂರಾದ ಮಾಸ್ಟರ್ ಪ್ಲಾನ್‌ಗೆ ಅನುಸಾರವಾಗಿ ಸಕ್ರಮಗೊಳಿಸತಕ್ಕದ್ದು.

**ವಿವರಣೆ:** ಈ ಪ್ರಕರಣದ ಉದ್ದೇಶಕ್ಕಾಗಿ, ನಗರ ಪ್ರದೇಶ ಎಂದರೆ:– ಈ ಮುಂದಿನ ಕೋಷ್ಟಕದ (2)ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಿದ ನಗರಗಳು ಮತ್ತು ನಗರ ಸಭೆಗಳ ಸರಹದ್ದುಗಳ ಒಳಗೆ ಮತ್ತು (3)ನೇ ಅಂಕಣದ ಎದುರಿಗೆ ಮಾಡಿರುವ ನಮೂದುಗಳಲ್ಲಿ ನಿರ್ದಿಷ್ಟಪಡಿಸಿದ ಸರಹದ್ದುಗಳಿಂದ ಅಂಥ ಅಂತರದೊಳಗೆ ಇರುವ ಪ್ರದೇಶಗಳು:

**ಕೋಷ್ಟಕ**

| **ಕ್ರಮ ಸಂಖ್ಯೆ** | **ಪ್ರದೇಶಗಳು** | **ಅಂತರ** |
|---|---|---|
| **(1)** | **(2)** | **(3)** |
| 1. | ಕರ್ನಾಟಕ ನಗರಪಾಲಿಕೆಗಳ ಅಧಿನಿಯಮ, 1976 ಅಡಿಯಲ್ಲಿನ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ | 18 ಕಿ.ಮೀ. |
| 2. | ಕರ್ನಾಟಕ ಪೌರನಿಗಮಗಳ ಅಧಿನಿಯಮ, 1976ರ ಉಪಬಂಧಗಳಡಿಯಲ್ಲಿ ಬರುವ ಅನುಕ್ರಮವಾಗಿ ಬೆಳಗಾವಿ, ಗುಲ್ಬರ್ಗಾ, ಹುಬ್ಬಳ್ಳಿ–ಧಾರವಾಡ, ಮಂಗಳೂರು ಮತ್ತು ಮೈಸೂರು ನಗರ. | 10 ಕಿ.ಮೀ. |
| 3. | ಕರ್ನಾಟಕ ಪೌರಸಭೆಗಳ ಅಧಿನಿಯಮ, 1964ರ ಅಡಿಯಲ್ಲಿನ ಎಲ್ಲಾ ನಗರಸಭೆಗಳು | 5 ಕಿ.ಮೀ. |
| 4. | ಕರ್ನಾಟಕ ಪೌರನಿಗಮಗಳ ಅಧಿನಿಯಮ, 1976ರ ಅಡಿಯಲ್ಲಿನ ಇತರೆ ನಗರ ಪಾಲಿಕೆಗಳು | 10 ಕಿ.ಮೀ |
| 5. | ಟಿಎಂಸಿಗಳು ಮತ್ತು ಪಟ್ಟಣ ಪಂಚಾಯಿತಿಗಳು | 3 ಕಿ.ಮೀ][1] |

1. 2015ರ ಅಧಿನಿಯಮ 7ರ ಮೂಲಕ 12.1.2015 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
2. 2017ರ ಅಧಿನಿಯಮ 20ರ ಮೂಲಕ 06.04.2017 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
3. 2017ರ ಅಧಿನಿಯಮ 50ರ ಮೂಲಕ 16.12.2017 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][**94–ಡಿ.ದಾಖಲಾಗದ ವಾಸಿಸುವ ಸ್ಥಳಗಳಲ್ಲಿರುವ ಸರ್ಕಾರಿ ಭೂಮಿಯಲ್ಲಿ ನಿರ್ಮಿಸಲಾದ, ಅದರ ಮತ್ತು ಅದಕ್ಕೆ ನಿಕಟದಲ್ಲಿ ತಾಗಿಕೊಂಡಿರುವ ನಿವೇಶನ ಸಹಿತವಾಗಿ ವಾಸದ ಮನೆಯ ಭೂಮಿಯನ್ನು ಸಕ್ರಮಗೊಳಿಸುವುದು ಮತ್ತು ಮಂಜೂರು ಮಾಡುವುದು.–** ಈ ಪ್ರಕರಣದಲ್ಲಿ ಇನ್ನುಮುಂದೆ ಉಪಬಂಧಿಸಿದುದನ್ನು ಹೊರತುಪಡಿಸಿ, ಈ ಅಧಿನಿಯಮದಲ್ಲಿ ಏನೇ ಇದ್ದರೂ, ನಿಯಮಿಸಲಾದ ಪ್ರಾಧಿಕಾರವು, ಅದು ಸೂಕ್ತವೆಂದು ಭಾವಿಸಬಹುದಾದ ಅಂಥ ವಿಚಾರಣೆಯನ್ನು ನಡೆಸಿದ ತರುವಾಯ, ಅಸ್ತಿತ್ವದಲ್ಲಿರುವ ಅಥವಾ ವಿಲೀನಗೊಳಿಸಬೇಕಾದ ಅಥವಾ ಗ್ರಾಮವಾಗಿ ಪರಿವರ್ತನೆಗೊಂಡ ಗ್ರಾಮದ

ಗಡಿಯೊಳಗೆ ಬರುವ, ಕರ್ನಾಟಕ ಭೂ ಕಂದಾಯ (ಮೂರನೇ ತಿದ್ದುಪಡಿ) ಅಧಿನಿಯಮ, 2017ರ ಪ್ರಾರಂಭದ ದಿನಾಂಕಕ್ಕೆ ಮೊದಲು ಸರ್ಕಾರಕ್ಕೆ ಸೇರಿದ ದಾಖಲಾಗದ ವಾಸಿಸುವ ಸ್ಥಳಗಳಲ್ಲಿರುವ ಯಾವುದೇ ಭೂಮಿಯಲ್ಲಿ, ಯಾವೊಬ್ಬ ವ್ಯಕ್ತಿಯು, ವಾಸದ ಮನೆ ಅದರ ನಿವೇಶನ ಮತ್ತು ಅದಕ್ಕೆ ನಿಕಟವಾಗಿ ತಾಗಿಕೊಂಡಿರುವ ಭೂಮಿ, ಯಾವುದಾದರೂ ಇದ್ದಲ್ಲಿ, ಅದರ ಸಹಿತವಾಗಿ ಅನಧಿಕೃತ ಅಧಿಭೋಗವನ್ನು ಹೊಂದಿದ್ದಾನೆಂದು ಹಾಗೂ ಅದನ್ನು ಅನುಭವಿಸುವುದಕ್ಕೆ ಅದು ಅವಶ್ಯವೆಂದು ಮನವರಿಕೆಯಾದರೆ, ನಿಯಮಿಸಬಹುದಾದ ಅಂಥ ಅವಧಿಯೊಳಗೆ, ಅಂಥ ನಮೂನೆಯಲ್ಲಿ, ಅಂಥ ಶುಲ್ಕದ ಜೊತೆಗೆ ಮತ್ತು ಅಂಥ ಮೊತ್ತದ ಸಂದಾಯದ ಮೇಲೆ ಅಂಥ ವ್ಯಕ್ತಿಯು ಅದಕ್ಕೆ ಅರ್ಜಿ ಸಲ್ಲಿಸಿದ ಮೇಲೆ, ಈ ಮುಂದಿನ ಷರತ್ತುಗಳಿಗೆ ಮತ್ತು ನಿಯಮಿಸಬಹುದಾದ ಹಾಗೂ ಮಂಜೂರಾತಿ ಆದೇಶದ ಪ್ರಮಾಣಪತ್ರದಲ್ಲಿ ನಿರ್ದಿಷ್ಟಪಡಿಸಿದ ಅಂಥ ಇತರ ನಿರ್ಬಂಧಗಳು ಮತ್ತು ಷರತ್ತುಗಳಿಗೆ ಒಳಪಟ್ಟು, ಅಂಥ ರೀತಿಯಲ್ಲಿ ಸಕ್ರಮಗೊಳಿಸಬಹುದು ಮತ್ತು ಮಂಜೂರು ಮಾಡಬಹುದು, ಎಂದರೆ:-

(i) ಈ ಪ್ರಕರಣದ ಅಡಿಯಲ್ಲಿ ಸಕ್ರಮಗೊಳಿಸುವಿಕೆ ಮತ್ತು ಮಂಜೂರಾತಿಗೆ ಸಂಬಂಧಿಸಿದ ಅರ್ಜಿಯನ್ನು, ಕರ್ನಾಟಕ ಭೂ ಕಂದಾಯ (ಮೂರನೇ ತಿದ್ದುಪಡಿ) ಅಧಿನಿಯಮ, 2017ರ ಪ್ರಾರಂಭದಲ್ಲಿದ್ದಂತೆ, ಕೃಷಿ ಮತ್ತು ತತ್ಸಂಬಂಧಿತ ಉದ್ದೇಶಗಳಿಗಾಗಿ ಇರಿಸಿದ, ಅರ್ಜಿದಾರನು ನಿರ್ಮಿಸಿದ ಮತ್ತು ಅಧಿಭೋಗ ಹೊಂದಿದ ಅನಧಿಕೃತ ವಾಸದ ಮನೆಯನ್ನು ಮತ್ತು ಅದಕ್ಕೆ ಲಗತ್ತಾದ ನಿವೇಶನವನ್ನು, ಆತನು ಅದರ ವಿಸ್ತೀರ್ಣ ಮತ್ತು ಚಕ್ಕುಬಂದಿಗಳೊಂದಿಗೆ ರುಜುವಾತಿನ ಸಹಿತ ಸಲ್ಲಿಸತಕ್ಕದ್ದು;

(ii) ಅರ್ಜಿಯನ್ನು ಯಾವ ಭೂಮಿಗೆ ಸಂಬಂಧಿಸಿದಂತೆ ಸಲ್ಲಿಸಲಾಗಿದೆಯೋ, ಆ ಭೂಮಿಯು ಇರುವ ಗ್ರಾಮೀಣ ಅಥವಾ ನಗರ ಪ್ರದೇಶಗಳಲ್ಲಿ, ಸಕ್ರಮಗೊಳಿಸುವುದಕ್ಕೆ ಮತ್ತು ಮಂಜೂರಾತಿಗೆ ಅರ್ಜಿಯನ್ನು ಸಲ್ಲಿಸಿರುವ ವ್ಯಕ್ತಿ ಅಥವಾ ಆತನ ಕುಟುಂಬದ ಯಾವೊಬ್ಬ ಸದಸ್ಯನು, ಯಾವುದೇ ಕಟ್ಟಡ ಅಥವಾ ನಿವೇಶನವನ್ನು ಹೊಂದಿದ್ದರೆ, ಯಾವುದೇ ಭೂಮಿಯನ್ನು ಮಂಜೂರು ಮಾಡತಕ್ಕದ್ದಲ್ಲ ;

(iii) ಯಾವೊಬ್ಬ ವ್ಯಕ್ತಿಯು, ಆತನ ಹೆಸರಿನಲ್ಲಾಗಲಿ ಅಥವಾ ಆತನ ಕುಟುಂಬದ ಯಾವೊಬ್ಬ ಸದಸ್ಯನ ಹೆಸರಿನಲ್ಲಾಗಲಿ, ಒಂದಕ್ಕಿಂತ ಹೆಚ್ಚು ವಾಸದ ಮನೆ ಮತ್ತು ಅದಕ್ಕೆ ಲಗತ್ತಾದ ನಿವೇಶನವನ್ನು ಸಕ್ರಮಗೊಳಿಸುವುದಕ್ಕೆ ಮತ್ತು ಅದರ ಮಂಜೂರಾತಿಗೆ ಅರ್ಹನಾಗಿರತಕ್ಕದ್ದಲ್ಲ;

**ವಿವರಣೆ:** ಈ ಖಂಡದ ಉದ್ದೇಶಕ್ಕಾಗಿ, "ಕುಟುಂಬದ ಸದಸ್ಯ" ಎಂದರೆ ಮತ್ತು ಇದು, ಪತಿ, ಪತ್ನಿ, ಮದುವೆಯಾಗದ ಹೆಣ್ಣು ಮಕ್ಕಳು ಮತ್ತು ಸಂದರ್ಭಾನುಸಾರವಾಗಿ ಅಪ್ರಾಪ್ತ ಗಂಡು ಮಕ್ಕಳು ಇವರನ್ನು ಒಳಗೊಳ್ಳುತ್ತದೆ;

(iv) ಹಾಗೆಮಂಜೂರಾದ ಭೂಮಿಯನ್ನು, ಮಂಜೂರಾತಿ ಪ್ರಮಾಣಪತ್ರವನ್ನು ಸ್ವೀಕರಿಸಿದ ದಿನಾಂಕದಿಂದ ಹದಿನೈದು ವರ್ಷಗಳ ಅವಧಿಯವರೆಗೆ ಪರಭಾರೆ ಮಾಡಕತಕ್ಕದ್ದಲ್ಲ;

(v) ಈ ಪ್ರಕರಣದ ಅಡಿಯಲ್ಲಿ ಮಾಡಲಾದ ಸಕ್ರಮ ಮತ್ತು ಮಂಜೂರಾತಿಯು, ವಾಸ್ತವವಾಗಿ ಅನಧಿಕೃತ ವಾಸದ ಮನೆ ಮತ್ತು ಅದಕ್ಕೆ ಲಗತ್ತಾದ ನಿವೇಶನಕ್ಕಿಂತ ಹೆಚ್ಚಾಗಿಲ್ಲದಂತೆ ಮತ್ತು ಅಂಥ ವ್ಯಕ್ತಿಯು ಅದನ್ನು ಅನುಭವಿಸುವುದಕ್ಕೆ ಸಂಬಂಧಿಸಿದಂತೆ ಅವಶ್ಯಕವಾಗಿದ್ದರೆ, ಆದರೆ ಒಟ್ಟಾರೆಯಾಗಿ 4000 ಚದರ ಅಡಿಗೆ ಹೆಚ್ಚಾಗದಂತೆ, ಯಾವುದು ಕಡಿಮೆಯೋ ಅಷ್ಟಕ್ಕಿಂತ ಹೆಚ್ಚಾಗಿರತಕ್ಕದ್ದಲ್ಲ; ಮತ್ತು

(vi) ವಾಸದ ಮನೆಯ ನಿರ್ಮಾಣ ಮತ್ತು ಅದಕ್ಕೆ ಲಗತ್ತಾದ ಭೂಮಿಯು,-

(ಎ) ನೈಸರ್ಗಿಕ ಜಲ ಹರಿವಿನ ಸಾಲಿನಲ್ಲಿ ಅಥವಾ ಕಣಿವೆ ಮಾರ್ಗದಲ್ಲಿದ್ದರೆ;

(ಬಿ) ಅಸ್ತಿತ್ವದಲ್ಲಿರುವ ಅಥವಾ ಉದ್ದೇಶಿಸಲಾದ ರಸ್ತೆಗಳು, ಒಳ ಅಥವಾ ಹೊರ ವರ್ತುಲ ರಸ್ತೆಗಳು, ರಾಷ್ಟ್ರೀಯ ಹೆದ್ದಾರಿಗಳು, ವಿಸ್ತರಿಸುವುದಕ್ಕೆ ಉದ್ದೇಶಿಸಿದಂಥವುಗಳನ್ನು ಒಳಗೊಂಡಂತೆ ವರ್ತುಲ ರಸ್ತೆಗಳ ಉಪ ರಸ್ತೆ (ಬೈ-ಪಾಸ್)ಗಳು ಮತ್ತು ರೈಲು ಮಾರ್ಗಗಳು, ಟ್ರಾಮ್ ಮಾರ್ಗಗಳು, ಸಮೂಹ ತ್ವರಿತ ಸಾರಿಗೆ ವ್ಯವಸ್ಥೆ ಪರಿಯೋಜನೆಗಳು, ಸಂಪರ್ಕ ಮತ್ತು ಇತರ ನಾಗರಿಕ ಸೌಲಭ್ಯಗಳು ಅಥವಾ ಸಾರ್ವಜನಿಕ ಉಪಯುಕ್ತತೆಗಳ ಮಾರ್ಗದಲ್ಲಿದ್ದಲ್ಲಿದ್ದರೆ;

(ಸಿ) ಅರಣ್ಯ ಭೂಮಿಯಾಗಿದ್ದರೆ;

(ಡಿ) ಮೀಸಲುಉದ್ಯಾನಗಳು, ಆಟದ ಮೈದಾನಗಳು, ಬಹಿರಂಗ ಸ್ಥಳಗಳು ಅಥವಾ ಯಾವುವೇ ನಾಗರಿಗೆ ಸೌಲಭ್ಯಗಳಿಗೆ ಒದಗಿಸಿದಂಥ ಸ್ಥಳವಾಗಿದ್ದರೆ;

(ಇ) ನೆರೆಹೊರೆಯವರ ಸ್ವತ್ತಿನೊಳಗೆ, ಮಳೆ ನೀರು ಹರಿವುಗಳ ಮೇಲೆ, ಕೆರೆ ತಳ ಪ್ರದೇಶಗಳಲ್ಲಿ, ನದಿ ಪಾತ್ರ ಅಥವಾ ತಳಗಳಲ್ಲಿ ಮತ್ತು ಕಾಲುವೆಗಳಲ್ಲಿ ಚಾಚಿಕೊಂಡಿದ್ದರೆ ಅಥವಾ ಹೈ ಟೆನ್ಷನ್ ವಿದ್ಯುತ್ ಮಾರ್ಗಗಳ ಕೆಳಗಿನ ಸ್ಥಳವಾಗಿದ್ದರೆ;

(ಎಫ್) ಪಾರಂಪರಿಕ ಸ್ಮಾರಕಗಳು, ವಿಮಾನ ನಿಲ್ದಾಣಗಳು ಮತ್ತು ರಕ್ಷಣಾಇಲಾಖೆಯ ನಿಯಂತ್ರಣಗಳಿಗಾಗಿ ವಲಯ ರಚನೆ ವಿನಿಯಮಗಳಲ್ಲಿ ನಿರ್ದಿಷ್ಟಪಡಿಸಿದ ಎತ್ತರದ ನಿರ್ಬಂಧಗಳ ವಿರುದ್ಧ ಬಳಸಲಾದ ಸ್ಥಳವಾಗಿದ್ದರೆ;

(ಜಿ) ಹೈ ಟೆನ್ಷನ್ ಮಾರ್ಗಗಳು ಅಥವಾ ಅಗ್ನಿ ಸಂರಕ್ಷಣಾ ಕ್ರಮಗಳಿಂದ ಯಾವುದೇ ಅನುಮತಿಗೆ ಅನುಗುಣವಾಗಿರದ ಸ್ಥಳವಾಗಿದ್ದರೆ; ಮತ್ತು

(ಹೆಚ್) ಭಾರತ ಸರ್ಕಾರದ ಪರಿಸರ ಮತ್ತು ಅರಣ್ಯ ಮಂತ್ರಾಲಯದ ಕರಾವಳಿ ವಲಯ ನಿಯಂತ್ರಣವು ಒಳಗೊಂಡಿರುವ ಪ್ರದೇಶವಾಗಿದ್ದರೆ

– ಅದನ್ನು ಸಕ್ರಮಗೊಳಿಸತಕ್ಕದ್ದಲ್ಲ ಮತ್ತು ಮಂಜೂರು ಮಾಡತಕ್ಕದ್ದಲ್ಲ.

**ವಿವರಣೆ.–** ಈ ಪ್ರಕರಣದ ಉದ್ದೇಶಕ್ಕಾಗಿ, "ದಾಖಲಾಗದ ವಾಸಿಸುವ ಸ್ಥಳ" ಎಂದರೆ, ಅಸ್ತಿತ್ವದಲ್ಲಿರುವ ಗ್ರಾಮ ಅಥವಾ ವಿಲೀನಗೊಳಿಸಬೇಕಾದ ಅಥವಾ ಗ್ರಾಮವಾಗಿ ಪರಿವರ್ತಿಸಿದ ಗ್ರಾಮದ ಗಡಿಯೊಳಗೆ ಬರುವ, ಸರ್ಕಾರಕ್ಕೆ ಸೇರಿದ ಯಾವುದೇ ಭೂಮಿಯಲ್ಲಿರುವ ಮತ್ತು ಸರ್ಕಾರವು ಹಾಗೆಂದು ಗುರುತಿಸಿದ ಲಂಬಾಣಿ ತಾಂಡಾ, ಗೊಲ್ಲರಹಟ್ಟಿ, ವಡ್ಡರಹಟ್ಟಿ, ಕುರುಬರಹಟ್ಟಿ, ನಾಯಕರಹಟ್ಟಿ, ಮಜಾರೆ ಗ್ರಾಮ, ಹಾಡಿ, ದೊಡ್ಡಿ, ಪಾಳ್ಯ, ಕ್ಯಾಂಪ್, ಕಾಲನಿ, ಅಥವಾ ವಾಸಿಸುವ ಸ್ಥಳಗಳ ಯಾವುದೇ ಅಂಥ ಗುಂಪು.][1]

1. 2017ರ ಅಧಿನಿಯಮ 49ರ ಮೂಲಕ 16.12.2017 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

**95. ಬೇಸಾಯದ ಭೂಮಿಯ ಬಳಕೆಗಳು ಮತ್ತು ಬೇಸಾಯದ ಭೂಮಿಯನ್ನು ಇತರ ಉದ್ದೇಶಕ್ಕಾಗಿ ಬಳಸುವ ಬಗೆಗಿನ ವಿಧಾನ.–** (1) ಕಟ್ಟಡಗಳನ್ನು ಕಟ್ಟುವ ಅಥವಾ ಬಾವಿಗಳನ್ನು ಅಥವಾ ಕೆರೆಗಳನ್ನು ನಿರ್ಮಿಸವ ಬಗ್ಗೆ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿಗೆ ಒಳಪಟ್ಟು, ಕಂದಾಯದ ನಿರ್ಧರಣೆಯಾದ ಅಥವಾ ಬೇಸಾಯದ ಉದ್ದೇಶಕ್ಕಾಗಿ ಹೊಂದಿರುವ ಭೂಮಿಯ ಅಧಿಭೋಗದಾರನು, ಆ ಭೂಮಿಯನ್ನು ಉತ್ತಮವಾಗಿಸಾಗುವಳಿ ಮಾಡಲು ಅಥವಾ ಮೇಲೆ ಹೇಳಿದ ಉದ್ದೇಶಕ್ಕಾಗಿ ಆ ಭೂಮಿಯನ್ನು ಹೆಚ್ಚು ಅನುಕೂಲಕರವಾಗಿ ಬಳಕೆ ಮಾಡುವುದಕ್ಕಾಗಿ, ತಾನೇ ಖುದ್ದಾಗಿ ಫಾರಂ ಕಟ್ಟಡಗಳನ್ನು ಕಟ್ಟಲು, ಬಾವಿ ಅಥವಾ ಕೆರೆಗಳನ್ನು ನಿರ್ಮಿಸಲು, ಬೇರೆ ಯಾವುದೇ ಸುಧಾರಣೆಗಳನ್ನು ಮಾಡಲು ಅಥವಾ ತನ್ನ ನೌಕರರಿಂದ, ಗೇಣಿದಾರರಿಂದ, ಏಜೆಂಟರಿಂದ ಅಥವಾ ಇತರ ಕಾನೂನುಸಮ್ಮತ ಪ್ರತಿನಿಧಿಗಳಿಂದ ಫಾರಂ ಕಟ್ಟಡಗಳನ್ನು ಕಟ್ಟಿಸಲು, ಬಾವಿ ಅಥವಾ ಕೆರೆಗಳನ್ನು ನಿರ್ಮಿಸಿಕೊಳ್ಳಲು ಅಥವಾ ಬೇರೆ ಯಾವುದೇ ಸುಧಾರಣೆಗಳನ್ನು ಮಾಡಿಸಲು ಹಕ್ಕುಳ್ಳವನಾಗಿರುತ್ತಾನೆ.

[12]["ಪರಂತು, ಭೂಮಿಗೆ ನಿಯಮಿಸಬಹುದಾದಂಥ ಗರಿಷ್ಠ ವಿಸ್ತೀರ್ಣಕ್ಕೆ ಒಳಪಟ್ಟು, ಹಾಗೆ ಕಟ್ಟಿದ ಫಾರಂ ಕಟ್ಟಡವು ಅಥವಾ ಫಾರಂ ಹೌಸ್ ಆತನ ಹಿಡುವಳಿಯ ಶೇಕಡ ಹತ್ತಕ್ಕಿಂತ ಹೆಚ್ಚಾಗಿರತಕ್ಕದ್ದಲ್ಲ."

**ವಿವರಣೆ.–** ಈ ಉಪಪ್ರಕರಣದ ಉದ್ದೇಶಕ್ಕಾಗಿ "ಫಾರಂ ಕಟ್ಟಡ" ಅಥವಾ "ಫಾರಂ ಹೌಸ್" ಎಂದರೆ, ರೈತನ ವಸತಿಗಾಗಿ ಬಳಸಿದ ಅಥವಾ ಕೃಷಿ ಪರಿಕರಗಳನ್ನು ಇಡುವ ಉದ್ದೇಶಕ್ಕಾಗಿ ಬಳಸಿದ ಮತ್ತು ಜಾನುವಾರುಗಳನ್ನು ಕಟ್ಟಿಹಾಕಲು ಬಳಸಿದ ಜಮೀನಿಗೆ ಹೊಂದಿಕೊಂಡಿರುವ ಅಥವಾ ಕೃಷಿ ಭೂಮಿಯ ಒಂದು ಭಾಗದಲ್ಲಿ ನಿರ್ಮಿಸಿದ ಮನೆ ಮತ್ತು ಈ ಮನೆಯನ್ನು ರೈತನು ತನ್ನ ಸ್ವಂತ ಉಪಯೋಗಕ್ಕಾಗಿ ಬಳಸತಕ್ಕದ್ದು ಹಾಗೂ ಅದನ್ನು ಯಾವುದೇ ವ್ಯಕ್ತಿಯ ಅಥವಾ ಏಜೆನ್ಸಿಯ ವಾಣಿಜ್ಯ ಚಟುವಟಿಕೆಗಳಿಗೆ ನೀಡತಕ್ಕದ್ದಲ್ಲ.][12]

(2) ಕಂದಾಯದ ನಿರ್ಧರಣೆ ಆಗಿರುವ ಅಥವಾ ಬೇಸಾಯದ ಉದ್ದೇಶಕ್ಕಾಗಿ ಹೊಂದಿರುವ ಭೂಮಿಯ ಯಾರೇ ಅಧಿಭೋಗದಾರನು ಅಂಥ ಭೂಮಿಯನ್ನು ಅಥವಾ ಅದರ ಯಾವುದೇ ಭಾಗವನ್ನು ಯಾವುದೇ ಇತರ ಉದ್ದೇಶಕ್ಕಾಗಿ ಬದಲಿಸಲು ಇಚ್ಛಿಸಿದರೆ,[1][ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ][1] ಅವನು ಅನುಮತಿಗಾಗಿ ಡೆಪ್ಯುಟಿ ಕಮಿಷನರಿಗೆಅರ್ಜಿಯನ್ನು ಸಲ್ಲಿಸತಕ್ಕದ್ದು. ಡೆಪ್ಯುಟಿ ಕಮಿಷನರು ಈ ಪ್ರಕರಣದ ಉಪಬಂಧಗಳಿಗೆ

ಮತ್ತು ಈ ಅಧಿನಿಯಮದ ಮೇರೆಗೆ ಮಾಡಿದ ನಿಯಮಗಳಿಗೆ ಒಳಪಟ್ಟು ಅನುಮತಿಯನ್ನು ನಿರಾಕರಿಸಬಹುದು ಅಥವಾ ಯುಕ್ತವೆಂದು ತಾನು ಆಲೋಚಿಸುವಂಥ ಷರತ್ತುಗಳಿಗೆ ಒಳಪಟ್ಟು ಅದನ್ನು ಕೊಡಬಹುದು.

[13][ಪರಂತು, ಕೃಷಿ ಉದ್ದೇಶಕ್ಕಾಗಿ ಮೌಲ್ಯಮಾಪನ ಮಾಡಿದ ಅಥವಾ ಹೊಂದಿದ ಯಾವುದೇ ಕೃಷಿ ಭೂಮಿಯು ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961ರ (1963ರ ಕರ್ನಾಟಕ ಅಧಿನಿಯಮ 11) ಅಡಿಯಲ್ಲಿ ಮಾಸ್ಟರ್ ಪ್ಲಾನ್ ಅನ್ನು ಯುಕ್ತವಾಗಿ ಪ್ರಕಟಿಸಲಾಗಿರುವ ಸ್ಥಳೀಯ ಯೋಜನಾ ಪ್ರದೇಶದೊಳಗೆ ಇದ್ದು ಮತ್ತು ಅಂಥ ಭೂಮಿ ಮತ್ತು ಅಂಥ ಪರಿವರ್ತನೆಯು ಅಂಥ ಮಾಸ್ಟರ್ ಪ್ಲಾನ್‌ನಲ್ಲಿ ನಿರ್ದಿಷ್ಟಪಡಿಸಿದ ಭೂ ಬಳಕೆಯ ಉದ್ದೇಶಕ್ಕೆ ಅನುಸಾರವಾಗಿದ್ದ ಪ್ರಕರಣದಲ್ಲಿ, ಅದಕ್ಕೆ (7)ನೇ ಉಪಪ್ರಕರಣದ ಅಡಿಯಲ್ಲಿ ನಿಯಮಿಸಲಾದ ಜುಲ್ಮಾನೆಯನ್ನು ಪಾವತಿಸುವುದಕ್ಕೆ ಒಳಪಟ್ಟು ಅನುಮತಿಯನ್ನು ನೀಡಲಾಗಿದೆಯೆಂದು ಭಾವಿಸತಕ್ಕದ್ದು][13]

[3][[5][ಮತ್ತೂ ಪರಂತು][5], ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಟ್ಟಡಗಳ ನಿರ್ಮಾಣಕ್ಕೆ ಅಥವಾ ಬಾವಿಗಳನ್ನು ಅಥವಾ ಕೆರೆಗಳನ್ನು ನಿರ್ಮಿಸುವುದಕ್ಕೆ ಸಂಬಂಧಿಸಿದಂತೆ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿಗೆ ಒಳಪಟ್ಟು, [5][ಖುಷ್ಕಿ (ಪುಂಜಾ) ಭೂಮಿ, ತರಿಭೂಮಿ ಅಥವಾ ಬಾಗಾಯತ್ ಭೂಮಿ][5] ಅಧಿಭೋಗದಾರನು,–

(ಎ) ಕರ್ನಾಟಕ ಭೂ ಸುಧಾರಣಾ ಅಧಿನಿಯಮ, 1961 (1962ರ ಕರ್ನಾಟಕ ಅಧಿನಿಯಮ 10) ರ 48ಎ ಪ್ರಕರಣದ ಮೇರೆಗೆ ಅಂಥ ಭೂಮಿಯ ಅಧಿಭೋಗದಾರನೆಂದು ನೋಂದಣಿಯಾದ ಅಥವಾ ನೋಂದಣಿಯಾಗಬೇಕಾದ ವ್ಯಕ್ತಿ ಅಲ್ಲದಿದ್ದರೆ; ಅಥವಾ

(ಬಿ) ಸದರಿ ಅಧಿನಿಯಮದ 77ನೇ ಪ್ರಕರಣದ ಮೇರೆಗೆ ಅಂಥ ಭೂಮಿಯನ್ನು ಪಡೆದ ವ್ಯಕ್ತಿ ಅಲ್ಲದಿದ್ದರೆ,

ಈ ಉಪ–ಪ್ರಕರಣದ ಮೇರೆಗೆ ಅಗತ್ಯಪಡಿಸಿದ ಅನುಮತಿಯನ್ನು ಪಡೆಯದೆ ಮತ್ತು ಅದರಲ್ಲಿ ಏನೇ ಒಳಗೊಂಡಿದ್ದರೂ, ತಹಶೀಲ್ದಾರನಿಗೆ ನಿಗದಿತ ಅರ್ಜಿ ನಮೂನೆಯಲ್ಲಿ ಆ ಬಗ್ಗೆ ಮುಂಚಿತವಾಗಿಯೇ ನೋಟಿಸ್‌ನ್ನು ಕಳುಹಿಸಿದ ತರುವಾಯ ಮತ್ತು ಉಪ–ಪ್ರಕರಣ (7)ರ ಮೇರೆಗೆ ನಿಗದಿಪಡಿಸಿದ ದಂಡವನ್ನು ನಿಗದಿತ ರೀತಿಯಲ್ಲಿ ಸಂದಾಯ ಮಾಡಿದ ಮೇಲೆ ಯಾವುದೇ ಇತರ ಉದ್ದೇಶಕ್ಕಾಗಿ ಅಂಥ ಭೂಮಿಯನ್ನು ಅಥವಾ ಅದರ ಭಾಗವನ್ನು ಪರಿವರ್ತನೆ ಮಾಡಬಹುದು.][3]

[7][(2ಎ) ಕಂದಾಯದ ನಿರ್ಧರಣೆ ಆಗಿರುವ ಅಥವಾ ಬೇಸಾಯದ ಉದ್ದೇಶಕ್ಕಾಗಿ ಹೊಂದಿರುವ ಭೂಮಿಯ ಯಾರೇ ಅಧಿಭೋಗದಾರನು, 2008ರ ಡಿಸೆಂಬರ್, 31ಕ್ಕೂ ಮುಂಚೆ, (2)ನೇ ಉಪ–ಪ್ರಕರಣದ ಮೇರೆಗೆ ಡೆಪ್ಯುಟಿ ಕಮಿಷನರ್‌ನ ಅನುಮತಿ ಪಡೆಯದೆ ಅಂಥ ಭೂಮಿಯನ್ನು ಅಥವಾ ಅದರ ಭಾಗವನ್ನು ವಾಸದ ಉದ್ದೇಶಕ್ಕಾಗಿ ಬದಲಿಸಿರುವಲ್ಲಿ ಮತ್ತು ಅಂಥ ಬದಲಾವಣೆಯನ್ನು ಸಕ್ರಮಗೊಳಿಸುವುದಕ್ಕೆ ಇಚ್ಛಿಸಿದಲ್ಲಿ, [8][ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ಅಧಿನಿಯಮ, 2011 ಜಾರಿಗೆ ಬಂದ ದಿನಾಂಕದಿಂದ ಒಂದು ವರ್ಷದ ಅವಧಿಯೊಳಗಾಗಿ][8] ಗೊತ್ತುಪಡಿಸಬಹುದಾದಂಥ ಅರ್ಜಿ ನಮೂನೆಯಲ್ಲಿ, ಶುಲ್ಕ ಹಾಗೂ ದಂಡನೆಯೊಂದಿಗೆ ಡೆಪ್ಯೂಟಿ ಕಮಿಷನರ್‌ನಿಗೆ ಅರ್ಜಿ ಸಲ್ಲಿಸತಕ್ಕದ್ದು. ಅಂಥ ಅರ್ಜಿಯನ್ನು ಸ್ವೀಕರಿಸಿದ ಮೇಲೆ ಡೆಪ್ಯುಟಿ ಕಮಿಷನರ್‌ನು, ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ, ಆದರೆ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಉಪಬಂಧಗಳಿಗೆ ಒಳಪಟ್ಟು ಮತ್ತು ಗೊತ್ತುಪಡಿಸಬಹುದಾದಂಥ ಷರತ್ತುಗಳಿಗೆ ಒಳಪಟ್ಟ ಹಾಗೂ ಅಂಥ ರೀತಿಯಲ್ಲಿ, ಅವಶ್ಯಕವೆಂದು ತಾನು ಅಗತ್ಯಪಡಿಸಬಹುದಾದಂಥ ಸಾಕ್ಷ್ಯವನ್ನು ಹಾಜರುಪಡಿಸಿದ ಮೇಲೆ ಹಾಗೂ ವಿಚಾರಣೆಯ ತರುವಾಯ ಅಂಥ ಭೂಮಿಯು,–

(i) ನೈಸರ್ಗಿಕ ಒಳಚರಂಡಿ ಅಥವಾ ಕಾಲುವೆ ಹರಿವಿನ ಮಾರ್ಗದಲ್ಲಿ ಇದ್ದರೆ;

(ii) ರಾಜ್ಯ ಸರ್ಕಾರಕ್ಕೆ ಅಥವಾ ಅಥವಾ ರಾಜ್ಯ ಸರ್ಕಾರದ ಅಥವಾ ಯಾವುದೇ ಸ್ಥಳೀಯ ಪ್ರಾಧಿಕಾರದ ಒಡೆತನಕ್ಕೆಅಥವಾ ನಿಯಂತ್ರಣದಲ್ಲಿರುವ ಪ್ರಾಧಿಕಾರಕ್ಕೆ ಸೇರಿದ;

(iii)ಪ್ರಸ್ತುತ ಅಥವಾ ಪ್ರಸ್ತಾಪಿತ ರಸ್ತೆಗಳಿಗೆ, ಒಳಗಿನ ಅಥವಾ ಹೊರಗಿನ ವರ್ತುಲ ರಸ್ತೆಗಳಿಗೆ, ರಾಷ್ಟ್ರೀಯ ಹೆದ್ದಾರಿಗಳಿಗೆ, ಅಗಲೀಕರಣಕ್ಕಾಗಿ ಪ್ರಸ್ತಾಪಿಸಿದವುಗಳೂ ಸೇರಿದಂತೆ ಪ್ರಸ್ತಾಪಿತ ವರ್ತುಲ ರಸ್ತೆಗಳ ಬೈಪಾಸ್‌ಗಳಿಗೆ ಮತ್ತು ರೈಲ್ವೆ ಲೈನುಗಳಿಗೆ, ಟ್ರಾಂವೇಗಳಿಗೆ, ಸಮೂಹ ಸಾರಿಗೆ ಕ್ಷಿಪ್ರ ಪದ್ಧತಿ ಯೋಜನೆಗಳಿಗೆ, ಸಂಪರ್ಕಗಳಿಗೆ ಮತ್ತು ಇತರ ನಾಗರಿಕ ಸೌಲಭ್ಯಗಳಿಗೆ ಅಥವಾ ಸಾರ್ವಜನಿಕ ಸೌಕರ್ಯಗಳಿಗೆ ಅಡ್ಡಿ ಅಡಚಣೆ ಉಂಟು ಮಾಡುತ್ತಿದ್ದರೆ;

(iv) ಅರಣ್ಯ ಭೂಮಿಯಾಗಿದ್ದರೆ;

(v) ಬೇರೊಬ್ಬ ವ್ಯಕ್ತಿಗೆ ಸೇರಿದ್ದು ಅರ್ಜಿದಾರನಿಗೆ ಅದರ ಮೇಲೆ ಹಕ್ಕು ಇರದಿದ್ದರೆ;

(vi) ಅಂಥ ಭೂಮಿಯನ್ನು ಉದ್ಯಾನವನಗಳು, ಆಟದ ಮೈದಾನಗಳು, ಮುಕ್ತ ಪ್ರದೇಶಗಳು ಅಥವಾ ಯಾವುದೇ ಸೌಕರ್ಯಗಳನ್ನು ಒದಗಿಸಲು ಮೀಸಲಿಟ್ಟಿದ್ದರೆ;

(vii) ಅಥವಾ ಕಟ್ಟಡವು ಅಕ್ಕಪಕ್ಕದವರಸ್ವತ್ತಿಗೆ ಬಿರುಮಳೆಯ ನೀರು ಹರಿದುಹೋಗುವ ಚರಂಡಿಗಳಿಗೆ, ಕೆರೆ ಏರಿ ಪ್ರದೇಶಗಳಿಗೆ, ನದಿ ಪಾತ್ರಕ್ಕೆ ಅಥವಾ ನದಿ ದಂಡೆಗೆ ಮತ್ತು ಕಾಲುವೆಗಳಿಗೆ ಹೊಂದಿಕೊಂಡಿದ್ದರೆ ಅಥವಾ ಹೈ-ಟೆನ್ಷನ್ ವಿದ್ಯುತ್ ಮಾರ್ಗದ ಕೆಳಗೆ ಇದ್ದರೆ;

(viii) ಪಾರಂಪರಿಕ ಸ್ಮಾರಕಗಳಿಗೆ, ವಿಮಾನ ನಿಲ್ದಾಣಗಳಿಗೆ ಹಾಗೂ ಸೇನಾ ನಿಬಂಧನೆಗಳಿಗೆ ಸಂಬಂಧಿಸಿದಂತೆ ವಲಯ ನಿಬಂಧನೆಗಳಲ್ಲಿ ನಿರ್ದಿಷ್ಟಪಡಿಸಿದ ನಿಬಂಧನೆಗಳಲ್ಲಿ ಎತ್ತರ ಇಂತಿಷ್ಟೇ ಇರಬೇಕೆಂದು ನಿರ್ದಿಷ್ಟಪಡಿಸಿದ ನಿರ್ಬಂಧಗಳಿಗೆ ವಿರುದ್ಧವಾಗಿ ಬಳಕೆ ಮಾಡುತ್ತಿದ್ದರೆ;

(ix) ಹೈ-ಟೆನ್ಷನ್ ವಿದ್ಯುತ್ ಲೈನ್‌ಗಳಿಗೆ ಅಥವಾ ಅಗ್ನಿ ಶಾಮಕ ಕ್ರಮಗಳಿಗೆಕೊಟ್ಟಿರುವ ಯಾವುದೇ ಅನುಮತಿಗೆ ಅನುಗುಣವಾಗಿ ಇರದಿದ್ದರೆ;

(x) ಭಾರತ ಸರ್ಕಾರದ ಪರಿಸರ ಮತ್ತು ಅರಣ್ಯ ಮಂತ್ರಾಲಯದ ಕರಾವಳಿ ವಲಯ ನಿಬಂಧನೆಗೆಒಳಪಟ್ಟಿರುವ ಪ್ರದೇಶದಲ್ಲಿದ್ದರೆ; – ವಿಚಾರಣೆ ಮಾಡಿದ ತರುವಾಯ ಸಕ್ರಮಗೊಳಿಸಬಹುದು ಅಥವಾ ಸಕ್ರಮಗೊಳಿಸಲು ನಿರಾಕರಿಸಬಹುದು;

(xi) ಭೂ ಬಳಕೆಯಲ್ಲಿ ಬದಲಾವಣೆಗೆ ಸಂಬಂಧಿಸಿದಂತೆ ಆಗಿರುವ ಉಲ್ಲಂಘನೆಯನ್ನು ಸಾಧ್ಯವಾದಷ್ಟು ಮಟ್ಟಿಗೆ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961ರ 14ಎ ಪ್ರಕರಣಕ್ಕೆ ಅನುಸಾರವಾಗಿ; ಅಥವಾ

(xii) ಎರಡು ಮಹಡಿಗಳಿಗಿಂತ ಹೆಚ್ಚು ಮಹಡಿಗಳನ್ನು ಹೊಂದಿರುವ ಯಾವುದೇ ಕಟ್ಟಡಕ್ಕೆ ಸಂಬಂಧಿಸಿದಂತೆ ಅಭಿವೃದ್ಧಿ ಕಾರ್ಯವನ್ನು ಕೈಗೊಂಡಿದ್ದರೆ,-

(ಎ) ಅಂಥ ಕಟ್ಟಡದ ರಚನೆಯ ಸ್ಥಿರತೆ ಬಗ್ಗೆ ಕಟ್ಟಡ ಇಂಜಿನೀಯರ್‌ನಿಂದ ಪ್ರಮಾಣ ಪತ್ರವನ್ನು ಹಾಜುರುಪಡಿಸಿದಾಗ;

(ಬಿ) ಅಗ್ನಿಶಾಮಕ ಇಲಾಖೆಯಿಂದ ಆಕ್ಷೇಪಣೆ ಇಲ್ಲ ಪ್ರಮಾಣಪತ್ರ ಪಡೆದುಕೊಂಡಿದ್ದರೆ

– ಸಕ್ರಮಗೊಳಿಸತಕ್ಕದ್ದು.

(xiii) ಅಥವಾ ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ರ ಮೇರೆಗೆ ಘೋಷಿಸಿದ ಅನುಮೋದಿತ ಮಾಸ್ಟರ್ ಪ್ಲ್ಯಾನ್‌ನ ಅಥವಾ ಹಸಿರು ಪಟ್ಟಿ ವಲಯದಲ್ಲಿ ಅನಧಿಕೃತ ಅಭಿವೃದ್ಧಿಅಥವಾ ನಿರ್ಮಾಣ ಮಾಡಿದ್ದರೆ; ಮತ್ತು

(xiv) ಗೊತ್ತುಪಡಿಸಬಹುದಾದಂಥ ಯಾವುದೇ ಇತರ ನಿಷೇಧಕ್ಕೆ ಒಳಪಟ್ಟಿದ್ದರೆ,

– ವಿಚಾರಣೆ ಮಾಡಿದ ತರುವಾಯ ಸಕ್ರಮಗೊಳಿಸಬಹುದು ಅಥವಾ ಸಕ್ರಮಗೊಳಿಸಲು ನಿರಾಕರಿಸಬಹುದು.

(2ಎಎ) 2008ರ ಡಿಸೆಂಬರ್ 31ಕ್ಕೂ ಮುಂಚೆ ವಾಸದ ಉದ್ದೇಶಕ್ಕಾಗಿ ಪರಿವರ್ತನೆ ಅಥವಾ ಭೂಬಳಕೆಯಲ್ಲಿ ಬದಲಾವಣೆ ಮಾಡಲಾಗಿತ್ತೆಂದು ರುಜುವಾತುಪಡಿಸುವ ಹೊಣೆಯು, ಅಂಥ ಅನಧಿಕೃತ ಪರಿವರ್ತನೆಯನ್ನು ಅಥವಾ ಭೂಬಳಕೆಯಲ್ಲಿ ಮಾಡಿದ ಬದಲಾವಣೆಯನ್ನು ಸಕ್ರಮಗೊಳಿಸುವುದಕ್ಕಾಗಿ ಕೋರಿದ ಅರ್ಜಿದಾರನ ಮೇಲೆ ಇರತಕ್ಕದ್ದು.

(2ಎಎಎ) ಎಲ್ಲಾ ಅಂಥ ಪರಿವತನೆಗಳನ್ನು ಅಥವಾ ಭೂಬಳಕೆಯ ಬದಲಾವಣೆಯನ್ನು ಸಕ್ರಮಗೊಳಿಸದಿರುವಾಗ ಅಥವಾ ಅರ್ಜಿದಾರನು (2ಎ) ಉಪ-ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಅವಧಿಯೊಳಗೆ ಅರ್ಜಿ ಸಲ್ಲಿಸಿರದಿದ್ದರೆ, ನಾಶಪಡಿಸುವುದಕ್ಕೆ ಅಥವಾ ಅವು ಮುಂಚೆ ಬಳಕೆಯಲ್ಲಿದ್ದಂಥ ಸ್ಥಿತಿಗೆ ತರುವುದಕ್ಕೆ ಗುರಿಯಾಗತಕ್ಕದ್ದು ಮತ್ತು ಅದಕ್ಕಾಗಿ ಮಾಡಿದ ವೆಚ್ಚಗಳನ್ನು ಭೂಕಂದಾಯ ಬಾಕಿಗಳೆಂದು ಅಂಥ ವ್ಯಕ್ತಿಯಿಂದ ಸಂಗ್ರಹಿಸತಕ್ಕದ್ದು:][7]

(3) [5][ಪರಿವರ್ತನೆಯು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಉಪಬಂಧಗಳನ್ನು ವಿಫಲಗೊಳಿಸುತ್ತದೆ ಅಥವಾ ಅದು ಸಾರ್ವಜನಿಕ ಉಪದ್ರವವನ್ನುಂಟು ಮಾಡುವಂಥದ್ದಾಗಿದೆ][5] ಅಥವಾ ಅದು ಸಾರ್ವಜನಿಕರಿಗೆ ಹಿತಕಾರಿಯಾಗಿಲ್ಲ ಅಥವಾ (4)ನೇ ಉಪ ಪ್ರಕರಣದ ಮೇರೆಗೆ ವಿಧಿಸಬಹುದಾದಂಥ ಷರತ್ತುಗಳನ್ನು ಪಾಲಿಸಲು

ಅಧಿಭೋಗದಾರನು ಅಸಮರ್ಥನಾಗಿದ್ದಾನೆ ಅಥವಾ ಇಷ್ಟಪಡುತ್ತಿಲ್ಲವೆಂಬ ಕಾರಣದಮೇಲೆ ಡೆಪ್ಯುಟಿ ಕಮಿಷನರನು ಪರಿವತನೆಗೆ ಅನುಮತಿಯನ್ನು ನಿರಾಕರಿಸಬಹುದು.

[6][(3ಎ) xxx ][6]

[6][(3ಬಿ) xxx ][6]

(4) ಆರೋಗ್ಯ, ಸುರಕ್ಷೆ ಮತ್ತು ಸೌಕರ್ಯಗಳನ್ನು ಕಾಪಾಡುವುದಕ್ಕಾಗಿ ಮತ್ತು ಕಟ್ಟಡದ ನಿವೇಶನಗಳೆಂದು ಬಳಸುವ ಭೂಮಿಗೆ ಸಂಬಂಧಿಸಿದಂತೆ ಅಷ್ಟೇ ಅಲ್ಲ, ನಿವೇಶನಗಳ ಅಳತೆ, ವ್ಯವಸ್ಥೆ ಮತ್ತು ನಿವೇಶನಗಳಿಗೆ ಪ್ರವೇಶ ಇವು ಅಧಿಭೋಗದಾರರ ಆರೋಗ್ಯಕ್ಕೆ ಮತ್ತು ಸೌಕರ್ಯಕ್ಕೆ ಸರಿಹೊಂದಿಕೊಳ್ಳುತ್ತವೆ/ ಸರಿಹೊಂದಿಕೆಯಾಗಿವೆ ಅಥವಾ ಆ ಸ್ಥಳಕ್ಕೆ ಸೂಕ್ತವಾಗಿವೆ ಮತ್ತು ಪಟ್ಟಣ ಮತ್ತು ಗ್ರಾಮಾಂತರದ ಯೋಜನೆಗೆ ಅಥವಾ ಕಟ್ಟಡಗಳ ಕಟ್ಟುವಿಕೆಗೆ ಸಂಬಂಧಪಟ್ಟ ಯಾವುದೇ ಕಾನೂನಿನ ಉಪಬಂಧಗಳನ್ನು ಉಲ್ಲಂಘಿಸುತ್ತಿಲ್ಲವೆಂಬುದನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ಪರಿವರ್ತನೆ ಬಗೆಗೆ ಷರತ್ತುಗಳನ್ನು ವಿಧಿಸಬಹುದು.

(5) ಉಪಪ್ರಕರಣ(2)ರ ಮೇರೆಗೆ ಅರ್ಜಿಯನ್ನು ಸಲ್ಲಿಸಿದಾಗ, ಅರ್ಜಿಯು ತಲುಪಿದ ದಿನಾಂಕದಿಂದ ನಾಲ್ಕು ತಿಂಗಳ ಅವಧಿಯೊಳಗಾಗಿ ಡೆಪ್ಯುಟಿ ಕಮಿಷನರು ತನ್ನ ತೀರ್ಮಾನವನ್ನು ಅರ್ಜಿದಾರನಿಗೆ ತಿಳಿಸಲು ತಪ್ಪಿದಲ್ಲಿ, ಕೇಳಿಕೊಂಡ ಅನುಮತಿಯನ್ನು ಮಂಜೂರು ಮಾಡಲಾಗಿದೆಯೆಂದು ಭಾವಿಸತಕ್ಕದ್ದು.

(6) ಡೆಪ್ಯುಟಿ ಕಮಿಷನರು ಯಾವುದೇ ವಿಶಿಷ್ಟ ಸಂದರ್ಭದಲ್ಲಿ ಅನ್ಯಥಾ ನಿರ್ದೇಶಿಸಿದ ಹೊರತು, (2)ನೇ ಉಪಪ್ರಕರಣದ ಮೇರೆಗೆ ಯಾವುದೇ ಅರ್ಜಿಯನ್ನು ಅದನ್ನು ಅಧಿಭೋಗದಾರನು ಸಲ್ಲಿಸಿದ ಹೊರತು ಮಾನ್ಯ ಮಾಡತಕ್ಕದ್ದಲ್ಲ.

[1][(6ಎ) ದಕ್ಷಿಣ ಕನ್ನಡ ಜಿಲೆಯಲ್ಲಿ, ಕೊಡಗು ಜಿಲ್ಲೆಯಲ್ಲಿ ಹಾಗೂ ಮೈಸೂರು ಜಿಲ್ಲೆಯ ಕೊಳ್ಳೇಗಾಲ ತಾಲೂಕಿನಲ್ಲಿ ಕಂದಾಯದ ನಿರ್ಧರಣೆ ಆಗಿರುವ ಅಥವಾ ಬೇಸಾಯದ ಉದ್ದೇಶಕ್ಕಾಗಿ ಹೊಂದಿದ ಯಾವುದೇ ಭೂಮಿಯನ್ನು ಕರ್ನಾಟಕ ಭೂಕಂದಾಯ (ತಿದ್ದುಪಡಿ) ಅಧಿನಿಯಮ, 1981 ಜಾರಿಗೆ ಬಂದ ದಿನಾಂಕಕ್ಕೆ ಮುಂಚೆ ಇತರ ಯಾವುದೇ ಉದ್ದೇಶಗಳಿಗಾಗಿ ಪರಿವರ್ತಿಸಿದ್ದರೆ ಅಥವಾ ಬಳಸಿದ್ದರೆ, ಅದರಲ್ಲಿನ ಯಾವುದೇ ಕಟ್ಟಡಕ್ಕೆ (ಫಾರಂ ಹೌಸ್ ಅಲ್ಲದ) ಹೊಂದಿಕೊಂಡಿರುವ ಭೂಮಿಯ ಜೊತೆಗೆ ಬಳಸಿದ ಆ ಭೂಮಿಯಲ್ಲಿ ಅಂಥ ಕಟ್ಟಡದ ನಿರ್ಮಾಣದ ಪ್ರದೇಶವು ಮೂರುಪಟ್ಟು ಮೀರದಿದ್ದರೆ, ಅಂಥ ದಿನಾಂಕದಿಂದ ಪರಿಣಾಮಕಾರಿಯಾಗುವಂತೆ, ಕೃಷಿಯೇತರ ಉದ್ದೇಶಗಳಿಗಾಗಿ ಬಳಸುವುದಕ್ಕೆ ಅನುಮತಿಸಲಾಗಿದೆಯೆಂದು ಭಾವಿಸತಕ್ಕದ್ದು.][1]

[2][(7) ಕಂದಾಯ ನಿರ್ಧರಣೆ ಆಗಿರುವ ಅಥವಾ ಬೇಸಾಯದ ಉದ್ದೇಶಕ್ಕಾಗಿ ಹೊಂದಿರುವ ಯಾವುದೇ ಭೂಮಿಯನ್ನು ಬೇಸಾಯಕ್ಕೆ ಸಂಬಂಧಿಸಿದ ಯಾವುದೇ ಉದ್ದೇಶಕ್ಕಾಗಿ (2)ನೇ ಉಪ ಪ್ರಕರಣದ ಮೇರೆಗೆ ಅನುಮತಿ ಕೊಟ್ಟಿರುವಾಗ [3][ಅಥವಾ ಸದರಿ ಉಪ ಪ್ರಕರಣದ [5][ ಪರಂತುಕಗಳ][5] ಮೇರೆಗೆ ಪರಿವರ್ತಿಸಿದ್ದರೆ][3] ಅಥವಾ (5)ನೇ ಉಪ ಪ್ರಕರಣದ ಅಥವಾ (6ಎ) ಉಪ ಪ್ರಕರಣದ ಮೇರೆಗೆ ಅನುಮತಿ ನೀಡಲಾಗಿದೆಯೆಂದು ಭಾವಿಸಿರುವಾಗ, ಡೆಪ್ಯೂಟಿ ಕಮಿಷನರ್‌ನು, ಈ ಬಗ್ಗೆ ರಾಜ್ಯ ಸರ್ಕಾರವು ರಚಿಸಬಹುದಾದಂಥ ನಿಯಮಗಳಿಗೆ ಒಳಪಟ್ಟು, ಜುಲ್ಮಾನೆಯನ್ನು ಸಂದಾಯ ಮಾಡಲು ಅಗತ್ಯಪಡಿಸಬಹುದು. ಆ ತರುವಾಯ 83ನೇ ಪ್ರಕರಣದ (2)ನೇ ಉಪ ಪ್ರಕರಣದ ಮೇರೆಗೆ ಹೊರತು ಅಂಥ ಭೂಮಿಯ ಮೇಲೆ ಯಾವುದೇ ಕಂದಾಯವನ್ನು ವಿಧಿಸತಕ್ಕದ್ದಲ್ಲ.

[9][(8) ಕೈಗಾರಿಕೆ ಅಭಿವೃದ್ಧಿಗೆ, ಶೈಕ್ಷಣಿಕ ಸಂಸ್ಥೆಗಳಿಗೆ, ಪೂಜಾ ಸ್ಥಳಗಳಿಗೆ, ರಾಜ್ಯ ಸರ್ಕಾರವು ಅನುಮೋದಿಸಿದ ಗೃಹ ನಿರ್ಮಾಣ ಯೋಜನೆಗಾಗಿ ಅಥವಾ ಈ ಪ್ರಕರಣದ ಮೇರೆಗೆ ತೋಟಗಾರಿಕೆಯ ಉದ್ದೇಶಕ್ಕಾಗಿ ಕೃಷಿ ಭೂಮಿಯನ್ನು ಪರಿವರ್ತಿಸುವುದಕ್ಕಾಗಿ ಅನುಮತಿಯನ್ನು,ಕೈಗಾರಿಕಾ ಅಭಿವೃದ್ಧಿಗೆ, ಶೈಕ್ಷಣಿಕ ಸಂಸ್ಥೆಗಳಿಗೆ, ಪೂಜಾ ಸ್ಥಳಗಳಿಗೆ, ರಾಜ್ಯ ಸರ್ಕಾರವು ಅನುಮೋದಿಸಿದ ಗೃಹ ನಿರ್ಮಾಣ ಯೋಜನೆಗಳಿಗಾಗಿ ಅಥವಾ ಸಂದರ್ಭಾನುಸಾರ ತೋಟಗಾರಿಕೆಯ ಉದ್ದೇಶಕ್ಕಾಗಿ ಕರ್ನಾಟಕ ಭೂ ಸುಧಾರಣೆಗಳ ಅಧಿನಿಯಮ, 1961 (1962ರ ಕರ್ನಾಟಕ ಅಧಿನಿಯಮ 10) ರ 109ನೇ ಪ್ರಕರಣದ ಮೇರೆಗೆ ಕೃಷಿ ಭೂಮಿಯನ್ನು ಖರೀದಿಸುವುದಕ್ಕಾಗಿ ನೀಡಿದ ಅನುಮತಿಯಂತೆಯೇ ಗೊತ್ತುಪಡಿಸಬಹುದಾದಂಥ [10][ದಂಡವನ್ನು][10] ಸಂದಾಯ ಮಾಡುವುದಕ್ಕೆ ಒಳಪಟ್ಟು ಮಂಜೂರು ಮಾಡಲಾಗಿದೆ ಎಂದು ಭಾವಿಸತಕ್ಕದ್ದು.][9]

**ವಿವರಣೆ.-** ಈ ಪ್ರಕರಣದ ಉದ್ದೇಶಕ್ಕಾಗಿ, "ಅಧಿಭೋಗದಾರ" ಎಂಬುದು ಮೂಲಗೇಣಿದಾರ ಅಥವಾ ಖಾಯಂ ಗೇಣಿದಾರ ಎಂಬುದನ್ನು ಒಳಗೊಳ್ಳುತ್ತದೆ.][2]

[11][(9) ಕಂದಾಯ ನಿರ್ಧರಣೆ ಆಗಿರುವ ಅಥವಾ ಕೃಷಿ ಉದ್ದೇಶಕ್ಕಾಗಿ ಹೊಂದಿದ ಭೂಮಿಯ ಯಾರೇ ಅಧಿಭೋಗದಾರನು ಕರ್ನಾಟಕ ಕಲ್ಲುಪುಡಿ ಮಾಡುವಿಕೆ ನಿಯಂತ್ರಣ ಅಧಿನಿಯಮ, 2011 (2012ರ ಕರ್ನಾಟಕ ಅಧಿನಿಯಮ, 8)ರ ಮೇರೆಗೆ ಉಪ ಖನಿಜಗಳ ಗಣಿಗಾರಿಕೆಯನ್ನು ಅಥವಾ ಕಲ್ಲುಪುಡಿ ಮಾಡುವಿಕೆ ಚಟುವಟಿಕೆಗಳನ್ನು ನಿಯಂತ್ರಿಸುವ ನಿಯಮಗಳಿಗೆ ಅನುಸಾರವಾಗಿ ಉಪಖನಿಜಗಳ ಗಣಿಗಾರಿಕೆಯನ್ನು ನಿರ್ದಿಷ್ಟಪಡಿಸಿರಲಿ ಅಥವಾ ನಿರ್ದಿಷ್ಟಪಡಿಸದಿರಲಿ, ಅಂಥ ಗಣಿಗಾರಿಕೆ ಉದ್ದೇಶಕ್ಕಾಗಿ ಅಂಥ ಭೂಮಿಯನ್ನು ಅಥವಾ ಅದರ ಯಾವುದೇ ಭಾಗವನ್ನು ಪರಿವರ್ತಿಸಲು ಇಚ್ಛಿಸಿದಲ್ಲಿ, ಅಂಥ ಭೂಮಿಯ ಪರಿವರ್ತನೆಗಾಗಿ ಅನ್ವಯವಾಗುವ ದಂಡದೊಂದಿಗೆ ಡೆಪ್ಯೂಟಿ ಕಮೀಷನರನಿಗೆ ಅರ್ಜಿ ಸಲ್ಲಿಸತಕ್ಕದ್ದು, ಅಂಥ ಅರ್ಜಿಯನ್ನು ಸಲ್ಲಿಸಿದ ಮೇಲೆ ಸದರಿ ಅಧಿನಿಯಮಗಳ ಮೇರೆಗೆ ಗುತ್ತಿಗೆ, ಲೈಸೆನ್ಸ್ ಕೆಲಸಗಳಿಗಾಗಿ ಅನುಮತಿಯನ್ನು ಪಡೆಯುವುದಕ್ಕೆ ಒಳಪಟ್ಟು ಅಂಥ ಭೂಮಿಯ ಪರಿವರ್ತನೆಗಾಗಿ ಅನುಮತಿಯನ್ನು ನೀಡಲಾಗಿದೆಯೆಂದು ಭಾವಿಸತಕ್ಕದ್ದು.][11]

[12][(10) ಕಂದಾಯ ನಿರ್ಧರಣೆ ಆಗಿರುವ ಯಾವುದೇ ಕೃಷಿ ಭೂಮಿಯ ಅಥವಾ ಕೃಷಿ ಉದ್ದೇಶಕ್ಕಾಗಿ ಹೊಂದಿದ ಯಾವುದೇ ಅಧಿಭೋಗದಾರನು ಅಂಥ ಭೂಮಿಯನ್ನು ಅಥವಾ ಅದರ ಭಾಗವನ್ನು, ಸರ್ಕಾರದ ಆದೇಶ ಸಂಖ್ಯೆ: ಇಎನ್ 21 ವಿಎಸ್‌ಸಿ 2014 ದಿನಾಂಕ:22.05.2014ರಲ್ಲಿ 2014–21ರ ಕರ್ನಾಟಕ ಸೌರಶಕ್ತಿ ನೀತಿ ಅನುಸಾರವಾಗಿ ರಾಜ್ಯವು ಮತ್ತು ಕೇಂದ್ರ ಸರ್ಕಾರವು ಅನುಮೋದಿಸಿರುವ ಮತ್ತು ಸಕ್ಷಮ ಪ್ರಾಧಿಕಾರವು ಅನುಮೋದಿಸಿದ ಸೌರಶಕ್ತಿ ಉತ್ಪಾದಕ ಯಂತ್ರವನ್ನು ಸ್ಥಾಪಿಸುವ ಉದ್ದೇಶಕ್ಕಾಗಿ, ಬದಲಿಯಾಗಿ ಬಳಕೆ ಮಾಡಲು ಬಯಸಿದಲ್ಲಿ, ಇದಕ್ಕಾಗಿ ಸಂದಾಯ ಮಾಡಬೇಕಾದ ಪರಿವರ್ತನೆ ದಂಡ ಮತ್ತು ಯಾವುದಾದರೂ ಫೀಜುಗಳನ್ನು ಪಾವತಿ ಮಾಡಬೇಕಿದ್ದರೆ, ಅಂಥ ಎಲ್ಲಾ ಇತರ ಫೀಜುಗಳ ಪಾವತಿಗೆ ಒಳಪಟ್ಟು, ಯಾವ ಉದ್ದೇಶಕ್ಕಾಗಿ ಅನುಮತಿಯನ್ನು ಮಂಜೂರು ಮಾಡಲಾಗಿದೆಯೋ ಆ ಉದ್ದೇಶಕ್ಕಾಗಿ ಅಧಿಭೋಗದಾರನು ಅದನ್ನು ಬಳಸುವವರೆಗೂ, ಅನುಮತಿಯು ಮಂಜೂರಾಗಿದೆ ಎಂದು ಭಾವಿಸತಕ್ಕದ್ದು.][12]

1. 1981ರ ಅಧಿನಿಯಮ 42ರ ಮೂಲಕ 02.10.1980 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
2. 1981ರ ಅಧಿನಿಯಮ 42ರ ಮೂಲಕ 02.10.1980 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
3. 1983ರ ಅಧಿನಿಯಮ 20ರ ಮೂಲಕ 28.6.1983 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
4. 1991ರ ಅಧಿನಿಯಮ 2ರ ಮೂಲಕ 20.03.1991 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
5. 1991ರ ಅಧಿನಿಯಮ 2ರ ಮೂಲಕ 20.03.1991 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
6. 2005ರ ಅಧಿನಿಯಮ 1ರ ಮೂಲಕ 14.02.2005 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.
7. 2009ರ ಅಧಿನಿಯಮ 26ರ ಮೂಲಕ 29.09.2009 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
8. 2011ರ ಅಧಿನಿಯಮ 29ರ ಮೂಲಕ 27.6.2011 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸತಕ್ಕದ್ದು ಹಾಗೂ ಪ್ರತಿಯೋಜಿಸಲಾಗಿದೆಯೆಂದು ಯಾವಾಗಲೂ ಭಾವಿಸತಕ್ಕದ್ದು.
9. 2014ರ ಅಧಿನಿಯಮ 27ರಮೂಲಕ 28.8.2014 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
10. 2015ರ ಅಧಿನಿಯಮ 2ರ ಮೂಲಕ 8.1.2015 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
11. 2015ರ ಅಧಿನಿಯಮ 2ರ ಮೂಲಕ 8.1.2015 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
12. 2015ರ ಅಧಿನಿಯಮ 31ರ ಮೂಲಕ 13.8.2015 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.
13. 2018ರ ಅಧಿನಿಯಮ 11ರ ಮೂಲಕ 17.03.2018 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**96. ಬೇಸಾಯದ ಭೂಮಿಯನ್ನು ಅನುಮತಿ ಇಲ್ಲದೆ ಇತರ ಉದ್ದೇಶಕ್ಕಾಗಿ ಬಳಸುವುದಕ್ಕೆ ದಂಡ.–** (1) ಕಂದಾಯದನಿರ್ಧರಣೆ ಆಗಿರುವ ಅಥವಾ ಬೇಸಾಯದ ಉದ್ದೇಶಕ್ಕಾಗಿ ಹೊಂದಿದ ಯಾವುದೇ ಭೂಮಿಯನ್ನು ಡೆಪ್ಯುಟಿ ಕಮಿಷನರ ಅನುಮತಿ ಇಲ್ಲದೆ ಅಥವಾ 85ನೇ ಪ್ರಕರಣದ (5)ನೇ ಉಪಪ್ರಕರಣದಲ್ಲಿ ನಿಯಮಿಸಿದ ಅವಧಿಯು ಕೊನೆಗೊಳ್ಳುವುದಕ್ಕೆ ಮುಂಚೆ, ಇತರ ಉದ್ದೇಶಕ್ಕಾಗಿ ಪರಿವರ್ತಿಸಿದರೆ ಅಥವಾ ಬಳಸಿದರೆ, ಡೆಪ್ಯುಟಿ ಕಮಿಷನರು ಅಧಿಭೋಗದಾರನನ್ನು ಮತ್ತು ಹಾಗೆ ಪರಿವರ್ತನೆ ಮಾಡಿರುವುದಕ್ಕೆ ಜವಾಬ್ದಾರನಾಗಿರುವ ವ್ಯಕ್ತಿಯನ್ನು ಕೂಡಲೆ ಹಾಗೆ ಪರಿವರ್ತಿಸಿದ ಭೂಮಿಯಿಂದ ಹೊರದೂಡಬಹುದು ಮತ್ತು ಅದರ ಮೇಲೆ ನಿರ್ಮಿಸಿದ ಯಾವುದೇ ಕಟ್ಟಡವನ್ನು ಅಥವಾ ಇತರ ನಿರ್ಮಾಣವನ್ನು, ಡೆಪ್ಯುಟಿ ಕಮಿಷನರು ಸೂಕ್ತವೆಂದು ತಾನು ಭಾವಿಸುವಂಥ ಲಿಖಿತ ನೋಟೀಸು ಕೊಟ್ಟ ತರುವಾಯವೂ ತೆಗೆದುಹಾಕದಿದ್ದರೆ, ಅದು ಮುಟ್ಟುಗೋಲಿಗೆ ಅಥವಾ ಕೂಡಲೆ ತೆಗೆದುಹಾಕುವಿಕೆಗೆ ಗುರಿಯಾಗತಕ್ಕದ್ದು. ಅಧಿಭೋಗದಾರನು ಮತ್ತು ಪರಿವರ್ತನೆಗೆ ಜವಾಬ್ದಾರನಾಗಿರುವ ವ್ಯಕ್ತಿಯು, ಈ ಬಗ್ಗೆ ರಾಜ್ಯ ಸರ್ಕಾರವು ಮಾಡಬಹುದಾದ ನಿಯಮಗಳಿಗೊಳಪಟ್ಟು ಒಂದು ಸಾವಿರ ರೂಪಾಯಿಗೆ ಮೀರದಂಥ ಡೆಪ್ಯುಟಿ ಕಮಿಷನರು ನಿರ್ದೇಶಿಸಬಹುದಾದಂಥ ದಂಡಕ್ಕೂ ಗುರಿಯಾಗತಕ್ಕದ್ದು.

(2) ಕಂದಾಯದನಿರ್ಧರಣೆ ಆಗಿರುವ ಅಥವಾ ಬೇಸಾಯದ ಉದ್ದೇಶಕ್ಕಾಗಿ ಹೊಂದಿದ ಯಾವುದೇ ಭೂಮಿಯನ್ನು, 95ನೇ ಪ್ರಕರಣದ ಮೇರೆಗೆ ಮಾಡಿದ ಆದೇಶವನ್ನು ಅಥವಾ ವಿಧಿಸಿದ ಷರತ್ತನ್ನು ಉಲ್ಲಂಘಿಸಿ ಬೇರೆ ಉದ್ದೇಶಕ್ಕಾಗಿ ಪರಿವರ್ತಿಸಿದರೆ, ಡೆಪ್ಯುಟಿ ಕಮಿಷನರು ಅಂಥ ಉಲ್ಲಂಘನೆಗೆ ಜವಾಬ್ದಾರನಾಗಿರುವ ವ್ಯಕ್ತಿಗೆ, ನೋಟೀಸಿನಲ್ಲಿ

ವಿವರಿಸಿದ ಸಮಂಜಸ ಅವಧಿಯೊಳಗಾಗಿ ಆ ಭೂಮಿಯನ್ನು ಅದರ ಮೂಲ ಉದ್ದೇಶಕ್ಕಾಗಿ ಬಳಸಬೇಕೆಂದು ಅಥವಾ ಷರತ್ತುಗಳನ್ನು ಪಾಲಿಸಬೇಕೆಂದು ನಿರ್ದೇಶಿಸುವ ನೋಟೀಸು ಕೊಡಬಹುದು; ಮತ್ತು ಭೂಮಿಯನ್ನು ಅದರ ಮೂಲ ಉದ್ದೇಶಕ್ಕೆ ಬಳಸಲು ಸಾಧ್ಯವಾಗುವಂತೆ ಅಥವಾ ಷರತ್ತುಗಳನ್ನು ಪಾಲಿಸಲು ಸಾಧ್ಯವಾಗುವಂತೆ ಯಾವುದೇ ಕಟ್ಟಡವನ್ನು ತೆಗೆದುಹಾಕಲು, ಯಾವುದೇ ಅಗೆತವನ್ನು ಮುಚ್ಚಲು, ಅಥವಾ ಅಗತ್ಯವೆನಿಸಬಹುದಾದ ಇತರ ಕ್ರಮಗಳನ್ನು ಕೈಕೊಳ್ಳಲು ಅಂಥ ನೋಟೀಸಿನಲ್ಲಿ ಅಂಥ ವ್ಯಕ್ತಿಯನ್ನು ಅಗತ್ಯಪಡಿಸಬಹುದು. ರಾಜ್ಯ ಸರ್ಕಾರದ ಆದೇಶಗಳಿಗೊಳಟ್ಟು ಅಂಥ ಉಲ್ಲಂಘನೆಗಾಗಿ ಒಂದು ಸಾವಿರ ರೂಪಾಯಿಗಳಿಗೆ ಮೀರದಂಥ ದಂಡವನ್ನು ಮತ್ತು ಅಂಥ ಉಲ್ಲಂಘನೆಯು ಮುಂದುವರಿಯುವ ಪ್ರತಿಯೊಂದು ದಿನಕ್ಕೆ ಇಪ್ಪತ್ತೈದು ರೂಪಾಯಿಗಳಿಗೆ ಮೀರದಂಥ ಮತ್ತಷ್ಟು ದಂಡವನ್ನು ಡೆಪ್ಯುಟಿ ಕಮಿಷನರು ವಿಧಿಸಬಹುದು.

(3) ಉಪಪ್ರಕರಣ (2)ರ ಮೇರೆಗೆ ಯಾವ ವ್ಯಕ್ತಿಗೆ ನೋಟೀಸು ಜಾರಿ ಆಗಿದೆಯೋ ಆ ಯಾರೇವ್ಯಕ್ತಿಯು ನೋಟೀಸಿನಲ್ಲಿ ಹೇಳಿರುವ ಅವಧಿಯೊಳಗಾಗಿ ಆ ಉಪಪ್ರಕರಣದ ಮೇರೆಗೆ ಡೆಪ್ಯುಟಿ ಕಮಿಷನರು ಆದೇಶಿಸಿದ ಕ್ರಮಗಳನ್ನು ತೆಗೆದುಕೊಳ್ಳಲು ತಪ್ಪಿದರೆ ಡೆಪ್ಯುಟಿ ಕಮಿಷನರು ಖುದ್ದಾಗಿ ಅಂಥ ಕ್ರಮಗಳನ್ನು ತೆಗೆದುಕೊಳ್ಳ ಬಹುದು ಅಥವಾ ಕ್ರಮ ತೆಗೆದುಕೊಳ್ಳುವಂತೆ ಮಾಡಬಹುದು ಮತ್ತು ಹಾಗೆ ಮಾಡುವಾಗ ತಗುಲಿದ ಯಾವುದೇ ಖರ್ಚು ಭೂಕಂದಾಯದ ಬಾಕಿಯನ್ನು ವಸೂಲು ಮಾಡುವ ರೀತಿಯಲ್ಲಿಯೇ ಅಂಥ ವ್ಯಕ್ತಿಯಿಂದ ಅದು ವಸೂಲೀಯವಾಗಿರತಕ್ಕದ್ದು.

[1][(4) ಈ ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಕಂದಾಯದನಿರ್ಧರಣೆ ಆಗಿರುವ ಅಥವಾ ಬೇಸಾಯದ ಉದ್ದೇಶಕ್ಕಾಗಿ ಹೊಂದಿದ ಯಾವುದೇ ಭೂಮಿಯನ್ನು ಡೆಪ್ಯೂಟಿ ಕಮಿಷನರ್‌ನ ಅನುಮತಿ ಇಲ್ಲದೆ ಅಥವಾ 95ನೇ ಪ್ರಕರಣದ (5)ನೇ ಉಪ ಪ್ರಕರಣದಲ್ಲಿ ಗೊತ್ತುಪಡಿಸಿದ ಅವಧಿಯು ಕೊನೆಗೊಳ್ಳುವುದಕ್ಕೆ ಮುಂಚೆ ಅಥವಾ 95ನೇ ಪ್ರಕರಣದ ಮೇರೆಗೆ ಹೊರಡಿಸಿದ ಆದೇಶವನ್ನು ಅಥವಾ ವಿಧಿಸಿದ ಷರತ್ತನ್ನು ಉಲ್ಲಂಘಿಸಿ ಇತರ ಯಾವುದೇ ಉದ್ದೇಶಕ್ಕಾಗಿ ಪರಿವರ್ತಿಸಿದರೆ ಅಥವಾ ಬಳಸಿದ್ದರೆ, ಡೆಪ್ಯೂಟಿ ಕಮಿಷನರ್‌ನು, ಗೊತ್ತುಪಡಿಸಬಹುದಾದಂಥ ನಿಯಮಗಳಿಗೆ ಒಳಪಟ್ಟು ಮತ್ತು ಕಟ್ಟಡಗಳ ನಿರ್ಮಾಣ ಅಥವಾ ಬಾವಿಗಳು ಹಾಗೂ ಕೆರೆಗಳನ್ನು ನಿರ್ಮಿಸುವುದಕ್ಕೆ ಸಂಬಂಧಿಸಿದಂತೆ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿಗೆ ಒಳಪಟ್ಟು, ಮತ್ತು ಗೊತ್ತುಪಡಿಸಿದ ನಿಬಂಧನೆಗಳಿಗೆ ಮತ್ತು ಷರತ್ತುಗಳಿಗೆ ಒಳಪಟ್ಟು, ಬೇರೆಬೇರೆ ಪ್ರದೇಶಗಳಿಗೆ ಅಥವಾ ಬೇರೆಬೇರೆ ಉಲ್ಲಂಘನೆಗಳಿಗೆ ಅಥವಾ ಯಾವ ಉದ್ದೇಶಗಳಿಗೆ,ಪರಿವರ್ತನೆಗೆ ಅಥವಾ ಬಳಕೆಯನ್ನು ಮಾಡಲಾಗಿದೆಯೋ ಆ ವಿವಿಧ ಉದ್ದೇಶಗಳಿಗೆ ಬೇರೆಬೇರೆಯಾಗಿರಬಹುದಾದಂಥ ಗೊತ್ತುಪಡಿಸಿದ ಮೊತ್ತವನ್ನು ಸಂದಾಯ ಮಾಡಿದ ಮೇಲೆ ಅಂಥ ಪತಿವರ್ತನೆಗೆ ಅಥವಾ ಬಳಕೆಗೆ ವಿನಾಯಿತಿ ಕೊಡಬಹುದು.][1]

1. 1985ರ ಅಧಿನಿಯಮ 10ರ ಮೂಲಕ 08.06.1984 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

**97. ಒಂದು ನಿರ್ದಿಷ್ಟ ಉದ್ದೇಶಕ್ಕಾಗಿ ಹೊಂದಿರುವ ಬೇಸಾಯೇತರ ಭೂಮಿಯ ಪರಿವರ್ತನೆ.–** ಬೇಸಾಯೇತರ ನಿರ್ದಿಷ್ಟ ಉದ್ದೇಶಕ್ಕಾಗಿ ಬಳಕೆ ಮಾಡಬೇಕೆಂಬ ಷರತ್ತಿನ ಮೇಲೆ ಭೂಕಂದಾಯವಿಲ್ಲದೆ ಹೊಂದಿರುವ ಭೂಮಿಯನ್ನು ಬೇರೆ ಯಾವುದೇ ಬೇಸಾಯೇತರ ಉದ್ದೇಶಕ್ಕಾಗಿ ಪರಿವರ್ತಿಸುವುದಕ್ಕೆ ಅಥವಾ ಬಳಸುವುದಕ್ಕೆ ಸಂಬಂಧಪಟ್ಟಂತೆ 95ನೇ ಮತ್ತು 96ನೇ ಪ್ರಕರಣಗಳ ಉಪಬಂಧಗಳು ಯಥೋಚಿತ ವ್ಯತ್ಯಾಸಗಳೊಂದಿಗೆ ಅನ್ವಯವಾಗತಕ್ಕದ್ದು.

**98. ನಿಬಂಧನೆಗಳ ಮೇಲೆ ಅನುಮತಿಯನ್ನು ಕೊಡಬಹುದು.–** ರಾಜ್ಯ ಸರ್ಕಾರವು ಈ ಬಗ್ಗೆ ಮಾಡಿರುವ ನಿಯಮಗಳಲ್ಲಿ ನಿರ್ದಿಷ್ಟಪಡಿಸಿರುವ ನಿಬಂಧನೆಗಳಿಗೆ ಮತ್ತು ಷರತ್ತುಗಳಿಗೆ ಅನುಸಾರವಾಗಿ ಮತ್ತು ಒಳಪಟ್ಟು, ವಿಶೇಷ ಸಂದರ್ಭಗಳಲ್ಲಿ ಡೆಪ್ಯುಟಿ ಕಮಿಷನರು ಮತ್ತು ಅಧಿಭೋಗದಾರನು ಪರಸ್ಪರ ಒಪ್ಪಿಕೊಳ್ಳಬಹುದಾದ ನಿಬಂಧನೆಗಳ ಮತ್ತು ಷರತ್ತುಗಳ ಮೇಲೆ ಸದರಿ ಅನುಮತಿಯನ್ನು ಕೊಡುವುದನ್ನು 95ನೇ ಮತ್ತು 96ನೇ ಪ್ರಕರಣಗಳಲ್ಲಿರುವುದು ಯಾವುದೂ ಪ್ರತಿಬಂಧಿಸತಕ್ಕದ್ದಲ್ಲ.

**99. ಅಧಿಭೋಗದಾರರ ಹಕ್ಕುಗಳು.–** ಅಧಿಭೋಗದಾರನು ತನ್ನ ಹಿಡುವಳಿಯುಯಾವ ಅವಧಿಗೆ ಸೀಮಿತವಾಗಿದೆಯೋ ಆ ಅವಧಿಯವರೆಗೆ ಅಥವಾ ಆ ಹಿಡುವಳಿಯು ಯಾವ ಅವದಿಗೂಸೀಮಿತವಾಗಿರದಿದ್ದರೆ ಅಥವಾ ಶಾಶ್ವತವಾಗಿ ಆ ಭೂಮಿಗೆ ಮೋಜಣಿ ವ್ಯವಸ್ಥೆಯನ್ನು ಮಾಡಿದ್ದರೆ, ಈ ಅಧಿನಿಯಮದ ಅಥವಾ ಇದರ ಮೇರೆಗೆ ರಚಿಸಿರುವ ಯಾವುದೇ ನಿಯಮಗಳ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನ ಉಪಬಂಧಗಳಿಗನುಸಾರವಾಗಿ ಆ ಭೂಮಿಗೆ ಆ ಭೂ ಕಂದಾಯವಾಗಿ ಬರಬೇಕಾದ ಮೊಬಲಗನ್ನು ಸಂದಾಯ ಮಾಡಬೇಕೆಂಬ ಷರತ್ತನ್ನು ವಿಧಿಸಿದ್ದರೆ ಮತ್ತು ಅಧಿಭೋಗದಾರನ ಹಿಡುವಳಿಗೆ ಕಾನೂನುಬದ್ಧವಾಗಿ ವಿಧಿಸಿದ ಇತರ

ಯಾವುದೇ ನಿಬಂಧನೆಗಳನ್ನು ಅಥವಾ ಷರತ್ತುಗಳನ್ನು ಪಾಲಿಸಿದಾಗ ಅಧಿಭೋಗದಾರನು, ತನ್ನ ಭೂಮಿಯನ್ನು ಬಳಸಲು ಅಥವಾ ಅಧಿಭೋಗಿಸಲು ಹಕ್ಕುಳ್ಳವನಾಗಿರುತ್ತಾನೆ:

ಪರಂತು, ವರ್ಗಾವಣೆ ಮಾಡಿರದ ಮತ್ತು ಅಧಿಭೋಗದಲ್ಲಿರದ ಯಾವುದೇ ಭೂಮಿಯನ್ನು ಅಧಿಭೋಗಿಸಲು, ಈ ಬಗ್ಗೆ ರಾಜ್ಯ ಸರಕಾರವು ಮಾಡಿದ ನಿಯಮಗಳಿಗೊಳಪಟ್ಟು, ಡೆಪ್ಯುಟಿ ಕಮಿಷನರು ತಾನು ನಿಯಮಿಸಬಹುದಾದಂಥ ಅವಧಿಯವರೆಗೆ ಮತ್ತು ಅಂಥ ಷರತ್ತುಗಳ ಮೇಲೆ ಯಾರೇವ್ಯಕ್ತಿಗೆ ಯಾವುದೇ ಸಮಯದಲ್ಲಿ ಅನುಮತಿ ಕೊಡುವುದನ್ನು ಈ ಪ್ರಕರಣದಲ್ಲಿರುವ ಅಥವಾ ಇತರ ಯಾವುದೇ ಪ್ರಕರಣದಲ್ಲಿರುವ ಯಾವುದೂ ಕಾನೂನು ಬಾಹಿರವಾದುದನ್ನಾಗಿ ಮಾಡತಕ್ಕದ್ದಲ್ಲ; ಅಥವಾ ಅದನ್ನು ಕಾನೂನುಬಾಹಿರವಾದುದನ್ನಾಗಿ ಮಾಡುತ್ತದೆಂದು ಯಾವಾಗಲೂ ಭಾವಿಸತಕ್ಕದ್ದಲ್ಲ ಮತ್ತು ಅಂಥ ಯಾವುದೇ ಸಂದರ್ಭಧಲ್ಲಿ, ಆ ಭೂಮಿಗೆ ಮೋಜಣಿಗೆ ವ್ಯವಸ್ಥೆ ಮಾಡಿರಲಿ ಅಥವಾ ಮಾಡಿರದಿರಲಿ, ಅಧಿಭೋಗವನ್ನು ಹಾಗೆ ನಿಯಮಿಸಲಾದ ಅವಧಿಯವರೆಗೆ ಮಾತ್ರ ಮತ್ತು ಅಂಥ ಷರತ್ತುಗಳಿಗೊಳಪಟ್ಟು ಹೊಂದಿರತಕ್ಕದ್ದು.

**100. ಗೊತ್ತುಪಡಿಸಿದ ಪ್ರಾಧಿಕಾರದ ಮಂಜೂರಾತಿಯಿಲ್ಲದೆ ಅಧಿಭೋಗವು ವರ್ಗಾವಣೆಯಾಗತಕ್ಕದ್ದಲ್ಲ ಅಥವಾ ಸಿವಿಲ್ ನ್ಯಾಯಾಲಯದ ಕ್ರಮಗಳಿಗೆ ಒಳಪಡತಕ್ಕದ್ದಲ್ಲ.**–ಗೊತ್ತುಪಡಿಸಿದ ಪ್ರಾಧಿಕಾರದಿಂದ ಮುಂಚಿತವಾಗಿ ಮಂಜೂರಾತಿ ಪಡೆಯದೆಯೇ ಅಧಿಭೋಗವವನ್ನು ವರ್ಗಾವಣೆ ಮಾಡಲಾಗದ್ದೆಂಬ, ಯಾವುದೇ ಸಂದರ್ಭದಲ್ಲಿ ಮತ್ತು ಸಿವಿಲ್ ನ್ಯಾಯಾಲಯವು ಮಾಡಿದ ಅಥವಾ ಅದರ ಆದೇಶದ ಮೇರೆಗೆ ಮಾಡಿದ ವರ್ಗಾವಣೆಗೆ ಅಥವಾ ನ್ಯಾಯಾಲಯದ ಡಿಕ್ರಿಗೆ ಅಥವಾ ಆದೇಶಕ್ಕೆ ಒಳಪಟ್ಟಿರುವ ವರ್ಗಾವಣೆಗೆ ಅಂಥ ಮಂಜೂರಾತಿಯನ್ನು ಕೊಡದಿರುವ ಯಾವುದೇ ಸಂದರ್ಭದಲ್ಲಿ,–

(ಎ) ಅಂಥ ಅಧಿಭೋಗವು ಯಾವುದೇ ನ್ಯಾಯಾಲಯದ ಕ್ರಮಕ್ಕೆ ಒಳಪಡತಕ್ಕದ್ದಲ್ಲ ಮತ್ತು ಅಂಥ ವರ್ಗಾವಣೆಯು ಅನೂರ್ಜಿತವಾಗತಕ್ಕದ್ದು; ಮತ್ತು

(ಬಿ) ಗೊತ್ತುಪಡಿಸಿದ ಪ್ರಾಧಿಕಾರದಿಂದ ಮುಂಚಿತವಾಗಿ ಮಂಜೂರಾತಿ ಪಡೆಯದೆಯೇ ಅಂಥ ಯಾವುದೇ ಅಧಿಭೋಗವು ವರ್ಗಾವಣೆ ಮಾಡಲಾಗದ್ದೆಂಬ ಬಗ್ಗೆ ಮತ್ತು ಅಂಥ ಮಂಜೂರಾತಿಯನ್ನು ಕೊಟ್ಟಿಲ್ಲವೆಂಬ ಬಗ್ಗೆ [1][ತಹಸೀಲ್ದಾರನ][1] ಸಹಿ ಮತ್ತು ಮುದ್ರೆ ಇರುವ ಪ್ರಮಾಣಪತ್ರವು ನ್ಯಾಯಾಲಯಕ್ಕೆ ತಲುಪಿದಾಗ, ಆ ನ್ಯಾಯಾಲಯವು, ಅಂಥ ಅಧಿಭೋಗದ ಮೇಲಿರುವ ಜಪ್ತಿಯನ್ನು ಅಥವಾ ಇತರ ಕ್ರಮವನ್ನು ತೆಗೆದುಹಾಕತಕ್ಕದ್ದು ಅಥವಾ ಅಂಥ ಅಧಿಭೋಗದ ಮಾರಾಟವನ್ನು ಅಥವಾ ಅದರ ಮೇಲೆ ಪರಿಣಾಮ ಉಂಟುಮಾಡುವ ಯಾವುದೇ ಮಾರಾಟವನ್ನು ತಳ್ಳಿ ಹಾಕತಕ್ಕದ್ದು.

1. 1970ರ ಅಧಿನಿಯಮ 5ರ ಮೂಲಕ 23.10.1969 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**101. ಅಧಿಭೋಗದ ಹಕ್ಕು ವರ್ಗಾವಣೀಯವೂ ಮತ್ತು ವಾರಸುದಾರರು ಪಡೆಯುವಂಥದ್ದೂ ಆಗಿರತಕ್ಕದ್ದು.**– 87ನೇ ಪ್ರಕರಣದಲ್ಲಿರುವ ಉಪಬಂಧಗಳಿಗೆ ಹಾಗೂ ಕಾನೂನು ಬದ್ಧವಾದ ಹಿಡುವಳಿಗೆವಿಧಿಸಿರುವ ಯಾವುದೇ ಷರತ್ತುಗಳಿಗೆ ಒಳಪಟ್ಟು ಮತ್ತು ಕಾನೂನಿನಿಂದ ಅನ್ಯಥಾ ಉಪಬಂಧಿಸಿರುವುದನ್ನುಳಿದು ಅಧಿಭೋಗವು ವಾರಸುದಾರರು ಪಡೆಯುವಂಥದ್ದೂ ಮತ್ತು ವರ್ಗಾವಣೆಯಾಗುವಂಥದ್ದೆಂದು ಭಾವಿಸತಕ್ಕದ್ದು.

**102. ಬಿಟ್ಟುಕೊಡುವಿಕೆ.**– ಯಾವುದೇ ವರ್ಷದ 31ನೇ ಮಾರ್ಚಿಗೆ ಮುಂಚೆ ಅಥವಾ ಈ ಬಗ್ಗೆ ರಾಜ್ಯ ಸರ್ಕಾರವು ಕಾಲಕಾಲಕ್ಕೆ ನಿಯಮಿಸಬಹುದಾದಂಥ ಇತರ ದಿನಾಂಕಕ್ಕೆ ಮುಂಚೆ ಅಧಿಭೋಗದಾರನು ಭೂಮಿಯು ಇರುವ ತಾಲೂಕಿನ ತಹಶೀಲ್ದಾರನಿಗೆ ಲಿಖಿತ ನೋಟೀಸನ್ನು ಕೊಡುವುದರ ಮೂಲಕ ತನ್ನ ಭೂಮಿಯನ್ನು ರಾಜ್ಯ ಸರ್ಕಾರಕ್ಕೆ ಬಿಟ್ಟು ಕೊಡಬಹುದು; ಆದರೆ ಹಾಗೆ ಬಿಟ್ಟು ಕೊಡುವಿಕೆಯು, ಅಧಿಭೋಗದಾರನು (ರಾಜ್ಯ ಸರ್ಕಾರದ ಅಥವಾ ಅಧಿಭೋಗದಾರನ ಹೊರತು) ಇತರ ಯಾರೇ ವ್ಯಕ್ತಿಯ ಪರವಾಗಿ ಕಾನೂನುಬದ್ಧವಾಗಿ ಅಸ್ತಿತ್ವದಲ್ಲಿರುವ ಯಾವುದೇ ಹಕ್ಕುಗಳಿಗೆ, ಹಿಡುವಳಿಗಳಿಗೆ, ಋಣಭಾರಗಳಿಗೆ, ಅಥವಾ ನ್ಯಾಯಸಮ್ಮತ ಹಕ್ಕುಗಳಿಗೆ ಒಳಪಟ್ಟಿರಬೇಕು ಮತ್ತು ಹಾಗೆ ಬಿಟ್ಟುಕೊಡುವಿಕೆಯು ಚಾಲ್ತಿ ವರ್ಷದ ಕೊನೆಯಲ್ಲಿ ಪರಿಣಾಮಕಾರಿಯಾಗತಕ್ಕದ್ದು:

ಪರಂತು, ಪೂರ್ತಿ ಸರ್ವೇ ನಂಬರಿನ ಅಥವಾ ಸರ್ವೇ ನಂಬರಿನ ಪೋಡಿನ ವಿಸ್ತೀರ್ಣಕ್ಕಿಂತ ಕಡಿಮೆ ಇರುವ ಯಾವುದೇ ಭೂಮಿಯ ಭಾಗವನ್ನು ಡೆಪ್ಯುಟಿ ಕಮಿಷನರಿಂದ ಮುಂಚಿತವಾಗಿ ಅನುಮೋದನೆ ಪಡೆಯದೆಯೇ ಬಿಟ್ಟು ಕೊಡುವಂತಿಲ್ಲ.

**103. ಬಿಟ್ಟುಕೊಟ್ಟ ಅಥವಾ ಮುಟ್ಟುಗೋಲು ಹಾಕಿಕೊಂಡ ಭೂಮಿಗೆ ಅಥವಾ ಬೇಸಾಯದ ಉದ್ದೇಶಕ್ಕಾಗಿ ಬಳಸಿದ ಭೂಮಿಗೆ ಹೋಗುವ ದಾರಿಯ ಹಕ್ಕು.**– (1) ಈ ಅಧಿನಿಯಮದ ಉಪಬಂಧಗಳ ಮೇರೆಗೆ ಯಾವುದೇ ಭೂಮಿಯನ್ನು

ಬಿಟ್ಟು ಕೊಟ್ಟಿದ್ದರೆ ಅಥವಾ ಅದು ಮುಟ್ಟುಗೋಲು ಆಗಿದ್ದರೆ ಮತ್ತು ಅಂಥ ಭೂಮಿಗೆ ಹೋಗುವ ದಾರಿಯು ಬೇರೆ ಭೂಮಿಯಲ್ಲಿ ಹಾಯುತ್ತಿದ್ದರೆ, ಬಿಟ್ಟು ಕೊಟ್ಟಿರುವ ಅಥವಾ ಮುಟ್ಟುಗೋಲು ಆದ ಭೂಮಿಯ ಮುಂಬರುವ ಹಿಡುವಳಿದಾರನಿಗೂ ಅಂಥ ಬೇರೆ ಭೂಮಿಯಲ್ಲಿ ಹಾಯ್ದು ಹೋಗುವ ದಾರಿಯ ಹಕ್ಕು ಮುಂದುವರಿಯತಕ್ಕದ್ದು.

(2) ಬೇಸಾಯದ ಉದ್ದೇಶಗಳಿಗಾಗಿ ಬಳಸುವ ಭೂಮಿಗೆ ಇರುವ ಮತ್ತು ಈ ಅಧಿನಿಯಮದ ಮೇರೆಗೆ ಇಟ್ಟಿರುವ ಯಾವುದೇ ನಕಾಶೆಯಲ್ಲಿ ಅಥವಾ ಭೂದಾಖಲೆಯಲ್ಲಿ ಸರಿಯಾಗಿ ನಮೂದಿಸಿರುವ ದಾರಿಯ ಹಕ್ಕಿಗೆ ಅಕ್ರಮವಾಗಿ ಅಡ್ಡಿ ಅಥವಾ ಆತಂಕ ಉಂಟು ಮಾಡಿದರೆ, ಆದರಿಂದ ಬಾಧಿತನಾದ ಯಾರೇ ವ್ಯಕ್ತಿಯು, ಅಂಥ ಅಡ್ಡಿ ಅಥವಾ ಆತಂಕವನ್ನು ನಿವಾರಿಸಲು ಡೆಪ್ಯುಟಿ ಕಮಿಷನರಿಗೆ ಅರ್ಜಿಯನ್ನು ಸಲ್ಲಿಸಬಹುದು. ಡೆಪ್ಯುಟಿ ಕಮಿಷನರು, ಸಂಕ್ಷಿಪ್ತ ವಿಚಾರಣೆ ನಡೆಸಿದ ತರುವಾಯ, ಆ ಅಡ್ಡಿಯನ್ನು ನಿವಾರಿಸಲು ಅಥವಾ ಆತಂಕವನ್ನು ದೂರ ಮಾಡಲು ಆದೇಶ ಮಾಡಬಹುದು ಮತ್ತು ಅಂಥ ಆದೇಶವನ್ನು ಜಾರಿಗೆ ತರುವುದಕ್ಕೆ ಅವಶ್ಯಕವಾಗಬಹುದಾದಂಥ ಕ್ರಮವನ್ನು ತೆಗೆದುಕೊಳ್ಳಬಹುದು.

(3) ಉಪಪ್ರಕರಣ (2)ರ ಮೇರೆಗಿನ ಡೆಪ್ಯುಟಿ ಕಮಿಷನರ ಆದೇಶವು, ಸಿವಿಲ್ ದಾವೆಯಲ್ಲಿ ಆಗುವ ತೀರ್ಮಾನಕ್ಕೊಳಪಟ್ಟು, ಅಂತಿಮವಾಗಿರತಕ್ಕದ್ದು.

**104. ಭೂಮಿಯನ್ನು ಅನಧಿಕೃತವಾಗಿ ಅಧಿಭೋಗಿಸುತ್ತಿರುವ ವ್ಯಕ್ತಿಯನ್ನು ಕೂಡಲೇ ಹೊರದೂಡುವುದು.**–[1][ಕರ್ನಾಟಕ][1] ಸಾರ್ವಜನಿಕ ಆವರಣಗಳ (ಅನಧಿಕೃತ ಅಧಿಭೋಗದಾರರನ್ನು ಹೊರದೂಡುವಿಕೆ) ಅಧಿನಿಯಮ, 1961 ([1][ಕರ್ನಾಟಕ][1] ಅಧಿನಿಯಮ 1962ರ 3)ರಲ್ಲಿ ಏನೇ ಒಳಗೊಂಡಿದ್ದರೂ, 91ನೇ, 98ನೇ ಅಥವಾ 99ನೇ ಪ್ರಕರಣಗಳ ಮೇರೆಗೆ ಕಾನೂನು ಬದ್ಧವಾಗಿ ಹಿಡುವಳಿಗೆವಿಧಿಸಿರುವ ಯಾವುದೇ ಷರತ್ತಿನ ಕಾರಣದಿಂದಾಗಿ ವರ್ಗಾವಣೀಯವಲ್ಲದ ಯಾವುದೇ ಭೂಮಿಯನ್ನು ಅನಧಿಕೃತವಾಗಿ ಅಧಿಭೋಗಿಸುವ ಅಥವಾ ಅಕ್ರಮವಾಗಿ ಸ್ವಾಧೀನದಲ್ಲಿಟ್ಟುಕೊಂಡಿರುವ ಯಾರೇ ವ್ಯಕ್ತಿಯನ್ನು [2][ತಹಶೀಲ್ದಾರನು][2] ಕೂಡಲೇ ಹೊರದೂಡಬಹುದು ಮತ್ತು ಮರಗಳೂ ಸೇರಿದಂತೆ ಆ ಭೂಮಿಯ ಮೇಲಿರುವ ಯಾವುದೇ ಬೆಳೆಯು ಮುಟ್ಟುಗೋಲಿಗೆ ಗುರಿಯಾಗತಕ್ಕದ್ದು ಮತ್ತು ಆ ಭೂಮಿಯ ಮೇಲೆ ಕಟ್ಟಿರುವ ಯಾವುದೇ ಕಟ್ಟಡವನ್ನು ಅಥವಾ ಇತರ ನಿರ್ಮಾಣವನ್ನು [2][ತಹಶೀಲ್ದಾರನು][2]ಯುಕ್ತವೆಂದು ಭಾವಿಸಬಹುದಾದ ಲಿಖಿತ ನೋಟೀಸನ್ನು ಕೊಟ್ಟ ತರುವಾಯವೂ ಅವನು ತೆಗೆದು ಹಾಕದಿದ್ದರೆ, ಅದು ಮುಟ್ಟುಗೋಲಿಗೆ ಅಥವಾ ಕೂಡಲೇ ತೆಗೆದು ಹಾಕುವಿಕೆಗೆ ಗುರಿಯಾಗತಕ್ಕದ್ದು.

1. 1973ರ ಕರ್ನಾಟಕ ಕಾನೂನುಗಳ ಆದೇಶದ ಅಳವಡಿಕೆಗಳ ಮೂಲಕ 01.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.
2. 1970ರ ಅಧಿನಿಯಮ 5ರ ಮೂಲಕ 23.10.1969 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**105. ಅಧಿಭೋಗದ ಹಕ್ಕಿನ ಮುಟ್ಟುಗೋಲನ್ನು ತಡೆಯಲು ಅಧಿಭೋಗದಾರರಲ್ಲದ ಹಿತಾಸಕ್ತ ವ್ಯಕ್ತಿಗಳು ಭೂಕಂದಾಯವನ್ನು ಸಂದಾಯ ಮಾಡಬಹುದು.**–(1) ಅಧಿಭೋಗದ ಬಗ್ಗೆ ಬರಬೇಕಾದ ಭೂ ಕಂದಾಯವನ್ನು ಅದಿಭೋಗದಾರನು ಸಂದಾಯ ಮಾಡದಿರುವ ಕಾರಣದಿಂದ 87ನೇ ಪ್ರಕರಣದ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಕಾನೂನಿನ ಉಪಬಂಧಗಳ ಮೇರೆಗೆ ಅಧಿಭೋಗದ ಮುಟ್ಟುಗೋಲನ್ನು ತಡೆಯುವುದಕ್ಕಾಗಿ, ಭೂ ಕಂದಾಯವಾಗಿ ಸಂದಾಯ ಮಾಡಬೇಕಾದ ಎಲ್ಲ ಮೊಬಲಗುಗಳನ್ನು ಹಿತಾಸಕ್ತಿಯುಳ್ಳ ಯಾರೇ ವ್ಯಕ್ತಿಯು ಅಂಥ ಅಧಿಭೋಗದಾರನ ಪರವಾಗಿ ಸಂದಾಯ ಮಾಡುವುದು ಕಾನೂನು ಸಮ್ಮತವಾಗಿರತಕ್ಕದ್ದು ಮತ್ತು ಅದನ್ನು ಹಾಗೆ ಸರಿಯಾಗಿ ಸಂದಾಯ ಮಾಡಿದಾಗ [1][ತಹಶೀಲ್ದಾರನು][1]ಅದನ್ನು ಸ್ವೀಕರಿಸತಕ್ಕದ್ದು.

1. 1970ರ ಅಧಿನಿಯಮ 5ರ ಮೂಲಕ 23.10.1969 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) ಅಧಿಭೋಗದಾರನು ಅಥವಾ ಹಿಡುವಳಿದಾರನು ಬಾಕಿಯಿರುವ ಭೂಕಂದಾಯವನ್ನು ಸಂದಾಯ ಮಾಡಲು ತಪ್ಪಿದ್ದಾನೆಂದು ಹಾಗೂ ಅದರಿಂದಾಗಿ, ಅಧಿಭೋಗವು ಅಥವಾ ಹಿಡುವಳಿಯು ಮುಂದುವರಿಯಲು ಇಚ್ಛಿಸುವ ಇತರ ವ್ಯಕ್ತಿಗಳಿಗೆ ನಷ್ಟ ಉಂಟು ಮಾಡುವುದಕ್ಕಾಗಿ ಅಥವಾ ಮೋಸ ಮಾಡುವುದಕ್ಕಾಗಿ ಅದು ಮುಟ್ಟುಗೋಲಿಗೆ ಒಳಗಾಗುವಂತೆ ಮಾಡಿದ್ದಾನೆಂದು ಅಥವಾ ಅಧಿಭೋಗದ ಹಕ್ಕಿನ ಅಥವಾ ಹಿಡುವಳಿಯ ಮಾರಾಟದಿಂದ ಅಂಥ ಇತರ ವ್ಯಕ್ತಿಗಳಿಗೆ ತೀವ್ರವಾಗಿ ಬಾಧಕವಾಗುವುದೆಂದು [1][ತಹಸೀಲ್ದಾರನಿಗೆ][1] ಕಂಡು ಬಂದರೆ, [1][ತಹಶೀಲ್ದಾರನು][1]ಬಾಕಿದಾರನಾದ ಅಧಿಭೋಗದಾರನ ಅಥವಾ ಹಿಡುವಳಿದಾರನ ಹಿತಾಸಕ್ತಿಯನ್ನು ಮಾತ್ರವೇ ಮುಟ್ಟುಗೋಲು ಹಾಕಲು ಮತ್ತು ಅದನ್ನು ಮಾರಲು ಅಥವಾ ವಿಲೇವಾರಿ ಮಾಡಲು ಆದೇಶ ಮಾಡಬಹುದು:

1. 1970ರ ಅಧಿನಿಯಮ 5ರ ಮೂಲಕ 23.10.1969 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

ಪರಂತು, ಬಾಕಿದಾರನಿಗೆ ಅಧಿಭೋಗ ಅಥವಾ ಹಿಡುವಳಿಯಲ್ಲಿ ಇರುವ ಹಿತಾಸಕ್ತಿಮಟ್ಟಿಗೆ ಮಾತ್ರವೇ ಅಂಥ ಮಾರಾಟ ಅಥವಾ ವಿಲೇವಾರಿ ಆದನಂತರವೂ ಉಳಿಯಬಹುದಾದ ಯಾವುದೇ ಬಾಕಿಯನ್ನು ಸಂದಾಯ ಮಾಡಲು ಹಿತಾಸಕ್ತಿಯುಳ್ಳ ಬೇರೆ ವ್ಯಕ್ತಿಗಳು ಮುಚ್ಚಳಿಕೆ ಬರೆದು ಕೊಡತಕ್ಕದ್ದು ಮತ್ತು ಅಂಥ ಮುಚ್ಚಳಿಕೆಯನ್ನು ಪಾಲಿಸುವ ಬಗ್ಗೆ ಸಾಕಷ್ಟು ಭದ್ರತೆಯನ್ನು ಒದಗಿಸತಕ್ಕದ್ದು.

(3) ಹಿತಾಸಕ್ತಿಯುಳ್ಳ ವ್ಯಕ್ತಿಗಳ ಹಕ್ಕನ್ನು, ಸಕ್ಷಮ ಅಧಿಕಾರ ವ್ಯಾಪ್ತಿ ಉಳ್ಳ ನ್ಯಾಯಾಲಯದಲ್ಲಿ ಆ ವ್ಯಕ್ತಿಗಳ ನಡುವಣ ದಾವೆಯಲ್ಲಿ ಸಾಬೀತುಪಡಿಸಬಹುದಾದ್ದರಿಂದ, ಈ ಪ್ರಕರಣದ ಉಪಬಂಧಗಳ ಮೇರೆಗೆ ಅಧಿಕೃತಗೊಳಿಸಿದ ಅಥವಾ ಮಾಡಿದ ಯಾವುದೂ ಆ ಹಕ್ಕಿಗೆ ಬಾಧಕವಾಗತಕ್ಕದ್ದಲ್ಲ.

## ಅಧ್ಯಾಯ-IX

### ರೆವಿನ್ಯೂ ಮೋಜಣಿ, ಸರ್ವೇ ನಂಬರುಗಳ ವಿಭಾಗ (ಪೋಡು) ಮತ್ತು ಎಸ್ಟೇಟುಗಳ ವಿಭಜನೆ

**106. ರಾಜ್ಯದ ಯಾವುದೇ ಭಾಗದಲ್ಲಿ ರಾಜ್ಯ ಸರ್ಕಾರವು ರೆವಿನ್ಯೂ ಮೋಜಣಿಯನ್ನು ಮಾಡಿಸಬಹುದು.–** (1) ಭೂ ಕಂದಾಯದ ನಿರ್ಧರಣೆಗಾಗಿ ಮತ್ತು ಅದಕ್ಕೆ ಸಂಬಂಧಪಟ್ಟ ಹಕ್ಕುಗಳನ್ನು ದಾಖಲಿಸುವುದಕ್ಕಾಗಿ ಮತ್ತು ಸಂರಕ್ಷಿಸುವುದಕ್ಕಾಗಿ ಅಥವಾ ಅದೇ ರೀತಿಯ ಇತರ ಯಾವುದೇ ಉದ್ದೇಶಕ್ಕಾಗಿ, ರಾಜ್ಯ ಸರ್ಕಾರವು ರಾಜ್ಯದ ಯಾವುದೇ ಭಾಗದಲ್ಲಿರುವ ಭೂಮಿಯನ್ನು ಮೋಜಣಿ ಮಾಡಲು ನಿರ್ದೇಶಿಸಬಹುದು ಮತ್ತು ಅಂಥ ಮೋಜಣಿಯನ್ನು ರೆವಿನ್ಯೂ ಮೋಜಣಿಯೆಂದು ಕರೆಯತಕ್ಕದ್ದು, ಅಂಥ ಮೋಜಣಿಯನ್ನು ಸರ್ವೇ ಸಾಧಾರಣವಾಗಿ ಯಾವುದೇ ಗ್ರಾಮದ, ಪಟ್ಟಣದ ಅಥವಾ ನಗರದ ಭೂಮಿಗಳಿಗೆ ಅಥವಾ ರಾಜ್ಯ ಸರ್ಕಾರವು ನಿರ್ದೇಶಿಸಬಹುದಾದಂಥ ಭೂಮಿಗೆ ಮಾತ್ರ ವಿಸ್ತರಿಸತಕ್ಕದ್ದು; ಮತ್ತು ರಾಜ್ಯ ಸರ್ಕಾರದ ಆದೇಶಗಳಿಗೊಳಪಟ್ಟು ಅಂಥ ಯಾವುದೇ ಮೋಜಣಿಯನ್ನು ನಡೆಸುವ ಅಧಿಕಾರಿಗಳಿಗೆ, ಯಾವುದೇ ಭೂಮಿಗೆ ಅಂಥ ಕಂದಾಯ ವ್ಯವಸ್ಥೆಯನ್ನು ಅನ್ವಯಿಸುವುದು ಸರಿಯಲ್ಲವೆಂದು ಕಂಡು ಬಂದಲ್ಲಿ, ಅವರು ಅಂಥ ಯಾವುದೇ ಭೂಮಿಯನ್ನು ಅಂಥ ಕಂದಾಯ ವ್ಯವಸ್ಥೆಯ ಮೋಜಣಿಯಿಂದ ಹೊರತುಪಡಿಸಬಹುದು.

(2) ಉಪಪ್ರಕರಣ (1)ರ ಮೇರೆಗೆ ಪ್ರತಿಯೊಂದು ರೆವಿನ್ಯೂ ಮೋಜಣಿಯ ನಿಯಂತ್ರಣವು ರಾಜ್ಯ ಸರ್ಕಾರದಲ್ಲಿ ನಿಹಿತವಾಗಿರತಕ್ಕದ್ದು ಮತ್ತು ಅದನ್ನು ರಾಜ್ಯ ಸರ್ಕಾರವು ಚಲಾಯಿಸತಕ್ಕದ್ದು.

**107. ಭೂ ಹಿಡುವಳಿದಾರರಿಂದ ಸಹಾಯ ಬೇಕೆಂದು ಕೇಳಲು ಮೋಜಣಿ ಅಧಿಕಾರಿಯ ಅಧಿಕಾರ.–** 106ನೇ ಪ್ರಕರಣದ ಮೇರೆಗಿನ ಯಾವುದೇ ರೆವಿನ್ಯೂ ಮೋಜಣಿಯನ್ನು ನಡೆಸಲು ಅಥವಾ ಅದರಲ್ಲಿ ಭಾಗವಹಿಸಲು ಪ್ರತಿನಿಯೋಜಿತನಾದ ಮೋಜಣಿ ಅಧಿಕಾರಿಯು, ವಿಶೇಷ ಆದೇಶದ ಮೂಲಕ ಅಥವಾ ನಿಯಮಿಸಬಹುದಾದ ರೀತಿಯಲ್ಲಿ ಪ್ರಕಟಿಸಬೇಕಾದ ಸಾಮಾನ್ಯ ನೋಟೀಸಿನ ಮೂಲಕ ಅಥವಾ ಸಮನಿನ ಮೂಲಕ ರೆವಿನ್ಯೂ ಮೋಜಣಿಯ ವ್ಯಾಪ್ತಿಯೊಳಗಿರುವ ಭೂಮಿಗಳ ಹಿಡುವಳಿದಾರರು ಅಥವಾ ಅವುಗಳಲ್ಲಿ ಹಿತಾಸಕ್ತಿಯುಳ್ಳ ಎಲ್ಲ ವ್ಯಕ್ತಿಗಳು ಅಂಥ ಭೂಮಿಯ ಅಳತೆ ಅಥವಾ ವರ್ಗೀಕರಣ ಇವುಗಳಿಗೆ ಸಹಾಯ ಮಾಡುವುದಕ್ಕಾಗಿ ಹಾಜರಿರಬೇಕೆಂದು ಅಗತ್ಯಪಡಿಸಬಹುದು ಮತ್ತು ಅಂಥ ರೆವಿನ್ಯೂ ಮೋಜಣಿಗೆ ಸಂಬಂಧಿಸಿದ ಉದ್ದೇಶಗಳಿಗಾಗಿ ಮಜೂರಿಯ ಮೇಲೆ ಕಾರ್ಮಿಕರನ್ನು ನೇಮಿಸಿಕೊಂಡಾಗ, ಅಂಥ ಮೋಜಣಿ ಅಧಿಕಾರಿಯು ಎಲ್ಲ ಸಂಭವನೀಯ ವೆಚ್ಚಗಳ ಸಹಿತವಾಗಿ ಅದಕ್ಕೆ ತಗಲಿದ ಖರ್ಚನ್ನು ನಿರ್ಧರಣೆ ಮಾಡಿ, ಅದನ್ನು ಮೋಜಣಿ ಮಾಡಿದ ಭೂಮಿಯ ಮೇಲೆ ಹಂಚಿ ಹಾಕಬಹುದು ಮತ್ತು ಅಂಥ ಖರ್ಚುಗಳನ್ನು ಮತ್ತು ವೆಚ್ಚಗಳನ್ನು ಅಂಥ ಭೂಮಿಗಳಿಗೆ ಬರಬೇಕಾದ ಭೂಕಂದಾಯದಂತೆ ವಸೂಲು ಮಾಡತಕ್ಕದ್ದು.

**108. ಸರ್ವೇ ನಂಬರಿನ ಕನಿಷ್ಠ ವಿಸ್ತೀರ್ಣ.–** (1)ಬೇಸಾಯದ ಉದ್ದೇಶಗಳಿಗಾಗಿ ಮಾತ್ರ ಬಳಸುವ ಭೂಮಿಯನ್ನು ಒಳಗೊಂಡಿರುವ ಯಾವುದೇ ಸರ್ವೇ ನಂಬರು, ಕಾಲಕಾಲಕ್ಕೆ ರಾಜ್ಯ ಸರ್ಕಾರದ ಮಂಜೂರಾತಿಯನ್ನು ಪಡೆದು, [1][ಮೋಜಣಿ, ಕಂದಾಯ ವ್ಯವಸ್ಥೆ ಮತ್ತು ಭೂ ದಾಖಲೆಗಳ ನಿರ್ದೇಶಕನು][1] ಪ್ರತಿಯೊಂದು ಜಿಲ್ಲೆಯಲ್ಲಿಯಲ್ಲಿರುವ ವಿವಿಧ ವರ್ಗದ ಭೂಮಿಗಳಿಗಾಗಿ ಗೊತ್ತುಪಡಿಸುವ ಕನಿಷ್ಠ ವಿಸ್ತೀರ್ಣಕ್ಕಿಂತ ಕಡಿಮೆ ವಿಸ್ತೀರ್ಣದ್ದಾಗಿರತಕ್ಕದ್ದಲ್ಲ:

1. 1973ರ ಕರ್ನಾಟಕ ಕಾನೂನುಗಳ ಆದೇಶದ ಅಳವಡಿಕೆಗಳ ಮೂಲಕ 01.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

ಪರಂತು,–

(ಎ) ಹಾಗೆ ಗೊತ್ತುಪಡಿಸಲಾದ ಕನಿಷ್ಠ ವಿಸ್ತೀರ್ಣಕ್ಕಿಂತ ಕಡಿಮೆ ವಿಸ್ತೀರ್ಣವುಳ್ಳ ಹಾಗೂ ಈಗಾಗಲೇ ರೂಪಿಸಿರುವ ಸರ್ವೇ ನಂಬರುಗಳು ಅಥವಾ ಸಾಮಾನ್ಯವಾಗಿ ಅಥವಾ ಯಾವುದೇ ವಿಶಿಷ್ಟ ಸಂದರ್ಭದಲ್ಲಿ ಮೋಜಣಿ, [1][ಕಂದಾಯ ವ್ಯವಸ್ಥೆ ಮತ್ತು ಭೂ ದಾಖಲೆಗಳ ನಿರ್ದೇಶಕನು][1]ಈ ಬಗ್ಗೆ ಕೊಟ್ಟಿರುವ ಅಧಿಕಾರದ ಮೇರೆಗೆ ಹಾಗೆ ರೂಪಿಸಬಹುದಾದ

ಸರ್ವೇ ನಂಬರುಗಳು ಮತ್ತು ಭೂದಾಖಲೆಗಳಲ್ಲಿ ಪ್ರತ್ಯೇಕವಾಗಿ ಮಾನ್ಯತೆ ಹೊಂದಿದ ಯಾವುದೇ ಸರ್ವೇ ನಂಬರು, ಅದರ ವಿಸ್ತೀರ್ಣವು ಎಷ್ಟೇ ಇದ್ದರೂ, ಅವುಗಳನ್ನು ಕಾನೂನೂಬದ್ಧ ಪ್ರಾಧಿಕಾರದ ಮೇರೆಗೆ ರೂಪಿತವಾದವುಗಳೆಂದು ಭಾವಿಸತಕ್ಕದ್ದು; ಮತ್ತು

1. 1973ರ ಕರ್ನಾಟಕ ಕಾನೂನುಗಳ ಆದೇಶದ ಅಳವಡಿಕೆಗಳ ಮೂಲಕ 01.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

(ಬಿ) ಕೃಷಿ ಯೋಗ್ಯವಾದ ಭೂಮಿಯ ಯಾವುದೇ ಭಾಗವನ್ನು ಯಾವುದೇ ಬೇಸಾಯೇತರ ಉದ್ದೇಶಕ್ಕಾಗಿ 95ನೇ ಅಥವಾ 98ನೇ ಪ್ರಕರಣಗಳ ಉಪಬಂಧಗಳ ಮೇರೆಗೆ ಬಳಸಲು ಅನುಮತಿ ಕೊಟ್ಟಿರುವಾಗ ಅಥವಾ ಭೂಮಿಯ ಯಾವುದೇ ಭಾಗವನ್ನು 71ನೇ ಪ್ರಕರಣದ ಮೇರೆಗೆ ವಿಶೇಷವಾಗಿ ಮೀಸಲಿಟ್ಟಿರುವಾಗ ಅಥವಾ ಭೂಮಿಯ ಯಾವುದೇ ಭಾಗವನ್ನು 83ನೇ ಪ್ರಕರಣದ (2)ನೇ ಉಪ ಪ್ರಕರಣದ ಮೇರೆಗೆ ಯಾವುದೇ ಕಂದಾಯವನ್ನು ನಿರ್ಧರಿಸಿರುವಾಗ, ಅಂಥ ಭಾಗವನ್ನು ಡೆಪ್ಯೂಟಿ ಕಮಿಷನರನ ಮಂಜೂರಾತಿ ಪಡೆದು ಯಾವುದೇ ಕಾಲದಲ್ಲಿ ಒಂದು ಪ್ರತ್ಯೇಕವಾದ ಸರ್ವೇ ನಂಬರನ್ನಾಗಿ ರೂಪಿಸಬಹುದು.

**109. ಸರ್ವೇ ನಂಬರುಗಳನ್ನು ಪೋಡುಗಳಾಗಿ ವಿಭಾಗಿಸುವುದು.–** ರಾಜ್ಯದಲ್ಲಿ ಹಿಡುವಳಿಗಳ ತುಂಡೀಕರಣ ನಿರೋಧ ಮತ್ತು ಸಂಯೋಜನೆಯ ಬಗ್ಗೆ ಜಾರಿಯಲ್ಲಿರುವ ಯಾವುದೇ ಕಾನೂನಿನ ಉಪಬಂಧಗಳಿಗೊಳಪಟ್ಟು,–

(1) ಭೂಮಿಯಲ್ಲಿನ ಹಕ್ಕನ್ನು ಕಾನೂನುಬದ್ಧವಾಗಿ ಪಡೆಯುವುದಕ್ಕಾಗಿ ಅಥವಾ ಇತರ ಯಾವುದೇ ಕಾರಣಕ್ಕಾಗಿ ಸರ್ವೇ ನಂಬರುಗಳನ್ನು ಕಾಲಕಾಲಕ್ಕೆ ಮತ್ತು ಯಾವ ಕಾಲದಲ್ಲಾದರೂ ಅಗತ್ಯವಿರಬಹುದಾದಷ್ಟು ಪೋಡುಗಳಾಗಿ ವಿಭಾಗಿಸಬಹುದು;

(2) ಈ ಬಗ್ಗೆ ರಾಜ್ಯ ಸರ್ಕಾರವು ಮಾಡಬಹುದಾದಂಥ ನಿಯಮಗಳ ಮೇರೆಗೆ ಸರ್ವೇ ನಂಬರುಗಳನ್ನು ಪೋಡುಗಳನ್ನಾಗಿ ವಿಭಾಗಿಸುವುದನ್ನು ಮತ್ತು ಪೋಡುಗಳ ಭೂಕಂದಾಯವನ್ನು ಗೊತ್ತುಪಡಿಸುವುದನ್ನು ಕಾರ್ಯರೂಪಕ್ಕೆ ತರತಕ್ಕದ್ದು ಮತ್ತು ಕಾಲಕಾಲಕ್ಕೆ ಪರಿಷ್ಕರಿಸತಕ್ಕದ್ದು:

ಪರಂತು, ಯಾವುದೇ ಸರ್ವೇ ನಂಬರಿನ ಅಥವಾ ಪೋಡಿನ ಒಟ್ಟು ಭೂಕಂದಾಯವನ್ನು ಈ ಅಧಿನಿಯಮದ ಉಪಬಂಧಗಳ ಮೇರೆಗೆ ಯಾವ ಅವಧಿಯ ಬಗ್ಗೆ ಗೊತ್ತು ಮಾಡಲಾಗಿರುವುದೋ ಆ ಅವಧಿಯಲ್ಲಿ, 83ನೇ ಪ್ರಕರಣದ ಮೇರೆಗೆ ಅದು ಮಾರ್ಪಾಟಿಗೆ ಒಳಪಡುವ ಹೊರತು ಹೆಚ್ಚಿಸತಕ್ಕದ್ದಲ್ಲ.

(3) ಅಂಥ ಪೋಡಿನ ವಿಸ್ತೀರ್ಣವನ್ನು ಮತ್ತು ಭೂಕಂದಾಯವನ್ನು ಈ ಬಗ್ಗೆ ರಾಜ್ಯ ಸರ್ಕಾರವು ನಿಯಮಿಸಬಹುದಾದಂಥ ಭೂ ದಾಖಲೆಗಳಲ್ಲಿ ನಮೂದಿಸತಕ್ಕದ್ದು.

**110. ಒಂದು ಪೋಡನ್ನು ಬಿಟ್ಟು ಕೊಟ್ಟಾಗ ಅಥವಾ ಅದು ಮುಟ್ಟುಗೋಲಾದಾಗ ಅನ್ವಯಿಸುವ ಉಪಬಂಧಗಳು.–** ರಾಜ್ಯದಲ್ಲಿಯ ಹಿಡುವಳಿಗಳ ತುಂಡೀಕರಣವನ್ನು ನಿರೋಧಿಸುವುದಕ್ಕಾಗಿ ಮತ್ತು ಅವುಗಳನ್ನು ಸಂಯೋಜಿಸುವುದಕ್ಕಾಗಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಉಪಬಂಧಗಳಿಗೊಳಪಟ್ಟು, 102ನೇ ಪ್ರಕರಣದ ಮೇರೆಗೆ ಸರ್ವೇ ನಂಬರಿನ ಯಾವುದೇ ಪೋಡನ್ನು ಬಿಟ್ಟು ಕೊಟ್ಟಿರುವಾಗ, ಅಥವಾ ಭೂ ಕಂದಾಯವನ್ನು ಸಂದಾಯ ಮಾಡಲು ತಪ್ಪಿದ್ದಕ್ಕಾಗಿ ಅದು ಮುಟ್ಟುಗೋಲಾಗಿರುವಾಗ, [1][ತಹಶೀಲ್ದಾರನು][1]ತನ್ನ ವಿವೇಚನಾನುಸಾರ ಸೂಕ್ತವೆಂದು ತಾನು ಆಲೋಚಿಸುವಂಥ ಕ್ರಮದಲ್ಲಿ, ಅದಕ್ಕೆ ಹೊಂದಿಕೊಂಡಿರುವ ಅದೇ ಸರ್ವೇ ನಂಬರಿನ ಇತರ ಪೋಡುಗಳ ಅಧಿಭೋಗದಾರರಿಗೆ, ಯುಕ್ತವೆಂದು ತಾನು ಪರ್ಯಾಲೋಚಿಸ ಬಹುದಾದಂಥ ಬೆಲೆಗಳಿಗೆ ಆ ಪೋಡನ್ನು ನೀಡತಕ್ಕದ್ದು; ಅಂಥ ಎಲ್ಲ ಅಧಿಭೋಗದಾರರು ಅದನ್ನು ನಿರಾಕರಿಸಿದ ಸಂದರ್ಭದಲ್ಲಿ, [1][ತಹಶೀಲ್ದಾರನು][1] ಸೂಕ್ತವೆಂದು ತಾನು ಭಾವಿಸುವಂತೆ ವಿಲೇವಾರಿ ಮಾಡತಕ್ಕದ್ದು.

1. 1970ರ ಅಧಿನಿಯಮ 5ರ ಮೂಲಕ 23.10.1969 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**111. ಭಾಗ ಮಾಡಿದ್ದಕ್ಕಾಗಿ ವೆಚ್ಚಗಳ ವಸೂಲಿ.–** ರಾಜ್ಯ ಸರ್ಕಾರಕ್ಕೆ ಕಂದಾಯವನ್ನು ಸಂದಾಯ ಮಾಡುವ ಯಾವುದೇ ಭೂಸಂಪದವನ್ನು ನ್ಯಾಯಾಲಯದ ಡಿಕ್ರಿಯ ಅಥವಾ ಆದೇಶದ ಮೇರೆಗೆ ಅಥವಾ ಅನ್ಯಥಾ ಭಾಗ ಮಾಡಬೇಕಾದಾಗ, ಹಾಗೆ ಭಾಗ ಮಾಡಿದ್ದಕ್ಕಾಗಿ ಯುಕ್ತವಾಗಿ ತಗಲಿದ ವೆಚ್ಚಗಳನ್ನು, ಯಾರ ವಿನಂತಿಯ ಮೇರೆಗೆ ಭಾಗ ಮಾಡಲಾಗಿದೆಯೋ ಅಂಥ ಹಿಸ್ಸೆದಾರರಿಂದ ಅಥವಾ ಆ ಹಿಸ್ಸೆಯಲ್ಲಿ ಹಿತಾಸಕ್ತಿಯುಳ್ಳ ವ್ಯಕ್ತಿಗಳಿಂದ ಡೆಪ್ಯುಟಿ ಕಮಿಷನರು ಸೂಕ್ತವೆಂದು ಆಲೋಚಿಸಬಹುದಾದಂಥ ದಾಮಾಷಾ ಪ್ರಕಾರ ಭೂಕಂದಾಯದ ತಗಾದೆ ಎಂಬಂತೆ ವಸೂಲು ಮಾಡತಕ್ಕದ್ದು.

**112. ರಾಜ್ಯ ಸರ್ಕಾರವು ಹೊಸ ಮೋಜಣಿ ಮಾಡಲು ನಿರ್ದೇಶಿಸಬಹುದು.–** ರಾಜ್ಯ ಸರ್ಕಾರವು ಯಾವುದೇ ಕಾಲದಲ್ಲಿ ಹೊಸ ಮೋಜಣಿಯನ್ನು ಅಥವಾ ಅದಕ್ಕೆ ಸಹಾಯಕವಾದ ಯಾವುದೇ ಕಾರ್ಯವನ್ನು ನಡೆಸುವಂತೆ ನಿರ್ದೇಶಿಸಬಹುದು:

ಪರಂತು, ಯಾವುದೇ ಪ್ರದೇಶದಲ್ಲಿ ಮಣ್ಣಿನ ಸಾಮಾನ್ಯ ವರ್ಗೀಕರಣವನ್ನು ಮಾಡಿರುವಾಗ ಮತ್ತು ಅದು ಅಂತಿಮವೆಂದು ರಾಜ್ಯ ಸರ್ಕಾರದ ಅನುಮೋದನೆಯನ್ನು ಪಡೆದಿರುವಾಗ, ಅಂಥ ಪ್ರದೇಶದ ಭೂಕಂದಾಯವನ್ನು ಪರಿಷ್ಕರಿಸುವುದಕ್ಕಾಗಿ ಪುನಃ ಅಂಥ ವರ್ಗೀಕರಣವನ್ನು ಮಾಡತಕ್ಕದ್ದಲ್ಲ.

**113. ಅಂಕಿ ಅಂಶಗಳ ಮತ್ತು ಹಣಕಾಸಿನ ದಾಖಲೆಗಳನ್ನು ಸಿದ್ಧಪಡಿಸುವಿಕೆ.–** ಭೂಕಂದಾಯದ ವ್ಯವಸ್ಥೆಯನ್ನು ಮಾಡುವಾಗ ಅಥವಾ ಅದನ್ನು ಪರಿಷ್ಕರಿಸುವಾಗ, ಪ್ರತಿಯೊಂದು ಸರ್ವೇ ನಂಬರಿನ ವಿಸ್ತೀರ್ಣ ಮತ್ತು ಭೂಕಂದಾಯಗಳೊಂದಿಗೆ, ನಿಯಮಿಸಬಹುದಾದಂಥ ಇತರ ಯಾವುದೇ ವಿವರಗಳನ್ನು ಒಳಗೊಂಡಿರುವ "ಕಂದಾಯ ವ್ಯವಸ್ಥೆ ರಿಜಿಸ್ಟರೆಂದು" ಕರೆಯಲಾಗುವ ರಿಜಿಸ್ಟರನ್ನು ಮತ್ತು ಈ ಬಗ್ಗೆ ರಾಜ್ಯ ಸರ್ಕಾರವು ಕಾಲಕಾಲಕ್ಕೆ ಮಾಡಬಹುದಾದ ಆದೇಶಗಳಿಗನುಸಾರವಾಗಿ ಇತರ ದಾಖಲೆಗಳನ್ನೂ ಸಿದ್ಧಪಡಿಸುವುದು ಮೋಜಣಿ ಅಧಿಕಾರಿಯ ಅಥವಾ ಕಂದಾಯ ವ್ಯವಸ್ಥೆಯ ಅಧಿಕಾರಿಯ ಕರ್ತವ್ಯವಾಗಿರತಕ್ಕದ್ದು.

## ಅಧ್ಯಾಯ–X
## ಬೇಸಾಯದ ಭೂಮಿಯ ಕಂದಾಯದ ನಿರ್ಧಾರಣೆ ಮತ್ತು ವ್ಯವಸ್ಥೆ

**114. ಸರ್ಕಾರವು ಯಾವುದೇ ಭೂಮಿಯ ಭೂಕಂದಾಯದ ಮೂಲ ವ್ಯವಸ್ಥೆ ಅಥವಾ ಪರಿಷ್ಕರಣ ವ್ಯವಸ್ಥೆ ಮಾಡಲು ನಿರ್ದೇಶಿಸಬಹುದು.–** (1) 106ನೇ ಪ್ರಕರಣದ ಮೇರೆಗೆ ಯಾವುದೇ ಭೂಮಿಯ ರೆವಿನ್ಯೂ ಮೋಜಣಿಯನ್ನು ಮಾಡಿರಲಿ ಅಥವಾ ಮಾಡಿರದಿರಲಿ ರಾಜ್ಯ ಸರ್ಕಾರವು ಯಾವುದೇ ಕಾಲದಲ್ಲಿ ಅಂಥ ಭೂಮಿಯ ಕಂದಾಯದ (ಈ ಮುಂದೆ ಮೂಲ ಕಂದಾಯ ವ್ಯವಸ್ಥೆ ಎಂದು ಉಲ್ಲೇಖಿಸಲಾಗುವ) ವ್ಯವಸ್ಥೆಯನ್ನು ಮಾಡಲು ನಿರ್ದೇಶಿಸಬಹುದು.

(2) ಅಂಥ ಭೂಮಿಯ ಕಂದಾಯದ ಬಗ್ಗೆ ಈ ಮುಂದೆ ಪರಿಷ್ಕರಣ ವ್ಯವಸ್ಥೆಯೆಂದು ಉಲ್ಲೇಖಿಸಲಾಗುವ ಹೊಸ ವ್ಯವಸ್ಥೆಯನ್ನು ಮಾಡುವುದಕ್ಕೆ ಕೂಡ ರಾಜ್ಯ ಸರ್ಕಾರವು ಯಾವುದೇ ಕಾಲಕ್ಕೆ ನಿರ್ದೇಶಿಸಬಹುದು:

ಪರಂತು, ತತ್ಕಾಲದಲ್ಲಿ ಜಾರಿಯಲ್ಲಿರುವ ಕಂದಾಯ ವ್ಯವಸ್ಥೆಯ ಅವಧಿಯು ಕೊನೆಗೊಳ್ಳುವುದಕ್ಕೆ ಮುಂಚೆ ಭೂಕಂದಾಯದಲ್ಲಿ ಮಾಡುವ ಯಾವುದೇ ಹೆಚ್ಚಳವೂ ಕಾರ್ಯಗತವಾಗತಕ್ಕದ್ದಲ್ಲ.

[1][**114ಎ. ಕೆಲವು ಸಂದರ್ಭಗಳಲ್ಲಿ ಭೂಕಂದಾಯ ವ್ಯವಸ್ಥೆಯ ಪರಿಷ್ಕರಣ.–** ಈ ಅಧಿನಿಯಮದಲ್ಲಿ ಅಥವಾ ಇತರ ಯಾವುದೇ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ,–

1. 1969ರ ಅಧಿನಿಯಮ 7ರ ಮೂಲಕ 17.04.1969 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(ಎ) 112ನೇ ಪ್ರಕರಣದ ಮೇರೆಗೆ ಭೂಕಂದಾಯ ವ್ಯವಸ್ಥೆಯನ್ನು ಜಾರಿ ಮಾಡಿದ ತರುವಾಯ ಯಾವುದೇ ಕಾಲದಲ್ಲಿ, ರಾಜ್ಯ ಸರ್ಕಾರವು, ಬರಹದಲ್ಲಿ ಕಾರಣಗಳನ್ನು ದಾಖಲಿಸಿ ಯಾವುದೇ ವಲಯದಲ್ಲಿ ಭೂಕಂದಾಯ ವ್ಯವಸ್ಥೆಯಲ್ಲಿ ಮಾರ್ಪಾಟಾಗಬೇಕಾಗಿದೆಯೆಂದು ಅಭಿಪ್ರಾಯಪಟ್ಟರೆ, ಅದು ಅಂಥ ವಲಯದಲ್ಲಿ ಭೂಕಂದಾಯದ ವ್ಯವಸ್ಥೆಯನ್ನು ಪರಿಷ್ಕರಿಸಲು ಆದೇಶದ ಮೂಲಕ ನಿರ್ದೇಶಿಸಬಹುದು ಮತ್ತು ಭೂ ಕಂದಾಯದ ಪರಿಷ್ಕರಣ ವ್ಯವಸ್ಥೆಗೆ ಸಂಬಂಧಪಡುವ ಈ ಅಧ್ಯಾಯದ ಉಪಬಂಧಗಳು ಅಂಥ ವ್ಯವಸ್ಥೆಯ ಪರಿಷ್ಕರಣಕ್ಕೆ ಅನ್ವಯವಾಗತಕ್ಕದ್ದು;

(ಬಿ) ಅಂಥ ವ್ಯವಸ್ಥೆಯಿಂದ ಏರ್ಪಟ್ಟ ಭೂಕಂದಾಯವನ್ನು, ರಾಜ್ಯ ವಿಧಾನಮಂಡಲದ ಉಭಯ ಸದನಗಳ ಅನುಮೋದನೆಯನ್ನು ಪಡೆದು, ಈ ಪ್ರಕರಣದ ಮೇರೆಗೆ ಪರಿಷ್ಕೃತವಾಗಬೇಕೆಂದು ನಿರ್ದೇಶಿತವಾದ ಭೂಕಂದಾಯದ ವ್ಯವಸ್ಥೆಯು ಜಾರಿಯಲ್ಲಿ ಬಂದ ದಿನಾಂಕದಿಂದ ವಿಧಿಸಬೇಕೆಂದು ಮತ್ತು ಸಂದಾಯವಾಗತಕ್ಕದ್ದೆಂದು ರಾಜ್ಯ ಸರ್ಕಾರವು ನಿರ್ದೇಶಿಸಿದರೆ ಹಾಗೆ ವಿಧಿಸತಕ್ಕದ್ದು ಮತ್ತು ಸಂದಾಯ ಮಾಡಬಹುದಾಗಿರತಕ್ಕದ್ದು; ಮತ್ತು

(ಸಿ) ಖಂಡ (ಎ)ಯಮೇರೆಗೆ ಭೂಕಂದಾಯದ ವ್ಯವಸ್ಥೆಯನ್ನು ಪರಿಷ್ಕರಿಸಬೇಕೆಂದುನಿರ್ದೇಶಿಸಿರುವಾಗ, ಸಂಬಂಧಪಟ್ಟ ವಲಯದಲ್ಲಿರುವ ಭೂಮಿಗಳ ಮೇಲಣ ಭೂಕಂದಾಯವನ್ನು, ಹಾಗೆ ಪರಿಷ್ಕರಣೆಯಾಗುವವರೆಗೆ, ಅಂಥ ವ್ಯವಸ್ಥೆಯು ಜಾರಿಯಲ್ಲಿ ಬರುವುದಕ್ಕೂ ಮೊದಲು ಚಾಲ್ತಿಯಲ್ಲಿದ್ದಂಥ ದರಗಳಲ್ಲೇ ವಿಧಿಸತಕ್ಕದ್ದು ಮತ್ತು ಸಂದಾಯ ಮಾಡಬಹುದಾಗಿರತಕ್ಕದ್ದು ಮತ್ತು ಪರಿಷ್ಕೃತ ಭೂಕಂದಾಯದ ವ್ಯವಸ್ಥೆಯು ಜಾರಿಗೆ ಬಂದ ತರುವಾಯ,

ಪರಿಷ್ಕರಣೆಯಾಗುವವರೆಗೆ ಸಂದಾಯ ಮಾಡಿದ ಭೂಕಂದಾಯದ ಮೊಬಲಗಿಗೂ ಮತ್ತು ಪರಿಷ್ಕೃತ ಭೂಕಂದಾಯದ ವ್ಯವಸ್ಥೆಗೆ ಅನುಸಾರವಾಗಿ ಆ ಅವಧಿಗೆ ಸಂದಾಯ ಮಾಡಬೇಕಾದ ಭೂಕಂದಾಯದ ಮೊಬಲಗಿಗೂ ವ್ಯತ್ಯಾಸವೇನಾದರೂ ಇದ್ದರೆ, ಅದನ್ನು ಸಂದರ್ಭಾನುಸಾರ ಸಂದಾಯ ಮಾಡತಕ್ಕದ್ದು ಅಥವಾ ಮರು ಪಾವತಿ ಮಾಡತಕ್ಕದ್ದು.][1]

**115. ಕಂದಾಯ ವ್ಯವಸ್ಥೆಯ ಅವಧಿ.–** ಕಂದಾಯ ವ್ಯವಸ್ಥೆಯು ಮೂವತ್ತು ವರ್ಷಗಳ ಅವಧಿಯವರೆಗೆ ಜಾರಿಯಲ್ಲಿರತಕ್ಕದ್ದು:

ಪರಂತು, ಕಂದಾಯ ವ್ಯವಸ್ಥೆಯ ಪರಿಷ್ಕರಣೆಯು ಅನುಚಿತವಾದುದೆಂದು ರಾಜ್ಯ ಸರ್ಕಾರವು ಅಭಿಪ್ರಾಯಪಟ್ಟರೆ ಅಥವಾ ಅಂಥ ಕಂದಾಯ ವ್ಯವಸ್ಥೆಯನ್ನು ಜಾರಿಗೊಳಿಸವುದು ಯಾವುದೇ ಕಾರಣದಿಂದಾಗಿ ವಿಳಂಬವಾದಾಗ, ತತ್ಕಾಲದಲ್ಲಿ ಜಾರಿಯಲ್ಲಿರುವ ಕಂದಾಯ ವ್ಯವಸ್ಥೆಯ ಅವಧಿಯನ್ನು ಸೂಕ್ತವೆಂದು ತನಗೆ ಕಂಡುಬರುವಂಥ ಅವಧಿಯವರೆಗೆ ರಾಜ್ಯ ಸರ್ಕಾರವು ಮುಂದುವರಿಸಬಹುದು.

**116. ಕಂದಾಯ ನಿರ್ಧರಣೆಯನ್ನು ಮಾಡುವ ಬಗ್ಗೆ.–** (1) 114ನೇ ಪ್ರಕರಣದ (1)ನೇ ಅಥವಾ (2)ನೇ ಉಪಪ್ರಕರಣದ ಮೇರೆಗೆ ಯಾವ ಭೂಮಿಗಳ ಬಗ್ಗೆ ವ್ಯವಸ್ಥೆಯನ್ನು ಮಾಡಬೇಕೆಂದು ನಿರ್ದೇಶಿಸಲಾಗಿದೆಯೋ ಮತ್ತು ಯಾವ ಭೂಮಿಗಳನ್ನು ಭೂಕಂದಾಯದ ಸಂದಾಯದಿಂದ ಪೂರ್ತಿಯಾಗಿ ವಿನಾಯಿತಿಗೊಳಿಸಿಲ್ಲವೋ ಆ ಎಲ್ಲ ಭೂಮಿಗಳ ಮೇಲಿನ ಭೂಕಂದಾಯವನ್ನು, 84ನೇ ಪ್ರಕರಣದ (1)ನೇ ಉಪಪ್ರಕರಣದ ಮೊದಲನೆಯ ಪರಂತುಕದಲ್ಲಿರುವ ಪರಿಮಿತಿಗಳಿಗೊಳಪಟ್ಟು, ಕಂದಾಯ ವ್ಯವಸ್ಥೆ ಮಾಡಬೇಕಾದ ಭೂಮಿಯನ್ನು ಗುಂಪುಗಳಾಗಿ ವಿಭಾಗಿಸಿ ಮತ್ತು ಅಂಥ ಪ್ರತಿಯೊಂದು ಗುಂಪಿಗೆ ಪ್ರಮಾಣಬದ್ಧ ದರವನ್ನು ಗೊತ್ತುಪಡಿಸುವುದರ ಮೂಲಕ ನಿರ್ಧರಿಸತಕ್ಕದ್ದು.

(2) ಗುಂಪುಗಳನ್ನು ಸಾಧಾರಣವಾಗಿ ಈ ಕೆಳಗಿನ ಅಂಶಗಳನ್ನು ಪರ್ಯಾಲೋಚಿಸಿ ರೂಪಿಸತಕ್ಕದ್ದು, ಅವು ಯಾವುವೆಂದರೆ:–

(i) ಪ್ರಾಕೃತಿಕ ಆಕಾರ;

(ii) ವಾಯುಗುಣ ಮತ್ತು ಮಳೆ;

(iii) ಮುಖ್ಯ ಬೆಳೆಗಳ ಇಳುವರಿ ಮತ್ತು ಅವುಗಳ ಬೆಲೆಗಳು:

ಪರಂತು, ಅವಶ್ಯವೆಂದು ಭಾವಿಸಿದರೆ, ಗುಂಪುಗಳನ್ನು ರೂಪಿಸುವ ಸಲುವಾಗಿ ಈ ಕೆಳಗಿನ ಅಂಶಗಳನ್ನು ಕೂಡ ಪರ್ಯಾಲೋಚನೆಗೆ ತೆಗೆದುಕೊಳ್ಳಬಹುದು, ಅವು ಯಾವುವೆಂದರೆ:–

(ಎ) ಮಾರುಕಟ್ಟೆಯ ಸೌಲಭ್ಯಗಳು;

(ಬಿ) ಸಂಪರ್ಕ ಸಾಧನಗಳು;

(ಸಿ) ಬೇಸಾಯದ ಮಟ್ಟ;

(ಡಿ) ಜನಸಂಖ್ಯೆ ಮತ್ತು ಕಾರ್ಮಿಕರ ಪೂರೈಕೆ;

(ಇ) ಬೇಸಾಯದ ಸಂಪನ್ಮೂಲಗಳು;

(ಎಫ್) ಹಿಂದಿನ ಮೂವತ್ತು ವರ್ಷಗಳಲ್ಲಿ ಅಧಿಭೋಗಕ್ಕೊಳಪಟ್ಟ ಮತ್ತು ಸಾಗುವಳಿ ಮಾಡಿದ ಭೂಮಿಗಳ ವಿಸ್ತೀರ್ಣದಲ್ಲಿ ಆದ ವ್ಯತ್ಯಾಸಗಳು;

(ಜಿ) ಮಜೂರಿ;

(ಹೆಚ್) ಭೂಸಾಗುವಳಿ ಮಾಡುವಾಗ ಸಾಗುವಳಿದಾರನ ದುಡಿಮೆಗೆ ಮಜೂರಿಯನ್ನೊಳಗೊಂಡು ಮುಖ್ಯ ಬೆಳೆಗಳ ಸಾಗುವಳಿಗೆ ತಗುಲಿದ ಸಾಮಾನ್ಯ ವೆಚ್ಚಗಳು;

(ಐ) ಬೇಸಾಯದ ಉದ್ದೇಶಕ್ಕೆ ಬಳಸಿದ ಭೂಮಿಗಳ ಮಾರಾಟಗಳು.

(3) ಪ್ರತ್ಯೇಕ ಸರ್ವೆ ನಂಬರುಗಳ ಮತ್ತು ಅವುಗಳ ಪೋಡುಗಳ ಭೂಕಂದಾಯದ ನಿರ್ಧರಣೆಯು ನಿಯಮಿಸಿದ ರೀತಿಯಲ್ಲಿ ಅವುಗಳ ವರ್ಗೀಕರಣ ಮೌಲ್ಯದ ಆಧಾರದ ಮೇಲೆ ಆಗಿರತಕ್ಕದ್ದು.

**117. ಹಿಡುವಳಿದಾರರು ಮಾಡಿದ ಸುಧಾರಣೆಗಳಿಂದಾದ ಸರಾಸರಿ ಇಳುವರಿಯ ಹೆಚ್ಚಳವನ್ನು ಗಣನೆಗೆ ತೆಗೆದುಕೊಳ್ಳಕೂಡದು.–**ತತ್ಕಾಲದಲ್ಲಿ ಜಾರಿಯಲ್ಲಿರುವ ಕಂದಾಯ ವ್ಯವಸ್ಥೆಯು ಕೊನೆಗೊಳ್ಳುವ ದಿನಾಂಕಕ್ಕೆ ನಿಕಟ ಪೂರ್ವದ

ಮೂವತ್ತು ವರ್ಷಗಳಲ್ಲಿ ಆ ಭೂಮಿಯಲ್ಲಿ ಹಿಡುವಳಿದಾರನು ಅಥವಾ ಅವನ ವೆಚ್ಚದಿಂದ ಯಾವುವೇ ಸುಧಾರಣೆಗಳನ್ನು ಮಾಡಿದ್ದರೆ, ಆ ಸುಧಾರಣೆಗಳಿಂದ ಅಂಥ ಭೂಮಿಯ ಬೆಳೆಗಳ ಸರಾಸರಿ ಇಳುವರಿಯಲ್ಲಾದ ಹೆಚ್ಚಳವನ್ನು, ಆ ಭೂಮಿಯ ಬಗ್ಗೆ ಪರಿಷ್ಕೃತ ಕಂದಾಯವನ್ನು ಗೊತ್ತು ಮಾಡುವಾಗ ಗಣನೆಗೆ ತೆಗೆದುಕೊಳ್ಳತಕ್ಕದ್ದಲ್ಲ.

**118. ಕಂದಾಯ ವ್ಯವಸ್ಥೆ ಮಾಡುವಾಗ ಕಂದಾಯ ವ್ಯವಸ್ಥೆಯ ಅಧಿಕಾರಿಯು ಅನುಸರಿಸಬೇಕಾದ ವಿಧಾನ.–** ಕಂದಾಯ ವ್ಯವಸ್ಥೆ ಮಾಡುವಾಗ, ಕಂದಾಯ ವ್ಯವಸ್ಥೆ ಅಧಿಕಾರಿಯು ಕೆಳಕಂಡಂತೆ ಕ್ರಮಕೈಗೊಳ್ಳತಕ್ಕದ್ದು,–

(1) ನಿಯಮಿಸಿದ ರೀತಿಯಲ್ಲಿ ವಿಚಾರಣೆಯನ್ನು ನಡೆಸತಕ್ಕದ್ದು;

(2) ಕಂದಾಯ ವ್ಯವಸ್ಥೆ ಮಾಡಬೇಕಾದ ಭೂಮಿಗಳನ್ನು ಗುಂಪುಗಳಾಗಿ ವಿಭಾಗಿಸತಕ್ಕದ್ದು;

(3) ಕಂದಾಯ ವ್ಯವಸ್ಥೆಯ ಉದ್ದೇಶಗಳಿಗಾಗಿ ಭೂಮಿಗಳ ಬೆಳೆಗಳ ಸರಾಸರಿ ಇಳುವರಿಯನ್ನು ನಿಯಮಿಸಿದ ರೀತಿಯಲ್ಲಿ ಕಂಡುಕೊಳ್ಳತಕ್ಕದ್ದು;

(4) ತರುವಾಯ, 116ನೇ ಪ್ರಕರಣದ (2)ನೇ ಉಪಪ್ರಕರಣದಲ್ಲಿ ಹೇಳಿರುವ ಸುಸಂಗತ ಅಂಶಗಳನ್ನು ಗಮನಿಸಿ ಪ್ರತಿಯೊಂದು ಗುಂಪಿನಲ್ಲಿನ ಪ್ರತಿಯೊಂದು ವರ್ಗದ ಭೂಮಿಗೆ ಪ್ರಮಾಣಬದ್ಧ ದರಗಳನ್ನು ಗೊತ್ತುಪಡಿಸತಕ್ಕದ್ದು;

(5) ಕಂದಾಯ ವ್ಯವಸ್ಥೆಯ ಬಗೆಗಿನ ತನ್ನ ಸೂಚನೆಗಳನ್ನೊಳಗೊಂಡ ಈ ಮುಂದೆ ಕಂದಾಯ ವ್ಯವಸ್ಥೆಯ ವರದಿಯೆಂದು ಕರೆಯಲ್ಪಡುವ, ಒಂದು ವರದಿಯನ್ನು ಅವನು ಡೆಪ್ಯುಟಿ ಕಮಿಷನರಿಗೆ ಒಪ್ಪಿಸತಕ್ಕದು.

**119. ಕಂದಾಯ ವ್ಯವಸ್ಥೆಯ ವರದಿಯ ಪ್ರಕಟಣೆ.–** (1) 118ನೇ ಪ್ರಕರಣದ ಮೇರೆಗೆ ಒಪ್ಪಿಸಿದ ಕಂದಾಯ ವ್ಯವಸ್ಥೆಯ ವರದಿಯು ಡೆಪ್ಯುಟಿ ಕಮಿಷನರಿಗೆ ತಲುಪಿದ ತರುವಾಯ, ಅವರು ಅಂಥ ವರದಿಯನ್ನು ನಿಯಮಿಸಿದ ರೀತಿಯಲ್ಲಿ ಪ್ರಕಟಿಸುವಂತೆ ಮಾಡತಕ್ಕದ್ದು.

(2) ಗ್ರಾಮದಲ್ಲಿರುವ ಪ್ರತಿಯೊಂದು ವರ್ಗದ ಭೂಮಿಯ ಬಗ್ಗೆ ಅಸ್ತಿತ್ವದಲ್ಲಿರುವ ಪ್ರಮಾಣಬದ್ಧ ದರವನ್ನು ಮತ್ತು ಕಂದಾಯ ವ್ಯವಸ್ಥೆಯ ಅಧಿಕಾರಿಯು ಆ ಬಗ್ಗೆ ಸೂಚಿಸಿರುವ ಯಾವುದೇ ಹೆಚ್ಚು ಇಲ್ಲವೆ ಕಡಿಮೆ ದರವನ್ನು ತಿಳಿಸುವ ನೋಟೀಸನ್ನು ಕೂಡ ಸಂಬಂಧಪಟ್ಟ ಪ್ರತಿಯೊಂದು ಗ್ರಾಮದಲ್ಲಿ ಕನ್ನಡದಲ್ಲಿ ಮತ್ತು ಆ ಪ್ರದೇಶದ ಭಾಷೆ ಯಾವುದಾದರೂ ಇದ್ದರೆ, ರಾಜ್ಯ ಸರ್ಕಾರವು, ಆ ಬಗ್ಗೆ ನಿರ್ದೇಶಿಸಬಹುದಾದಂತೆ ಆ ಭಾಷೆಯಲ್ಲಿ ಡೆಪ್ಯುಟಿ ಕಮಿಷನರನು ಅದನ್ನು ಪ್ರಕಟಿಸತಕ್ಕದ್ದು ಅಥವಾ ಪ್ರಕಟಿಸುವಂತೆ ಮಾಡತಕ್ಕದ್ದು. ಅಂಥ ನೋಟೀಸಿನ ದಿನಾಂಕದಿಂದ ಮೂರು ತಿಂಗಳೊಳಗಾಗಿ ಯಾರೇ ವ್ಯಕ್ತಿಯು ಕಂದಾಯ ವ್ಯವಸ್ಥೆಯ ವರದಿಯಲ್ಲಿನ ಸೂಚನೆಗಳ ಬಗ್ಗೆ ತನಗಿರುವ ಆಕ್ಷೇಪಣೆಗಳನ್ನು ಡೆಪ್ಯುಟಿ ಕಮಿಷನರಿಗೆಒಪ್ಪಿಸಬಹುದೆಂದು ಕೂಡ ನೋಟೀಸಿನಲ್ಲಿ ನಮೂದಿಸತಕ್ಕದ್ದು.

**120. ಡೆಪ್ಯುಟಿ ಕಮಿಷನರು ಕಂದಾಯ ವ್ಯವಸ್ಥೆಯ ವರದಿಯನ್ನು ಹಾಗೂ ಅದರ ಬಗೆಗಿನ ಆಕ್ಷೇಪಣೆ, ಇತ್ಯಾದಿಗಳ ವಿವರಣಾ ಪತ್ರವನ್ನು ಮತ್ತು ಆ ಬಗ್ಗೆ ತನ್ನ ಅಭಿಪ್ರಾಯಗಳನ್ನು ಸರ್ಕಾರಕ್ಕೆ ಒಪ್ಪಿಸುವುದು.–** ಡೆಪ್ಯುಟಿ ಕಮಿಷನರು ತನಗೆ ಬಂದ ಆಕ್ಷೇಪಣೆಗಳನ್ನು ಪರ್ಯಾಲೋಚಿಸಿದ ತರುವಾಯ, ಮತ್ತು ಅಹವಾಲು ಹೇಳಿಕೊಳ್ಳಲು ಇಚ್ಛಿಸುವ ಆಕ್ಷೇಪಕರಿಗೆ ಅಹವಾಲುಗಳನ್ನು ಹೇಳಿಕೊಳ್ಳಲು ಅವಕಾಶ ಕೊಟ್ಟ ತರುವಾಯ, ಡೆಪ್ಯುಟಿ ಕಮಿಷನರು ಕಂದಾಯ ವ್ಯವಸ್ಥೆಯ ವರದಿಯನ್ನು ಹಾಗೂ ಆಕ್ಷೇಪಣೆಗಳ ವಿವರಣ ಪತ್ರವನ್ನು ಮತ್ತು ಅವುಗಳ ಬಗ್ಗೆ ತನ್ನ ಅಭಿಪ್ರಾಯಗಳನ್ನು [1][ಮೋಜಣಿ, ಕಂದಾಯ ವ್ಯವಸ್ಥೆ ಮತ್ತು ಭೂ ದಾಖಲೆಗಳ ನಿರ್ದೇಶಕನ][1]ಮುಖಾಂತರ ಸರ್ಕಾರಕ್ಕೆ ಕಳಿಸತಕ್ಕದ್ದು.

1. 1973ರ ಕರ್ನಾಟಕ ಕಾನೂನುಗಳ ಆದೇಶದ ಅಳವಡಿಕೆಗಳ ಮೂಲಕ 01.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

**121. ಕಂದಾಯ ವ್ಯವಸ್ಥೆಯ ವರದಿಗೆ ರಾಜ್ಯ ವಿಧಾನಮಂಡಲದಿಂದ ಅನುಮೋದನೆ.–** (1) ಕಂದಾಯ ವ್ಯವಸ್ಥೆಯ ವರದಿಯನ್ನು, ಅದರ ಮೇಲೆ ಯಾವುವಾದರೂ ಆಕ್ಷೇಪಣೆಗಳು ಬಂದಿದ್ದರೆ, ಅವುಗಳೊಂದಿಗೆ ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ ಇರಿಸತಕ್ಕದ್ದು ಮತ್ತು ಈ ಬಗ್ಗೆ ಮಂಡಿಸಲಾದ ನಿರ್ಣಯದ ಮೂಲಕ ವರದಿಯನ್ನು ಯಾವುದೇ ಮಾರ್ಪಾಟಿನೊಂದಿಗೆ ಅಥವಾ ಮಾರ್ಪಾಟಿಲ್ಲದೆ ಎರಡೂ ಸದನಗಳು ಅನುಮೋದಿಸಿದ ತರುವಾಯ, ರಾಜ್ಯ ಸರ್ಕಾರವು ಅಂಥ ನಿರ್ಣಯಕ್ಕೆ ಅನುಗುಣವಾಗಿ ಆದೇಶಗಳನ್ನು ಮಾಡತಕ್ಕದ್ದು:

ಪರಂತು, 119ನೇ ಪ್ರಕರಣದಲ್ಲಿ ಹೇಳಿರುವಂತೆ ಹೊಸ ನೋಟೀಸನ್ನು ಅಂಥ ದರಗಳ ಪರಿಣಾಮಕ್ಕೆ ಒಳಗಾಗುವ ಪ್ರತಿಯೊಂದು ಗ್ರಾಮದಲ್ಲಿ ಪ್ರಕಟಿಸಿದ ಹೊರತು ಮತ್ತು ಯಾವುದಾದರೂ ಆಕ್ಷೇಪಣೆಗಳು ಬಂದಿದ್ದರೆ ಅವುಗಳನ್ನು

ಪರ್ಯಾಲೋಚಿಸಿದ ತರುವಾಯ, ಈ ಬಗ್ಗೆ ಮಂಡಿಸಲಾಗುವ ನಿರ್ಣಯದ ಮೂಲಕ ಅಂಥ ದರಗಳನ್ನು ಎರಡು ಸದನಗಳು ಅನುಮೋದಿಸಿದ ಹೊರತು, [1][ಕಂದಾಯ ವ್ಯವಸ್ಥೆಯ ವರದಿಯನ್ನು ಮಾರ್ಪಡಿಸುವುದರ ಮೂಲಕ ಅಂಥ ವರದಿಯಲ್ಲಿ ಭೂಮಿಯ ಯಾವುದೇ ವರ್ಗದ ಬಗ್ಗೆ ಸೂಚಿಸಲಾದ ಪ್ರಮಾಣಬದ್ಧ ದರಗಳನ್ನು ಹೆಚ್ಚಿಸುವ ಪರಿಣಾಮವುಳ್ಳ ಯಾವುದೇ ಆದೇಶವನ್ನು ರಾಜ್ಯ ಸರ್ಕಾರವು ಮಾಡತಕ್ಕದ್ದಲ್ಲ.][1]

1. 1965ರ ಅಧಿನಿಯಮ 9ರ ಮೂಲಕ 1.4.1964 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) ಉಪಪ್ರಕರಣ(1)ರ ಮೇರೆಗೆ ರಾಜ್ಯ ಸರ್ಕಾರವು ಮಾಡಿದ ಆದೇಶಗಳು ಅಂತಿಮವಾಗಿರತಕ್ಕದ್ದು ಮತ್ತು ಅವುಗಳನ್ನು ಯಾವ ನ್ಯಾಯಾಲಯದಲ್ಲಿಯೂ ಪ್ರಶ್ನಿಸತಕ್ಕದ್ದಲ್ಲ.

**122. ಕಂದಾಯ ವ್ಯವಸ್ಥೆಯನ್ನು ಜಾರಿಗೆ ತರುವುದು.–** 121ನೇ ಪ್ರಕರಣದ ಮೇರೆಗೆ ರಾಜ್ಯ ಸರ್ಕಾರವು ಆದೇಶಗಳನ್ನು ಮಾಡಿದ ತರುವಾಯ ಮತ್ತು ನಿಯಮಿಸಿದ ರೀತಿಯಲ್ಲಿ ಅದರ ಬಗ್ಗೆ ನೋಟೀಸು ಕೊಟ್ಟ ತರುವಾಯ ಕಂದಾಯ ವ್ಯವಸ್ಥೆಯನ್ನು ಜಾರಿಗೆ ತರಲಾಯಿತೆಂದು ಭಾವಿಸತಕ್ಕದ್ದು ಮತ್ತು ಅಂಥ ಕಂದಾಯ ವ್ಯವಸ್ಥೆಗನುಸಾರವಾಗಿ ಭೂಕಂದಾಯವನ್ನು, ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸ ಬಹುದಾದಂತೆ ಮುಂದಿನ ದಿನಾಂಕದಿಂದ ಅಥವಾ ಹಿಂದಿನ ದಿನಾಂಕದಿಂದ ವಿಧಿಸತಕ್ಕದ್ದು:

[1][ಪರಂತು, ಕಂದಾಯ ವ್ಯವಸ್ಥೆಯನ್ನು ಯಾವುದೇ ಕಂದಾಯ ವರ್ಷದಲ್ಲಿ ಜಾರಿಗೊಳಿಸಿದರೆ, ಹಾಗೆ ನಿರ್ದಿಷ್ಟಪಡಿಸಿದ ಹಿಂದಿನ ದಿನಾಂಕವು ಆ ಕಂದಾಯ ವರ್ಷವು ಆರಂಭವಾದ ದಿನಾಂಕಕ್ಕಿಂತ ಬೇರೆಯದೇ ದಿನಾಂಕವಾಗಿರತಕ್ಕದ್ದಲ್ಲ.][1]

1. 1965ರ ಅಧಿನಿಯಮ 9ರ ಮೂಲಕ 1.4.1964 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[2][**122.ಎ. ಅಧಿಭೋಗದಾರರಿಗೆ ಕಂದಾಯ ನಿರ್ಧರಣೆಯ ನೋಟೀಸು.–** (1) 122ನೇ ಪ್ರಕರಣದ ಮೇರೆಗೆ ಕಂದಾಯ ವ್ಯವಸ್ಥೆಯನ್ನು ಜಾರಿಯಲ್ಲಿ ತಂದ ಕೂಡಲೇ ಪ್ರತಿ ಸರ್ವೆ ನಂಬರಿನ ಅಥವಾ ಪೋಡಿನ [1][ಭೂ ಕಂದಾಯವನ್ನು ಕಂದಾಯ ವ್ಯವಸ್ಥೆಯ ಉಪನಿರ್ದೇಶಕನು][1], [1][ಕಂದಾಯ ವ್ಯವಸ್ಥೆಯ ಸಹಾಯಕ ನಿರ್ದೇಶಕನು][1] ಅಥವಾ [1][ಮೋಜಣಿ, ಕಂದಾಯ ವ್ಯವಸ್ಥೆ ಮತ್ತು ಭೂ ದಾಖಲೆಗಳ ನಿರ್ದೇಶಕನು][1] ನೇಮಕ ಮಾಡಬಹುದಾದಂಥ ಇತರ ಅಧಿಕಾರಿಯು ನಿರ್ಧರಿಸತಕ್ಕದ್ದು ಮತ್ತು ಭೂಮಿಯ ವಿಸ್ತೀರ್ಣವನ್ನು ಅಂಥ ಭೂಮಿಯ ವರ್ಗವನ್ನು ಅದಕ್ಕೆ ಅನ್ವಯವಾಗುವ ಪ್ರಮಾಣಬದ್ಧ ದರವನ್ನು ಮತ್ತು ಸಂದಾಯ ಮಾಡಬೇಕಾದ ಭೂಕಂದಾಯವನ್ನು ನಿರ್ದಿಷ್ಟಪಡಿಸಿದ ನೋಟೀಸನ್ನು ಭೂಕಂದಾಯವನ್ನು ಸಂದಾಯ ಮಾಡಲು ಬದ್ಧನಾಗಿರುವ ಭೂಮಿಯ ಅಧಿಭೋಗದಾರನಿಗೆ ಜಾರಿ ಮಾಡತಕ್ಕದ್ದು.

1. 1973ರ ಕರ್ನಾಟಕ ಕಾನೂನುಗಳ ಆದೇಶ ಅಳವಡಿಕೆಗಳ ಮೂಲಕ 1.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.
2. 1969ರ ಅಧಿನಿಯಮ 7ರ ಮೂಲಕ 1.4.1964 ರಿಂದ ಜಾರಿಗೆ ಬರುವಂತೆ 122ಎ ಮತ್ತು 122ಬಿ ಪ್ರಕರಣಗಳನ್ನು ಸೇರಿಸಲಾಗಿದೆ.

(2) ಉಪಪ್ರಕರಣ(1)ರ ಮೇರೆಗೆ ನೋಟೀಸನ್ನು ಜಾರಿ ಮಾಡಿದ ತರುವಾಯ ಅಂಥ ನೋಟೀಸಿನಲ್ಲಿ ನಿರ್ದಿಷ್ಟಪಡಿಸಿದ ಭೂಕಂದಾಯವನ್ನು 122(ಬಿ) ಪ್ರಕರಣದ ಮೇರೆಗೆ ಮಾಡಿದ ಯಾವುದೇ ಮಾರ್ಪಾಡಿಗೆ ಒಳಪಟ್ಟು ಸರ್ವೆ ನಂಬರಿಗೆ ಅಥವಾ ಪೋಡಿಗೆ ವಿಧಿಸತಕ್ಕದ್ದು.

**122.ಬಿ. ಭೂಕಂದಾಯದ ನಿರ್ಧರಣೆ.–** (1) ಡೆಪ್ಯುಟಿ ಕಮೀಷನರು,–

(i)ಯಾವುದೇ ಕಾಲದಲ್ಲಿ ತಾನಾಗಿಯೇ; ಮತ್ತು

(ii) 122 (ಎ) ಪ್ರಕರಣದ ಮೇರೆಗೆ ನೋಟೀಸನ್ನು ಜಾರಿ ಮಾಡಿದ ದಿನಾಂಕದಿಂದ ಮೂವತ್ತು ದಿನಗಳ ಅವಧಿಯೊಳಗಾಗಿ, ನಿರ್ಧರಿಸಲ್ಪಟ್ಟ ಭೂಕಂದಾಯದಿಂದ ತೊಂದರೆಗೊಳಗಾದ ಯಾರೇ ವ್ಯಕ್ತಿಯು ಅರ್ಜಿ ಸಲ್ಲಿಸಿದಾಗ,–

ಸೂಕ್ತವೆಂದು ತಾನು ಭಾವಿಸುವಂಥ ವಿಚಾರಣೆಯ ತರುವಾಯ, ಸಂದರ್ಭಾನುಸಾರ, ಯಾವುದೇ ಭೂಮಿಯ ಅಥವಾ ನಿರ್ದಿಷ್ಟ ಭೂಮಿಯ ಭೂಕಂದಾಯ ನಿರ್ಧರಣೆಯು, ಕಾನೂನಿಗೆ ವಿರುದ್ಧವಾದುದಾಗಿದೆಯೆಂದು ಅಥವಾ ಭೂಮಿಯ ವಿಸ್ತೀರ್ಣಕ್ಕೆ, ಅಂಥ ಭೂಮಿಯ ವರ್ಗಕ್ಕೆ, ಅನ್ವಯಿಸುವ ಪ್ರಮಾಣಬದ್ಧ ದರಕ್ಕೆ ಮತ್ತು ಸಂದಾಯ ಮಾಡಬೇಕಾದ ಭೂಕಂದಾಯಕ್ಕೆ ಸಂಬಂಧಪಟ್ಟಂತೆ ಅನ್ಯಥಾ ತಪ್ಪಾಗಿದೆಯೆಂದು ತನಗೆ ಮನದಟ್ಟಾದರೆ ನ್ಯಾಯವೆಂದು ತಾನು ಭಾವಿಸುವಂಥ ಆದೇಶಗಳನ್ನು ಹೊರಡಿಸಬಹುದು:

ಪರಂತು, ಅರ್ಜಿದಾರನಿಗೆ ಅಥವಾ ಹಿತಾಸಕ್ತಿಯುಳ್ಳ ಇತರ ಯಾರೇ ವ್ಯಕ್ತಿಗೆ ಅಹವಾಲು ಹೇಳಿಕೊಳ್ಳಲು ಯುಕ್ತ ಅವಕಾಶವನ್ನು ಕೊಟ್ಟ ಹೊರತು, ಅಧಿಭೋಗದಾರನಿಗೆ ಪ್ರತಿಕೂಲವಾದ ಯಾವ ಆದೇಶವನ್ನು ಈ ಉಪಪ್ರಕರಣದ ಮೇರೆಗೆ ಮಾಡತಕ್ಕದ್ದಲ್ಲ.

(2) ಉಪಪ್ರಕರಣ (1)ರ ಮೇರೆಗಿನ ಡೆಪ್ಯುಟಿ ಕಮಿಷನರ ಆದೇಶದಿಂದ ತೊಂದರೆಗೊಳಗಾದ ಯಾರೇ ವ್ಯಕ್ತಿಯು, [1][ಅಂಥ ಆದೇಶದ ದಿನಾಂಕದಿಂದ ಅರವತ್ತು ದಿನಗಳೊಳಗೆ ರೀಜನಲ್ ಕಮೀಷನರ್ ಗೆ][1]ಅಪೀಲು ಮಾಡಿಕೊಳ್ಳಬಹುದು ಮತ್ತು [2][ಅದರ ಮೇಲೆ ರೀಜನಲ್ ಕಮೀಷನರ್‌ರ ತೀರ್ಮಾನವು ಅಂತಿಮವಾಗಿರತಕ್ಕದ್ದು.][2]

1. 2007ರ ಅಧಿನಿಯಮ 17ರ ಮೂಲಕ 5.1.2007 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
2. 2003ರ ಅಧಿನಿಯಮ 21ರ ಮೂಲಕ 26.5.2003 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**123. ಭೂಕಂದಾಯದ ಸಂದಾಯದಿಂದ ಪೂರ್ತಿಯಾಗಿ ವಿನಾಯಿತಿಗೊಳಿಸಲಾದ ಭೂಮಿಯ ಕಂದಾಯದ ನಿರ್ಧರಣೆ.–** ಭೂಕಂದಾಯದ ಸಂದಾಯದಿಂದ ಪೂರ್ತಿಯಾಗಿ ವಿನಾಯಿತಿಗೊಳಿಸಲಾದ ಭೂಮಿಗಳ ಮೇಲೆ ಯೋಗ್ಯವಾದ ಪೂರ್ತಿ ಕಂದಾಯವನ್ನು ನಿರ್ಧರಿಸುವುದಕ್ಕೆ ಮತ್ತು ದಾಖಲು ಮಾಡುವುದಕ್ಕೆ ಕಂದಾಯ ವ್ಯವಸ್ಥೆ ಅಧಿಕಾರಿಯನ್ನು ಈ ಅಧ್ಯಾಯದಲ್ಲಿರುವುದು ಯಾವುದೂ ಪ್ರತಿಬಂಧಿಸುವುದೆಂದು ಭಾವಿಸತಕ್ಕದ್ದಲ್ಲ.

**124. ಈ ಅಧಿನಿಯಮದ ಮೇರೆಗೆ ಕಂದಾಯದ ನಿರ್ಧರಣೆಯು ಸಾಧಾರಣ ಭೂಕಂದಾಯಕ್ಕೆ ಸೀಮಿತವಾಗಿರತಕ್ಕದ್ದು.–** ಈ ಅಧಿನಿಯಮದ ಮೇರೆಗೆ ಕಂದಾಯದ ನಿರ್ಧರಣೆಯು ಸಾಧಾರಣ ಭೂಕಂದಾಯಕ್ಕೆ ಸೀಮಿತವಾಗಿರತಕ್ಕದ್ದು ಮತ್ತು ಅಂಥ ನಿರ್ಧರಣೆಯಲ್ಲಿ[1][ತತ್ಕಾಲದಲ್ಲಿ ಜಾರಿಯಲ್ಲಿರುವ ಕಾನೂನಿನ][1] ಮೇರೆಗೆ ನೀರಿನ ಬಳಕೆಗೆ ಯಾವುದೇ ದರವನ್ನು ಅಥವಾ ಯಾವುದೇ ಉಪಕರವನ್ನು ವಿಧಿಸುವುದೂಸೇರಿರತಕ್ಕದ್ದು.

1. 1965ರ ಅಧಿನಿಯಮ 9ರ ಮೂಲಕ 1.4.1964 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][**ವಿವರಣೆ.–** "ಸಾಧಾರಣ ಭೂಕಂದಾಯ" ಎಂದರೆ, ರಾಜ್ಯ ಸರ್ಕಾರದ ಸ್ವತ್ತಾಗಿರುವ ಜಲಮೂಲದ ನೀರಿನ ಬಳಕೆಯಿಂದ ಯಾವುದೇ ಪ್ರಯೋಜನ ಹೊಂದದ ಯಾವುದೇ ಭೂಮಿಯ ಬಗ್ಗೆ ಸಂದಾಯ ಮಾಡಬೇಕಾಗಿರುವ ಭೂಕಂದಾಯ.][1]

1. 1965ರ ಅಧಿನಿಯಮ 9ರ ಮೂಲಕ 1.4.1964 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

**125. ನೀರಾವರಿಯ ಸೌಕರ್ಯಗಳ ಬಗ್ಗೆ ಭೂಕಂದಾಯ ನಿರ್ಧರಣೆ ಮಾಡುವುದಕ್ಕಾಗಿ ನಿರ್ದೇಶಿಸಲು ಸರ್ಕಾರದ ಅಧಿಕಾರ.–** ಈ ಅಧ್ಯಾಯದಲ್ಲಿ ಏನೇ ಒಳಗೊಂಡಿದ್ದರೂ, ಈ ಅಧ್ಯಾಯದ ಮೇರೆಗೆ ಯಾವ ಭೂಮಿಗೆ ಕಂದಾಯ ವ್ಯವಸ್ಥೆ ಮಾಡಲಾಗಿದೆಯೋ ಆ ಯಾವುದೇ ಭೂಮಿಯ ಮೇಲೆ, 114ನೇ ಪ್ರಕರಣದ ಮೇರೆಗೆ ಕಂದಾಯ ವ್ಯವಸ್ಥೆಯನ್ನು ಸರ್ಕಾರವು ನಿರ್ದೇಶಿಸಿದ ತರುವಾಯ ಪೂರ್ತಿಗೊಂಡಿದ್ದ, ಆದರೆ, ಭೂ ಹಿಡುವಳಿದಾರನು ಅಥವಾ ಅವನ ವೆಚ್ಚದಿಂದ ಮಾಡಿದ್ದ ನೀರಾವರಿ ಕಾಮಗಾರಿಗಳಿಂದಾಗಿ ಅಥವಾ ಈಗಿರುವ ಕಾಮಗಾರಿಗಳಲ್ಲಿ ಮಾಡಿದ ಸುಧಾರಣೆಗಳಿಂದಾಗಿ ದೊರೆತ ನೀರಿನಿಂದ ಒದಗಿಬರುವ ಹೆಚ್ಚಿನ ಪ್ರಯೋಜನಗಳ ಬಗ್ಗೆ ಕಂದಾಯ ವ್ಯವಸ್ಥೆಯ ಅವಧಿಯಲ್ಲಿ ಹೆಚ್ಚಿನ ಭೂಕಂದಾಯವನ್ನು ವಿಧಿಸತಕ್ಕದ್ದೆಂದು ರಾಜ್ಯ ಸರ್ಕಾರವು [1][ಯಾವುದೇ ಕಾಲದಲ್ಲಿ ನಿರ್ದೇಶಿಸಬಹುದು.][11][ಕರ್ನಾಟಕ][1] ನೀರಾವರಿ (ಅಭಿವೃದ್ಧಿ ಕೊಡುಗೆ ಮತ್ತು ನೀರು ದರ ವಿಧಿಸುವಿಕೆ) ಅಧಿನಿಯಮ, 1957ರ ([1][ಕರ್ನಾಟಕ][1] ಅಧಿನಿಯಮ, 1957ರ 28)ರ ಮೇರೆಗೆ ಇಂಥ ಹೆಚ್ಚಿನ ಪ್ರಯೋಜನದ ಬಗ್ಗೆ ನೀರು ದರವನ್ನು ವಿಧಿಸದಿದ್ದಾಗ ಮಾತ್ರ ಅಂಥ ಭೂಕಂದಾಯವನ್ನು ವಿಧಿಸತಕ್ಕದ್ದು:

1. 1973ರ ಕರ್ನಾಟಕ ಕಾನೂನುಗಳ ಆದೇಶದ ಅಳವಡಿಕೆಗಳ ಮೂಲಕ 01.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

ಪರಂತು, ರಾಜ್ಯ ಸರ್ಕಾರವು ಅಂಥ ನಿರ್ದೇಶನವನ್ನು ಕೊಡುವುದಕ್ಕೆ ಮುಂಚೆ ಸಂಬಂಧಪಟ್ಟ ಗ್ರಾಮದಲ್ಲಿ ಕನ್ನಡದಲ್ಲಿ ಮತ್ತು ಆ ಗ್ರಾಮದ ಯಾವುದಾದರೂ ಭಾಷೆಯಲ್ಲಿ, ರಾಜ್ಯ ಸರ್ಕಾರವು,ಆ ಬಗ್ಗೆ ನಿರ್ದೇಶಿಸಬಹುದಾದಂತೆ ಆ ಭಾಷೆಯಲ್ಲಿ ನೋಟೀಸನ್ನು ಪ್ರಕಟಿಸತಕ್ಕದ್ದು ಮತ್ತು ಅದರಲ್ಲಿ ಹೇಳಿರುವ ಸೂಚನೆಗೆ ಆಕ್ಷೇಪಣೆಗಳೇನಾದರೂ ಬಂದಿದ್ದರೆ, ಅವುಗಳನ್ನು ಪರ್ಯಾಲೋಚಿಸತಕ್ಕದ್ದು ಮತ್ತು ಅಂಥ ನೋಟೀಸು ಪ್ರಕಟವಾದ ದಿನಾಂಕದಿಂದ ಆರು ತಿಂಗಳ ಅವಧಿಯು ಕೊನೆಗೊಳ್ಳುವವರೆಗೆ ಅಂಥ ಯಾವ ನಿರ್ದೇಶವನ್ನೂ ಕೊಡತಕ್ಕದ್ದಲ್ಲ.

**126. ಕೆಲವು ಮೋಜಣಿ ಮತ್ತು ಕಂದಾಯ ವ್ಯವಸ್ಥೆ ಕಾರ್ಯಗಳನ್ನು ಮುಂದುವರಿಸುವಿಕೆ.–** ಈ ಅಧ್ಯಾಯದಲ್ಲಿ ಅಥವಾ 202ನೇ ಪ್ರಕರಣದ ಮೂಲಕ ನಿರಸಿತವಾದ ಯಾವುದೇ ಅಧಿನಿಯಮದಲ್ಲಿ ಅಥವಾ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ,–

(1) ಈ ಅಧಿನಿಯಮವು ಪ್ರಾರಂಭವಾಗುವುದಕ್ಕೆ ಮುಂಚೆ ಆರಂಭಿಸಲಾದ ಮತ್ತು ಆ ಕಾಲದಲ್ಲಿ ಮುಂದುವರಿಯುತ್ತಿರುವ ಮೋಜಣಿ ಮತ್ತು ಕಂದಾಯ ವ್ಯವಸ್ಥೆಯ ಕಾರ್ಯಗಳೆಲ್ಲವೂ ಈ ಅಧಿನಿಯಮದ ಉಪಬಂಧಗಳ ಮೇರೆಗೆ ಆರಂಭಿಸಲಾದವುಗಳು ಮತ್ತು ಮುಂದುವರಿಯುತ್ತಿರುವಂಥವು ಎಂದು ಭಾವಿಸತಕ್ಕದ್ದು; ಮತ್ತು

(2) ಈವರೆಗೆ ಮಾಡಿದ್ದ ಹಾಗೂ ಜಾರಿಗೆ ತಂದಿದ್ದ ಮತ್ತು ಈ ಅಧಿನಿಯಮವು ಪ್ರಾರಂಭವಾಗುವ ದಿನಾಂಕದಂದು ಜಾರಿಯಲ್ಲಿದ್ದ ಭೂಕಂದಾಯದ ಎಲ್ಲ ನಿರ್ಧರಣೆಗಳನ್ನು ಮತ್ತು ಎಲ್ಲ ಕಂದಾಯ ವ್ಯವಸ್ಥೆಗಳನ್ನು, ಈ ಅಧ್ಯಾಯದ ಉಪಬಂಧಗಳಿಗನುಸಾರವಾಗಿ ಮಾಡಲಾದವುಗಳು ಮತ್ತು ಜಾರಿಗೆ ತರಲಾದವುಗಳು ಎಂದು ಭಾವಿಸತಕ್ಕದ್ದು ಮತ್ತು 115ನೇ ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಪರಿಷ್ಕೃತ ಕಂದಾಯ ವ್ಯವಸ್ಥೆಯು ಜಾರಿಗೆ ಬರುವವರೆಗೆ ಅವು ಜಾರಿಯಲ್ಲಿರುತ್ತವೆ ಎಂದು ಭಾವಿಸತಕ್ಕದ್ದು.

## ಅಧ್ಯಾಯ-XI
## ಹಕ್ಕು ದಾಖಲೆ

**127. ಹಕ್ಕು ದಾಖಲೆ.-** (1) ಪ್ರತಿಯೊಂದು ಗ್ರಾಮದ ಬಗೆಗೂ, ನಿಯಮಿಸಿದ ರೀತಿಯಲ್ಲಿ ಹಕ್ಕು ದಾಖಲೆಯನ್ನು ತಯಾರಿಸತಕ್ಕದ್ದು ಮತ್ತು ಅಂಥ ದಾಖಲೆಯಲ್ಲಿ ಈ ಕೆಳಗಿನ ವಿವರಗಳು ಇರತಕ್ಕದ್ದು,-

(ಎ) ಭೂಮಿಯ ಹಿಡುವಳಿದಾರರು, ಅಧಿಭೋಗದಾರರು, ಒಡೆಯರು, ಅಡಮಾನಪಡೆದವರು, ಮಾಲೀಕರು ಅಥವಾ ಗೇಣಿದಾರರು ಆಗಿರುವ ವ್ಯಕ್ತಿಗಳ ಅಥವಾ ಆ ಭೂಮಿಯ ಗೇಣಿಯಅಥವಾ ಕಂದಾಯದ ಸಂದಾಯವನ್ನು ಯಾರಿಗೆ ಹಸ್ತಾಂತರಿಸಲಾಗಿದೆಯೋ ಆ ವ್ಯಕ್ತಿಗಳ ಹೆಸರುಗಳು:

(ಬಿ) ಅಂಥ ವ್ಯಕ್ತಿಗಳಿಗೆ ಇರುವ ಆಯಾ ಹಿತಾಸಕ್ತಿಯ ಸ್ವರೂಪ ಮತ್ತು ವ್ಯಾಪ್ತಿ ಮತ್ತು ಅದಕ್ಕೆ ಸಂಬಂಧಪಟ್ಟ ಷರತ್ತುಗಳು ಅಥವಾ ಹೊಣೆಗಳು (ಯಾವುವಾದರೂ, ಇದ್ದರೆ):

(ಸಿ) ಅಂಥ ವ್ಯಕ್ತಿಗಳಲ್ಲಿ ಯಾರಾದರೂ ಅಥವಾ ಯಾರಿಗಾದರೂ (ಯಾವುದಾದರೂ) ಸಂದಾಯ ಮಾಡಬೇಕಾಗಿರುವ ಗೇಣಿ ಅಥವಾ ಕಂದಾಯ (ಯಾವುದಾದರೂ ಇದ್ದರೆ); ಮತ್ತು

(ಡಿ)ನಿಯಮಿಸಬಹುದಾದಂಥ ಇತರ ವಿವರಗಳು.

(2) ನಿಯಮಿಸಬಹುದಾದಂಥ ಪ್ರದೇಶಗಳಲ್ಲಿ ನಿಯಮಿಸಬಹುದಾದಂಥ ಅಧಿಕಾರಿಗಳು ಹಕ್ಕು ದಾಖಲೆಗಳನ್ನು ಇಟ್ಟಿರತಕ್ಕದ್ದು ಮತ್ತು ಬೇರೆ ಬೇರೆ ಪ್ರದೇಶಗಳಿಗೆ ಬೇರೆ ಬೇರೆ ಅಧಿಕಾರಿಗಳನ್ನು ಗೊತ್ತುಪಡಿಸಬಹುದು.

(3) ಯಾವುದೇ ಗ್ರಾಮದ ಬಗ್ಗೆ (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿರುವ ಹಕ್ಕು ದಾಖಲೆಯ ತಯಾರಿಕೆಯು ಪೂರ್ಣವಾದಾಗ, ಹಾಗೆ ಅದು ಪೂರ್ಣಗೊಂಡ ಸಂಗತಿಯನ್ನು ರಾಜ್ಯಪತ್ರದಲ್ಲಿ ಮತ್ತು ನಿಯಮಿಸಬಹುದಾದಂಥ ರೀತಿಯಲ್ಲಿ ಅಧಿಸೂಚಿಸತಕ್ಕದ್ದು.

**128. ಹಕ್ಕುಗಳ ಆರ್ಜನೆಯನ್ನು ವರದಿ ಮಾಡುವುದು.-** (1) ಉತ್ತರಾಧಿಕಾರ, ಉತ್ತರ ಜೀವಿತಾಧಿಕಾರ, ವಾರಸು, ಪಾಲು, ಖರೀದಿ, ಅಡಮಾನ, ದಾನ, ಗೇಣಿ-ಇವುಗಳ ಮೂಲಕ ಅಥವಾ ಇತರ ರೀತಿಯಿಂದ, ಭೂಮಿಯ ಹಿಡುವಳಿದಾರನಾಗಿ, ಅಧಿಭೋಗದಾರನಾಗಿ, ಒಡೆಯನಾಗಿ, ಅಡಮಾನ ಪಡೆದವನಾಗಿ, ಮಾಲೀಕನಾಗಿ ಅಥವಾ ಗೇಣಿದಾರನಾಗಿ ಅಥವಾ ಅದರ ಗೇಣಿಯನ್ನು ಅಥವಾ ಕಂದಾಯವನ್ನು ಪಡೆಯುವ ಹಕ್ಕನ್ನು ಪಡೆದುಕೊಂಡಿರುವವನಾಗಿ ಯಾವುದೇ ಹಕ್ಕನ್ನು ಆರ್ಜಿಸುವ ಯಾರೇ ವ್ಯಕ್ತಿಯು, ಅಂಥ ಆರ್ಜನೆಯ ದಿನಾಂಕದಿಂದ ಮೂರು ತಿಂಗಳೊಳಗಾಗಿ ಆ ಗ್ರಾಮದಲ್ಲಿ ನಿಯಮಿಸಿದ ಅಧಿಕಾರಿಗೆ ಅಂಥ ತನ್ನಹಕ್ಕಿನ ಆರ್ಜನೆಯ ಬಗ್ಗೆ ಹೇಳಿ ಅಥವಾ ಮೌಕಿಕವಾಗಿ ವರದಿ ಮಾಡತಕ್ಕದ್ದು ಮತ್ತು ಸದರಿ ಅಧಿಕಾರಿಯು ಆ ವರದಿ ತಲುಪಿದ ಬಗ್ಗೆ ಹಾಗೆ ವರದಿ ಮಾಡುವ ವ್ಯಕ್ತಿಗೆ ಕೂಡಲೇ ಲಿಖಿತ ಸ್ವೀಕೃತಿ ಕೊಡತಕ್ಕದ್ದು:

ಪರಂತು, ಆ ಹಕ್ಕನ್ನು ಆರ್ಜಿಸುವ ವ್ಯಕ್ತಿಯು ಅಪ್ರಾಪ್ತ ವಯಸ್ಕನಾಗಿದ್ದರೆ ಅಥವಾ ಇತರ ರೀತಿಯಿಂದ ಅನರ್ಹನಾಗಿದ್ದರೆ, ಅವನ ಪಾಲಕನು ಅಥವಾ ಅವನ ಸ್ವತ್ತಿನ ಸ್ವಾಧೀನಹೊಂದಿರುವ ಇತರ ವ್ಯಕ್ತಿಯು ನಿಯಮಿಸಿದ ಅಧಿಕಾರಿಗೆ ವರದಿ ಮಾಡತಕ್ಕದ್ದು:

ಮತ್ತು ಪರಂತು, ನೋಂದಾಯಿತ ದಸ್ತಾವೇಜಿನ ಮೇರೆಗೆ ಹಕ್ಕನ್ನು ಆರ್ಜಿಸುವ ಯಾರೇ ವ್ಯಕ್ತಿಗೆ ನಿಯಮಿಸಿದ ಅಧಿಕಾರಿಗೆ ವರದಿ ಮಾಡುವ ಜವಾಬ್ದಾರಿಯಿಂದ ವಿನಾಯಿತಿ ಕೊಡತಕ್ಕದ್ದು.

[1][ಮತ್ತೂ ಪರಂತು, ಯಾರೇ ವ್ಯಕ್ತಿಯು ಭೂಮಿಗೆ ಸಂಬಂಧಿಸಿದಂತೆ ಅವನು ಆರ್ಜಿಸಿದ ಪಾಲುಗಾರಿಕೆಯ ಹಕ್ಕನ್ನು ಈ ಉಪ-ಪ್ರಕರಣದ ಮೇರೆಗೆ ವರದಿ ಮಾಡಿದಾಗ, ಆ ವರದಿಯ ಜೊತೆಗೆ, ಅಂಥ ಭೂಮಿಯ ಅಳತೆಗಳನ್ನು ಮತ್ತು ಎಲ್ಲೆಗಳನ್ನು ತೋರಿಸುವ ನಕ್ಷೆಯನ್ನು ಮತ್ತು ಇತರ ಗೊತ್ತುಪಡಿಸಿದ ವಿವರಗಳನ್ನು ಲಗತ್ತಿಸತಕ್ಕದ್ದು ಮತ್ತು ಅಂಥ ವ್ಯಕ್ತಿಯು ಲೈಸೆನ್ಸ್ ಹೊಂದಿದ ಮೋಜಣಿದಾರನಿಂದ ನಕ್ಷೆಯನ್ನು ತಯಾರಿಸಿಕೊಳ್ಳತಕ್ಕದ್ದು.]1

1. 1999 ರ ಅಧಿನಿಯಮ 14ರ ಮೂಲಕ 30.4.1999 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

**ವಿವರಣೆ 1:–** ಮೇಲೆ ಹೇಳಿದ ಹಕ್ಕುಗಳಲ್ಲಿ ಸ್ವಾಧೀನ ರಹಿತ ಅಡಮಾನವೂ ಸೇರುತ್ತದೆ, ಆದರೆ ಅನುಭೋಗದ ಹಕ್ಕುಗಳು ಅಥವಾ ಸ್ವತ್ತಿನ ವರ್ಗಾವಣೆ ಅಧಿನಿಯಮ, 1882 (ಕೇಂದ್ರ ಅಧಿನಿಯಮ 1882ರ 4)ರ 100ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ರೀತಿಯಲ್ಲಿ ಅಡಮಾನವೆನಿಸದಿರುವ ಋಣ ಭಾರವು ಸೇರುವುದಿಲ್ಲ.

**ವಿವರಣೆ 2:–** ಯಾವ ವ್ಯಕ್ತಿಯ ಪರವಾಗಿ ಅಡಮಾನವು ವಿಮೋಚಿತವಾಗಿದೆಯೋ ಅಥವಾ ಇಲ್ಲವಾಗಿದೆಯೋ ಅಥವಾ ಗೇಣಿ ಕೊನೆಗೊಂಡಿದೆಯೋ ಅಂಥ ವ್ಯಕ್ತಿಯು ಈ ಪ್ರಕರಣದ ಅರ್ಥದಲ್ಲಿ ಹಕ್ಕನ್ನು ಆರ್ಜಿಸುತ್ತಾನೆ.

(2) ಉಪಪ್ರಕರಣ (1)ರಲ್ಲಿ ಏನೇ ಒಳಗೊಂಡಿದ್ದರೂ, ಯಾವ ಅಧಿಕಾರಿಗೆ (1)ನೇ ಉಪಪ್ರಕರಣದ ಮೇರೆಗೆ ವರದಿ ಮಾಡಬಹುದೋ ಅಂಥ ಯಾರೇ ರೆವಿನ್ಯೂ ಅಧಿಕಾರಿಯನ್ನು ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ ನೇಮಿಸಬಹುದು. ಆ ಸಂದರ್ಭದಲ್ಲಿ, ಅಂಥ ಅಧಿಕಾರಿಯು ಆ ವರದಿ ತಲುಪಿದ ಬಗ್ಗೆ ಹಾಗೆ ವರದಿ ಮಾಡುವ ವ್ಯಕ್ತಿಗೆ ಲಿಖಿತ ಸ್ವೀಕೃತಿಯನ್ನು ಕೊಡತಕ್ಕದ್ದು ಮತ್ತು ಆ ವರದಿಯನ್ನು ಸಂಬಂಧಪಟ್ಟ ಗ್ರಾಮದ ಗೊತ್ತುಪಡಿಸಿದ ಅಧಿಕಾರಿಗೆ ಕಳುಹಿಸತಕ್ಕದ್ದು.

(3) ಯಾರೇ ವ್ಯಕ್ತಿಯು (1)ನೇ ಅಥವಾ (2)ನೇ ಉಪಪ್ರಕರಣದ ಮೇರೆಗೆ

(ಎ) ಹಕ್ಕನ್ನು ಆರ್ಜಿಸಿದ ದಿನಾಂಕದಿಂದ ಮೂರು ತಿಂಗಳುಗಳ ಅವಧಿಯ ತರುವಾಯ ಆದರೆ ಒಂದು ವರ್ಷದ ಅವಧಿಯೊಳಗಾಗಿ, ವರದಿಯನ್ನು ಸಲ್ಲಿಸಿದರೆ ಎರಡು ರೂಪಾಯಿ ದಂಡವನ್ನು ಸಂದಾಯ ಮಾಡಿದ ಮೇಲೆ ವರದಿಯನ್ನು ಸ್ವೀಕರಿಸತಕ್ಕದ್ದು;

(ಬಿ) ಅಂಥ ಆರ್ಜನೆಯ ದಿನಾಂಕದಿಂದ ಒಂದು ವರ್ಷದ ಅವಧಿಯ ತರುವಾಯ,–

(i) ಗೊತ್ತುಪಡಿಸಿದ ಅಧಿಕಾರಿಗೆ (1)ನೇ ಉಪಪ್ರಕರಣದ ಮೇರೆಗೆ ವರದಿಯನ್ನು ಮಾಡಿದ್ದ ಸಂದರ್ಭದಲ್ಲಿ ತಹಶೀಲ್ದಾರನು ಮಾಡಬಹುದಾದ ಆದೇಶದ ಮೇರೆಗೆ; ಅಥವಾ

(ii) ರೆವಿನ್ಯೂಅಧಿಕಾರಿಗೆ (2)ನೇ ಉಪಪ್ರಕರಣದ ಮೇರೆಗೆ ವರದಿ ಮಾಡಿದ ಸಂದರ್ಭಧಲ್ಲಿ ಅಂಥ ಅಧಿಕಾರಿಯು ಮಾಡಬಹುದಾದ ಆದೇಶದ ಮೇರೆಗೆ;

ಎರಡು ರೂಪಾಯಿಗೆ ಕಡಿಮೆಯಿಲ್ಲದ ಆದರೆ ಹತ್ತು ರೂಪಾಯಿಗೆ ಮೀರದ ದಂಡವನ್ನು ಸಂದಾಯ ಮಾಡಿದ ಮೇಲೆ ವರದಿಯನ್ನು ಸ್ವೀಕರಿಸತಕ್ಕದ್ದು.

(4) ಯಾವ ದಸ್ತಾವೇಜಿನ ಆಧಾರದ ಮೇಲೆ ಯಾವುದೇ ಭೂಮಿಯಲ್ಲಿ ಯಾರೇ ವ್ಯಕ್ತಿಯು ಹಿಡುವಳಿದಾರನಾಗಿ, ಅಧಿಭೋಗದಾರನಾಗಿ, ಒಡೆಯನಾಗಿ, ಅಡಮಾನ ಪಡೆದವನಾಗಿ, ಭೂಮಾಲೀಕನಾಗಿ, ಗೇಣಿದಾರನಾಗಿ ಅಥವಾ ಗೇಣಿಯನ್ನು ಅಥವಾ ಕಂದಾಯವನ್ನು ಪಡೆಯುವ ಹಕ್ಕನ್ನು ಪಡೆದವನಾಗಿ ಹಕ್ಕನ್ನು ಆರ್ಜಿಸುತ್ತಾನೋ ಅಂಥ ಯಾವುದೇ ದಸ್ತಾವೇಜನ್ನು ನೋಂದಣಿ ಫೀಜು ಸಂದಾಯಮಾಡಲು ಹೊಣೆಗಾರನಾಗಿರುವ ವ್ಯಕ್ತಿಯು ಹಕ್ಕು ದಾಖಲೆಯಲ್ಲಿ ಮತ್ತು 129ನೇ ಪ್ರಕರಣದಲ್ಲಿ ಹೇಳಿರುವ ರಿಜಿಸ್ಟರುಗಳಲ್ಲಿ ಅವಶ್ಯವಾದ ನಮೂನೆಗಳನ್ನು ಮಾಡುವುದಕ್ಕಾಗಿ ನಿಯಮಿಸಬಹುದಾದಂಥ ಫೀಜುಗಳನ್ನೂ ಸಹ ನೋಂದಣಿ ಪ್ರಾಧಿಕಾರಿಗೆ ಸಂದಾಯ ಮಾಡಿದ ಹೊರತು, ಭಾರತ ನೋಂದಣಿ ಅಧಿನಿಯಮ, 1908 (ಕೇಂದ್ರ ಅಧಿನಿಯಮ 1908ರ 12)ರ ಮೇರೆಗೆ ನೋಂದಾಯಿಸತಕ್ಕದ್ದಲ್ಲ; ಮತ್ತು ಅಂಥ ದಸ್ತಾವೇಜು ನೋಂದಣಿಯಾದ ಮೇಲೆ, ನೋಂದಣಿ ಪ್ರಾಧಿಕಾರಿಯು ಆ ಹಕ್ಕಿನ ಆರ್ಜನೆಯ ಬಗ್ಗೆ ಗೊತ್ತುಪಡಿಸಿದ ಅಧಿಕಾರಿಗೆ ವರದಿ ಮಾಡತಕ್ಕದ್ದು.

**129. ಹಕ್ಕು ಬದಲಾವಣೆಗಳ ನೋಂದಣಿ ಮತ್ತು ತಕರಾರು ಪ್ರಕರಣಗಳ ರಿಜಿಸ್ಟರು.**– (1) ಗೊತ್ತುಪಡಿಸಿದ ಅಧಿಕಾರಿಯು 128ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ತನಗೆ ಸಲ್ಲಿಸಿದ ಅಥವಾ ಸದರಿ ಪ್ರಕರಣದ (2)ನೇ ಅಥವಾ (4)ನೇ ಉಪಪ್ರಕರಣದ ಮೇರೆಗೆ ತಾನು ಸ್ವೀಕರಿಸಿದ ಪ್ರತಿಯೊಂದು ವರದಿಯನ್ನೂ ಹಕ್ಕು ಬದಲಾವಣೆ ರಿಜಿಸ್ಟರಿನಲ್ಲಿ ನಮೂದಿಸತಕ್ಕದ್ದು.

(2) ಗೊತ್ತುಪಡಿಸಿದ ಅಧಿಕಾರಿಯು ಹಕ್ಕು ಬದಲಾವಣೆ ರಿಜಿಸ್ಟರಿನಲ್ಲಿ ನಮೂದು ಮಾಡಿದಾಗ, ಅದೇ ಕಾಲದಲ್ಲಿ ನಮೂದಿನ ಒಂದು ಪೂರ್ಣ ಪ್ರತಿಯನ್ನು ಚಾವಡಿಯಲ್ಲಿ ಎದ್ದು ಕಾಣುವ ಸ್ಥಳದಲ್ಲಿ ಅಂಟಿಸತಕ್ಕದ್ದು ಮತ್ತು ಆ ಹಕ್ಕು ಬದಲಾವಣೆಯಲ್ಲಿ, ಹಿತಾಸಕ್ತಿ ಉಳ್ಳವರೆಂದು ಹಕ್ಕು ದಾಖಲೆಗಳಿಂದ ಅಥವಾ ಹಕ್ಕು ಬದಲಾವಣೆ ರಿಜಿಸ್ಟರಿನಿಂದ ಕಂಡು ಬರುವ ಎಲ್ಲ ವ್ಯಕ್ತಿಗಳಿಗೆ, ಮತ್ತು ಅದರಲ್ಲಿ ಹಿತಾಸಕ್ತಿ ಉಳ್ಳವನೆಂದು ನಂಬಲು ತನಗೆ ಕಾರಣವಿರುವ ಇತರ ಯಾರೇ ವ್ಯಕ್ತಿಗೆ ಲಿಖಿತ ತಿಳಿವಳಿಕೆಯನ್ನು ಕೊಡತಕ್ಕದ್ದು.

(3) ಹಕ್ಕು ಬದಲಾವಣೆಗಳ ರಿಜಿಸ್ಟರಿನಲ್ಲಿ (1)ನೇ ಉಪಪ್ರಕರಣದ ಮೇರೆಗೆ ಮಾಡಿದ ಯಾವುದೇ ನಮೂದಿನ ಬಗ್ಗೆ ಗೊತ್ತುಪಡಿಸಿದ ಅಧಿಕಾರಿಗೆ ಮೌಖಿಕವಾಗಿ ಅಥವಾ ಬರಹದಲ್ಲಿ ಯಾವುದೇ ಆಕ್ಷೇಪಣೆ ಮಾಡಿದರೆ, ಆ ಆಕ್ಷೇಪಣೆಗಳ ವಿವರಗಳನ್ನು ತಕರಾರು ಪ್ರಕರಣಗಳ ರಿಜಿಸ್ಟರಿನಲ್ಲಿ ನಮೂದಿಸುವುದು ಗೊತ್ತುಪಡಿಸಿದ ಅಧಿಕಾರಿಯ ಕರ್ತವ್ಯವಾಗಿರತಕ್ಕದ್ದು.

(4) ತಕರಾರು ಪ್ರಕರಣಗಳ ರಿಜಿಸ್ಟರಿನಲ್ಲಿ ನಮೂದಿಸಿದ ಆಕ್ಷೇಪಣೆಗಳನ್ನು ಮತ್ತು ವಿಚಾರಣೆಯ ಕಾಲದಲ್ಲಿ ಮಾಡಬಹುದಾದಂಥ ಇತರ ಆಕ್ಷೇಪಣೆಗಳನ್ನು ಗೊತ್ತುಪಡಿಸಬಹುದಾದಂಥ ಅಧಿಕಾರಿಯು ಗೊತ್ತುಪಡಿಸಬಹುದಾದಂಥ ರೀತಿಯಲ್ಲಿ ವಿಚಾರಣೆ ಮಾಡತಕ್ಕದ್ದು ಮತ್ತು ಇತ್ಯರ್ಥಗೊಳಿಸತಕ್ಕದ್ದು. ಅಂಥ ಆಕ್ಷೇಪಣೆಗಳನ್ನು ಇತ್ಯರ್ಥ ಮಾಡಿದ ಆದೇಶಗಳನ್ನು, ಅಂಥ ಅಧಿಕಾರಿಯು ಹಕ್ಕು ಬದಲಾವಣೆ ರಿಜಿಸ್ಟರಿನಲ್ಲಿ ದಾಖಲಿಸತಕ್ಕದ್ದು.

(5) ಉಪಪ್ರಕರಣ (4)ರ ಮೇರೆಗೆ ವಿಚಾರಣೆ ನಡೆಸುವ ಅಧಿಕಾರಿಗೆ, ಈ ಅಧಿನಿಯಮದ ಮೇರೆಗೆ ವಿಧ್ಯುಕ್ತ ಅಥವಾ ಸಂಕ್ಷಿಪ್ತ ವಿಚಾರಣೆಯನ್ನು ಮಾಡುವಾಗ ರೆವಿನ್ಯೂ ಅಧಿಕಾರಿಗೆ IIIನೇ ಅಧ್ಯಾಯದ ಮೇರಗೆ ಇರುವ ಎಲ್ಲ ಅಧಿಕಾರಗಳು ಇರತಕ್ಕದ್ದು

(6) ಹಕ್ಕು ಬದಲಾವಣೆ ರಿಜಿಸ್ಟರಿನಲ್ಲಿರುವ ನಮೂದುಗಳನ್ನು ಪರೀಕ್ಷಿಸತಕ್ಕದ್ದು ಮತ್ತು ಸಂದರ್ಭಾನುಸಾರ, ಸರಿಯೆಂದು ಕಂಡು ಬಂದ ಮೇಲೆ ಅಥವಾ ಸರಿಪಡಿಸಿದ ತರುವಾಯ, ಗೊತ್ತುಪಡಿಸಬಹುದಾದಂಥ ಅಧಿಕಾರಿಯು ಅವುಗಳನ್ನು ಪ್ರಮಾಣೀಕರಿಸತಕ್ಕದ್ದು.

(7) ಹಕ್ಕು ಬದಲಾವಣೆಗಳ ರಿಜಿಸ್ಟರಿನಿಂದ ಹಕ್ಕುದಾಖಲೆಗೆ ಗೊತ್ತುಪಡಿಸಿದ ರೀತಿಯಲ್ಲಿ ನಮೂದುಗಳ ವರ್ಗಾವಣೆಮಾಡತಕ್ಕದ್ದು: ಪರಂತು, ಹಕ್ಕು ಬದಲಾವಣೆಗಳ ರಿಜಿಸ್ಟರಿನಲ್ಲಿರುವ ನಮೂದನ್ನು ಕ್ರಮಬದ್ಧವಾಗಿ ಪ್ರಮಾಣೀಕರಿಸುವವರೆಗೆ, ಅದನ್ನು ಹಕ್ಕು ದಾಖಲೆಗೆ ವರ್ಗಾಯಿಸತಕ್ಕದ್ದಲ್ಲ.

[1][**129ಎ. ಪಟ್ಟಾ ಪುಸ್ತಕ.–** (1) ಪ್ರತಿಯೊಬ್ಬ ಕೃಷಿಭೂಮಿಯ ಹಿಡುವಳಿದಾರನಿಗೆ (ಗೇಣಿದಾರನು ಅದಕ್ಕೆ ಭೂ ಕಂದಾಯವನ್ನು ಸಂದಾಯ ಮಾಡುವುದಕ್ಕೆ ಹೊಣೆಗಾರನಾಗಿದ್ದರೆ ಅವನನ್ನೂ ಒಳಗೊಂಡಂತೆ) ಗೊತ್ತುಪಡಿಸಿದ ಅಧಿಕಾರಿಯು, ಅಂಥ ಭೂಮಿಗೆ ಸಂಬಂಧಿಸಿದ ಹಕ್ಕುಗಳ ದಾಖಲೆಯ ಪ್ರತಿಯನ್ನು ಒಳಗೊಂಡ ಪಟ್ಟಾ ಪುಸ್ತಕವನ್ನು ಸರಬರಾಜು ಮಾಡತಕ್ಕದ್ದು.

(2) ಪಟ್ಟಾ ಪುಸ್ತಕವು ಭೂಮಿಗೆ ಸಂಬಂಧಿಸಿದಂತೆ ಭೂಕಂದಾಯದ ಸಂದಾಯಕ್ಕೆ ಸಂಬಂಧಿಸಿದ ಮಾಹಿತಿಯನ್ನು ಹಾಗೂ ಹಿಡುವಳಿದಾರನು, ಸಂದರ್ಭಾನುಸಾರ, ಗೇಣಿದಾರನು ರಾಜ್ಯ ಸರ್ಕಾರಕ್ಕೆ ಸಲ್ಲಿಸಬೇಕಾದ ಬಾಕಿಗಳನ್ನು ಸಹ ಒಳಗೊಂಡಿರತಕ್ಕದ್ದು, ಮತ್ತು ಗ್ರಾಮ ದಾಖಲೆಗಳಲ್ಲಿ ತೋರಿಸಿದಂತೆ ಸಾಗುವಳಿ ಭೂಮಿಗೆ ಸಂಬಂಧಿಸಿದಂಥ ಮತ್ತು ಬೆಳಗಳ ಪ್ರದೇಶದ ಮಾಹಿತಿಯನ್ನು ಹಾಗೂ ಗೊತ್ತುಪಡಿಸಬಹುದಾದಂಥ ಇತರ ಸಂಗತಿಗಳನ್ನು ಅದರಲ್ಲಿ ತೋರಿಸತಕ್ಕದ್ದು.

(3) ಪಟ್ಟಾ ಪುಸ್ತಕವನ್ನು, ಆ ಬಗ್ಗೆ ರಾಜ್ಯ ಸರ್ಕಾರವು ರೂಪಿಸಿದ ನಿಯಮಗಳಿಗೆ ಅನುಸಾರವಾಗಿ ಸಿದ್ಧಪಡಿಸತಕ್ಕದ್ದು, ನೀಡತಕ್ಕದ್ದು ಮತ್ತು ಇಡತಕ್ಕದ್ದು. ಆ ಪುಸ್ತಕವನ್ನು ಸಿದ್ಧಪಡಿಸುವುದಕ್ಕಾಗಿ, ನೀಡುವುದಕ್ಕಾಗಿ ಹಾಗೂ ಇಡುವುದಕ್ಕಾಗಿ ವಿಧಿಸಬಹುದಾದ ಶುಲ್ಕಗಳಿಗೆ ಅಂಥ ನಿಯಮಗಳಲ್ಲಿ ಉಪಬಂಧ ಕಲ್ಪಿಸಬಹುದು.][1]

1. 1982ರ ಅಧಿನಿಯಮ 23ರ ಮೂಲಕ 15.07.1982 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

**130. ಮಾಹಿತಿಯನ್ನು ಒದಗಿಸಲು ಜವಾಬ್ದಾರಿ.–** (1) ಈ ಅಧ್ಯಾಯದ ಮೇರೆಗೆ ಯಾವ ವ್ಯಕ್ತಿಯ ಹಕ್ಕುಗಳನ್ನು, ಹಿತಾಸಕ್ತಿಗಳನ್ನು ಅಥವಾ ಹೊಣೆಗಳನ್ನು ಯಾವುದೇ ದಾಖಲೆಯಲ್ಲಿ ಅಥವಾ ರಿಜಿಸ್ಟರಿನಲ್ಲಿ ನಮೂದಿಸುವುದು ಅಗತ್ಯವಾಗಿದೆಯೋ ಅಥವಾ ನಮೂದಿಸಲಾಗಿದೆಯೋ ಅಂಥ ಯಾರೇ ವ್ಯಕ್ತಿಯು, ದಾಖಲೆಯನ್ನು ಅಥವಾ ರಿಜಿಸ್ಟರನ್ನು ಸಂಕಲನ ಮಾಡುವಲ್ಲಿ ಅಥವಾ ಪರಿಷ್ಕರಿಸುವಲ್ಲಿ ತೊಡಗಿದ ಯಾರೇ ಅಧಿಕಾರಿಯು ಕಡ್ಡಾಯವಾಗಿ ಕೋರಿದಾಗ, ಅವುಗಳ ಸರಿಯಾದ ಸಂಕಲನಕ್ಕೆ ಮತ್ತು ಪರಿಷ್ಕರಣಕ್ಕೆ ಅವಶ್ಯವಾದಂಥ ಮತ್ತು ತನಗೆ ತಿಳಿದಿರಬಹುದಾದ ಅಥವಾ ತನ್ನ ಸ್ವಾಧೀನದಲ್ಲಿರಬಹುದಾದ ಅಥವಾ ತನ್ನ ಅಧಿಕಾರಕ್ಕೊಳಪಟ್ಟಿರಬಹುದಾದಂಥ ಎಲ್ಲ ಮಾಹಿತಿಗಳನ್ನು ಅಥವಾ

ದಸ್ತಾವೇಜುಗಳನ್ನು ಹಾಗೆ ಕಡ್ಡಾಯವಾಗಿ ಕೋರಿಕೆ ಕಳುಹಿಸಿದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಅವನ ಪರಿಶೀಲನೆಗಾಗಿ ಒದಗಿಸಲು ಅಥವಾ ಹಾಜರುಪಡಿಸಲು ಬದ್ಧನಾಗಿರತಕ್ಕದ್ದು.

(2) ಉಪಪ್ರಕರಣ (1)ರ ಮೇರೆಗೆ ಕಡ್ಡಾಯವಾಗಿ ಕೋರಿದ್ದಾಗ ಯಾವ ಅಧಿಕಾರಿಗೆ ಮಾಹಿತಿಯನ್ನು ಒದಗಿಸಲಾಗಿದೆಯೋ ಅಥವಾ ಯಾವುದೇ ದಸ್ತಾವೇಜನ್ನು ಹಾಜರುಪಡಿಸಲಾಗಿದೆಯೋ ಆ ಅಧಿಕಾರಿಯು ಅವುಗಳನ್ನು ಒದಗಿಸಿದ ಅಥವಾ ಹಾಜರುಪಡಿಸಿದ ವ್ಯಕ್ತಿಗೆ ಅವುಗಳುತಲುಪಿರುವ ಬಗ್ಗೆ ಲಿಖಿತ ಸ್ವೀಕೃತಿಯನ್ನು ಕೂಡಲೇ ಕೊಡತಕ್ಕದ್ದು[1][ಅಥವಾ ಅಗತ್ಯಪಡಿಸಿದರೆ, ಅದರ ಪ್ರತಿಯನ್ನು ಇಟ್ಟುಕೊಂಡ ತರುವಾಯ ಕೂಡಲೇ ಅದನ್ನು ಮರಳಿಸಬಹುದು][1] ಮತ್ತು ಅದನ್ನು ಹಾಜರುಪಡಿಸಿರುವುದನ್ನು ಮತ್ತು ಹಾಜರುಪಡಿಸಿದ ದಿನಾಂಕವನ್ನು ತೋರಿಸುವ ಟಿಪ್ಪಣಿಯನ್ನು ಅಂಥ ಯಾವುದೇ ದಸ್ತಾವೇಜಿನ ಮೇಲೆ ಬರೆದು ತನ್ನ ಸಹಿ ಹಾಕತಕ್ಕದ್ದು.

1. 1982ರ ಅಧಿನಿಯಮ 23ರ ಮೂಲಕ 15.07.1982 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(3) ಉಪಪ್ರಕರಣ (1)ರ ಮೂಲಕ ಅಗತ್ಯಪಡಿಸಿದ ಮಾಹಿತಿಯನ್ನು ಅಥವಾ ದಸ್ತಾವೇಜನ್ನು ಸದರಿ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಅವಧಿಯೊಳಗಾಗಿ ಒದಗಿಸಲು ಅಥವಾ ಹಾಜರುಪಡಿಸಲು ತಪ್ಪುವ ಯಾರೇ ವ್ಯಕ್ತಿಯು, ಇಪ್ಪತ್ತೈದು ರೂಪಾಯಿಗಳಿಗೆ ಮೀರದಂತೆ [1][ತಹಶೀಲ್ದಾರನು][1] ಗೊತ್ತುಪಡಿಸಬಹುದಾದ ದಂಡವನ್ನು ಸಂದಾಯ ಮಾಡಲು ಬದ್ಧನಾಗಿರತಕ್ಕದ್ದು ಮತ್ತು ದಂಡವಾಗಿ ಸಂದಾಯವಾಗಬೇಕಾಗಿರುವ ಮೊಬಲಗು ಭೂಕಂದಾಯದ ಬಾಕಿಯಂತೆ ವಸೂಲೀಯವಾಗಿರತಕ್ಕದ್ದು:

1. 1970ರ ಅಧಿನಿಯಮ 5ರ ಮೂಲಕ 23.10.1969 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

ಪರಂತು, ಸಂಬಂಧಪಟ್ಟ ವ್ಯಕ್ತಿಗೆ ಅಹವಾಲು ಹೇಳಿಕೊಳ್ಳಲು ಯುಕ್ತವಾದ ಅವಕಾಶವನ್ನು ಕೊಡದೆ, ಈ ಉಪಪ್ರಕರಣದ ಮೇರೆಗೆ ಯಾವ ದಂಡವನ್ನೂ ವಿಧಿಸತಕ್ಕದ್ದಲ್ಲ.

**131. ನಕಾಶೆಗಳನ್ನು ತಯಾರಿಸಲು ಸಹಾಯಕ್ಕಾಗಿ ಕಡ್ಡಾಯ ಕೋರಿಕೆ.–** ಈ ಬಗ್ಗೆ ರಾಜ್ಯ ಸರ್ಕಾರವು ಮಾಡಿದ ನಿಯಮಗಳಿಗೆ ಒಳಪಟ್ಟು,

(ಎ) ಈ ಅಧ್ಯಾಯದ ಮೇರೆಗೆ ಯಾವುದೇ ದಾಖಲೆಯ ಅಥವಾ ರಿಜಿಸ್ಟರಿನ ಸಲುವಾಗಿ ಅಥವಾ ಅವುಗಳಿಗೆ ಸಂಬಂಧಪಟ್ಟಂತೆ ಅಗತ್ಯವಿರುವ ಯಾವುದೇ ನಕಾಶೆಯನ್ನು ಅಥವಾ ನಕ್ಷೆಯನ್ನು ತಯಾರಿಸುವ ಅಥವಾ ಪರಿಷ್ಕರಿಸುವ ಉದ್ದೇಶಕ್ಕಾಗಿ ಯಾರೇ ರೆವಿನ್ಯೂಅಧಿಕಾರಿಯು ಅಥವಾ ಗೊತ್ತುಪಡಿಸಿದ ಅಧಿಕಾರಿಯು, 107ನೇ ಪ್ರಕರಣದ ಮೇರೆಗೆ ಮೋಜಣಿ ಅಧಿಕಾರಿಗಿರುವ ಅಧಿಕಾರಗಳ ಪೈಕಿ, ಮಜೂರಿ ಮೇಲೆ ನಿಯೋಜಿಸಿಕೊಂಡಿರುವ ದುಡಿಮೆಗಾರನಿಗೆ ತಗಲುವ ಖರ್ಚು ವೆಚ್ಚವನ್ನು ನಿರ್ಧರಿಸುವ ಅಧಿಕಾರವನ್ನುಳಿದು, ಇತರ ಯಾವುವೇ ಅಧಿಕಾರಗಳನ್ನು ಚಲಾಯಿಸಬಹುದು; ಮತ್ತು

(ಬಿ) ಯಾರೇ ವ್ಯಕ್ತಿಯು ಅರ್ಜಿ ಸಲ್ಲಿಸಿದಾಗ ಅಂಥ ನಕಾಶೆ ತಯಾರಿಕೆಯನ್ನು ತಯಾರಿಸಿದರೆ ಅಥವಾ ಪರಿಷ್ಕರಣೆ ಮಾಡಿದರೆ, ಅಸಿಸ್ಟೆಂಟ್ ಕಮಿಷನರು ಅಥವಾ ಮೋಜಣಿ ಅಧಿಕಾರಿಯ ದರ್ಜೆಗಿಂತ ಕಡಿಮೆಯಿಲ್ಲದ ದರ್ಜೆಯ ಯಾರೇ ರೆವಿನ್ಯೂ ಅಧಿಕಾರಿಯು ಅಂಥ ನಕಾಶೆಯ ಅಥವಾ ನಕ್ಷೆಯ ತಯಾರಿಕೆಯ ಅಥವಾ ಪರಿಷ್ಕರಣೆ ಖರ್ಚನ್ನು ಮತ್ತು ಬರವಣಿಗೆ ಕೆಲಸದ ಮತ್ತು ಮೇಲ್ವಿಚಾರಣೆಯ ಖರ್ಚು ಸಮೇತವಾಗಿ ಎಲ್ಲ ಸಾದಿಲ್ವಾರು ವೆಚ್ಚಗಳನ್ನು ನಿರ್ಧರಿಸಬಹುದು; ಮತ್ತು ಅಂಥ ಖರ್ಚುಗಳು ಅಂಥ ವ್ಯಕ್ತಿಯಿಂದ ಭೂಕಂದಾಯದ ಬಾಕಿಯಂತೆ ವಸೂಲೀಯವಾಗಿರತಕ್ಕದ್ದು.

[1][(ಸಿ) ಯಾರೇ ವ್ಯಕ್ತಿಯು, 128ನೇ ಪ್ರಕರಣದ (1)ನೇ ಉಪ–ಪ್ರಕರಣದ ಮೂರನೇ ಪರಂತುಕಕ್ಕೆ ಅನುಸಾರವಾಗಿ ತನ್ನ ಅಧಿಭೋಗದ ಹಕ್ಕನ್ನು ವರದಿ ಮಾಡುವಾಗ ಅಥವಾ ಯಾರೇ ವ್ಯಕ್ತಿಯು ಮೋಜಣಿಯ ಅಥವಾ ಉಪ ಸಂಖ್ಯೆಯ ಭಾಗವಾಗಿರುವ ಯಾವುದೇ ಭೂಮಿಯನ್ನು ವರ್ಗಾವಣೆ ಮಾಡುವಾಗ, ನೋಂದಣಿ ಪ್ರಾಧಿಕಾರದ ಮುಂದೆ ಹಕ್ಕುಪತ್ರವನ್ನು ಹಾಜರುಪಡಿಸುವ ಉದ್ದೇಶಕ್ಕಾಗಿ ಲೈಸೆನ್ಸ್ ಹೊಂದಿದ ಮೋಜಣಿದಾರನಿಂದ ಸದರಿ ಸ್ವತ್ತಿನ ನಕ್ಷೆಯನ್ನು ಸಿದ್ಧಪಡಿಸಿಕೊಳ್ಳತಕ್ಕದ್ದು][1]

1. 1999ರ ಅಧಿನಿಯಮ 14ರ ಮೂಲಕ 30.04.1999 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

**132. ದಾಖಲೆಗಳ ಪ್ರಮಾಣಿತ ಪ್ರತಿಗಳನ್ನು ವಾದಪತ್ರಕ್ಕೆ ಅಥವಾ ಅರ್ಜಿಗೆ ಲಗತ್ತಿಸುವುದು.–** (1) ಈ ಅಧ್ಯಾಯವು ಅನ್ವಯವಾಗುವ ಯಾವುದೇ ಪ್ರದೇಶದಲ್ಲಿ ಇರುವ ಭೂಮಿಗೆ ಸಂಬಂಧಿಸಿದ, ಈ ಮುಂದೆ ವಿವರಿಸಿರುವ ಪ್ರತಿಯೊಂದು ದಾವೆಯಲ್ಲಿ ಅಥವಾ ಅರ್ಜಿಯಲ್ಲಿ ವಾದಿಯು ಅಥವಾ ಅರ್ಜಿದಾರನು ಅಂಥ ಭೂಮಿಗೆ ಸಂಬಂಧಿಸಿದ ಹಕ್ಕು

ದಾಖಲೆಯಲ್ಲಿ ಅಥವಾ ಹಕ್ಕು ಬದಲಾವಣೆ ರಿಜಿಸ್ಟರಿನಲ್ಲಿ ಇರುವ ಯಾವುದೇ ನಮೂದಿನ ಪ್ರಮಾಣಿತ ಪ್ರತಿಯನ್ನು, ವಾದಪತ್ರಕ್ಕೆ ಅಥವಾ ಅರ್ಜಿಗೆ ಲಗತ್ತಿಸತಕ್ಕದ್ದು.

(2) ಸಾಕೆಂದು ನ್ಯಾಯಾಲಯವು ಭಾವಿಸುವ ಯಾವುದೇ ಕಾರಣದಿಂದಾಗಿ ವಾದಿಯು ಅಥವಾ ಅರ್ಜಿದಾರನು, ಹಾಗೆ ಮಾಡಲು ತಪ್ಪಿದರೆ, ನ್ಯಾಯಾಲಯವು ಗೊತ್ತುಪಡಿಸುವ ಯುಕ್ತ ಕಾಲದೊಳಗಾಗಿ ಅಂಥ ಪ್ರಮಾಣಿತ ಪ್ರತಿಯನ್ನು ಅವನು ಹಾಜರುಪಡಿಸತಕ್ಕದ್ದು ಮತ್ತು ಅಂಥ ಪ್ರಮಾಣಿತ ಪ್ರತಿಯನ್ನು ಹಾಗೆ ಲಗತ್ತಿಸಿರದಿದ್ದರೆ ಅಥವಾ ಹಾಜರುಪಡಿಸಿರದಿದ್ದರೆ, ವಾದಪತ್ರವನ್ನು ಅಥವಾ ಅರ್ಜಿಯನ್ನು ತಿರಸ್ಕರಿಸತಕ್ಕದ್ದು; ಆದರೆ, ಪ್ರಮಾಣ ಪ್ರತಿಯನ್ನು ಲಗತ್ತಿಸಿ ಅದೇ ವ್ಯಾಜ್ಯ ಕಾರಣಕ್ಕೆ ಸಂಬಂಧಪಟ್ಟಂತೆ ಹೊಸ ವಾದಪತ್ರವನ್ನು, ಅಥವಾ ಅದೇ ವಿಷಯಕ್ಕೆ ಸಂಬಂಧಪಟ್ಟಂತೆ ಹೊಸ ಅರ್ಜಿಯನ್ನು ಹಾಜರುಪಡಿಸುವುದನ್ನು, ಹಾಗೆ ತಿರಸ್ಕರಿಸಿರುವುದನ್ನು ಪ್ರತಿಬಂಧಿಸತಕ್ಕದ್ದಲ್ಲ.

(3) ಯಾವ ಪ್ರಕರಣದಲ್ಲಿ ಅಂಥ ಯಾವುದೇ ನಮೂದಿನ ಪ್ರಮಾಣಿತ ಪ್ರತಿಯನ್ನು ದಾಖಲು ಮಾಡಲಾಗಿದೆಯೋ ಆ ಯಾವುದೇ ಪ್ರಕರಣದ ಇತ್ಯರ್ಥದ ತರುವಾಯ, ಅಂಥ ನಮೂದಿನಲ್ಲಿ ಕಂಡು ಬಂದ ಯಾವುದೇ ತಪ್ಪನ್ನು ಮತ್ತು ಡಿಕ್ರಿಯ ಅಥವಾ ಆದೇಶದ ಕಾರಣದಿಂದ ಅದರಲ್ಲಿ ಮಾಡುವುದು ಅಗತ್ಯವಿರಬಹುದಾದ ಯಾವುದೇ ಬದಲಾವಣೆಯನ್ನು ನ್ಯಾಯಾಲಯವು ಡೆಪ್ಯುಟಿ ಕಮಿಷನರಿಗೆತಿಳಿಸತಕ್ಕದ್ದು ಮತ್ತು ಅಂಥ ತಿಳಿವಳಿಕೆ ಪತ್ರದ ಪ್ರತಿಯನ್ನು ದಾಖಲೆಯೊಂದಿಗೆ ಇಡತಕ್ಕದ್ದು. ಇಂಥ ಸಂದರ್ಭಗಳಲ್ಲಿ ಡೆಪ್ಯುಟಿ ಕಮಿಷನರನು ನ್ಯಾಯಾಲಯದ ಡಿಕ್ರಿಗೆ ಅಥವಾ ತೀರ್ಮಾನಕ್ಕೆ ಅನುಸಾರವಾಗಿ,ಆ ಡಿಕ್ರಿಯ ಅಥವಾ ತೀರ್ಮಾನವು ಹಕ್ಕು ದಾಖಲೆಯಲ್ಲಿ ಅಥವಾ ಹಕ್ಕು ಬದಲಾವಣೆ ರಿಜಿಸ್ಟರಿನಲ್ಲಿ ಯಾವುದೇ ಹಕ್ಕನ್ನು ನ್ಯಾಯಾಲಯವು ನಮೂದಿಸಬೇಕೆಂದು ನಿರ್ಣಯಿಸುವಷ್ಟರ ಮಟ್ಟಿಗೆ, ಆ ನಮೂನೆಯನ್ನು ಸರಿಪಡಿಸುವಂತೆ ಮಾಡತಕ್ಕದ್ದು. ಈ ಉಪಪ್ರಕರಣದ ಉಪಬಂಧಗಳು ಅಪೀಲಿನ ಅಥವಾ ಪುನರೀಕ್ಷಣೆಯ ನ್ಯಾಯಾಲಯಕ್ಕೆ ಕೂಡ ಅನ್ವಯಿಸತಕ್ಕದ್ದು:

ಪರಂತು, ಉಚ್ಚ ನ್ಯಾಯಾಲಯವು ಅಥವಾ ಸರ್ವೋಚ್ಚ ನ್ಯಾಯಾಲಯವು ಅಪೀಲಿನಲ್ಲಿ ಅಥವಾ ಪುನರೀಕ್ಷಣೆಯಲ್ಲಿ ಡಿಕ್ರಿಯನ್ನು ಅಥವಾ ಆದೇಶವನ್ನು ಹೊರಡಿಸಿದ ಸಂದರ್ಭದಲ್ಲಿ ಯಾವ ಮೂಲ ನ್ಯಾಯಾಲಯದಿಂದ ಅಪೀಲು ಆಗಿದೆಯೋ ಅಥವಾ ದಾಖಲೆಯನ್ನು ತರಿಸಲಾಗಿದೆಯೋ ಆ ನ್ಯಾಯಾಲಯವು ತಿಳಿವಳಿಕೆಯನ್ನು ಕೊಡತಕ್ಕದ್ದು.

(4) ಈ ಪ್ರಕರಣದಲ್ಲಿ,–

(ಎ) 'ದಾವೆ' ಎಂದರೆ ಸಿವಿಲ್ ಪ್ರಕ್ರಿಯಾ ಸಂಹಿತೆಯ ಉಪಬಂಧಗಳು ಅನ್ವಯವಾಗುವ ದಾವೆ;

(ಬಿ) 'ಅರ್ಜಿ' ಎಂದರೆ,–

(i) ದಾವೆಯಲ್ಲಾದ ಡಿಕ್ರಿಯ ಅಥವಾ ಆದೇಶದ ಅಮಲ್ಜಾರಿಗಾಗಿ ಮಾಡಿದ ಅರ್ಜಿ;

(ii) ಸಿವಿಲ್ ಪ್ರಕ್ರಿಯಾ ಸಂಹಿತೆ, 1908ರ ಮೇರೆಗೆ ನ್ಯಾಯಾಲಯದ ಅಭಿಪ್ರಾಯಕ್ಕಾಗಿ ವಿವಾದ ವಿಷಯವನ್ನು ನಿರೂಪಿಸಿ ಒಪ್ಪಂದವನ್ನು ದಾಖಲು ಮಾಡುವುದಕ್ಕೆ ಅರ್ಜಿ;

(iii) ಮಧ್ಯಸ್ಥ ನಿರ್ಣಯ ಅಧಿನಿಯಮ, 1940ರ (ಕೇಂದ್ರಾಧಿನಿಯಮ, 1940ರ 10) 20ನೇ ಪ್ರಕರಣದ ಮೇರೆಗೆ ಮಧ್ಯಸ್ಥಿಕೆಗೆ ಒಪ್ಪಿಸುವ ಒಪ್ಪಂದವನ್ನು ದಾಖಲು ಮಾಡುವುದಕ್ಕಾಗಿ ಅರ್ಜಿ;

(iv) ಸದರಿ ಮಧ್ಯಸ್ಥ ನಿರ್ಣಯ ಅಧಿನಿಯಮದ 14ನೇ ಪ್ರಕರಣದ ಮೇರೆಗೆ ಐತೀರ್ಪನ್ನು ದಾಖಲು ಮಾಡುವುದಕ್ಕಾಗಿ ಅರ್ಜಿ;

(v) ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಪ್ರಕರಣವು ಯಾವ ಇತರ ಬಗೆಯ ಅರ್ಜಿಗೆ ಅನ್ವಯವಾಗತಕ್ಕದ್ದೆಂದು ನಿರ್ದೇಶಿಸಬಹುದಾಗಿದೆಯೋ ಆ ಬೇರೆ ಯಾವುದೇ ವಿಧದ ಅರ್ಜಿ.

(ಸಿ) ಯಾವ ಡಿಕ್ರಿಯ ಅಥವಾ ಇತರ ವಿಷಯಕ್ಕೆ ಸಂಬಂಧಿಸಿದಂತೆ ಅರ್ಜಿಯನ್ನು ಸಲ್ಲಿಸಲಾಗಿದೆಯೋ ಅದು ಭೂಮಿಗೆ ಸಂಬಂಧಪಟ್ಟುದಾಗಿದ್ದರೆ, ಆ ಅರ್ಜಿಯು ಭೂಮಿಗೆ ಸಂಬಂಧಪಟ್ಟಿದೆಯೆಂದು ಭಾವಿಸತಕ್ಕದ್ದು;

(ಡಿ) ಭೂಮಿಗೆ ಸಂಬಂಧಿಸಿದ ದಾವೆಯು, ಡಿಕ್ರಿಯು ಅಥವಾ ಇತರ ವಿಷಯವು, ಪದಾವಳಿಯ ಸಾಮಾನ್ಯಾರ್ಥಕ್ಕೆ ಬಾಧಕವಾಗದಂತೆ, ಭೂಮಿಯ ಗೇಣಿಗೆ ಅಥವಾ ಗೇಣಿದಾರಿಕೆಗೆ ಸಂಬಂಧಿಸಿದ ದಾವೆಯನ್ನು, ಡಿಕ್ರಿಯನ್ನು ಅಥವಾ ಇತರ ವಿಷಯವನ್ನು ಒಳಗೊಳ್ಳುವುದೆಂದು ಭಾವಿಸತಕ್ಕದ್ದು.

**133. ದಾಖಲೆಗಳಲ್ಲಿರುವ ನಮೂದುಗಳ ಬಗ್ಗೆ ಪೂರ್ವಭಾವನೆ.–** ಹಕ್ಕು ದಾಖಲೆಯಲ್ಲಿರುವ ನಮೂದನ್ನು ಮತ್ತು ಹಕ್ಕು ಬದಲಾವಣೆ ರಿಜಿಸ್ಟರಿನಲ್ಲಿರುವ [1][ಅಥವಾ ಪಟ್ಟಾ ಪುಸ್ತದಲ್ಲಿರುವ][1] ಪ್ರಮಾಣಿತ ನಮೂದನ್ನು, ಅದಕ್ಕೆ

ತದ್ವಿರುದ್ಧವಾಗಿ ರುಜುವಾತಾಗುವವರೆಗೆ ಅಥವಾ ಅದರ ಸ್ಥಳದಲ್ಲಿ ಹೊಸ ನಮೂದನ್ನು ಕಾನೂನುಬದ್ಧವಾಗಿ ಸೇರಿಸುವವರೆಗೆ ನಿಜವಾದುದೆಂದು ಪೂರ್ವಭಾವನೆ ಮಾಡತಕ್ಕದ್ದು.

1. 1982ರ ಅಧಿನಿಯಮ 23ರ ಮೂಲಕ 15.07.1982 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

**134. ಪ್ರಮಾಣಿತ ಪ್ರತಿಗಳು.–** ಹಕ್ಕು ದಾಖಲೆಯಲ್ಲಿರುವ ಅಥವಾ ಹಕ್ಕು ಬದಲಾವಣೆ ರಿಜಿಸ್ಟರಿನಲ್ಲಿರುವ ನಮೂದುಗಳ ಪ್ರಮಾಣಿತ ಪ್ರತಿಗಳಿಗಾಗಿ ಗೊತ್ತುಪಡಿಸಿದ ಅಧಿಕಾರಿಗಳಿಗೆ ಅರ್ಜಿಯನ್ನು ಸಲ್ಲಿಸಬಹುದು ಮತ್ತು ಅವರು ಅಂಥ ಪ್ರಮಾಣಿತ ಪ್ರತಿಗಳನ್ನು ಕೊಡಬಹುದು.

**135. ದಾವೆಗಳಿಗೆ ಪ್ರತಿಬಂಧ.–** ಈ ಅಧ್ಯಾಯದ ಮೇರೆಗೆ ಇಟ್ಟಿರುವ ಯಾವುದೇ ದಾಖಲೆಯಲ್ಲಿ ಅಥವಾ ರಿಜಿಸ್ಟರಿನಲ್ಲಿ ಯಾವುದೇ ನಮೂದು ಮಾಡಬೇಕೆಂಬ ಅಥವಾ ಅಂಥ ಯಾವುದೇ ನಮೂದನ್ನು ಬಿಟ್ಟುಬಿಡಬೇಕೆಂಬ ಅಥವಾ ತಿದ್ದುಪಡಿ ಮಾಡಬೇಕೆಂಬ ಕ್ಲೇಮಿನ ಬಗ್ಗೆ ರಾಜ್ಯ ಸರ್ಕಾರದ ವಿರುದ್ಧ ಅಥವಾ ರಾಜ್ಯ ಸರ್ಕಾರದ ಯಾರೇ ಅಧಿಕಾರಿಯ ವಿರುದ್ಧ ಯಾವ ದಾವೆಗೂ ಅವಕಾಶವಿರತಕ್ಕದ್ದಲ್ಲ:

ಪರಂತು, ಈ ಅಧ್ಯಾಯದ ಮೇರೆಗೆ ಇಟ್ಟಿರುವ ಯಾವುದೇ ದಾಖಲೆಯಲ್ಲಿ ಅಥವಾ ರಿಜಿಸ್ಟರಿನಲ್ಲಿ ಮಾಡಿದ ಯಾವುದೇ ನಮೂದಿನಿಂದಾಗಿ ಯಾರೇ ವ್ಯಕ್ತಿಯು ತಾನು ಹೊಂದಿರುವ ಯಾವುದೇ ಹಕ್ಕಿನ ಬಗ್ಗೆ ಬಾಧಿತನಾದರೆ, ಅಂಥ ಹಕ್ಕಿನ ಬಗ್ಗೆ ತನಗಿರುವ ಆಧಾರಗಳನ್ನು ನಿರಾಕರಿಸುವ ಅಥವಾ ನಿರಾಕರಿಸಲು ಆಸಕ್ತಿಯುಳ್ಳ ಯಾರೇವ್ಯಕ್ತಿಯ ವಿರುದ್ಧ ನಿರ್ದಿಷ್ಟ ಪರಿಹಾರ ಅಧಿನಿಯಮ, 1877ರ VIನೇ ಅಧ್ಯಾಯದ ಮೇರೆಗೆ ಹಕ್ಕಿನ ಘೋಷಣೆಗಾಗಿ ದಾವೆಯನ್ನು ಹೂಡಬಹುದು; ಮತ್ತು ಆ ದಾಖಲೆಯಲ್ಲಿ ಅಥವಾ ರಿಜಿಸ್ಟರಿನಲ್ಲಿ ಇರುವ ನಮೂದನ್ನು ಅಂಥ ಘೋಷಣೆಗೆ ಅನುಸಾರವಾಗಿ ತಿದ್ದುಪಡಿ ಮಾಡತಕ್ಕದ್ದು.

**136. ಅಪೀಲು ಮತ್ತು ಪುನರೀಕ್ಷಣೆ.–** (1) Vನೇ ಅಧ್ಯಾಯದ ಉಪಬಂಧಗಳು ಈ ಅಧ್ಯಾಯದ ಮೇರೆಗಿನ ಯಾವುದೇ ತೀರ್ಮಾನಕ್ಕೆ ಅಥವಾ ಆದೇಶಕ್ಕೆ ಅನ್ವಯವಾಗತಕ್ಕದ್ದಲ್ಲ.

(2) 129ನೇ ಪ್ರಕರಣದ (4)ನೇ ಉಪಪ್ರಕರಣದ ಮೇರೆಗೆ ಮಾಡಿದ ಯಾವುದೇ ಆದೇಶದಿಂದ ಅಥವಾ (6)ನೇ ಉಪಪ್ರಕರಣದ ಮೇರೆಗೆ ಪ್ರಮಾಣಿತವಾದ ಯಾವುದೇ ನಮೂದಿನಿಂದ ಬಾಧಿತನಾದ ಯಾರೇ ವ್ಯಕ್ತಿಯು,ಆದೇಶವನ್ನು ತನಗೆ ತಿಳಿಸಿದ ಅಥವಾ ಆ ನಮೂದು ಯಾವ ದಿನಾಂಕದಂದು ಪ್ರಮಾಣಿತವಾಗಿರುವುದೆಂದು ತಿಳಿದು ಬಂದಿದೆಯೋ ಆ ದಿನಾಂಕದಿಂದ ಅರವತ್ತು ದಿನಗಳ ಅವಧಿಯೊಳಗಾಗಿ ಈ ಬಗ್ಗೆ ರಾಜ್ಯ ಸರ್ಕಾರವು ಗೊತ್ತುಪಡಿಬಹುದಾದಂಥ ಅಧಿಕಾರಿಗೆ ಅಪೀಲು ಮಾಡಬಹುದು ಮತ್ತು ಅವರ ತೀರ್ಮಾನವು ಅಂತಿಮವಾದುದಾಗಿರತಕ್ಕದ್ದು.

(3) ಡೆಪ್ಯುಟಿ ಕಮಿಷನರು, ತಾನಾಗಿಯೇ ಅಥವಾ ಪಕ್ಷಕಾರನು ಅರ್ಜಿ ಸಲ್ಲಿಸಿದಾಗ, 127ನೇ ಮತ್ತು 129ನೇ ಪ್ರಕರಣದ ಮೇರೆಗೆ ಮಾಡಿದ ಯಾವುವೇ ದಾಖಲೆಗಳನ್ನು ತರಿಸಿಕೊಳ್ಳಬಹುದು ಮತ್ತು ಪರೀಕ್ಷಿಸಬಹುದು ಮತ್ತು ಸೂಕ್ತವೆಂದು ತಾನು ಭಾವಿಸುವಂಥ ಆದೇಶಗಳನ್ನು ಮಾಡಬಹುದು:

ಪರಂತು, ಅಂಥ ಆದೇಶದಿಂದ ಪ್ರತಿಕೂಲ ಪರಿಣಾಮಕ್ಕೊಳಗಾದ ಪಕ್ಷಕಾರನ ಅಹವಾಲನ್ನು ಕೇಳಿದ ತರುವಾಯವಲ್ಲದೆ, ಯಾವ ಆದೇಶವನ್ನೂ ಮಾಡತಕ್ಕದ್ದಲ್ಲ.

## ಅಧ್ಯಾಯ–XII

## ಎಲ್ಲೆಗಳು ಮತ್ತು ಎಲ್ಲೆ ಗೆರೆಯ ಗುರುತುಗಳು

**137. ಗ್ರಾಮ ಸರಹದ್ದುಗಳನ್ನು ನಿರ್ಧರಿಸುವುದು, ಇತ್ಯಾದಿ.–** ಈ ಅಧ್ಯಾಯದ ಉಪಬಂಧಗಳ ಮತ್ತು ಈ ಬಗ್ಗೆ ಯಾವುವೇ ನಿಯಮಗಳನ್ನು ಮಾಡಿದ್ದರೆ ಅವುಗಳ ಅನುಸಾರವಾಗಿ ಮೋಜಣಿ ಅಧಿಕಾರಿಗಳು ಅಥವಾ ಈ ಉದ್ದೇಶಕ್ಕಾಗಿ ರಾಜ್ಯ ಸರ್ಕಾರವುಗೊತ್ತುಪಡಿಸಬಹುದಾದಂಥ ಇತರ ಅಧಿಕಾರಿಗಳು ಗ್ರಾಮಗಳ ಸರಹದ್ದುಗಳನ್ನು ಸರ್ವೆ ನಂಬರುಗಳ, ಸರ್ವೆ ನಂಬರುಗಳ ಪೋಡುಗಳ ಅಥವಾ ಹಿಡುವಳಿಗಳ ಎಲ್ಲೆಗಳನ್ನು ನಿಗದಿ ಮಾಡತಕ್ಕದ್ದು ಮತ್ತು ಅವುಗಳಿಗೆ ಸಂಬಂಧಿಸಿದ ಎಲ್ಲ ತಕರಾರುಗಳನ್ನೂ ನಿರ್ಧರಿಸತಕ್ಕದ್ದು.

**138. ಒಪ್ಪಂದದ ಮೂಲಕ ಗ್ರಾಮದಸರಹದ್ದುಗಳ ಇತ್ಯರ್ಥ.–** ಅಕ್ಕಪಕ್ಕದ ಯಾವುವೇ ಎರಡು ಅಥವಾ ಹೆಚ್ಚು ಗ್ರಾಮಗಳಲ್ಲಿ [1][ಕರ್ನಾಟಕ][1] ಗ್ರಾಮ ಪಂಚಾಯತಿಗಳ ಮತ್ತು ಸ್ಥಳೀಯ ಮಂಡಲಿಗಳ ಅಧಿನಿಯಮ, 1959ರ ಮೇರೆಗೆ ಒಂದು ಅಥವಾ ಹೆಚ್ಚು ಪಂಚಾಯತಿಗಳನ್ನು ಸ್ಥಾಪಿಸಿರುವಲ್ಲಿ ಮತ್ತು ಅಂಥ ಪಂಚಾಯತಿಯ ಅಥವಾ ಪಂಚಾಯತಿಗಳ, ಯಾವುದೇ ಒಂದು ಸರಹದ್ದಿನ ರೇಖೆಯನ್ನು ತಮ್ಮ ತಮ್ಮ ಗ್ರಾಮದ ಸಾಮಾನ್ಯ ಸರಹದ್ದಿನರೇಖೆಯೆಂದು ಒಪ್ಪಿಕೊಂಡರೆ, ಸರಹದ್ದನ್ನು ನಿರ್ಧರಿಸುವ ಅಧಿಕಾರಿಯು ಅಂಥ ಒಪ್ಪಂದವನ್ನು ದಾಖಲಿಸತಕ್ಕದ್ದು ಮತ್ತು ಸಂದರ್ಭಾನುಸಾರ, ಸಂಬಂಧಪಟ್ಟ ಪಂಚಾಯತಿಗಳ ಅಧ್ಯಕ್ಷ, ಉಪಾಧ್ಯಕ್ಷ ಅಥವಾ ಸದಸ್ಯರಿಂದ ಅದಕ್ಕೆ ಕ್ರಮಬದ್ಧವಾಗಿ ಸಹಿ ಹಾಕಿಸತಕ್ಕದ್ದು. ಆಮೇಲೆ ಸರಹದ್ದನ್ನು ನಿರ್ಧರಿಸುವ ಅಧಿಕಾರಿಯು, ಒಪ್ಪಂದ ಮಾಡಿಕೊಂಡ ರೀತಿಯಲ್ಲಿ ಸರಹದ್ದನ್ನು ಗುರುತು ಮಾಡತಕ್ಕದ್ದು. ಹಾಗೆ ಗುರುತು ಮಾಡಿದ ಯಾವುದೇ ಗ್ರಾಮದ ಸರಹದ್ದು ಅಂತಿಮವಾಗಿ ಇತ್ಯರ್ಥವಾಗಿದೆಯೆಂದು ಭಾವಿಸತಕ್ಕದ್ದು.

1. 1973ರ ಕರ್ನಾಟಕ ಕಾನೂನುಗಳ ಆದೇಶದ ಅಳವಡಿಕೆಗಳ ಮೂಲಕ 01.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

**139. ಭಿನ್ನಾಭಿಪ್ರಾಯದ ಅಥವಾ ವಿವಾದದ ಸಂದರ್ಭದಲ್ಲಿ ಅವುಗಳನ್ನು ಬಗೆಹರಿಸುವ ಕ್ರಮ.–** (1) ಅಕ್ಕಪಕ್ಕದ ಯಾವುವೇ ಎರಡು ಅಥವಾ ಹೆಚ್ಚು ಗ್ರಾಮಗಳಲ್ಲಿ [1][ಕರ್ನಾಟಕ][1] ಗ್ರಾಮ ಪಂಚಾಯತಿಗಳ ಮತ್ತು ಸ್ಥಳೀಯ ಮಂಡಲಿಗಳ ಅಧಿನಿಯಮ, 1959ರ ಮೇರೆಗೆ ಒಂದು ಅಥವಾ ಹೆಚ್ಚು ಪಂಚಾಯತಿಗಳನ್ನು ಸ್ಥಾಪಿಸಿದಲ್ಲಿ, ಅಂಥ ಪಂಚಾಯತಿಯು ಅಥವಾ ಪಂಚಾಯತಿಗಳು 138ನೇ ಪ್ರಕರಣದಲ್ಲಿ ನಿಯಮಿಸಲಾದ ರೀತಿಯಲ್ಲಿ ತಮ್ಮ ತಮ್ಮ ಗ್ರಾಮಗಳ ಸರಹದ್ದುಗಳನ್ನು ನಿಗದಿಗೊಳಿಸಲು ಒಪ್ಪದಿದ್ದರೆ ಅಥವಾ ಸರಹದ್ದುಗಳಿಗೆ ಸಂಬಂಧಿಸಿದಂತೆ ಇತ್ಯರ್ಥವಾಗದಿದ್ದ ಯಾವುದೇ ವಿವಾದವಿದ್ದರೆ, ಸರಹದ್ದನ್ನು ನಿರ್ಧರಿಸುವ ಅಧಿಕಾರಿಯು, ವಿವಾದದ ಪಕ್ಷಕಾರರು ಕ್ಲೇಮು ಮಾಡುವ ಭೂಮಿಯನ್ನು ಮತ್ತು ಅದಕ್ಕೆ ಸಂಬಂಧಿಸಿದ ಎಲ್ಲ ವಿವರಗಳನ್ನು ತೋರಿಸಿ, ಅಂಥ ವಿವಾದಗ್ರಸ್ಥ ನೆಲದ ಮೋಜಣಿ ಮಾಡತಕ್ಕದ್ದು ಮತ್ತು ನಕ್ಷೆಯನ್ನು ಸಿದ್ಧಪಡಿತಕ್ಕದ್ದು; ಮತ್ತು ಸದರಿ ಪಕ್ಷಕಾರರ ಕ್ಲೇಮುಗಳ ಬಗ್ಗೆ ವಿಧ್ಯುಕ್ತವಾದ ತನಿಖೆ ಮಾಡಿದ ನಂತರ, ಆಯಾ ಗ್ರಾಮಗಳ ಸರಹದ್ದುಗಳನ್ನು ತೀರ್ಮಾನಿಸತಕ್ಕದ್ದು.

1. 1973ರ ಕರ್ನಾಟಕ ಕಾನೂನುಗಳ ಆದೇಶದ ಅಳವಡಿಕೆಗಳ ಮೂಲಕ 01.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

(2) [1][ಭೂ ದಾಖಲೆಗಳ ಜಂಟಿ ನಿರ್ದೇಶಕರೇ][1], ಸರಹದ್ದನ್ನು ತೀರ್ಮಾನಿಸುವ ಅಧಿಕಾರಿಯಾಗಿದ್ದರೆ, ಅವರ ತೀರ್ಮಾನವು ಅಂತಿಮವಾದುದಾಗಿರತಕ್ಕದ್ದು ಮತ್ತು ಇತರ ಯಾವುದೇ ಸಂದರ್ಭದಲ್ಲಿ (1)ನೇ ಉಪಪ್ರಕರಣದ ಮೇರೆಗೆ ಸರಹದ್ದನ್ನು ತೀರ್ಮಾನಿಸುವ ಅಧಿಕಾರಿಯ ತೀರ್ಮಾನವು, [1][ಭೂ ದಾಖಲೆಗಳ ಜಂಟಿ ನಿರ್ದೇಶಕನಿಗೆ][1] ಅಪೀಲು ಮಾಡುವ ಅವಕಾಶಕ್ಕೆ ಒಳಪಟ್ಟು, ಅಂತಿಮವಾದುದಾಗಿರತಕ್ಕದ್ದು.

1. 1973ರ ಕರ್ನಾಟಕ ಕಾನೂನುಗಳ ಆದೇಶದ ಅಳವಡಿಕೆಗಳ ಮೂಲಕ 01.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

**140. ಸರ್ವೇ ನಂಬರಾಗುವ ಅಥವಾ ಹಿಡುವಳಿಯಾಗುವ ಭೂಮಿಗಳ ಸರಹದ್ದುಗಳ ನಿರ್ಧಾರ.–** (1) ಮೋಜಣಿ ಕಾಲದಲ್ಲಿ ಸರ್ವೇ ನಂಬರಿನ, ಸರ್ವೇ ನಂಬರಿನ ಪೋಡಿನ ಅಥವಾ ಹಿಡುವಳಿಯ ಸರಹದ್ದಿನ ಬಗ್ಗೆ,–

(ಎ) ತಕರಾರಿರದಿದ್ದರೆ, ಅದರ ಹಿಡವಳಿದಾರನು ಅಥವಾ ಅಧಿಭೋಗದಲ್ಲಿರುವ ವ್ಯಕ್ತಿಯು ತೋರಿಸುವಂತೆ ಆ ಎಲ್ಲೆಯನ್ನು ದಾಖಲಿಸತಕ್ಕದ್ದು ಮತ್ತು ಗುರುತು ಮಾಡತಕ್ಕದ್ದು; ಮತ್ತು

(ಬಿ) ತಕರಾರಿದ್ದರೆ, ಅಥವಾ ಹಿಡುವಳಿದಾರನು ಅಥವಾ ಅಧಿಭೋಗದಲ್ಲಿರುವ ವ್ಯಕ್ತಿಯು ಹಾಜರಿರದಿದ್ದರೆ, ಮೋಜಣಿ ಅಧಿಕಾರಿಯು ಆ ಭೂಮಿಗೆ ಸಂಬಂಧಿಸಿದ ದಾಖಲೆಗಳಿಗೆ ಅನುಸಾರವಾಗಿ ಮತ್ತು ಅವಶ್ಯವೆಂದು ಅವನು ಭಾವಿಸುವಂತಹ ವಿಚಾರಣೆಯನ್ನು ಮಾಡಿದ ತರುವಾಯ ಎಲ್ಲೆಯನ್ನು ನಿಗದಿಗೊಳಿಸತಕ್ಕದ್ದು.

(2) ಮೋಜಣಿಯಾಗಿರದ ಹಿಡುವಳಿಯ ಎಲ್ಲೆಯ ಬಗ್ಗೆ ಯಾವುದೇ ತಕರಾರು ಉದ್ಭವಿಸಿದರೆ ಅಥವಾ ಮೋಜಣಿಯು ಪೂರ್ತಿಯಾದ ತರುವಾಯ ಯಾವುದೇ ಕಾಲದಲ್ಲಿ, ಸರ್ವೇ ನಂಬರಿನ, ಸರ್ವೇ ನಂಬರಿನ ಪೋಡಿನ ಅಥವಾ ಹಿಡುವಳಿಯ ಎಲ್ಲೆಯ ಬಗ್ಗೆ ತಕರಾರು ಉದ್ಭವಿಸಿದರೆ, [1][ತಹಶೀಲ್ದಾರನು][1] ಹಿಂದೆ ನಿಗದಿಗೊಳಿಸಿದ ಎಲ್ಲೆಯಬಗ್ಗೆ ಭೂದಾಖಲೆಗಳು ಸಮಾಧಾನಕರವಾದ ಸಾಕ್ಷ್ಯವನ್ನು ಒದಗಿಸಿದರೆ, ಅವುಗಳಿಗೆ ತಕ್ಕ ಗಮನಕೊಟ್ಟು ಮತ್ತು ಹಾಗಿರದಿದ್ದರೆ, ಅವಶ್ಯವೆಂದು ತಾನು ಭಾವಿಸುವಂಥ ವಿಚಾರಣೆ ಮಾಡಿದ ತರುವಾಯ ಆ ತಕರಾರನ್ನು ತೀರ್ಮಾನಿಸತಕ್ಕದ್ದು.

1. 1970ರ ಅಧಿನಿಯಮ 5ರ ಮೂಲಕ 23.10.1969 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**141. ಎಲ್ಲೆಯ ಬಗೆಗಿನ ತಕರಾರನ್ನು ಮಧ್ಯಸ್ಥಿಕೆಯ ಮೂಲಕ ಇತ್ಯರ್ಥಗೊಳಿಸುವುದು.–** (1) ಎಲ್ಲೆಯ ತಕರಾರಿಗೆ ಸಂಬಂಧಿಸಿದ ನಾನಾ ಪಕ್ಷಕಾರರು ತಕರಾರನ್ನು ಮಧ್ಯಸ್ಥಿಕೆಯ ಇತ್ಯರ್ಥಕ್ಕಾಗಿ ಒಪ್ಪಿಸಲು ಸಮ್ಮತಿಸಿದರೆ ಮತ್ತು ಹಾಗೆಂದು ಬರಹ ಮೂಲಕ ಅರ್ಜಿ ಸಲ್ಲಿಸಿದರೆ, ಅರ್ಜಿಯನ್ನು ಸಲ್ಲಿಸದಿದ್ದರೂ ಎಲ್ಲೆಯನ್ನು ನಿರ್ಧರಿಸುವುದು ಯಾವ ಅಧಿಕಾರಿಯ ಕರ್ತವ್ಯವೋ ಆ ಅಧಿಕಾರಿಯು, ಒಬ್ಬನೇ ಮಧ್ಯಸ್ಥನನ್ನು ಅಥವಾ ಮೂರು ಜನರಿಂದ ಕೂಡಿದ ಒಂದು ಮಧ್ಯಸ್ಥಿಕೆ ಸಮಿತಿಯನ್ನು ನಿರ್ದಿಷ್ಟ ಅವಧಿಯೊಳಗಾಗಿ ನಾಮನಿರ್ದೇಶನ ಮಾಡಲು ಸದರಿ ಪಕ್ಷಕಾರರನ್ನು ಅಗತ್ಯಪಡಿಸತಕ್ಕದ್ದು ಮತ್ತು ಸದರಿ ಅಧಿಕಾರಿಯು ಗೊತ್ತುಪಡಿಸುವ ಅವಧಿಯೊಳಗಾಗಿ ಹಾಗೆ ನಾಮನಿರ್ದೇಶಿತನಾದ ಒಬ್ಬನೇ ಮಧ್ಯಸ್ಥನು ಅಥವಾ ಮಧ್ಯಸ್ಥಿಕೆ ಸಮಿತಿಯು ಅಥವಾ ಅದರ ಬಹುಸಂಖ್ಯಾತ ಸದಸ್ಯರು ಯಾವುದಾದರೊಂದು ತೀರ್ಮಾನಕ್ಕೆ ಬಂದರೆ, ಅಂಥ ತೀರ್ಮಾನವನ್ನು ಸದರಿ ಅಧಿಕಾರಿಯು, ಅಥವಾ ಸದರಿ ಅಧಿಕಾರಿಯು [1][ಭೂ ದಾಖಲೆಗಳ ಜಂಟಿ ನಿರ್ದೇಶಕರ][1] ದರ್ಜೆಗಿಂತ ಕಡಿಮೆ ದರ್ಜೆಯ ಮೋಜಣಿ ಅಧಿಕಾರಿಯಾಗಿದ್ದರೆ, [1][ಭೂ ದಾಖಲೆಗಳ ಜಂಟಿ ನಿರ್ದೇಶಕರು][1] ಸ್ಥಿರೀಕರಿಸಿದಾಗ, ಅಂತಿಮ ವಾದುದಾಗಿರತಕ್ಕದ್ದು:

ಪರಂತು, ಆ ಐತೀರ್ಪನ್ನು ಅಥವಾ ಮಧ್ಯಸ್ಥಿಕೆಗೆ ಒಪ್ಪಿಸಿದ ವಿಷಯಗಳ ಪೈಕಿ ಯಾವುದೇ ವಿಷಯವನ್ನು ಮಧ್ಯಸ್ಥ ನಿರ್ಣಯ ಅಧಿನಿಯಮ, 1940ರ (ಕೇಂದ್ರ ಅಧಿನಿಯಮ, 1940ರ 10) 16ನೇ ಪ್ರಕರಣದಲ್ಲಿ ಹೇಳಿರುವ ಕಾರಣಗಳ ಪೈಕಿ ಯಾವುದೇ ಕಾರಣಗಳಿಗಾಗಿ, ಸಂದರ್ಭಾನುಸಾರ, ಮಧ್ಯಸ್ಥನ ಅಥವಾ ಆ ಸಮಿತಿಯ ಪುನರ್ವಿಮರ್ಶೆಗಾಗಿ ಕಳುಹಿಸಲು ಸದರಿ ಅಧಿಕಾರಿಯು ಅಥವಾ [1][ಭೂ ದಾಖಲೆಗಳ ಜಂಟಿ ನಿರ್ದೇಶಕರು][1] ಅಧಿಕಾರವನ್ನು ಹೊಂದಿರತಕ್ಕದ್ದು.

1. 1973ರ ಕರ್ನಾಟಕ ಕಾನೂನುಗಳ ಆದೇಶದ ಅಳವಡಿಕೆಗಳ ಮೂಲಕ 01.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

(2) ನಿರ್ದಿಷ್ಟಪಡಿಸಿದ ಅವಧಿಯೊಳಗಾಗಿ ವಿವಾದವನ್ನು ಇತ್ಯರ್ಥಗೊಳಿಸಲು ಆ ಒಬ್ಬನೇ ಮಧ್ಯಸ್ಥನು ಅಥವಾ ಮಧ್ಯಸ್ಥಿಕೆ ಸಮಿತಿಯು ತಪ್ಪಿದರೆ, ಮೇಲೆ ಹೇಳಿದ ಅಧಿಕಾರಿಯು ಅಥವಾ ಆ ಅಧಿಕಾರಿಯು [1][ಭೂ ದಾಖಲೆಗಳ ಜಂಟಿ ಕಮಿಷನರ್][1]ದರ್ಜೆಗಿಂತ ಕಡಿಮೆ ದರ್ಜೆಯ ಮೋಜಣಿ ಅಧಿಕಾರಿಯಾಗಿದ್ದರೆ, [1][ಭೂ ದಾಖಲೆಗಳ ಜಂಟಿ ನಿರ್ದೇಶಕರು][1] ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧಿಸಿದಂತೆ ಕಾಲಾವಧಿಯನ್ನು ಹೆಚ್ಚಿಸಬಹುದು ಅಥವಾ ವಿವಾದವನ್ನು ಇತ್ಯರ್ಥಗೊಳಿಸಬಹುದು.

1. 1973ರ ಕರ್ನಾಟಕ ಕಾನೂನುಗಳ ಆದೇಶದ ಅಳವಡಿಕೆಗಳ ಮೂಲಕ 01.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

**142. ಎಲ್ಲೆಯ ಇತ್ಯರ್ಥದ ಪರಿಣಾಮ.–** (1) ಈ ಅಧ್ಯಾಯದ ಮೇರೆಗೆಎಲ್ಲೆಯ ಇತ್ಯರ್ಥವಾದಾಗ, ಅದು–

(ಎ) ಎಲ್ಲೆ ಗೆರೆಯ ಅಥವಾ ಎಲ್ಲೆ ಗೆರೆ ಗುರುತಿನ ನಿರ್ದಿಷ್ಟ ಸ್ಥಾನದ ಬಗ್ಗೆ; ಮತ್ತು

(ಬಿ) ಅವರವರ ಹಿಡುವಳಿಗಳಿಗೆ ಸೇರಿದೆಯೆಂದು ಇಲ್ಲವೆ ಸೇರಿಲ್ಲವೆಂದು ತೀರ್ಮಾನಿಸಲಾದ ಭೂಮಿಗೆ ಸಂಬಂಧಿಸಿದಂತೆ ಗೊತ್ತುಪಡಿಸಿದ ಮೇರೆಯ ಎರಡೂ ಬದಿಗಳ ಭೂಹಿಡುವಳಿದಾರರ ಹಕ್ಕುಗಳ ಬಗ್ಗೆ;

– ನಿರ್ಣಾಯಕವಾದುದಾಗಿರತಕ್ಕದ್ದು.

(2) ಎಲ್ಲೆಯನ್ನು ಹಾಗೆ ನಿಗದಿಗೊಳಿಸಿದಾಗ, ಯಾವ ಭೂಮಿಯು ಯಾರೇ ವ್ಯಕ್ತಿಯ ಹಿಡುವಳಿಗೆ ಸೇರಿಲ್ಲವೆಂದು ಅಥವಾ ಯಾವ ವ್ಯಕ್ತಿಯ ಮುಖಾಂತರ ಅಥವಾ ಯಾವ ವ್ಯಕ್ತಿಯ ಪರವಾಗಿ ಅವನು ಕ್ಲೇಮು ಮಾಡುತ್ತಾನೋ ಅಂಥ ವ್ಯಕ್ತಿಯ ಹಿಡುವಳಿಗೆ ಆ ಭೂಮಿಯು ಸೇರಿಲ್ಲವೆಂದು ಎಲ್ಲೆಯನ್ನು ನಿರ್ಧರಿಸುವಾಗ ತೀರ್ಮಾನವಾಗಿದೆಯೋ ಆ ಯಾವುದೇ ಭೂಮಿಯ ಸ್ವಾಧೀನವನ್ನು ಅಕ್ರಮವಾಗಿ ಹೊಂದಿರುವ ಯಾರೇ ಭೂಹಿಡುವಳಿದಾರನನ್ನು ಯಾವುದೇ ಸಮಯದಲ್ಲಿ [1][ತಹಶೀಲ್ದಾರನು][1] ಕ್ಷಿಪ್ರವಾಗಿ ಹೊರದೂಡಬಹುದು.

1. 1970ರ ಅಧಿನಿಯಮ 5ರ ಮೂಲಕ 23.10.1969 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**143. ಎಲ್ಲೆ ಗುರುತಿನ ನಿರ್ಮಾಣ ಮತ್ತು ದುರಸ್ತಿ.–** (1) ಸಂದರ್ಭಾನುಸಾರ, [1][ಭೂ ದಾಖಲೆಗಳ ಜಂಟಿ ನಿರ್ದೇಶಕರಿಂದ][1] ಅಥವಾ [2][ಕಂದಾಯ ವ್ಯವಸ್ಥೆ ಜಂಟಿ ನಿರ್ದೇಶಕರಿಂದ][2] ಅಧಿಕೃತನಾದ ಯಾರೇ ಮೋಜಣಿ ಅಧಿಕಾರಿಯು ಗ್ರಾಮಗಳ ಅಥವಾ ಸಾಗುವಳಿ ಮಾಡಿದ ಅಥವಾ ಮಾಡಿರದ ಸರ್ವೇ ನಂಬರುಗಳಲ್ಲಿ ಅಥವಾ ಸರ್ವೇ ನಂಬರುಗಳ ಪೋಡುಗಳಲ್ಲಿ ಎಲ್ಲೆ ಗುರುತುಗಳನ್ನು ನಿರ್ದಿಷ್ಟಪಡಿಸಬಹುದು ಅಥವಾ ಅವುಗಳನ್ನು ನಿರ್ಮಾಣ ಮಾಡಿಸತಕ್ಕದ್ದು, ಹಾಕಿಸತಕ್ಕದ್ದು, ಸುಸ್ಥಿತಿಯಲ್ಲಿರುವಂತೆ ನೋಡಿಕೊಳ್ಳತಕ್ಕದ್ದು ಅಥವಾ ದುರಸ್ತಿ ಮಾಡಿಸತಕ್ಕದ್ದು ಮತ್ತು ಆ ಬಗ್ಗೆ ತಗುಲಿದ ಎಲ್ಲ ವೆಚ್ಚಗಳನ್ನು ನಿರ್ಧರಣೆ ಮಾಡಿ ಹಿಡುವಳಿದಾರರ ಮೇಲೆ ಅಥವಾ ಅವುಗಳಲ್ಲಿ ಹಿತಾಸಕ್ತಿಯುಳ್ಳ ಇತರರ ಮೇಲೆ ಹೊರಿಸತಕ್ಕದ್ದು.

1. 1973ರ ಕರ್ನಾಟಕ ಕಾನೂನುಗಳ ಆದೇಶದ ಅಳವಡಿಕೆಗಳ ಮೂಲಕ 01.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.
2. 2003ರ ಅಧಿನಿಯಮ 21ರ ಮೂಲಕ 26.05.2003 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) ಮೇಲೆ ಹೇಳಿದಂಥ ಅಧಿಕಾರಿಯು ಸರ್ವೇ ನಂಬರುಗಳ ಅಥವಾ ಸರ್ವೇ ನಂಬರುಗಳ ಪೋಡುಗಳ ಹಿಡುವಳಿದಾರರಿಗೆ, ನಿರ್ದಿಷ್ಟಪಡಿಸಿದ ಅವಧಿಯೊಳಗೆ ಅವರವರ ಸರ್ವೇ ನಂಬರುಗಳಲ್ಲಿ ಅಥವಾ ಪೋಡುಗಳಲ್ಲಿ ಎಲ್ಲೆ ಗುರುತುಗಳನ್ನು ನಿರ್ಮಿಸುವಂತೆ, ಹಾಕುವಂತೆ, ಸುಸ್ಥಿತಿಯಲ್ಲಿಡುವಂತೆ ಅಥವಾ ದುರಸ್ತಿ ಮಾಡುವಂತೆ ನಿರ್ದೇಶಿಸುವ ಲಿಖಿತ ಆದೇಶವನ್ನು ಮೋಜಣಿಗೆ ಒಳಪಟ್ಟ ಭೂಮಿಗಳು ಇರುವ ಗ್ರಾಮಚಾವಡಿಯಲ್ಲಿ ಅಥವಾ ಇತರೆ ಸಾರ್ವಜನಿಕ ಸ್ಥಳದಲ್ಲಿ ಅಂಟಿಸಿ, ಭೂಮಿಯ ಎಲ್ಲೆ ಗುರುತುಗಳನ್ನು ನಿರ್ಮಿಸುವಂತೆ, ಹಾಕುವಂತೆ, ಸುಸ್ಥಿತಿಯಲ್ಲಿಡುವಂತೆ ಅಥವಾ ದುರಸ್ತಿ ಮಾಡುವಂತೆ, ಭೂಹಿಡುವಳಿದಾರರನ್ನು ಆದೇಶದ ಮೂಲಕ ಅಗತ್ಯಪಡಿಸಬಹುದು.

(3) ಉಪಪ್ರಕರಣ(2)ರಲ್ಲಿ ಕಡ್ಡಾಯವಾಗಿಹೇಳಿರುವುದನ್ನು ಈಡೇರಿಸಲು ಹಿಡುವಳಿದಾರರು ತಪ್ಪಿದರೆ, ಮೋಜಣಿ ಅಧಿಕಾರಿಯು ಎಲ್ಲೆ ಗುರುತುಗಳನ್ನು ನಿರ್ಮಿಸಬಹುದು, ಹಾಕಬಹುದು ಅಥವಾ ದುರಸ್ತಿ ಮಾಡಿಸಬಹುದು ಮತ್ತು ಅದಕ್ಕಾಗಿ ತಗುಲಿದ ಎಲ್ಲ ವೆಚ್ಚಗಳನ್ನು ಹಿಡುವಳಿದಾರರ ಅಥವಾ ಅದರಲ್ಲಿ ಹಿತಾಸಕ್ತಿಯನ್ನುಳ್ಳ ಇತರರ ಮೇಲೆ ಹೊರಿಸಬಹುದು.

(4) ಉಪಪ್ರಕರಣ (2)ರ ಮೇರೆಗೆ ನಿರ್ದಿಷ್ಟಪಡಿಸಿದ ರೀತಿಯಲ್ಲಿ ಹೊರಡಿಸಿದ ಸಾಮಾನ್ಯ ಆದೇಶವನ್ನು, ಮೋಜಣಿಯು ಅನ್ವಯವಾಗುವ ಭೂಮಿಗಳ ಸರಹದ್ದುಗಳ ಒಳಗಿರುವ ಯಾವುದೇ ಸರ್ವೇ ನಂಬರಿನಲ್ಲಿ ಅಥವಾ ಪೋಡಿನಲ್ಲಿ ಹಿತಾಸಕ್ತಿಯುಳ್ಳ ಪ್ರತಿಯೊಬ್ಬ ವ್ಯಕ್ತಿಗೂ ಕೊಟ್ಟ ಸರಿಯಾದ ಮತ್ತು ಸಾಕಷ್ಟು ನೋಟೀಸು ಎಂದು ಭಾವಿಸತಕ್ಕದ್ದು.

**144. ಎಲ್ಲೆ ಗುರುತುಗಳ ವರ್ಣನೆ.–**ಎಲ್ಲೆ ಗುರುತುಗಳು, ಈ ಬಗ್ಗೆ ರಾಜ್ಯ ಸರ್ಕಾರವು ಮಾಡಿದ ನಿಯಮಗಳಿಗೊಳಪಟ್ಟು [1][ಭೂ ದಾಖಲೆಗಳ ಜಂಟಿ ನಿರ್ದೇಶಕರು][1] ಅಥವಾ ಈ ಉದ್ದೇಶಕ್ಕಾಗಿ ನೇಮಕ ಮಾಡಿದ ಇತರ ಅಧಿಕಾರಿಯು ನಿರ್ಧರಿಸಬಹುದಾದಂಥ ವರ್ಣನೆಯುಳ್ಳವಾಗಿರತಕ್ಕದ್ದು ಮತ್ತು ಅವನ್ನು ಹಾಗೆ ನಿರ್ಧರಿಸಿದಂಥ ರೀತಿಯಲ್ಲಿ ನಿರ್ಮಿಸತಕ್ಕದ್ದು, ಹಾಕತಕ್ಕದ್ದು, ಸುಸ್ಥಿತಿಯಲ್ಲಿಡತಕ್ಕದ್ದು ಅಥವಾ ದುರಸ್ತಿ ಮಾಡತಕ್ಕದ್ದು ಮತ್ತು ಹಾಗೆ ನಿರ್ಧರಿಸಿದಂಥ ಗಾತ್ರದ್ದೂ ಮತ್ತು ಸಾಮಗ್ರಿಯದೂ ಆಗಿರತಕ್ಕದ್ದು.

1. 1973ರ ಕರ್ನಾಟಕ ಕಾನೂನುಗಳ ಆದೇಶದ ಅಳವಡಿಕೆಗಳ ಮೂಲಕ 01.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

**145. ಎಲ್ಲೆ ಗುರುತುಗಳನ್ನು ಸುಸ್ಥಿತಿಯಲ್ಲಿಡುವ ಜವಾಬ್ದಾರಿ.–** ಪ್ರತಿಯೊಬ್ಬ ಭೂಹಿಡುವಳಿದಾರನೂ ತನ್ನ ಹಿಡುವಳಿಯ ಎಲ್ಲೆ ಗುರುತುಗಳನ್ನು ಸುಸ್ಥಿತಿಯಲ್ಲಿಡಲು ಮತ್ತು ಒಳ್ಳೇ ರೀತಿಯಲ್ಲಿ ದುರಸ್ತಿ ಮಾಡಿಸಲು ಜವಾಬ್ದಾರನಾಗಿರತಕ್ಕದ್ದು ಮತ್ತು ರೆವಿನ್ಯೂ ಅಧಿಕಾರಿಗಳು ಮಾಡುವ ಬದಲಾವಣೆ, ತೆಗೆದು ಹಾಕುವಿಕೆ ಅಥವಾ ಮರುದುರಸ್ತಿ ಬಗ್ಗೆ ಯುಕ್ತವಾಗಿ ತಗಲುವ ವೆಚ್ಚಕ್ಕೆ ಕೂಡ ಜವಾಬ್ದಾರನಾಗಿರತಕ್ಕದ್ದು. ಗ್ರಾಮದ ಸರಹದ್ದು ಗುರುತುಗಳು ನಾಶವಾಗದಂತೆ ಅಥವಾ ಅನಧಿಕೃತವಾಗಿ ಬದಲಾವಣೆಯಾಗುವುದನ್ನುತಡೆಯುವುದು ಗ್ರಾಮ ಲೆಕ್ಕಿಗನ ಮತ್ತು ಗ್ರಾಮಪಂಚಾಯತಿಯ ಅಧಿಕಾರಿಯ ಮತ್ತು ನೌಕರರ ಕರ್ತವ್ಯವಾಗಿರತಕ್ಕದ್ದು.

**146. ಮೋಜಣಿ ವ್ಯವಸ್ಥೆಯು ಜಾರಿಗೆ ಬಂದ ನಂತರ ಎಲ್ಲೆ ಗುರುತುಗಳ ಸುಪರ್ದನ್ನು ಡೆಪ್ಯುಟಿ ಕಮಿಷನರು ಹೊಂದಿರುವುದು.–** ಜಿಲ್ಲೆಯಲ್ಲಿ ಮೋಜಣಿ ವ್ಯವಸ್ಥೆಯು ಜಾರಿಗೆ ಬಂದ ನಂತರ, ಎಲ್ಲೆ ಗುರುತುಗಳ ಸುಪರ್ದಿನ ಹೊಣೆಗಾರಿಕೆಯು ಡೆಪ್ಯುಟಿ ಕಮಿಷನರನಿಗೆ ಇರತಕ್ಕದ್ದು ಮತ್ತು ಅವುಗಳನ್ನು ನಿರ್ಮಿಸುವುದಕ್ಕಾಗಿ, ಹಾಕುವುದಕ್ಕಾಗಿ, ಸುಸ್ಥಿತಿಯಲ್ಲಿರಿಸುವುದಕ್ಕಾಗಿ ಮತ್ತು ದುರಸ್ತಿ ಮಾಡುವುದಕ್ಕಾಗಿ ಕ್ರಮ ಕೈಗೊಳ್ಳುವುದು ಅವರ ಕರ್ತವ್ಯವಾಗಿರತಕ್ಕದ್ದು ಮತ್ತು ಈ ಉದ್ದೇಶಕ್ಕಾಗಿ, 142ನೇ ಮತ್ತು 143ನೇ ಪ್ರಕರಣಗಳ ಮೇರೆಗೆ ಮೋಜಣಿ ಅಧಿಕಾರಿಗೆ ಪ್ರದತ್ತವಾದ ಅಧಿಕಾರಗಳು ಅವರಲ್ಲಿ ನಿಹಿತವಾಗತಕ್ಕದ್ದು.

**147. ಎಲ್ಲೆ ಗುರುತುಗಳಿಗೆ ಹಾನಿಯುಂಟುಮಾಡುವುದಕ್ಕೆ ದಂಡ.–** (1) ಎಲ್ಲೆ ಗುರುತನ್ನು ಬುದ್ಧಿಪೂರ್ವಕವಾಗಿ ಅಳಿಸುವ, ತೆಗೆದುಹಾಕುವ ಅಥವಾ ಅದಕ್ಕೆ ಹಾನಿಯುಂಟು ಮಾಡುವ ಅಥವಾ ಅನಧಿಕೃತವಾಗಿ ಎಲ್ಲೆ ಗುರುತನ್ನು ನಿರ್ಮಿಸುವ ಯಾರೇ ವ್ಯಕ್ತಿಯು [1][ತಹಶೀಲ್ದಾರನ][1] ಸಮ್ಮುಖದಲ್ಲಿ ಅಥವಾ ಗೆಜೆಟೆಡ್ ದರ್ಜೆಯ ಮೋಜಣಿ ಅಧಿಕಾರಿಯ ಸಮ್ಮುಖದಲ್ಲಿ ಸಂಕ್ಷಿಪ್ತ ವಿಚಾರಣೆಯು ನಡೆದ ತರುವಾಯ, ಹಾಗೆ ಅಳಿಸಿದ, ತೆಗೆದುಹಾಕಿದ, ಹಾನಿಯುಂಟು ಮಾಡಿದ

ಅಥವಾ ಅನಧಿಕೃತವಾಗಿ ನಿರ್ಮಿಸಿದ ಪ್ರತಿಯೊಂದು ಎಲ್ಲೆ ಗುರುತಿಗೆ ಐವತ್ತು ರೂಪಾಯಿಗಳಿಗೆ ಮೀರದ ಜುಲ್ಮಾನೆಗೆ ಗುರಿಯಾಗಿರತಕ್ಕದ್ದು.

1. 1970ರ ಅಧಿನಿಯಮ 5ರ ಮೂಲಕ 23.10.1969 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) ಉಪಪ್ರಕರಣ (1)ರ ಮೇರೆಗೆ ವಿಧಿಸಿದ ಜುಲ್ಮಾನೆಯನ್ನು ಭೂಕಂದಾಯದ ಬಾಕಿಯಂತೆ ವಸೂಲು ಮಾಡತಕ್ಕದ್ದು, ಮತ್ತು ಅದರಲ್ಲಿ ಅರ್ಧಕ್ಕೆ ಮೀರದಷ್ಟು ಮೊತ್ತವನ್ನು, ಜುಲ್ಮಾನೆ ವಿಧಿಸುವ ಅಧಿಕಾರಿಯು ಆ ಬಗ್ಗೆ ಮಾಹಿತಿ ಕೊಟ್ಟವನು ಯಾರಾದರೂ ಇದ್ದರೆ ಅವನಿಗೆ ಬಹುಮಾನವಾಗಿ ಕೊಡತಕ್ಕದ್ದು.

## ಅಧ್ಯಾಯ–XIII

## ಗ್ರಾಮ ಪ್ರದೇಶಗಳಲ್ಲಿರುವ ಮತ್ತು ಪಟ್ಟಣಗಳ ಮತ್ತು ನಗರಗಳ ಸರಹದ್ದುಗಳಲ್ಲಿರುವ ಭೂಮಿಗಳ ಮೋಜಣಿ ಮತ್ತು ಎಲ್ಲೆ ಬಗೆಗಿನ ವಿವಾದಗಳ ಇತ್ಯರ್ಥ

**148. ಗ್ರಾಮಗಳ, ಪಟ್ಟಣಗಳ, ನಗರಗಳ ನಿವೇಶನಸರಹದ್ದುಗಳನ್ನು ಹೇಗೆ ಗೊತ್ತುಪಡಿಸಬೇಕು ಮತ್ತು ಕಟ್ಟಡಗಳ ನಿವೇಶನಗಳನ್ನು ವಹಿಸಿಕೊಡುವುದು.–**(1) ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ನಿರ್ದೇಶಿಸಿದಾಗ, ಡೆಪ್ಯುಟಿ ಕಮಿಷನರು ಅಥವಾ ಮೋಜಣಿ ಅಧಿಕಾರಿಯು ಯಾವುದೇ ಗ್ರಾಮದ, ಪಟ್ಟಣದ ಅಥವಾ ನಗರದ ಪ್ರದೇಶಗಳಲ್ಲಿ ಯಾವ ಭೂಮಿಗಳನ್ನು ಸೇರಿಸಲಾಗಿದೆಯೆಂಬುದನ್ನು ನಿರ್ಧರಿಸಬಹುದು ಮತ್ತು ಭೂಹಿಡುವಳಿದಾರರಿಗೆ ಇರುವ ಹಕ್ಕುಗಳನ್ನು ಗಮನಿಸಿ, ಕಾಲಕಾಲಕ್ಕೆ ಅವುಗಳ ಸರಹದ್ದನ್ನು ನಿಗದಿ ಮಾಡಬಹುದು ಮತ್ತು ವ್ಯತ್ಯಾಸ ಮಾಡಬಹುದು.

(2) ಉಪಪ್ರಕರಣ(1)ರ ಮೇರೆಗೆ ಕಾರ್ಯನಿರ್ವಹಿಸುವ ಡೆಪ್ಯುಟಿ ಕಮಿಷನರು ಅಥವಾ ಮೋಜಣಿ ಅಧಿಕಾರಿಯು ರಾಜ್ಯ ಸರ್ಕಾರದ ಸ್ವತ್ತಾಗಿರುವ ಮತ್ತು ಯಾರೇ ವ್ಯಕ್ತಿಯ ಅಥವಾ ವ್ಯಕ್ತಿ ಸಮೂಹದ ಕಾನೂನುಬದ್ಧ ಅಧಿಭೋಗದಲ್ಲಿ ಇಲ್ಲದಿರುವ ಯಾವುದೇ ಗ್ರಾಮದ, ಪಟ್ಟಣದ ಅಥವಾ ನಗರದ ಸರಹದ್ದುಗಳ ಒಳಗಿರುವ ಭೂಮಿಗಳನ್ನು ಕಟ್ಟಡದ ನಿವೇಶನಕ್ಕಾಗಿ ಪ್ರತ್ಯೇಕವಾಗಿರಿಸಬಹುದು:

ಪರಂತು, ಇದುವರೆಗೆ ಬೇಸಾಯದ ಉದ್ದೇಶಕ್ಕಾಗಿ ಮಾತ್ರ ಬಳಸಿದ ಯಾವ ಭೂಮಿಯನ್ನು, ರಾಜ್ಯ ಸರ್ಕಾರದಿಂದ ಮುಂಚಿತವಾಗಿ ಅನುಮತಿ ಪಡೆದ ಹೊರತು, ಕಟ್ಟಡ ನಿವೇಶನಗಳಿಗಾಗಿಪ್ರತ್ಯೇಕವಾಗಿರಿಸತಕ್ಕದ್ದಲ್ಲ.

(3) ಈ ಅಧಿನಿಯಮವು ಪ್ರಾರಂಭವಾಗುವುದಕ್ಕಿಂತಲೂ ಮೊದಲು ತತ್ಕಾಲದಲ್ಲಿ ಜಾರಿಯಲ್ಲಿದ್ದ ಯಾವುದೇ ಕಾನೂನಿಗೆ ಅನುಸಾರವಾಗಿ ಯಾವುದೇ ಗ್ರಾಮಗಳ, ಪಟ್ಟಣಗಳ ಅಥವಾ ನಗರಗಳ ಸರಹದ್ದುಗಳಲ್ಲಿ ಕಟ್ಟಡಗಳ ನಿವೇಶನಗಳಿಗಾಗಿ ಈಗಾಗಲೇ ಪ್ರತ್ಯೇಕವಾಗಿ ಇರಿಸಲಾದ ಭೂಮಿಗಳನ್ನು, ಈ ಪ್ರಕರಣದ ಮೇರೆಗೆ ಹಾಗೆ ಪ್ರತ್ಯೇಕವಾಗಿ ಇರಿಸಲಾಗಿದೆ ಎಂದು ಭಾವಿಸತಕ್ಕದ್ದು.

**149. ಕಟ್ಟಡ ನಿವೇಶನಗಳ ವಿಲೆ.–** ಡೆಪ್ಯುಟಿ ಕಮಿಷನರು, ಗ್ರಾಮಗಳ, ಪಟ್ಟಣಗಳ ಅಥವಾ ನಗರಗಳ ಮೇಲೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಸ್ಥಳೀಯ ಪ್ರಾಧಿಕಾರದಲ್ಲಿ ನಿಹಿತವಾಗಿರುವಂಥ ಭೂಮಿಗಳನ್ನು ಬಿಟ್ಟು 148ನೇ ಪ್ರಕರಣದ ಮೇರೆಗೆ ಕಟ್ಟಡ ನಿವೇಶನಕ್ಕಾಗಿ ಪ್ರತ್ಯೇಕವಾಗಿರಿಸಿರುವ ಭೂಮಿಗಳನ್ನು, ಈ ಬಗ್ಗೆ ರಾಜ್ಯ ಸರ್ಕಾರವು ಮಾಡಿದ ನಿಯಮಗಳು ನಿರ್ದೇಶಿಸಬಹುದಾದಂಥ ರೀತಿಯಲ್ಲಿ ವಿಲೇ ಮಾಡಬಹುದು.

**150. ಕೆಲವು ಸಂದರ್ಭಗಳಲ್ಲಿ ಈಗಿರುವ ವಿನಾಯಿತಿಗಳನ್ನು ಮುಂದುವರಿಸುವುದು.–** ಗ್ರಾಮಗಳ ಪ್ರದೇಶಗಳಲ್ಲಿ ಮತ್ತು ಪಟ್ಟಣಗಳ ಅಥವಾ ನಗರಗಳ ಸರಹದ್ದಿನಲ್ಲಿ ಇರುವ ಭೂಮಿಗಳಿಗೆ ಕಂದಾಯ ಸಂದಾಯ ಮಾಡುವ ಬಗ್ಗೆ ಮತ್ತು ಬೇಸಾಯೇತರ ಕಂದಾಯ ನಿರ್ಧರಣೆಯ ಬಗ್ಗೆ ಈಗಿರುವ ವಿನಾಯಿತಿಗಳನ್ನು ಕೆಳಕಂಡ ಸಂದರ್ಭಗಳಲ್ಲಿ, ಎಂದರೆ –

(i) ಅಂಥ ಭೂಮಿಗಳು ಬೇಸಾಯದ ಉದ್ದೇಶಕ್ಕಾಗಿ ಬಳಸುವ ಭೂಮಿಗಳಲ್ಲದಿದ್ದಲ್ಲಿ, ಮತ್ತು ಅವು ಈ ಅಧಿನಿಯಮವು ಪ್ರಾರಂಭವಾಗುವುದಕ್ಕೆ ಮೊದಲು ಯಾವುದೇ ಕಾನೂನಿನ ಅಥವಾ ಸಕ್ಷಮ ಪ್ರಾಧಿಕಾರಿದ ಆದೇಶದ ಅಥವಾ ರಾಜ್ಯ ಸರ್ಕಾರದೊಡನೆ ಮಾಡಿಕೊಂಡ ಯಾವುದೇ ಕರಾರಿನ ಅಥವಾ ಅದರಿಂದ ಪಡೆದ ಮಂಜೂರಾತಿಯ ಮೇರೆಗೆ ಪೂರ್ತಿಯಾಗಿ ಅಥವಾ ಭಾಗಶಃ ಭೂಕಂದಾಯದ ಸಂದಾಯದಿಂದ ಅಥವಾ ಬೇಸಾಯೇತರ ಕಂದಾಯ ನಿರ್ಧರಣೆಯಿಂದ ವಿನಾಯಿತಿ ಹೊಂದಿದ್ದರೆ;

(ii) ಅಂಥ ಭೂಮಿಗಳನ್ನು ಸಾಧಾರಣವಾಗಿ ಬೇಸಾಯದ ಉದ್ದೇಶಕ್ಕಾಗಿ ಬಳಸುತ್ತಿದ್ದರೆ ಮತ್ತು ಅವು ಕಟ್ಟಡಗಳಿಗೆ ಲಗತ್ತಾಗಿರುವ 'ಹಿತ್ತಲು'ಗಳೆಂಬ ಕಾರಣದಿಂದ ಅಥವಾ ಅವುಗಳಿಗೆ ಮೋಜಣಿ ಮತ್ತು ಕಂದಾಯ ವ್ಯವಸ್ಥೆಯನ್ನು ಅನ್ವಯಿಸುವುದು ವಿಹಿತವಲ್ಲವೆಂದು ಭಾವಿಸಿರುವ ಕಾರಣದಿಂದ ಈ ಅಧಿನಿಯಮವು ಪ್ರಾರಂಭವಾಗುವುದಕ್ಕೆ ಮೊದಲು ಭೂಕಂದಾಯದ ಸಂದಾಯದಿಂದ ಮತ್ತು ಬೇಸಾಯೇತರ ಕಂದಾಯದಿಂದ ವಿನಾಯಿತಿ ಹೊಂದಿದ್ದು, ಈ ಅಧಿನಿಯಮಕ್ಕೆ ಮೊದಲು ಜಾರಿಗೆ ತಂದ ಮೋಜಣಿ ಮತ್ತು ಕಂದಾಯ ವ್ಯವಸ್ಥೆಯಿಂದ ಹೊರತುಪಡಿಸಿದ್ದರೆ,
–ಮುಂದುವರಿಸತಕ್ಕದ್ದು.

**151. ವಿನಾಯಿತಿಯ ಹಕ್ಕನ್ನು ಡೆಪ್ಯುಟಿ ಕಮಿಷನರು ನಿರ್ಧರಿಸುವುದು.–** (1) 150ನೇ ಪ್ರಕರಣದ ಮೇರೆಗೆ ವಿನಾಯಿತಿಯನ್ನು ಪಡೆಯುವ ಬಗೆಗಿನ ಕ್ಲೇಮುಗಳನ್ನು ಸಂಕ್ಷಿಪ್ತ ವಿಚಾರಣೆಯ ನಂತರ ಡೆಪ್ಯುಟಿ ಕಮಿಷನರು ನಿರ್ಧರಿಸತಕ್ಕದ್ದು ಮತ್ತು ಅವರ ತೀರ್ಮಾನವು, ಸಿವಿಲ್ ದಾವೆಯಲ್ಲಿಯ ತೀರ್ಮಾನಕ್ಕೊಳಪಟ್ಟು ಅಂತಿಮವಾಗಿರತಕ್ಕದ್ದು.

(2) ಗ್ರಾಮದ ಪ್ರದೇಶದಲ್ಲಿರುವ ಅಥವಾ ಪಟ್ಟಣದ ಅಥವಾ ನಗರದ ಸರಹದ್ದುಗಳಲ್ಲಿರುವ ಯಾವುದೇ ಭೂಮಿಯ ಬಗ್ಗೆ (1)ನೇ ಉಪಪ್ರಕರಣದ ಮೇರೆಗೆ ಡೆಪ್ಯುಟಿ ಕಮಿಷನರು ಮಾಡಿದ ಯಾವುದೇ ಆದೇಶವನ್ನು ತಳ್ಳಿಹಾಕಲು ಸಿವಿಲ್ ನ್ಯಾಯಾಲಯದಲ್ಲಿ ಹೂಡಿದ ಯಾವುದೇ ದಾವೆಯನ್ನು(ಕಾಲಪರಿಮಿತಿಯನ್ನು ಪ್ರತಿವಾದವಾಗಿ ಮಂಡಿಸದಿದ್ದರೂ ಸಹ) ಅದನ್ನು ಆದೇಶದ ದಿನಾಂಕದಿಂದ ಒಂದು ವರುಷದೊಳಗಾಗಿ ಹೂಡಿರದಿದ್ದರೆ, ವಜಾ ಮಾಡತಕ್ಕದ್ದು.

**152. ಗ್ರಾಮ ಪ್ರದೇಶಗಳಲ್ಲಿ ಅಥವಾ ನಗರ ಮತ್ತು ಪಟ್ಟಣಗಳ ಸರಹದ್ದುಗಳಲ್ಲಿ ಇರುವ ಭೂಮಿಗಳನ್ನು ಮತ್ತು ಅವುಗಳ ಎಲ್ಲೆಗಳನ್ನು ಮೋಜಣಿ ಮಾಡುವ ಬಗ್ಗೆ.–** ಯಾವುದೇ ಗ್ರಾಮದ ಪ್ರದೇಶದಲ್ಲಿರುವ ಅಥವಾ ಯಾವುದೇ ನಗರದ ಅಥವಾ ಪಟ್ಟಣದ ಸರಹದ್ದುಗಳಲ್ಲಿರುವ ಯಾವುದೇ ಭೂಮಿಯ ಅಥವಾ ಅದರ ಎಲ್ಲೆಯ ಮೋಜಣಿಯನ್ನು 106ನೇ ಪ್ರಕರಣದ ಉಪಬಂಧಗಳ ಮೇರೆಗೆ ಮಾಡುವುದಕ್ಕೆ ಅಥವಾ 112ನೇ ಪ್ರಕರಣದ ಉಪಬಂಧಗಳ ಮೇರೆಗೆ ಒಂದು ಹೊಸ ಮೋಜಣಿಯನ್ನು ಮಾಡುವುದಕ್ಕೆ ನಿರ್ದೇಶಿಸುವುದು ವಿಹಿತವೆಂದು ರಾಜ್ಯ ಸರ್ಕಾರವು ಯಾವುದೇ ಕಾಲದಲ್ಲಿ ಭಾವಿಸಿದರೆ, ಅಂಥ ಮೋಜಣಿಯನ್ನು ಮಾಡತಕ್ಕದ್ದು ಮತ್ತು 150ನೇ ಪ್ರಕರಣದ ಮೇರೆಗೆ ಮುಂದುವರಿಸಿದ ಹಾಗೂ ಅಸ್ತಿತ್ವದಲ್ಲಿರುವ ಎಲ್ಲ ಭೂಕಂದಾಯ ಸಂದಾಯದ ವಿನಾಯಿತಿಗಳಿಗೆ ಸರಿಯಾದ ಗಮನವನ್ನು ಕೊಟ್ಟು, ಮೋಜಣಿಯ ಎಲ್ಲ ಕಾರ್ಯಗಳನ್ನು ಈ ಅಧಿನಿಯಮದ ಮತ್ತು Xನೇ ಮತ್ತು XIIನೇ ಅಧ್ಯಾಯಗಳ ಉಪಬಂಧಗಳಿಗನುಸಾರವಾಗಿ ನಿಯಂತ್ರಿಸತಕ್ಕದ್ದು:

ಪರಂತು, 107ನೇ, 138ನೇ ಅಥವಾ 139ನೇ ಪ್ರಕರಣದಲ್ಲಿ ಇರುವುದು ಯಾವುದೂ, ಐದು ಸಾವಿರಕ್ಕಿಂತ ಹೆಚ್ಚು ನಿವಾಸಿಗಳನ್ನುಳ್ಳ ಯಾವುದೇ ನಗರದಲ್ಲಿ, ಪಟ್ಟಣದಲ್ಲಿ ಅಥವಾ ಗ್ರಾಮದಲ್ಲಿನ ಅಂಥ ಮೋಜಣಿಗೆ ಅನ್ವಯವಾಗುವುದೆಂದು ಪರಿಗಣಿಸತಕ್ಕದ್ದಲ್ಲ.

**153. 152ನೇ ಪ್ರಕರಣದ ಮೇರೆಗೆ ಮೋಜಣಿಯ ಕೆಲವು ಸಂದರ್ಭಗಳಲ್ಲಿ ಅನುಸರಿಸಬೇಕಾದ ಕ್ರಮಗಳು ಮತ್ತು ಮೋಜಣಿ ಫೀಜನ್ನು ವಿಧಿಸುವುದು.–** (1) ಐದು ಸಾವಿರಕ್ಕೂ ಹೆಚ್ಚು ನಿವಾಸಿಗಳನ್ನುಳ್ಳ ಯಾವುದೇ ನಗರದ ಅಥವಾ ಪಟ್ಟಣದಸರಹದ್ದುಗಳಲ್ಲಿರುವ ಯಾವುದೇ ಪ್ರದೇಶದ ಮೋಜಣಿಯನ್ನು 152ನೇ ಪ್ರಕರಣದ ಮೇರೆಗೆ ಮಾಡಲು ಆದೇಶ ಮಾಡುವಾಗ,–

(ಎ) ಯಾವ ಭೂಮಿಯ ಮೋಜಣಿ ಮಾಡಬೇಕೆಂದು ಆದೇಶ ಮಾಡಲಾಗಿದೆಯೋ ಆ ಯಾವುದೇ ಭೂಮಿಯಲ್ಲಿ ಅಥವಾ ಅದರ ಎಲ್ಲೆಗಳಲ್ಲಿ ಹಿತಾಸಕ್ತಿಯುಳ್ಳ ಎಲ್ಲ ವ್ಯಕ್ತಿಗಳಿಗೆ, ಎಲ್ಲೆಗಳನ್ನು ತೋರಿಸುವುದಕ್ಕಾಗಿ ಮತ್ತು ಅದಕ್ಕೆ ಸಂಬಂಧಪಟ್ಟ ಮಾಹಿತಿಯನ್ನೊದಗಿಸುವುದಕ್ಕಾಗಿ ನಿರ್ದಿಷ್ಟಪಡಿಸಿದ ಸ್ಥಳದಲ್ಲಿ ಮತ್ತು ಕಾಲದಲ್ಲಿ ಮತ್ತು ಆಮೇಲೆ ಕರೆದಾಗಲೆಲ್ಲ ಕಾಲಕಾಲಕ್ಕೆ ಸ್ವತಃ ಅಥವಾ ಏಜೆಂಟನ ಮೂಲಕ ಹಾಜರಿರಬೇಕೆಂದು ಆಹ್ವಾನಿಸುವ ಒಂದು ಅಧಿಸೂಚನೆಯನ್ನು ಮೋಜಣಿ ಅಧಿಕಾರಿಯು ನಿಯಮಿಸಿದ ರೀತಿಯಲ್ಲಿ ಪ್ರಕಟಿಸತಕ್ಕದ್ದು.

(ಬಿ) ಅಂಥ ಪ್ರದೇಶದಲ್ಲಿ ಕಟ್ಟಡ ನಿವೇಶನವನ್ನು ಹೊಂದಿರುವ ಪ್ರತಿಯೊಬ್ಬ ಹಿಡುವಳಿದಾರನು, ಅಂಥ ಭೂಮಿಯ ವಿಸ್ತೀರ್ಣದ ಮೇಲೆ ಡೆಪ್ಯುಟಿ ಕಮಿಷನರು, ನಿಯಮಿಸಿದ ರೀತಿಯಲ್ಲಿ, ನಿರ್ಧರಣೆ ಮಾಡುವ ಮೋಜಣಿ ಫೀಜನ್ನು ಸಂದಾಯ ಮಾಡಲು ಹೊಣೆಗಾರನಾಗತಕ್ಕದ್ದು:

ಪರಂತು,–ಯಾವ ಮೋಜಣಿ ಫೀಜನ್ನೂ

(i) ರಾಜ್ಯ ಸರ್ಕಾರವು; ಅಥವಾ

(ii) ಸಾರ್ವಜನಿಕ ಪೂಜೆಗಾಗಿ ಅಥವಾ ಧರ್ಮಾರ್ಥ ಉದ್ದೇಶಗಳಿಗಾಗಿ ಮಾತ್ರ ಸ್ವಾಧೀನದಲ್ಲಿಟ್ಟುಕೊಂಡಿರುವ ಯಾವ ಕಟ್ಟಡಗಳ ಮತ್ತು ಭೂಮಿಗಳ ಬಗ್ಗೆ, ಅವು ಇರುವ ಪ್ರದೇಶದ ಮೇಲೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಸ್ಥಳೀಯ ಪ್ರಾಧಿಕಾರಕ್ಕೆ ಸಂಬಂಧಿಸಿದ ಯಾವುದೇ ಕಾನೂನಿನ ಮೇರೆಗೆ, ಕರ ಸಂದಾಯದಿಂದ ವಿನಾಯಿತಿ ಕೊಡಲಾಗಿದೆಯೋ ಆ ಕಟ್ಟಡಗಳಿಗೆ ಮತ್ತು ಭೂಮಿಗಳಿಗೆ

– ಸಂದಾಯ ಮಾಡತಕ್ಕದ್ದಲ್ಲ.

(2) ಉಪಪ್ರಕರಣ(1)ರ ಮೇರೆಗೆ ನಿರ್ಧರಣೆ ಮಾಡಿದ ಯಾವುದೇ ಮೋಜಣಿ ಫೀಜನ್ನು ಸಂದಾಯ ಮಾಡಲು ಹೊಣೆಗಾರನಾಗಿರುವ ವ್ಯಕ್ತಿಗೆ, ಯಾವ ನೋಟೀಸನ್ನು, ಆ ನೋಟೀಸಿನಲ್ಲಿ ಹೇಳಿರುವ ಪಟ್ಟಣದ ಅಥವಾ ನಗರದ ಅಥವಾ ಅದರ ಯಾವುದೇ ಭಾಗದೊಳಗಿರುವ ಪ್ರದೇಶದ ಮೋಜಣಿಯು ಮುಗಿದ ಬಳಿಕ ಡೆಪ್ಯುಟಿ ಕಮಿಷನರು ಜಾರಿ ಮಾಡುತ್ತಾನೋ ಆ ನೋಟೀಸಿನ ದಿನಾಂಕದಿಂದ ಮೂರು ತಿಂಗಳೊಳಗಾಗಿ ಆ ವ್ಯಕ್ತಿಯು ಆ ಮೋಜಣಿ ಫೀಜನ್ನು ಸಂದಾಯ ಮಾಡತಕ್ಕದ್ದು. ಅಂಥ ಮೋಜಣಿ ಫೀಜು ಭೂಕಂದಾಯದ ಬಾಕಿ ಎಂಬಂತೆ ವಸೂಲೀಯಾಗಿರತಕ್ಕದ್ದು.

**154. ಪ್ರತ್ಯೇಕ ಹಣ ತೆಗೆದುಕೊಳ್ಳದೆ ಪ್ರಮಾಣ ಪತ್ರವನ್ನು ಕೊಡುವುದು.–** (1) 152ನೇ ಪ್ರಕರಣದ ಮೇರೆಗೆ ಯಾವುದೇ ಪಟ್ಟಣದ ಅಥವಾ ನಗರದ ಪ್ರದೇಶದ ಒಳಗಿರುವ ಕಟ್ಟಡ ನಿವೇಶನವನ್ನು ಮೋಜಣಿ ಮಾಡಲು ಆದೇಶಿಸಲಾಗಿದೆಯೋ ಆ ಯಾವುದೇ ಪಟ್ಟಣದ ಅಥವಾ ನಗರದ ಪ್ರದೇಶದ ಒಳಗಿರುವ ಕಟ್ಟಡ ನಿವೇಶನದ ಪ್ರತಿಯೊಬ್ಬ ಹಿಡುವಳಿದಾರನು. 153ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಮೋಜಣಿ ಫೀಜನ್ನು ಸಂದಾಯ ಮಾಡಿದ ಬಳಿಕ, ನಿಯಮಿಸಿದ ನಮೂನೆಯಲ್ಲಿ ಅಥವಾ ಅದೇ ರೀತಿಯಲ್ಲಿ ತನ್ನ ಹಿಡುವಳಿಯ ನಕ್ಷೆಯನ್ನು ಮತ್ತು ವರ್ಣನೆಯನ್ನು, ವಿಸ್ತೀರ್ಣವನ್ನು ಮತ್ತು ಸ್ವರೂಪವನ್ನು ನಿರ್ದಿಷ್ಟವಾಗಿ ಒಳಗೊಂಡಿರುವ ಪ್ರಮಾಣ ಪತ್ರವನ್ನು ಯಾವುದೇ ಪ್ರತ್ಯೇಕ ಹಣ ಕೊಡದೆ [1][ತಹಶೀಲ್ದಾರನಿಂದ][1] ಪಡೆಯಲು ಹಕ್ಕುಳ್ಳವನಾಗಿರತಕ್ಕದ್ದು:

ಪರಂತು, ಅಂಥ ಹಿಡುವಳಿದಾರನು ಮೋಜಣಿ ಫೀಜನ್ನು ಸಂದಾಯ ಮಾಡುವ ಕಾಲದಲ್ಲಿ ಅಥವಾ ಆಮೇಲೆ 153ನೇ ಪ್ರಕರಣದ ಮೇರೆಗೆ [1][ತಹಶೀಲ್ದಾರನು][1] ನೋಟೀಸು ಕೊಟ್ಟ ದಿನಾಂಕದಿಂದ ಮೂರು ತಿಂಗಳೊಳಗೆ ಪ್ರಮಾಣಪತ್ರಕ್ಕಾಗಿ ಅರ್ಜಿ ಸಲ್ಲಿಸದಿದ್ದರೆ, ಅಂಥ ಪ್ರತಿಯೊಂದು ಪ್ರಮಾಣಪತ್ರದ ಬಗ್ಗೆ ಒಂದು ರೂಪಾಯಿಗೆ ಮೀರಿದ ಹೆಚ್ಚಿನ ಫೀಜನ್ನು ಸಂದಾಯ ಮಾಡಲು ತಹಶೀಲ್ದಾರನು ಅವನನ್ನು ಅಗತ್ಯಪಡಿಸಬಹುದು.

1. 1970ರ ಅಧಿನಿಯಮ 5ರ ಮೂಲಕ 23.10.1969 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) ಅಂಥ ಪ್ರತಿಯೊಂದು ಪ್ರಮಾಣಪತ್ರವನ್ನು, ಅದನ್ನು ಬರೆದು ಕೊಡಲು ಕಾಲಕಾಲಕ್ಕೆ ಯಾವ ಅಧಿಕಾರಿಗೆ ಅಧಿಕಾರ ಕೊಡಲಾಗಿದೆಯೋ ಆ ಅಧಿಕಾರಿಯು ರಾಜ್ಯ ಸರ್ಕಾರದ ಪರವಾಗಿ ಬರೆದು ಕೊಡತಕ್ಕದ್ದು.

**155. ಎಲ್ಲೆ ಅಥವಾ ಮೋಜಣಿ ಗುರುತುಗಳನ್ನು ಸಂರಕ್ಷಿಸುವ ಬಗ್ಗೆ ಸ್ಥಳೀಯ ಪ್ರಾಧಿಕಾರದ ಕರ್ತವ್ಯಗಳು.–** ಈ ಕೆಳಕಂಡವುಗಳನ್ನು, ಎಂದರೆ

(ಎ) ಅಧಿಕಾರ ವ್ಯಾಪ್ತಿಯಲ್ಲಿರುವ ಯಾವುದೇ ಎಲ್ಲೆ ಅಥವಾ ಮೋಜಣಿ ಗುರುತನ್ನು ನಾಶಪಡಿಸುವುದನ್ನು, ಅದಕ್ಕೆ ಹಾನಿ ಉಂಟು ಮಾಡುವುದನ್ನು, ತೆಗೆದುಹಾಕುವುದನ್ನು ಅಥವಾ ಬದಲಾವಣೆ ಮಾಡುವುದನ್ನು ತಡೆಯುವುದು ; ಮತ್ತು

(ಬಿ) ಅಂಥ ಯಾವುದೇ ಗುರುತನ್ನು ನಾಶ ಮಾಡಲಾಗಿದೆ, ಹಾನಿ ಉಂಟುಮಾಡಲಾಗಿದೆ, ತೆಗೆದುಹಾಕಲಾಗಿದೆ ಅಥವಾ ಬದಲಾಯಿಸಲಾಗಿದೆ ಎಂದು ಪ್ರತಿಯೊಂದು ಸ್ಥಳೀಯ ಪ್ರಾಧಿಕಾರಕ್ಕೆ ತಿಳಿದು ಬಂದಾಗ ಆ ಸಂಗತಿಯನ್ನು ಗೊತ್ತುಪಡಿಸಿದ ಅಧಿಕಾರಿಗೆ ವರದಿ ಮಾಡುವುದು,

–ಪ್ರತಿಯೊಂದು ಸ್ಥಳೀಯ ಪ್ರಾಧಿಕಾರದ ಕರ್ತವ್ಯವಾಗಿರತಕ್ಕದ್ದು.

**156. ಸ್ಥಳೀಯ ಪ್ರಾಧಿಕಾರವು ಸಂದಾಯ ಮಾಡಬೇಕಾದ ವಂತಿಗೆ ಹಣ.–** 152ನೇ ಪ್ರಕರಣದ ಮೇರೆಗೆ ಯಾವುದೇ ನಗರದ ಅಥವಾ ಪಟ್ಟಣದ ಸರಹದ್ದುಗಳಲ್ಲಿರುವ ಯಾವುದೇ ಭೂಮಿಯ ಅಥವಾ ಎಲ್ಲೆಯ ಬಗ್ಗೆ ನಿರ್ದೇಶಿಸಲಾದ ಮೋಜಣಿಯನ್ನು ಈ ಅಧಿನಿಯಮದ ಉಪಬಂಧಗಳಿಗನುಸಾರವಾಗಿ ಮುಗಿಸಿದಾಗ, ಅಂಥ ಮೋಜಣಿಗೆ ತಗಲಿದ ವೆಚ್ಚಗಳನ್ನು, ರಾಜ್ಯ ಸರ್ಕಾರವು ಗೊತ್ತುಪಡಿಸಬಹುದಾದ ಪ್ರಮಾಣದಲ್ಲಿ ಸಂಬಂಧಪಟ್ಟ ಸ್ಥಳೀಯ ಪ್ರಾಧಿಕಾರವು ರಾಜ್ಯ ಸರ್ಕಾರಕ್ಕೆ ಸಂದಾಯ ಮಾಡತಕ್ಕದ್ದು.

## ಅಧ್ಯಾಯ–XIV

## ಭೂಕಂದಾಯ ಮತ್ತು ಇತರ ಸರ್ಕಾರಿ ತಗಾದೆಗಳ ವಸೂಲಿ

**157. ಭೂಕಂದಾಯದ ಹೊಣೆ.–** (1) ವರ್ಗಾವಣೆಯಾಗಿರದ ಭೂಮಿಗೆ ಅಧಿಭೋಗದಾರನು ಮತ್ತು ವರ್ಗಾವಣೆಯಾದ ಭೂಮಿಗೆ ವರಿಷ್ಠ ಹಿಡುವಳಿದಾರನು, ಆ ಭೂಮಿಯ ಬಗ್ಗೆ ಇರುವ ಎಲ್ಲ ಬಾಕಿಗಳ ಸಮೇತ ಭೂಕಂದಾಯವನ್ನು ರಾಜ್ಯ ಸರ್ಕಾರಕ್ಕೆ ಸಂದಾಯ ಮಾಡಲು ಮುಖ್ಯ ಹೊಣೆಗಾರನಾಗಿರತಕ್ಕದ್ದು; ಈ ಪ್ರಕರಣದ ಮೇರೆಗೆ ಮುಖ್ಯ ಹೊಣೆಗಾರನಾಗಿರುವ ಜಂಟಿ ಅಧಿಭೋಗದಾರರು ಮತ್ತು ಜಂಟಿ ಹಿಡುವಳಿದಾರರು ಜಂಟಿಯಾಗಿ ಮತ್ತು ಬೇರೆ ಬೇರೆಯಾಗಿ ಹೊಣೆಗಾರರಾಗಿರತಕ್ಕದ್ದು.

(2) ಈ ಪ್ರಕರಣದ ಮೇರೆಗೆ ಮುಖ್ಯ ಹೊಣೆಗಾರನಾಗಿರುವ ಯಾರೇ ವ್ಯಕ್ತಿಯು ಭೂ ಕಂದಾಯವನ್ನು ಸಂದಾಯ ಮಾಡಲು ತಪ್ಪಿದರೆ, ಮೇಲೆ ಹೇಳಿದಂಥ ಬಾಕಿಯನ್ನೊಳಗೊಂಡ ಭೂಕಂದಾಯವು ಭೂಮಿಯ ಸ್ವಾಧೀನವನ್ನು ಹೊಂದಿರುವ ಯಾರೇವ್ಯಕ್ತಿಯಿಂದ ವಸೂಲೀಯವಾಗಿರತಕ್ಕದ್ದು:

ಪರಂತು, ಅಂಥ ವ್ಯಕ್ತಿಯು ಗೇಣಿದಾರನಾಗಿದ್ದರೆ, ಅವನಿಂದ ವಸೂಲು ಮಾಡಬೇಕಿದ್ದ ಮೊಬಲಗು, ಯಾವ ವರ್ಷದಲ್ಲಿ ಬಾಕಿ ವಸೂಲು ಮಾಡಲಾಗಿದೆಯೋ ಆ ವರ್ಷದ ತಗಾದೆ ಮೊಬಲಗನ್ನು ಮೀರತಕ್ಕದ್ದಲ್ಲ:

ಮತ್ತು ಪರಂತು, ಈ ಪ್ರಕರಣದ ಮೇರೆಗೆ ಭೂಕಂದಾಯವನ್ನು ಸಂದಾಯ ಮಾಡಲು ಮುಖ್ಯವಾಗಿ ಹೊಣೆಗಾರನಾಗಿರದ ವ್ಯಕ್ತಿಯಿಂದ ಅದನ್ನು ವಸೂಲು ಮಾಡಿದಾಗ,ಅವನು ಮುಖ್ಯವಾಗಿ ಹೊಣೆಗಾರನಾಗಿರುವ ವ್ಯಕ್ತಿಗೆ ಸಂದಾಯ ಮಾಡಬಹುದಾಗಿದ್ದ ಯಾವುದೇ ಮೊಬಲಗನ್ನುಮುಖ್ಯವಾಗಿ ಹೊಣೆಗಾರನಾಗಿರುವ ವ್ಯಕ್ತಿಯ ಲೆಕ್ಕಕ್ಕೆ ಜಮಾ ಮಾಡಲು ಅಂಥ ವ್ಯಕ್ತಿಗೆ ಅವಕಾಶ ಇರತಕ್ಕದ್ದು ಮತ್ತು ಅಂಥ ವ್ಯಕ್ತಿಯಿಂದ ವಸೂಲು ಮಾಡಿದ ಹಣವನ್ನು ಮುಖ್ಯವಾಗಿ ಹೊಣೆಗಾರನಾಗಿರುವ ವ್ಯಕ್ತಿಯ ಲೆಕ್ಕದಿಂದಜಮಾ ಪಡೆಯಲು ಅಂಥ ವ್ಯಕ್ತಿಯು ಹಕ್ಕುಳ್ಳವನಾಗಿರತಕ್ಕದ್ದು.

**158. ರಾಜ್ಯ ಸರ್ಕಾರದ ಕ್ಲೇಮಿಗೆ ಇತರ ಎಲ್ಲ ಕ್ಲೇಮಿಗಿಂತಲೂ ಆದ್ಯತೆ ಇರತಕ್ಕದ್ದು.–** (1) ಈ ಅಧ್ಯಾಯದ ಉಪಬಂಧಗಳ ಮೇರೆಗೆ ವಸೂಲಾಗಬೇಕಿರುವ ಯಾವುದೇ ಹಣದ ಬಗ್ಗೆ ರಾಜ್ಯ ಸರ್ಕಾರಕ್ಕಿರುವ ಕ್ಲೇಮಿಗೆ, ಯಾವುದೇ ಭೂಮಿಯ ಅಥವಾ ಅದರ ಹಿಡುವಳಿದಾರನ ವಿರುದ್ಧ ಇರುವ, ಅಡಮಾನಕ್ಕೆ, ತೀರ್ಪಿಗೆ, ಡಿಕ್ರಿಗೆ, ಅಮಲುಜಾರಿಗೆ ಅಥವಾ ಜಪ್ತಿಗೆ ಸಂಬಂಧಿಸಿದಂತೆ ಅಥವಾ ಇತರ ಯಾವುದೇ ಪ್ರಕಾರದ ಯಾವುದೇ ಇತರ ಋಣ, ತಗಾದೆ ಅಥವಾ ಕ್ಲೇಮು ಏನೇ ಇರಲಿ ಆದ್ಯತೆ ಇರತಕ್ಕದ್ದು.

(2) ಎಲ್ಲ ಸಂದರ್ಭಗಳಲ್ಲೂ, ವ್ಯವಸಾಯದ ಉದ್ದೇಶಕ್ಕಾಗಿರುವ ಭೂಮಿಯ ಚಾಲ್ತಿ ವರ್ಷದ ಭೂಕಂದಾಯವು, ಇತರ ರೀತಿಯಿಂದ ವಸೂಲಾಗದಿದ್ದರೆ, ಇತರ ಎಲ್ಲ ಕ್ಲೇಮುಗಳಿಗಿಂತ ಮೊದಲು ಅಂಥ ಭೂಮಿಯ ಬೆಳೆಯಿಂದ ವಸೂಲೀಯವಾಗಿರತಕ್ಕದ್ದು.

**159.ಭೂಕಂದಾಯ ಸಂದಾಯದ ಸಂದರ್ಭ ಯಾವಾಗ ಉದ್ಭವಿಸುತ್ತದೆ ಮತ್ತು ಅದನ್ನು ಯಾವಾಗ ಸಂದಾಯ ಮಾಡಬೇಕು.–** (1) ಯಾವುದೇ ರೆವಿನ್ಯೂ ವರುಷದ ಬಗ್ಗೆ ವಿಧಿಸಬಹುದಾದ ಭೂ ಕಂದಾಯವನ್ನು ಸಂದಾಯ ಮಾಡಬೇಕಾದ ಸಂದರ್ಭ ಆ ವರುಷದ ಮೊದಲನೆಯ ದಿನದಂದು ಉದ್ಭವಿಸುತ್ತದೆ ಮತ್ತು ನಿಯಮಿಸಬಹುದಾದಂಥ ಕಾಲಗಳಲ್ಲಿ, ಅಂಥ ಕಂತುಗಳಲ್ಲಿ, ಅಂಥ ವ್ಯಕ್ತಿಗಳಿಗೆ ಮತ್ತು ಅಂಥ ಸ್ಥಳಗಳಲ್ಲಿ ಅದನ್ನು ಸಂದಾಯ ಮಾಡತಕ್ಕದ್ದು.

(2) ಉಪಪ್ರಕರಣ (1)ರ ಮೇರೆಗೆ ಗೊತ್ತುಪಡಿಸಿದ ವ್ಯಕ್ತಿಗೆ ಭೂಕಂದಾಯವನ್ನು ನಗದಾಗಿ ಅಥವಾ ನಿಯಮಿಸಬಹುದಾದ ಯಾವುದೇ ರೀತಿಯಲ್ಲಿ ಸಂದಾಯ ಮಾಡಬಹುದು.

(3) ರೆವಿನ್ಯೂ ವರುಷದ ಮೊದಲನೆಯ ದಿನ ಮತ್ತು (1)ನೇ ಉಪಪ್ರಕರಣದ ಮೇರೆಗೆ ಭೂಕಂದಾಯವನ್ನು ಸಂದಾಯ ಮಾಡಲು ನಿಯಮಿಸಿದ ದಿನಾಂಕ ಇವುಗಳ ನಡುವಣ ಅವಧಿಯನ್ನು ರಿಯಾಯಿತಿ ಅವಧಿಯೆಂದು ಭಾವಿಸತಕ್ಕದ್ದು ಮತ್ತು ಅದು (1)ನೇ ಉಪ ಪ್ರಕರಣದ ಉಪಬಂಧಗಳಿಗೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

**160. ಭೂಕಂದಾಯದ ಬಾಕಿ ಮತ್ತು ಸುಸ್ತಿದಾರ.–** (1) 159ನೇ ಪ್ರಕರಣದ ಮೇರೆಗೆ ಸಂದಾಯ ಮಾಡಲು ಗೊತ್ತುಪಡಿಸಿದ ದಿನಾಂಕದಂದು ಸಂದಾಯ ಮಾಡದಿರುವ ಯಾವುದೇ ಭೂಕಂದಾಯದ ಕಂತು ಅಥವಾ ಅದರ

ಯಾವುದೇ ಭಾಗವು ಭೂಕಂದಾಯದ ಬಾಕಿಯಾಗುತ್ತದೆ ಮತ್ತು ಅದನ್ನು ಸಂದಾಯ ಮಾಡಲು ಜವಾಬ್ದಾರನಾಗಿರುವ ವ್ಯಕ್ತಿಯು ಸುಸ್ತಿದಾರನಾಗುತ್ತಾನೆ.

(2) ಡೆಪ್ಯುಟಿ ಕಮಿಷನರು ಅಥವಾ ಅಸಿಸ್ಟೆಂಟ್ ಕಮಿಷನರು ಪ್ರಮಾಣೀಕರಿಸಿದ ಲೆಕ್ಕದ ತಃಖ್ತೆಯು, ಈ ಅಧ್ಯಾಯದ ಉದ್ದೇಶಕ್ಕಾಗಿ, ಕಂದಾಯದ ಬಾಕಿಯು ಇರುವ ಬಗ್ಗೆ, ಅದರ ಮೊಬಲಗಿನ ಬಗ್ಗೆ ಮತ್ತು ಸುಸ್ತಿದಾರನಾಗಿರುವ ವ್ಯಕ್ತಿ ಯಾರೆಂಬುದರ ಬಗ್ಗೆ ನಿರ್ಣಾಯಕ ಸಾಕ್ಷ್ಯವಾಗಿರತಕ್ಕದ್ದು:

ಪರಂತು, ಈ ಉಪಪ್ರಕರಣದಲ್ಲಿರುವುದು ಯಾವುದೂ, ಅಂಥ ವ್ಯಕ್ತಿಗೆ, ಆ ವ್ಯಕ್ತಿಯು ತಕರಾರು ಎತ್ತಿ ಸಂದಾಯ ಮಾಡುವ ಮತ್ತು ಸಂದರ್ಭಾನುಸಾರ, ಡೆಪ್ಯುಟಿ ಕಮಿಷನರ್‌ರ ಅಥವಾ ಅಸಿಸ್ಟೆಂಟ್ ಕಮಿಷನರ್‌ರ ಮುಂದೆ ಪ್ರತ್ಯೇಕ ವ್ಯವಹರಣೆಯಲ್ಲಿ ಆ ಲೆಕ್ಕದ ಸರಿತನದ ಬಗ್ಗೆ ಪ್ರಶ್ನಿಸಲು ಇರುವ ಹಕ್ಕುಗಳಿಗೆ ಬಾಧಕವಾಗತಕ್ಕದ್ದಲ್ಲ.

**161. ಬಾಕಿಗಳನ್ನು ವಸೂಲು ಮಾಡುವ ವಿಧಾನ.–** 162ನೇ ಪ್ರಕರಣದ ಮೇರೆಗೆ ಲಿಖಿತ ತಗಾದೆ ನೋಟೀಸನ್ನು ಸುಸ್ತಿದಾರನಿಗೆ ಜಾರಿ ಮಾಡಿದ ಬಳಿಕ ಭೂಕಂದಾಯದ ಬಾಕಿಯನ್ನು ಈ ಮುಂದಿನ ವಿಧಾನಗಳ ಪೈಕಿ ಒಂದು ವಿಧಾನದ ಪ್ರಕಾರ ಅಥವಾ ಹೆಚ್ಚು ವಿಧಾನಗಳ ಪ್ರಕಾರ ,–

(ಎ) 163ನೇ ಪ್ರಕರಣದ ಮೇರೆಗೆ ಯಾವ ಹಿಡುವಳಿ ಬಗ್ಗೆ ಬಾಕಿ ಇದೆಯೋ ಆ ಹಿಡುವಳಿಯ ಅಧಿಭೋಗವನ್ನು ಅಥವಾ ವರ್ಗಾವಣೆಯಾದ ಹಿಡುವಳಿಯನ್ನು ಮುಟ್ಟುಗೋಲು ಹಾಕಿಕೊಳ್ಳುವ ಮೂಲಕ;

(ಬಿ) ಸುಸ್ತಿದಾರನ ಭೂಮಿಯ ಉತ್ಪತ್ತಿಯ ಸಮೇತ ಅವನ ಚರ ಸ್ವತ್ತನ್ನು 164ನೇ ಪ್ರಕರಣದ ಮೇರೆಗೆ ಜಪ್ತಿಮಾಡುವ ಮತ್ತು ಮಾರಾಟ ಮಾಡುವ ಮೂಲಕ;

(ಸಿ) ಸುಸ್ತಿದಾರನ ಸ್ಥಿರ ಸ್ವತ್ತನ್ನು 165ನೇಪ್ರಕರಣದಿಂದ 168ನೇ ಪ್ರಕರಣಗಳ ಮೇರೆಗೆ ಜಪ್ತಿ ಮತ್ತು ಮಾರಾಟ ಮಾಡುವ ಮೂಲಕ;

(ಡಿ) ಇಡೀ ಗ್ರಾಮಗಳನ್ನು ಅಥವಾ ಗ್ರಾಮಗಳ ಭಾಗಗಳನ್ನೊಳಗೊಂಡಿರುವ ಹಿಡುವಳಿಗಳನ್ನು ವರ್ಗಾವಣೆ ಮಾಡಿದ್ದರೆ ಅಂಥ ಹಿಡುವಳಿಗಳ ಸಂದರ್ಭದಲ್ಲಿ, 183 ರಿಂದ 187ನೇ ಪ್ರಕರಣಗಳ ಮೇರೆಗೆ ಸದರಿ ಗ್ರಾಮಗಳನ್ನು ಅಥವಾ ಗ್ರಾಮಗಳ ಭಾಗಗಳನ್ನು ಜಪ್ತಿ ಮಾಡಿ ಸರ್ಕಾರದ ಆಡಳಿತಕ್ಕೆ ಒಳಪಡಿಸುವುದರ ಮೂಲಕ ವಸೂಲು ಮಾಡಿಕೊಳ್ಳಬಹುದು.

**162. ತಗಾದೆ ನೋಟೀಸು.–** (1) ತಗಾದೆಯ ನೋಟೀಸನ್ನು,ಬಾಕಿಯನ್ನು ಸಂದಾಯ ಮಾಡಬೇಕಾಗಿರುವ ದಿನದಂದು ಅಥವಾ ಆ ದಿನದ ತರುವಾಯ ಹೊರಡಿಸಬಹುದು.

(2) ತಗಾದೆ ನೋಟೀಸಿನ ನಮೂನೆ ಮತ್ತು ಅದರ ಒಳಾಂಶಗಳು, ಅಂಥ ನೋಟೀಸಿನ ಬಗ್ಗೆ ಭೂಕಂದಾಯದ ಬಾಕಿಯಂತೆ ಸುಸ್ತಿದಾರನಿಂದ ವಸೂಲಾಗಬೇಕಾಗಿರುವ ಖರ್ಚು ಮತ್ತು ಅಂಥ ನೋಟೀಸುಗಳನ್ನು ಹೊರಡಿಸಬೇಕಾದ ಅಧಿಕಾರಿಗಳು ನಿಯಮಿಸಬಹುದಾದಂತೆ ಇರತಕ್ಕದ್ದು.

**163. ಅಧಿಭೋಗದ ಅಥವಾ ವರ್ಗಾವಣೆಯಾದ ಹಿಡುವಳಿಯ ಮುಟ್ಟುಗೋಲು.–** (1) ಯಾವ ಅಧಿಭೋಗಕ್ಕೆ ವರ್ಗಾವಣೆಯಾದ ಹಿಡುವಳಿಗಳಿಗೆ ಸಂಬಂಧಪಟ್ಟಂತೆ ಭೂಕಂದಾಯ ಬಾಕಿ ಇದೆಯೋ ಆ ಅಧಿಭೋಗವು ಅಥವಾ ಹಿಡುವಳಿಯು ರಾಜ್ಯ ಸರ್ಕಾರಕ್ಕೆ ಮುಟ್ಟುಗೋಲು ಆಗತಕ್ಕದ್ದೆಂದು, [1][ತಹಶೀಲ್ದಾರನು][1] ಘೋಷಿಸಬಹುದು ಮತ್ತು ಅದನ್ನು 87ನೇ ಮತ್ತು 88ನೇ ಪ್ರಕರಣಗಳ ಉಪಬಂಧಗಳ ಮೇರೆಗೆ ಮಾರಾಟ ಮಾಡಬಹುದು ಅಥವಾ ಇತರ ರೀತಿಯಲ್ಲಿ ವಿಲೆ ಮಾಡಬಹುದು ಮತ್ತು ಅದರಿಂದ ಬಂದ ಉತ್ಪತ್ತಿ ಏನಾದರೂ ಬಂದರೆ, ಅದನ್ನು ಸುಸ್ತಿದಾರನ ಲೆಕ್ಕಕ್ಕೆ ಜಮೆ ಮಾಡಬೇಕು:

ಪರಂತು, [1][ತಹಶೀಲ್ದಾರನು][1] ಅಂಥ ಯಾವುದೇ ಅಧಿಭೋಗದ ಅಥವಾ ವರ್ಗಾವಣೆ ಮಾಡಿದ ಹಿಡುವಳಿಯ ಮುಟ್ಟುಗೋಲಿನ ಘೋಷಣೆಯನ್ನು,

1. 1970ರ ಅಧಿನಿಯಮ 5ರ ಮೂಲಕ 23.10.1969 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಎ) ಸ್ಥಿರ ಸ್ವತ್ತನ್ನು ಮಾರಾಟ ಮಾಡುವುದಕ್ಕೆ 168ನೇ ಪ್ರಕರಣದ ಮೇರೆಗೆ ನಿಯಮಿಸಿದ ರೀತಿಯಲ್ಲಿ, ತನ್ನ ಉದ್ದೇಶಿತ ಘೋಷಣೆಯ ಬಗ್ಗೆ ಉದ್ಘೋಷಣೆಯನ್ನು ಮತ್ತು ಲಿಖಿತ ನೋಟೀಸುಗಳನ್ನು ಅದಕ್ಕೆಘೋಷಣೆಗೂ ಮುಂಚೆ ಹೊರಡಿಸಿದ್ದ ಹೊರತು; ಮತ್ತು

(ಬಿ) 168ನೇ ಪ್ರಕರಣದ ಮೇರೆಗೆ ನಿಯಮಿಸಿದಂತೆ ಪ್ರಕಟಿಸಿದ ಸದರಿ ನೋಟೀಸುಗಳ ಪೈಕಿ ಯಾವುದನ್ನಾದರೂ ಯಾವ ಇತ್ತೀಚಿನ ದಿನಾಂಕದಂದು ಪ್ರಕಟಿಸಬೇಕಾಗಿತ್ತೋ ಆ ದಿನಾಂಕದಿಂದ ಕನಿಷ್ಠ ಹದಿನೈದು ದಿನಗಳು ಮುಗಿಯುವ ತನಕ ;

– ಮಾಡತಕ್ಕದ್ದಲ್ಲ.

[1][ಮತ್ತೂ ಪರಂತು, 87ನೇ ಪ್ರಕರಣದ (1)ನೇ ಉಪ-ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಬರಬೇಕಾದ ಭೂಕಂದಾಯದ ಬಾಕಿಗಳು ಹತ್ತು ಸಾವಿರ ರೂಪಾಯಿಗಳಿಗೆ ಮೀರದಿದ್ದರೆ, ತಹಶೀಲ್ದಾರನು, ಯಾವುದೇ ಅಂಥ ಅಧಿಭೋಗದ ಅಥವಾ ಪರಭಾರೆಯ ಹಿಡುವಳಿಯನ್ನು ರಾಜ್ಯ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದೆಂದು ಘೋಷಣೆ ಮಾಡತಕ್ಕದ್ದಲ್ಲ.][1]

1. 1991ರ ಅಧಿನಿಯಮ 28ರ ಮೂಲಕ 7.8.1991 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(2) ಉಪಪ್ರಕರಣ (1)ರ ಮೇರೆಗೆ ಯಾವುದೇ ಅಧಿಭೋಗವು ಅಥವಾ ವರ್ಗಾವಣೆ ಮಾಡಲಾದ ಭೂಮಿಯು ಮುಟ್ಟುಗೋಲಾಗಿದೆಯೆಂದು ಘೋಷಿಸಿದಾಗ, ಅಂಥ ಅಧಿಭೋಗವನ್ನು ಅಥವಾ ವರ್ಗಾವಣೆಯಾದ ಹಿಡುವಳಿಯನ್ನು ಮಾರಾಟ ಮಾಡುವುದಕ್ಕಿಂತ ಅಥವಾ ಇತರ ರೀತಿಯಲ್ಲಿ ವಿಲೇ ಮಾಡುವುದಕ್ಕಿಂತ ಮುಂಚೆ, ಸುಸ್ತಿದಾರನು ಅಥವಾ ಆ ಅಧಿಭೋಗದಲ್ಲಿ ಅಥವಾ ವರ್ಗಾವಣೆಯಾದ ಹಿಡುವಳಿಯಲ್ಲಿ ಹಿತಾಸಕ್ತಿಯನ್ನುಳ್ಳ ಯಾರೇ ವ್ಯಕ್ತಿಯು ಬಾಕಿಯಾಗಿರುವ ಪೂರ್ಣ ಭೂಕಂದಾಯವನ್ನು ಮತ್ತು ಭೂಕಂದಾಯದ ವಸೂಲಿಯ ವ್ಯವಹರಣೆಗಳಿಗಾಗಿ ಅಲ್ಲಿಯವರೆಗೆ ತಗುಲಿದ ಎಲ್ಲ ವೆಚ್ಚಗಳನ್ನು, [1][ತಹಶೀಲ್ದಾರನು][1]ಗೊತ್ತುಪಡಿಸಬಹುದಾದಂತೆ, ಸಂದಾಯ ಮಾಡಿದ್ದರೆ [1][ತಹಶೀಲ್ದಾರನು][1]ಮುಟ್ಟುಗೋಲಿನ ಘೋಷಣೆಯನ್ನು ರದ್ದುಪಡಿಸಬಹುದು.

1. 1970ರ ಅಧಿನಿಯಮ 5ರ ಮೂಲಕ 23.10.1969 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**164. ಚರಸ್ವತ್ತಿನ ಜಪ್ತಿ ಮತ್ತು ಮಾರಾಟ.–** (1) [1][ತಹಶೀಲ್ದಾರನು][1]ಸುಸ್ತಿದಾರನ ಚರ ಸ್ವತ್ತನ್ನು ಜಪ್ತಿ ಮಾಡಿಸಬಹುದು ಮತ್ತು ಮಾರಾಟ ಮಾಡಿಸಬಹುದು, ಅಂಥ ಜಪ್ತಿ ಮತ್ತು ಮಾರಾಟವನ್ನು ನಿಯಮಿಸಬಹುದಾದಂಥ ಅಧಿಕಾರಿಗಳು ಅಥವಾ ಅಧಿಕಾರಿಗಳ ವರ್ಗವು ಅಂಥ ರೀತಿಯಲ್ಲಿ ಮತ್ತು ಅಂಥ ಪ್ರಕ್ರಿಯೆಗಳಿಗನುಸಾರವಾಗಿ ಮಾಡತಕ್ಕದ್ದು.

1. 1970ರ ಅಧಿನಿಯಮ 5ರ ಮೂಲಕ 23.10.1969 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) ಸಿವಿಲ್ ಪ್ರಕ್ರಿಯಾ ಸಂಹಿತೆ, 1908ರ ಮೇರೆಗೆ ಡಿಕ್ರಿಯ ಅಮಲ್ಜಾರಿಯಾಗುವಾಗವಿನಾಯಿತಿಕೊಡಲಾಗಿದೆಯೋ ಅಥವಾ ಧಾರ್ಮಿಕ ಉಪಯೋಗಗಳಿಗಾಗಿ ಮಾತ್ರವೇ ಕಾದಿರಿಸಲಾದ ಯಾವುದೇ ಸ್ವತ್ತಿನ ಜಪ್ತಿಗೆ ಅಥವಾ ಮಾರಾಟಕ್ಕೆ ವಿನಾಯತಿ ಕೊಡಲಾಗಿದೆಯೋ ಆ ಸ್ವತ್ತಿನ ಜಪ್ತಿ ಅಥವಾ ಮಾರಾಟ ಮಾಡುವುದನ್ನು (1)ನೇ ಉಪಪ್ರಕರಣದಲ್ಲಿರುವುದು ಯಾವುದೂ ಅಧಿಕೃತಗೊಳಿಸುವುದೆಂದು ಭಾವಿಸತಕ್ಕದ್ದಲ್ಲ.

**165. ಸ್ಥಿರಸ್ವತ್ತಿನ ಜಪ್ತಿಮತ್ತು ಮಾರಾಟ.–** 161ನೇ ಪ್ರಕರಣದ (ಎ) ಮತ್ತು (ಬಿ) ಖಂಡಗಳಲ್ಲಿ ಉಲ್ಲೇಖಿಸಿದ ವಿಧಾನಗಳು ಬಾಕಿ ವಸೂಲು ಮಾಡಲು ವಿಹಿತವಾದವುಗಳಲ್ಲವೆಂದು ಅಥವಾ ಸಾಕಾಗುವುದಿಲ್ಲವೆಂದು [1][ತಹಶೀಲ್ದಾರನು][1]ಅಭಿಪ್ರಾಯಪಟ್ಟರೆ, ಆ ವಿಧಾನಗಳ ಜೊತೆಗೆ ಅಥವಾ ಅವುಗಳ ಪೈಕಿ ಯಾವುದೊಂದರ ಬದಲಾಗಿ ಸುಸ್ತಿದಾರನ ಯಾವ ಸ್ಥಿರ ಸ್ವತ್ತನ್ನಾದರೂ ಜಪ್ತಿ ಮಾಡಿಸಬಹುದು ಮತ್ತು ಮಾರಾಟ ಮಾಡಿಸಬಹುದು.

1. 1970ರ ಅಧಿನಿಯಮ 5ರ ಮೂಲಕ 23.10.1969 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**166. ಜಪ್ತಿ ಮಾಡುವ ಬಗೆ.–** (1)ಸುಸ್ತಿದಾರನು ಸ್ವತ್ತನ್ನು ವರ್ಗಾವಣೆ ಮಾಡುವುದನ್ನು ಅಥವಾ ಯಾವುದೇ ರೀತಿಯಲ್ಲಿ ಹೊಣೆಗೆ ಗುರಿ ಮಾಡುವುದನ್ನು ಮತ್ತು ಅಂಥ ವರ್ಗಾವಣೆಗೆ ಅಥವಾ ಹೊಣೆಗೆ ಗುರಿ ಮಾಡುವುದರಿಂದಾಗಿ ಯಾವುದಾದರೂ ಪ್ರಯೋಜನವನ್ನು ಪಡೆಯುವುದನ್ನು ತಡೆಯುವ ಆದೇಶದ ಮೂಲಕ 165ನೇ ಪ್ರಕರಣದ ಮೇರೆಗೆ ಸ್ಥಿರ ಸ್ವತ್ತನ್ನು ಜಪ್ತಿ ಮಾಡತಕ್ಕದ್ದು.

(2) ಉಪಪ್ರಕರಣ(1)ರ ಮೇರೆಗಿನ ಆದೇಶವನ್ನು, ಅಂಥ ಸ್ವತ್ತಿನ ಮೇಲೆ ಅಥವಾ ಅದರ ಬದಿಯಲ್ಲಿ ಇರುವ ಯಾವುದೇ ಸ್ಥಳದಲ್ಲಿ ಡಂಗುರ ಹೊರಡಿಸುವ ಮೂಲಕ ಅಥವಾ ಯಾವುದೇ ರೂಢಿಗತ ರೀತಿಯಿಂದ ಉದ್ಘೋಷಿಸತಕ್ಕದ್ದು ಮತ್ತು ಆ ಆದೇಶದ ಒಂದು ಪ್ರತಿಯನ್ನು ಸ್ವತ್ತಿನಲ್ಲಿ ಎದ್ದು ಕಾಣುವ ಸ್ಥಳಗಳಲ್ಲಿ ಮತ್ತು ಆದೇಶ ಮಾಡುವ ರೆವಿನ್ಯೂ ಅಧಿಕಾರಿಯ ಕಚೇರಿಯ ಸೂಚನಾ ಫಲಕದ ಮೇಲೆ ಅಂಟಿಸತಕ್ಕದ್ದು.

(3) ಉಪಪ್ರಕರಣ(1)ರ ಮೇರೆಗೆ ಮಾಡಿದ ಆದೇಶದ ದಿನಾಂಕದ ಅನಂತರ ಸುಸ್ತಿದಾರನು ಮಾಡಿದ ಯಾವುದೇ ವರ್ಗಾವಣೆಯು ಅಥವಾ ಸೃಜಿಸಿದ ಹೊಣೆಯು ಸರ್ಕಾರಕ್ಕೆ ಸಂಬಂಧಿಸಿದಂತೆ ಅಥವಾ ಭೂಕಂದಾಯದ ಬಾಕಿಯ ವಸೂಲಿಗಾಗಿ ಜಪ್ತಿಯ ತರುವಾಯದಲ್ಲಿ ನಡೆದ ಸ್ವತ್ತಿನ ಹರಾಜಿನಲ್ಲಿ ಸ್ವತ್ತನ್ನು ಕೊಂಡುಕೊಂಡ ವ್ಯಕ್ತಿಗೆ ಸಂಬಂಧಿಸಿದಂತೆ ಸಿಂಧುವಾದುದಾಗತಕ್ಕದ್ದಲ್ಲ.

**167. ಜಪ್ತಿ ಮಾಡಲಾದ ಸ್ಥಿರ ಸ್ವತ್ತಿನ ಬಗ್ಗೆ ಕ್ಲೇಮುಗಳು.–** (1) 165ನೇ ಪ್ರಕರಣದ ಮೇರೆಗೆ ಜಪ್ತಿಯಾದ ಸ್ಥಿರ ಸ್ವತ್ತಿಗೆ ಸುಸ್ತಿದಾರನ ಪರವಾಗಿ ಅಲ್ಲದೆ ಯಾರೇ ವ್ಯಕ್ತಿಯು ಬೇರೆ ಯಾವುದೇ ಕ್ಲೇಮನ್ನು ಮಾಡಿದರೆ, ಜಪ್ತಿ ಮಾಡುವ ರೆವಿನ್ಯೂ ಅಧಿಕಾರಿಯು ಆ ಕ್ಲೇಮಿನ ಬಗ್ಗೆ ಸಂಕ್ಷಿಪ್ತ ವಿಚಾರಣೆಯನ್ನು ನಡೆಸತಕ್ಕದ್ದು ಮತ್ತು ಅಂಥ ವಿಚಾರಣೆಯ ಅನಂತರ ಆ ಕ್ಲೇಮನ್ನು ಅಂಗೀಕರಿಸಬಹುದು ಅಥವಾ ತಿರಸ್ಕರಿಸಬಹುದು.

(2) ಉಪಪ್ರಕರಣ(1)ರ ಮೇರೆಗೆ ಯಾವ ವ್ಯಕ್ತಿಯ ವಿರುದ್ಧ ಆದೇಶ ಮಾಡಲಾಗಿದೆಯೋ ಆ ವ್ಯಕ್ತಿಯು, ಅಂಥ ಆದೇಶದ ದಿನಾಂಕದಿಂದ ಒಂದು ವರುಷದೊಳಗಾಗಿ, ಜಪ್ತಿ ಮಾಡಲಾದ ಸ್ವತ್ತಿನ ಬಗ್ಗೆ ತಾನು ಕ್ಲೇಮು ಮಾಡುವ ಹಕ್ಕನ್ನು ಸ್ಥಾಪಿಸಲು ದಾವೆಯನ್ನು ಹೂಡಬಹುದು; ಆದರೆ, ಅಂಥ ದಾವೆಯನ್ನೇನಾದಾದರೂ ಹೂಡಿದ್ದರೆ, ಅದರ ಫಲಿತಾಂಶಕ್ಕೊಳಪಟ್ಟು, ಆದೇಶವು ನಿರ್ಣಾಯಕವಾಗಿರತಕ್ಕದ್ದು.

**168. ಸ್ಥಿರ ಸ್ವತ್ತನ್ನು ಮಾರಾಟ ಮಾಡುವ ವಿಧಾನ.–** (1) ಈ ಅಧ್ಯಾಯದ ಉಪಬಂಧಗಳ ಮೇರೆಗೆ ಯಾವುದೇ ಭೂಮಿಯನ್ನು ಅಥವಾ ಇತರ ಸ್ಥಿರ ಸ್ವತ್ತನ್ನು ಮಾರಾಟ ಮಾಡುವುದಕ್ಕೂ ಮೊದಲು ಡೆಪ್ಯುಟಿ ಕಮಿಷನರು ಅಥವಾ ಈ ಬಗ್ಗೆ ಅಧಿಕಾರ ಪಡೆದ ಅಧಿಕಾರಿಯು, ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ರೀತಿಯಲ್ಲಿ ಮತ್ತು ನಿಯಮಿಸಬಹುದಾದಂಥ ವಿವರಗಳನ್ನೊಳಗೊಂಡ ನೋಟೀಸುಗಳನ್ನು ಮತ್ತು ಉದ್ಘೋಷಣೆಗಳನ್ನು ಹೊರಡಿಸತಕ್ಕದ್ದು ಮತ್ತು ಅಂಥ ನೋಟೀಸುಗಳನ್ನು ಮತ್ತು ಉದ್ಘೋಷಣೆಗಳನ್ನು ನಿಯಮಿಸಬಹುದಾದಂಥ ರೀತಿಯಲ್ಲಿ ಪ್ರಕಟಿಸತಕ್ಕದ್ದು.

(2) ಉಪಪ್ರಕರಣ(1)ರ ಮೇರೆಗೆ ಹೊರಡಿಸಿದ ಪ್ರತಿಯೊಂದು ನೋಟೀಸಿನ ಅಥವಾ ಉದ್ಘೋಷಣೆಯ ಒಂದು ಪ್ರತಿಯನ್ನು ಸುಸ್ತಿದಾರನಿಗೆ ಜಾರಿಮಾಡತಕ್ಕದ್ದು.

**169. ಹರಾಜಿನ ಮೂಲಕ ಮಾರಾಟ ಆಗಬೇಕು.–** ಈ ಅಧ್ಯಾಯದ ಮೇರೆಗಿನ ಸ್ಥಿರ ಅಥವಾ ಚರ ಸ್ವತ್ತಿನ ಎಲ್ಲ ಮಾರಾಟಗಳು ನಿಯಮಿಸಬಹುದಾದಂಥ ನಿಯಮಗಳ ಮೇರೆಗೆ ಬಹಿರಂಗ ಹರಾಜಿನ ಮೂಲಕ ನಡೆಯತಕ್ಕದ್ದು.

**170. ಹರಾಜಿನಲ್ಲಿ ಬಿಡ್ ಮಾಡಲು ಪ್ರತಿಬಂಧ.–** 169ನೇ ಪ್ರಕರಣದ ಮೇರೆಗಿನ ಹರಾಜಿನ ಮೂಲಕ ಆಗುವ ಮಾರಾಟಕ್ಕೆ ಸಂಬಂಧಪಟ್ಟಂತೆ ಯಾವುದೇ ಕರ್ತವ್ಯವನ್ನು ನೆರವೇರಿಸಬೇಕಾಗಿರುವ ಯಾರೇ ಅಧಿಕಾರಿಯು ಮತ್ತು ಅಂಥ ಅಧಿಕಾರಿಯು ನಿಯೋಜಿಸಿದ ಅಥವಾ ಅಂಥ ಅಧಿಕಾರಿಗೆ ಅಧೀನನಾಗಿರುವ ಯಾರೇ ವ್ಯಕ್ತಿಯು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಯಾವುದೇ ಸ್ವತ್ತಿಗೆಬಿಡ್ ಮಾಡತಕ್ಕದ್ದಲ್ಲ ಅಥವಾ ಯಾವುದೇ ಸ್ವತ್ತನ್ನು ಆರ್ಜಿಸತಕ್ಕದ್ದಲ್ಲ.

**171. ಸರ್ಕಾರದಿಂದ ಸ್ವತ್ತಿನ ಖರೀದಿ.–** (1) 169ನೇ ಪ್ರಕರಣದ ಮೇರೆಗೆ ಸ್ವತ್ತನ್ನು ಬಹಿರಂಗ ಹರಾಜಿಗೆ ಇಟ್ಟಾಗ, ಬಿಡ್ ಕೂಗದಿದ್ದರೆ [1][ತಹಶೀಲ್ದಾರನು][1] ಅಥವಾ ಅವನಿಂದ ಕ್ರಮಬದ್ಧವಾಗಿ ಅಧಿಕೃತನಾದ ಇತರ ಅಧಿಕಾರಿಯು, ನಿಯಮಿಸಬಹುದಾದ ರೀತಿಯಲ್ಲಿ ನಿರ್ಧರಿಸಬಹುದಾದ ಮೌಲ್ಯಕ್ಕೆ, ಸರ್ಕಾರದ ಪರವಾಗಿ ಆ ಸ್ವತ್ತನ್ನು ಕೊಂಡುಕೊಳ್ಳಬಹುದು.

1. 1970ರ ಅಧಿನಿಯಮ 5ರ ಮೂಲಕ 23.10.1969 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) ಸ್ವತ್ತನ್ನು ಹಾಗೆ ಕೊಂಡುಕೊಂಡಾಗ, [1][ತಹಶೀಲ್ದಾರನು][1] ಸರ್ಕಾರಕ್ಕೆ ಸಲ್ಲಬೇಕಾದ ಮೊಬಲಗು ಹಾಗೂ ಮಾರಾಟದ ಖರ್ಚಿಗೆಂದು ಸಾಕಾಗುವಷ್ಟು ಮೌಲ್ಯದ ಭಾಗವನ್ನು ವಜಾವಟ್ಟು ಮಾಡಿಕೊಳ್ಳಬಹುದು ಮತ್ತು ಅಂಥ ಮೌಲ್ಯದಲ್ಲಿ ಏನಾದರೂ ಬಾಕಿ ಉಳಿದರೆ ಅದನ್ನು ಅರ್ಜಿ ಸಲ್ಲಿಸಿ ಪಡೆದುಕೊಳ್ಳಲು ಸುಸ್ತಿದಾರನು ಹಕ್ಕುಳ್ಳವನಾಗಿರತಕ್ಕದ್ದು.

(3) ರಾಜ್ಯ ಸರ್ಕಾರದ ಸಾಮಾನ್ಯ ಅಥವಾ ವಿಶೇಷ ಆದೇಶಗಳಿಗೊಳಪಟ್ಟ, ಹಾಗೆ ಕೊಂಡುಕೊಂಡ ಸ್ವತ್ತನ್ನು [1][ತಹಶೀಲ್ದಾರನು][1] ಸೂಕ್ತವೆಂದು ತಾನು ಭಾವಿಸುವಂತೆ ವಿಲೆ ಮಾಡಬಹುದು.

1. 1970ರ ಅಧಿನಿಯಮ 5ರ ಮೂಲಕ 23.10.1969 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**172. ಕೆಟ್ಟು ಹೋಗುವ ವಸ್ತುಗಳ ಮಾರಾಟ.–** ಕೆಟ್ಟು ಹೋಗುವ ವಸ್ತುಗಳಿಗೆ 169ನೇ ಪ್ರಕರಣದಲ್ಲಿರುವ ಯಾವುದೂ ಅನ್ವಯವಾಗುವುದಿಲ್ಲ. ಅಂಥ ವಸ್ತುಗಳನ್ನು ಆದಷ್ಟು ಜಾಗ್ರತೆಯಾಗಿ ಹರಾಜಿನ ಮೂಲಕ ಮಾರಾಟ ಮಾಡತಕ್ಕದ್ದು ಮತ್ತು ಈ ಬಗ್ಗೆ ಡೆಪ್ಯೂಟಿ ಕಮಿಷನರು ಸಾಮಾನ್ಯವಾಗಿ ಅಥವಾ ವಿಶೇಷವಾಗಿ ಕಾಲಕಾಲಕ್ಕೆ ಮಾಡಬಹುದಾದಂಥ ಆದೇಶಗಳಿಗೊಳಪಟ್ಟು, ಮಾರಾಟ ಮಾಡುವ ಅಧಿಕಾರಿಯು ಅಂಥ ಮಾರಾಟವನ್ನು ಅಂತಿಮವಾಗಿ ಮುಗಿಸತಕ್ಕದ್ದು.

**173. ಬಾಕಿ ಮೌಲ್ಯಕ್ಕಿಂತ ಹೆಚ್ಚು ಮೌಲ್ಯಕ್ಕೆ ಸ್ವತ್ತನ್ನು ಮಾರಕೂಡದು.–** ಈ ಅಧ್ಯಾಯದ ಉಪಬಂಧಗಳ ಮೇರೆಗೆ ಕಾರ್ಯ ಸಾಧ್ಯವಾದ ಮಟ್ಟಿಗೆ,ವಸೂಲು ಮಾಡಬೇಕಾದ ಭೂಕಂದಾಯದ ಬಾಕಿಯಷ್ಟಕ್ಕೆ ಹಾಗೂ ಜಫ್ತಿಗೆ ಮತ್ತು ಮಾರಾಟಕ್ಕೆ ತಗಲುವ ವೆಚ್ಚದ ಹಣಕ್ಕೆ ಅನುಗುಣವಾದ ಪ್ರಮಾಣದಷ್ಟು ಚರ ಅಥವಾ ಸ್ಥಿರ ಸ್ವತ್ತನ್ನು ಮಾರಾಟ ಮಾಡತಕ್ಕದ್ದು.

**174. ಸ್ಥಿರ ಸ್ವತ್ತನ್ನು ಕೊಳ್ಳುವವನಿಂದ ಠೇವಣಿ.–** ಸ್ಥಿರ ಸ್ವತ್ತಿನ ಮಾರಾಟದ ಎಲ್ಲ ಸಂದರ್ಭಗಳಲ್ಲಿ, ಕೊಂಡುಕೊಂಡವನೆಂದು ಘೋಷಿತನಾದವನು ತಾನು ಕೂಗಿದ ಮೊಬಲಗಿನ ಶೇಕಡಾ ಇಪ್ಪತ್ತೈದರಷ್ಟನ್ನು ಕೂಡಲೇ ಠೇವಣಿ ಮಾಡಬೇಕೆಂದು ಮತ್ತು ಉಳಿದ ಮೊಬಲಗನ್ನು ಮಾರಾಟದ ದಿನಾಂಕದಿಂದ ಹದಿನೈದು ದಿನಗಳೊಳಗಾಗಿ ಜಮೆ ಮಾಡತಕ್ಕದ್ದೆಂದುಅಗತ್ಯಪಡಿಸತಕ್ಕದ್ದು

**175. ಠೇವಣಿ ಮಾಡಲು ತಪ್ಪುವುದು.–** (1) 174ನೇ ಪ್ರಕರಣದಲ್ಲಿ ಹೇಳಿರುವಠೇವಣಿಯನ್ನು ಮಾಡಲು ತಪ್ಪಿದರೆ, ಸ್ವತ್ತನ್ನು ಕೂಡಲೇ ಮರು ಹರಾಜಿಗಾಗಿ ಇಡತಕ್ಕದ್ದು ಮತ್ತು ಠೇವಣಿ ಮಾಡಲು ತಪ್ಪಿದ ಸವಾಲುದಾರನು ಮೊದಲನೆಯ ಹರಾಜಿಗೆ ಸಂಬಂಧಪಟ್ಟಂತೆಆದ ವೆಚ್ಚಗಳನ್ನು ಕೊಡತಕ್ಕದ್ದು.

(2) ಕೂಗಿದ ಮೊಬಲಗಿನ ಉಳಿದ ಭಾಗವನ್ನು 174ನೇ ಪ್ರಕರಣದಲ್ಲಿ ಗೊತ್ತುಪಡಿಸಿದ ಅವಧಿಯೊಳಗಾಗಿ ಸಂದಾಯ ಮಾಡಲು ತಪ್ಪಿದರೆ,ಠೇವಣಿ ಮಾಡಿದ ಮೊಬಲಗಿನಲ್ಲಿ ಮಾರಾಟಕ್ಕೆ ತಗುಲಿದ ವೆಚ್ಚವನ್ನು ಕಳೆದು ಉಳಿದ ಮೊಬಲಗನ್ನು ರಾಜ್ಯ ಸರ್ಕಾರಕ್ಕೆ ಮುಟ್ಟುಗೋಲು ಆಗತಕ್ಕದ್ದು ಮತ್ತು ಸ್ವತ್ತನ್ನು ಮರು ಹರಾಜಿಗೆ ಇಡತಕ್ಕದ್ದು; ಈ ಅಧ್ಯಾಯದ ಮೇರೆಗೆ ಮೂಲ ಹರಾಜಿಗಾಗಿ ಗೊತ್ತುಪಡಿಸಿದ ರೀತಿಯಲ್ಲಿಯೇ ಹೊಸ ನೋಟೀಸನನ್ನು ಹೊರಡಿಸಿದ ಬಳಿಕ ಅಂಥ ಮರು ಹರಾಜು ನಡೆಯತಕ್ಕದ್ದು.

(3) ಕೊಂಡುಕೊಂಡವನ ತಪ್ಪಿನ ಕಾರಣದಿಂದಾಗಿ ಮಾಡಬೇಕಾಗಿ ಬಂದ ಮರು ಹರಾಜಿನ ಬೆಲೆಯಲ್ಲಿ ಕಡಿಮೆ ಬಿದ್ದದ್ದನ್ನು ಮತ್ತು ಅಂಥ ಮರು ಹರಾಜಿಗಾಗಿ ತಗಲುವ ಎಲ್ಲ ವೆಚ್ಚಗಳನ್ನು, ತಪ್ಪಿದ ಆ ಕೊಂಡುಕೊಂಡವನಿಂದ ಭೂಕಂದಾಯದ ಬಾಕಿಯಂತೆ ವಸೂಲು ಮಾಡತಕ್ಕದ್ದು.

**176. ಹರಾಜನ್ನು ರದ್ದುಪಡಿಸುವುದು.–** (1) ಈ ಅಧ್ಯಾಯದ ಮೇರೆಗೆ ಸ್ಥಿರ ಸ್ವತ್ತನ್ನು ಹರಾಜು ಮಾಡಿದಾಗ, ಸುಸ್ತಿದಾರನು ಅಥವಾ ಅಂಥ ಸ್ವತ್ತಿನ ಒಡೆಯನಾಗಿರುವನು ಅಥವಾ ಅದರಲ್ಲಿ ಹಿತಾಸಕ್ತಿಯುಳ್ಳ ಯಾರೇ ವ್ಯಕ್ತಿಯು ಹರಾಜಿನ ದಿನಾಂಕದಿಂದ ತೊಂಬತ್ತು ದಿನಗಳೊಳಗಾಗಿ ಯಾವುದೇ ಸಮಯದಲ್ಲಿ ನಿಯಮಿಸಬಹುದಾದ ರೀತಿಯಲ್ಲಿ ಡೆಪ್ಯೂಟಿ ಕಮಿಷನರಿಗೆ,–

(ಎ) ಮುಖ್ಯವೆನಿಸುವ ಕ್ರಮದೋಷ ಅಥವಾ ಪ್ರಮಾದ ಅಥವಾ ಮೋಸ–ಇವುಗಳಿಂದಾಗಿ ತನಗೆ ನಷ್ಟ ಅಥವಾ ಹಾನಿ ಉಂಟಾಗಿದೆಯೆಂಬ ಅಧಾರದ ಮೇಲೆ; ಅಥವಾ

(ಬಿ) ಹರಾಜಿಗೆ ಮಾಡಿದ ಘೋಷಣೆಯಲ್ಲಿ ನಿರ್ದಿಷ್ಟಪಡಿಸಿದ ಬಾಕಿ ಮೊಬಲಗನ್ನುಮಾರಾಟಕ್ಕೆ ತಗುಲಿದ ವೆಚ್ಚವನ್ನು ಮತ್ತು ಖರೀದಿದಾರನಿಗೆ ಕೊಡುವ ಸಲುವಾಗಿ ಖರೀದಿ ಹಣದ ಶೇಕಡಾ ಐದರಷ್ಟು ಮೊಬಲಗನ್ನು ಡೆಪ್ಯೂಟಿ ಕಮಿಷನರ ಕಚೇರಿಯಲ್ಲಿ ಠೇವಣಿ ಮಾಡಿ,

– ಹರಾಜನ್ನು ರದ್ದುಗೊಳಿಸಲು ಅರ್ಜಿ ಸಲ್ಲಿಸಬಹುದು

(2) (1)ನೇ ಉಪಪ್ರಕರಣದ (ಎ) ಖಂಡದ ಮೇರೆಗೆ ಅರ್ಜಿಯನ್ನು ಸಲ್ಲಿಸಿದಾಗ, ಹರಾಜು ಪ್ರಕಟಿಸುವಲ್ಲಿ ಅಥವಾ ನಡೆಸುವಲ್ಲಿ ಮುಖ್ಯವಾದ ಕ್ರಮದೋಷ, ತಪ್ಪು ಆಗಿದೆ ಅಥವಾ ಮೋಸವು ನಡೆದಿದೆ ಎಂದು ಡೆಪ್ಯೂಟಿ ಕಮಿಷನರಿಗೆ ಸಂಕ್ಷಿಪ್ತ ವಿಚಾರಣೆಯ ಅನಂತರ ಮನದಟ್ಟಾದರೆ, ಅವನು ಆ ಹರಾಜನ್ನು ರದ್ದುಪಡಿಸತಕ್ಕದ್ದು ಮತ್ತು ಹೊಸ ಹರಾಜಿಗೆ ನಿರ್ದೇಶಿಸತಕ್ಕದ್ದು:

ಪರಂತು ಅಂಥ ಕ್ರಮದಿಂದಾಗಿ ಅಥವಾ ತಪ್ಪಿನಿಂದಾಗಿ ಅರ್ಜಿದಾರನಿಗೆ ನಷ್ಟ ಅಥವಾ ಹಾನಿ ಉಂಟಾಗಿದೆಯೆಂದು ರುಜುವಾತಾದ ಹೊರತು, ಯಾವುದೇ ಕ್ರಮದೋಷದ ಅಥವಾ ತಪ್ಪಿನ ಕಾರಣದ ಮೇಲೆ ಯಾವುದೇ ಹರಾಜನ್ನು ರದ್ದುಪಡಿಸತಕ್ಕದ್ದಲ್ಲ.

(3) (1)ನೇ ಉಪಪ್ರಕರಣದ (ಬಿ) ಖಂಡದಲ್ಲಿ ನಿರ್ದಿಷ್ಟಪಡಿಸಿದ ಅವಧಿಯೊಳಗಾಗಿ ಅಗತ್ಯವಿರುವ ಮೊಬಲಗನ್ನು ಠೇವಣಿ ಮಾಡಿ ಅರ್ಜಿ ಸಲ್ಲಿಸಿದಾಗ, ಡೆಪ್ಯೂಟಿ ಕಮಿಷನರು ಆ ಹರಾಜನ್ನು ರದ್ದುಪಡಿಸುವ ಆದೇಶವನ್ನು ಮಾಡತಕ್ಕದ್ದು:
ಪರಂತು, ಒಬ್ಬನಿಗಿಂತ ಹೆಚ್ಚು ಜನರು ಮೊಬಲಗನ್ನು ಠೇವಣಿ ಮಾಡಿ, ಈ ಪ್ರಕರಣದ ಮೇರೆಗೆ ಅರ್ಜಿ ಸಲ್ಲಿಸಿದರೆ, ಮೊದಲು ಠೇವಣಿ ಮಾಡಿದವನ ಅರ್ಜಿಯನ್ನು ಅಥವಾ ಠೇವಣಿ ಮಾಡಿದ ಎಲ್ಲರೂ, ಹಾಗೆ ಠೇವಣಿ ಮಾಡಿದ ಯಾರೇ ಇತರ ಠೇವಣಿದಾರನ ಅರ್ಜಿಗೆ ಒಪ್ಪಿಕೊಟ್ಟರೆ, ಆ ಯಾರೇ ಇತರ ಠೇವಣಿದಾರನ ಅರ್ಜಿಯನ್ನು ಸ್ವೀಕರಿಸತಕ್ಕದ್ದು.

**177. ಮಾರಾಟದ ಸ್ಥಿರೀಕರಣ.–** ಆ ಮಾರಾಟವನ್ನು ರದ್ದುಪಡಿಸಲು ಯಾವ ಅರ್ಜಿಯೂ ಬರದಿದ್ದರೆ ಅಥವಾ ಅಂಥ ಯಾವುದೇ ಅರ್ಜಿಯು ಬಂದಿದ್ದು ಅದು ತಿರಸ್ಕೃತವಾಗಿದ್ದರೆ, ಯಾವುದೇ ಸ್ಥಿರ ಸ್ವತ್ತಿನ ಮಾರಾಟದ ದಿನಾಂಕದಿಂದ ತೊಂಬತ್ತು ದಿನಗಳು ಕಳೆದ ತರುವಾಯ ಡೆಪ್ಯೂಟಿ ಕಮಿಷನರು ಆ ಮಾರಾಟವನ್ನು ಸ್ಥಿರೀಕರಿಸುವ ಆದೇಶವನ್ನು ಮಾಡತಕ್ಕದ್ದು:

ಪರಂತು, ಆ ಬಗ್ಗೆ ಯಾವ ಅರ್ಜಿಯೂ ಬರದಿದ್ದರೂ ಅಥವಾ ಬಂದಿದ್ದು ಅದರಲ್ಲಿ ಹೇಳಿದ್ದ ಕಾರಣಗಳು ತಿರಸ್ಕೃತವಾಗಿದ್ದು ಇತರ ಕಾರಣಗಳಿಗಾಗಿ, ಯುಕ್ತವೆಂದು ತಾನು ಭಾವಿಸಬಹುದಾದಂಥ ಷರತ್ತುಗಳಿಗೊಳಪಟ್ಟು ಡೆಪ್ಯೂಟಿ ಕಮಿಷನರು ಕಾರಣಗಳನ್ನು ದಾಖಲಿಸಿ, ಆ ಹರಾಜನ್ನು ರದ್ದುಪಡಿಸಬಹುದು.

**178. ಮೊಬಲಗಿನ ವಾಪಸಾತಿ.–** (1) ಡೆಪ್ಯೂಟಿ ಕಮಿಷನರು, ಖರೀದಿದಾರನಿಗೆ,–

(ಎ) 174ನೆಯ ಪ್ರಕರಣದ ಮೇರೆಗೆ ಅವನು ಠೇವಣಿ ಮಾಡಿದ ಮೊಬಲಗನ್ನು; ಮತ್ತು

(ಬಿ) 176ನೇ ಪ್ರಕರಣದ (1)ನೇ ಉಪಪ್ರಕರಣದ (ಬಿ) ಖಂಡದ ಮೇರೆಗೆ ಠೇವಣಿ ಮಾಡಿದ್ದರೆ,ಖರೀದಿ ಹಣದ ಶೇಕಡಾ ಐದರಷ್ಟಕ್ಕೆ ಸಮನಾದ ಮೊಬಲಗನ್ನು

– ಸ್ಥಿರಸ್ವತ್ತಿನ ಮಾರಾಟವನ್ನು ಸ್ಥಿರೀಕರಿಸದೆ ಇದ್ದ ಅಥವಾ ರದ್ದುಪಡಿಸಿದ ಸಂದರ್ಭಗಳಲ್ಲಿ ವಾಪಸ್ಸು ಕೊಡಬೇಕೆಂದು ಆದೇಶಿಸತಕ್ಕದ್ದು.

(2) ಮಾರಾಟವು ಸ್ಥಿರೀಕೃತವಾದರೆ, 176ನೇ ಪ್ರಕರಣದ (1)ನೇ ಉಪಪ್ರಕರಣದ (ಬಿ) ಖಂಡದ ಮೇರೆಗೆ ಠೇವಣಿ ಮಾಡಿದ ಎಲ್ಲ ಹಣವನ್ನು ಠೇವಣಿ ಮಾಡಿದ್ದ ವ್ಯಕ್ತಿಗೆ ವಾಪಸ್ಸು ಕೊಡಬೇಕೆಂದು ಡೆಪ್ಯೂಟಿ ಕಮಿಷನರು ಆದೇಶ ಮಾಡತಕ್ಕದ್ದು:
ಪರಂತು, ಠೇವಣಿ ಮಾಡಿದ್ದ ವ್ಯಕ್ತಿಯಿಂದ ಬರಬೇಕಾಗಿರುವ ಭೂಕಂದಾಯದ ಬಾಕಿ ನಿಮಿತ್ತ ಅಥವಾ ಭೂಕಂದಾಯದ ಬಾಕಿ ಎಂಬಂತೆ ವಸೂಲಾಗಬೇಕಾದ ಇತರ ಯಾವುದಾದರೂ ಬಾಕಿ ನಿಮಿತ್ತ ಪೂರ್ತಿ ಹಣವನ್ನು ಅಥವಾ ಅದರ ಯಾವುದೇ ಭಾಗವನ್ನು ಡೆಪ್ಯೂಟಿ ಕಮಿಷನರು ವಜಾ ಹಾಕಿಕೊಳ್ಳಬಹುದು.

**179. ಖರೀದಿ ಪ್ರಮಾಣ ಪತ್ರ.–** ಈ ಅಧ್ಯಾಯದ ಮೇರೆಗೆ ನಡೆಸಲಾದ ಮಾರಾಟವನ್ನು ಸ್ಥಿರೀಕರಿಸಿದಾಗ, [1][ತಹಶೀಲ್ದಾರನು][1] ಖರೀದಿದಾರನೆಂದು ಘೋಷಿತನಾದ ವ್ಯಕ್ತಿಗೆ ಸ್ವತ್ತಿನ ಸ್ವಾಧೀನವನ್ನು ವಹಿಸತಕ್ಕದ್ದು ಮತ್ತು ಅವನ ಹೆಸರನ್ನು ಭೂದಾಖಲೆಯಲ್ಲಿ ನಮೂದಿಸುವಂತೆ ಮಾಡತಕ್ಕದ್ದು ಮತ್ತು ನಿರ್ದಿಷ್ಟಪಡಿಸಿದ ಸ್ವತ್ತನ್ನು ಅವನು ಕೊಂಡುಕೊಂಡಿದ್ದಾನೆಂಬ ಬಗ್ಗೆ ನಿಯಮಿಸಿದ ನಮೂನೆಯಲ್ಲಿ ಪ್ರಮಾಣಪತ್ರವನ್ನು ಕೊಡತಕ್ಕದ್ದು ಮತ್ತು ಅಂಥ ಪ್ರಮಾಣಪತ್ರವನ್ನು, ಅಂಥ ಸ್ವತ್ತಿನ ವರ್ಗಾವಣೆಯು ಸಿಂಧುವಾದುದೆಂಬುದರ ಬಗೆಗಿನ ಪ್ರಮಾಣ ಪತ್ರವೆಂದು ಭಾವಿಸತಕ್ಕದ್ದು.

1. 1970ರ ಅಧಿನಿಯಮ 5ರ ಮೂಲಕ 23.10.1969 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**180. ಅಡ್ಡಿ ಅಡಚಣೆಯ ನಿವಾರಣೆ.–** (1) ಯಾವ ಸ್ಥಿರ ಸ್ವತ್ತಿನ ಖರೀದಿದಾರನಿಗೆ 179ನೇ ಪ್ರಕರಣದ ಮೇರೆಗೆ ಪ್ರಮಾಣಪತ್ರವನ್ನು ಕೊಡಲಾಗಿದೆಯೋ, ಆ ಖರೀದಿದಾರನು ಸ್ವತ್ತಿನ ಸ್ವಾಧೀನವನ್ನು ಪಡೆಯುವಾಗ ಯಾರೇವ್ಯಕ್ತಿಯು ಆ ಖರೀದಿದಾರನನ್ನುವಿರೋಧಿಸಿದರೆ ಅಥವಾ ಆ ಖರೀದಿದಾರನಿಗೆ ಅಡ್ಡಿ ಮಾಡಿದರೆ, ಆ ಸ್ವತ್ತಿನ ಮೇಲೆ ಅಧಿಕಾರ

ವ್ಯಾಪ್ತಿಯನ್ನು ಹೊಂದಿರುವ ಸಿವಿಲ್ ನ್ಯಾಯಾಲಯಕ್ಕೆ ಅಂಥ ಪ್ರತಿರೋಧವನ್ನು ಅಥವಾ ಅಡ್ಡಿಯನ್ನು ನಿವಾರಿಸುವಂತೆಅಂಥ ಖರೀದಿದಾರನು ಅರ್ಜಿ ಸಲ್ಲಿಸಬಹುದು ಮತ್ತು ಅಂಥ ನ್ಯಾಯಾಲಯವು, ಸಿವಿಲ್ ಪ್ರಕ್ರಿಯಾ ಸಂಹಿತೆ, 1908ರ ಮೇರೆಗೆ ಅಂಥ ನ್ಯಾಯಾಲಯವು ಹೊರಡಿಸಿದ ಡಿಕ್ರಿಯ ಅಮಲ್ಜಾರಿಯಲ್ಲಿ ನಡೆದ ಮಾರಾಟದಲ್ಲಿ ಅರ್ಜಿದಾರನು ಆ ಸ್ವತ್ತನ್ನು ಕೊಂಡುಕೊಂಡಿದ್ದಿದ್ದರೆ ಹೇಗೆ ಆ ವಿಷಯದ ಬಗ್ಗೆ ತನಿಖೆ ಮಾಡುತ್ತಿತ್ತೋ ಹಾಗೆಯೇ ಈ ವಿಷಯದ ಬಗ್ಗೆ ತನಿಖೆ ಮಾಡತಕ್ಕದ್ದು.

(2) ಉಪಪ್ರಕರಣ(1)ರ ಮೇರೆಗೆ ನ್ಯಾಯಾಲಯವು ನಡೆಸುವ ತನಿಖೆಗೆ ಮತ್ತು ಆ ಬಳಿಕ ಮಾಡುವ ಆದೇಶಕ್ಕೆ ಸಿವಿಲ್ ಪ್ರಕ್ರಿಯಾ ಸಂಹಿತೆ, 1908ರ ಉಪಬಂಧಗಳು ಉಚಿತ ವ್ಯತ್ಯಾಸಗಳೊಂದಿಗೆ ಅನ್ವಯವಾಗತಕ್ಕದ್ದು.

**181. ಮಾರಾಟದಿಂದ ಬಂದ ಉತ್ಪತ್ತಿಯ ವಿನಿಯೋಗ.–** ಈ ಅಧ್ಯಾಯದ ಮೇರೆಗೆ ಯಾವುದೇ ಸ್ವತ್ತಿನ ಮಾರಾಟದಿಂದ ಬಂದ ಉತ್ಪತ್ತಿಯಿಂದ, ನಿಯಮಿಸಿದ ರೀತಿಯಲ್ಲಿ ನಿರ್ಧರಿಸಲಾಗುವ,ಮಾರಾಟದ ವೆಚ್ಚವನ್ನು ಕಳೆದು, ಉಳಿದ ಹಣವನ್ನು ಯಾವ ಬಾಕಿಗಳ ಸಲುವಾಗಿ ಹರಾಜು ನಡೆಸಲಾಯಿತೋ ಅದನ್ನು ಸಂದಾಯ ಮಾಡುವುದಕ್ಕಾಗಿ ವಿನಿಯೋಗಿಸತಕ್ಕದ್ದು ಮತ್ತು ಅನಂತರ ಏನಾದರೂ ಉಳಿದರೆ ಅದನ್ನು ಯಾವ ವ್ಯಕ್ತಿಯ ಸ್ವತ್ತನ್ನು ಹರಾಜಿನಲ್ಲಿ ಮಾರಾಟ ಮಾಡಲಾಯಿತೋ ಆ ವ್ಯಕ್ತಿಗೆ ಸಂದಾಯ ಮಾಡತಕ್ಕದ್ದು.

**182. ಪ್ರಮಾಣಪತ್ರ ಪಡೆದ ಖರೀದಿದಾರನ ಹೊಣೆ.–** ಯಾವುದೇ ಭೂಮಿಯನ್ನು ಖರೀದಿ ಮಾಡಿದ ಅಥವಾ ಹಾಗೆ ಖರೀದಿ ಮಾಡಿದ ಬಗ್ಗೆ ಪ್ರಮಾಣಪತ್ರವನ್ನು ಪಡೆದ ವ್ಯಕ್ತಿಯು, ಆ ಭೂಮಿಯ ಹರಾಜಿನ ದಿನಾಂಕಕ್ಕಿಂತಲೂ ಮುಂಚಿನ ಯಾವುದೇ ಅವಧಿಯ ಭೂಕಂದಾಯಕ್ಕೆ ಹೊಣೆಯಾಗಿರತಕ್ಕದ್ದಲ್ಲ.

**183. ಸುಸ್ತಿದಾರನ ಗ್ರಾಮವನ್ನು ಜಪ್ತಿ ಮಾಡಿ ಅದನ್ನು ತನ್ನ ಆಡಳಿತಕ್ಕೆ ತೆಗೆದುಕೊಳ್ಳುವುದರ ಮೂಲಕ ಬಾಕಿ ವಸೂಲಿ.–** ಯಾವ ಹಿಡುವಳಿಯ ಬಗ್ಗೆ ಬಾಕಿ ಬರಬೇಕಾಗಿದೆಯೋ ಆ ಹಿಡುವಳಿಯು ಒಂದು ಪೂರ್ಣ ಗ್ರಾಮವಾಗಿದ್ದರೆ ಅಥವಾ ಗ್ರಾಮದ ಭಾಗ ಆಗಿದ್ದರೆ ಮತ್ತು 161ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಇತರ ಕ್ರಮಗಳ ಪೈಕಿ ಯಾವ ಕ್ರಮವನ್ನಾದರೂ ಕೈಕೊಳ್ಳುವುದು ವಿಹಿತವಲ್ಲವೆಂದು ಭಾವಿಸಿದರೆ, ಡೆಪ್ಯೂಟಿ ಕಮಿಷನರು, ರಾಜ್ಯ ಸರ್ಕಾರದಿಂದ ಮುಂಚಿತವಾಗಿಯೇ ಮಂಜೂರಾತಿ ಪಡೆದು, ಆ ಗ್ರಾಮವನ್ನು ಅಥವಾ ಅಂಥ ಆ ಗ್ರಾಮದ ಭಾಗವನ್ನು ಜಪ್ತಿ ಮಾಡುವಂತೆ ಮತ್ತು ಅದನ್ನು ತನ್ನ ಅಥವಾ ತಾನು ಆ ಉದ್ದೇಶಕ್ಕಾಗಿ ನೇಮಿಸುವ ಏಜೆಂಟನ ಆಡಳಿತಕ್ಕೆ ತೆಗೆದುಕೊಳ್ಳುವಂತೆ ಮಾಡತಕ್ಕದ್ದು.

**184. ಅಂಥ ಗ್ರಾಮಗಳ ಭೂಮಿಗಳು ಪೂರ್ವಾವಧಿಯಿಲ್ಲದೆ ಸರ್ಕಾರಕ್ಕೆ ವಾಪಸ್ಸಾಗತಕ್ಕದ್ದು.–** (1) 183ನೇ ಪ್ರಕರಣದ ಮೇರೆಗೆ ಜಪ್ತಿ ಆದ ಗ್ರಾಮದ ಭೂಮಿಗಳು ಅಥವಾ ಗ್ರಾಮದ ಭಾಗಗಳು, ವರಿಷ್ಠ ಹಿಡುವಳಿದಾರನ ಅಥವಾ ಯಾರೇ ಹಿಸ್ಸೆದಾರನ ಕಾರ್ಯಗಳ ಅಥವಾ ಅಂಥ ವರಿಷ್ಠ ಹಿಡುವಳಿದಾರನಲ್ಲಿ ಅಥವಾ ಅದರಲ್ಲಿ ಹಿತಾಸಕ್ತಿಯುಳ್ಳ ಹಿಸ್ಸೆದಾರರಲ್ಲಿ ಆಸ್ತಿತ್ವದಲ್ಲಿರುವ ಯಾವುದೇ ಋಣಭಾರಗಳ ಅಥವಾ ಹೊಣೆಗಳ ಪರಿಣಾಮರಹಿತವಾಗಿ ಕೊಡಬೇಕಾಗಿರುವ ಭೂಕಂದಾಯದ ಬಾಕಿಯ ಮಟ್ಟಿಗೆ, ಆದರೆ ಇತರ ಯಾರೇಗೇಣಿದಾರನ ಅಥವಾ ಇತರ ಯಾರೇ ವ್ಯಕ್ತಿಯ ಹಕ್ಕುಗಳಿಗೆ ಬೇರೆ ಯಾವುದೇ ಪ್ರತಿಕೂಲತೆ ಉಂಟಾಗದ ಹಾಗೆ ರಾಜ್ಯ ಸರ್ಕಾರಕ್ಕೆ ವಾಪಸಾಗತಕ್ಕದ್ದು.

(2) ಡೆಪ್ಯೂಟಿ ಕಮಿಷನರು ಅಥವಾ 183ನೇ ಪ್ರಕರಣದ ಮೇರೆಗೆ ನೇಮಕಗೊಂಡ ಅವನ ಏಜೆಂಟನು, ಜಪ್ತಿಯಾದ ಭೂಮಿಗಳನ್ನು ಸಮಂಜಸವೆಂದು ತಾನು ಭಾವಿಸುವ ಹಾಗೂ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ನಿಯಮಿಸಿದ ದರಗಳಿಗೆ ಮೀರದ ದರಕ್ಕೆ ಗೇಣಿಗೆ ಕೊಡುವ ಮೂಲಕ ಮತ್ತು ಅಧಿಭೋಗದಲ್ಲಿರದ ಭೂಮಿಗಳನ್ನು ಗೇಣಿಗೆ ಕೊಡುವ ಮೂಲಕ ಅಂಥ ಭೂಮಿಗಳ ನಿರ್ವಹಣೆಗೆ ಮತ್ತು ವರಿಷ್ಠ ಹಿಡುವಳಿದಾರರನ್ನು ಅಥವಾ ಅದರ ಯಾರೇ ಹಿಸ್ಸೇದಾರನನ್ನು ಹೊರತುಪಡಿಸಿ, ಎಲ್ಲ ಗೇಣಿಗಳನ್ನು ಮತ್ತು ಅವುಗಳಿಂದ ಬರುವ ಎಲ್ಲ ಪ್ರಯೋಜನಗಳನ್ನು ಪಡೆಯಲು, ಸದರಿ ವರಿಷ್ಠ ಗೇಣಿದಾರನಿಗೆ ಅದರ ನಿರ್ವಹಣೆಯನ್ನು ಡೆಪ್ಯೂಟಿ ಕಮಿಷನರು ಪುನಃ ವಹಿಸಿಕೊಡುವವರೆಗೆ, ಹಕ್ಕುಳ್ಳವನಾಗಿರತಕ್ಕದ್ದು.

(3) ಡೆಪ್ಯೂಟಿ ಕಮಿಷನರು ಅಥವಾ 183ನೇ ಪ್ರಕರಣದ ಮೇರೆಗೆ ನೇಮಕಗೊಂಡ ಅವನ ಏಜೆಂಟನು, ಅಂಥ ನಿರ್ವಹಣೆಯ ಅವಧಿಯಲ್ಲಿ, ಯಾವ ರೆವಿನ್ಯೂ ವರ್ಷದಲ್ಲಿ ಹಾಗೆ ಜಪ್ತಿ ಮಾಡಲಾಯಿತೋ ಆ ರೆವಿನ್ಯೂ ವರ್ಷದಲ್ಲಿ ಅಥವಾ ಅನಂತರ ಒದಗಿಬರುವಂಥ ಎಲ್ಲ ಗೇಣಿಗಳನ್ನು ಅಥವಾ ಉತ್ಪನ್ನಗಳನ್ನು ಈ ಅಧ್ಯಾಯದ ಉಪಬಂಧಗಳ

ಮೇರೆಗೆ ವಸೂಲು ಮಾಡಲು ಹಕ್ಕುಳ್ಳವರಾಗಿರತಕ್ಕದ್ದು, ಪರಂತು, ಯಾವ ರೆವಿನ್ಯೂ ವರ್ಷದ ನಿಮಿತ್ತ ಅಂಥ ಗೇಣಿ ಅಥವಾ ಉತ್ಪನ್ನವು ಬರಬೇಕಾಗಿದೆಯೋಆ ರೆವಿನ್ಯೂ ವರ್ಷದ ಕೊನೆಯ ದಿನದಿಂದ ಆರು ವರ್ಷದ ಒಳಗೆ ಅದರ ವಸೂಲಿಗಾಗಿ ವ್ಯವಹರಣೆಗಳನ್ನು ಹೂಡತಕ್ಕದ್ದು.

**185. ಹೆಚ್ಚುವರಿ ಉತ್ಪನ್ನಗಳ ವಿನಿಯೋಗ.**–183ನೇ ಪ್ರಕರಣದ ಮೇರೆಗೆ ಜಪ್ತಿ ಮಾಡಲಾದ ಭೂಮಿಯ ಎಲ್ಲ ಹೆಚ್ಚುವರಿ ಉತ್ಪನ್ನವನ್ನು ಚಾಲ್ತಿ ವರುಷದ ಕಂದಾಯದ ಮತ್ತು ಯಾವ ರೆವಿನ್ಯೂ ಮೋಜಣಿಯನ್ನು ಜಾರಿಗೆ ತರಲು ಈ ಮೂಲಕ ಡೆಪ್ಯೂಟಿ ಕಮಿಷನರಿಗೆ ಅಧಿಕಾರ ಕೊಡಲಾಗಿದೆಯೋ ಆ ಮೋಜಣಿಯನ್ನು ಮಾಡುವುದಕ್ಕೆ ತಗುಲಿದ ಖರ್ಚಿನ ಸಂದಾಯ ಸೇರಿದಂತೆ ಜಪ್ತಿ ಮತ್ತು ಆಡಳಿತದ ಖರ್ಚನ್ನು ಕಳೆದು, ಸದರಿ ಬಾಕಿಯನ್ನು ತೀರಿಸುವುದಕ್ಕಾಗಿ ವಿನಿಯೋಗಿಸತಕ್ಕದ್ದು.

**186. ಹಾಗೆ ಜಪ್ತಿಯಾದ ಗ್ರಾಮವನ್ನು ಪುನಃ ವಹಿಸಿಕೊಡುವುದು.**– (1) 183ನೇ ಪ್ರಕರಣದ ಮೇರೆಗೆ ಜಪ್ತಿ ಮಾಡಿದ ಗ್ರಾಮವನ್ನು ಅಥವಾ ಗ್ರಾಮದ ಭಾಗವನ್ನು, ಅದು ಜಪ್ತಿಯಾದ ಅನಂತರದ ಜುಲೈ 1ನೇ ದಿನಾಂಕದಿಂದ ಹನ್ನೆರಡು ವರುಷದ ಒಳಗೆ ಯಾವುದೇ ಕಾಲದಲ್ಲಿ ವರಿಷ್ಠ ಹಿಡುವಳಿದಾರನು ಡೆಪ್ಯೂಟಿ ಕಮಿಷನರ್‌ಗೆ ಅರ್ಜಿ ಸಲ್ಲಿಸಿದರೆ,

(ಎ) ಅಂಥ ಅರ್ಜಿಯನ್ನು ಸಲ್ಲಿಸಿದ ಕಾಲದಲ್ಲಿ, ಬಾಕಿಯನ್ನು ತೀರಿಸಲಾಗಿದೆ ಎಂದು ಕಂಡು ಬಂದರೆ; ಅಥವಾ

(ಬಿ) ವರಿಷ್ಠ ಹಿಡುವಳಿದಾರನು, ಇನ್ನೂ ಬಾಕಿ ಏನಾದರೂ ಉಳಿದಿದ್ದರೆ ಅದನ್ನು ಸಂದಾಯ ಮಾಡಲು ಇಚ್ಛಿಸಿದ್ದು ಡೆಪ್ಯೂಟಿ ಕಮಿಷನರು ಈ ಬಗ್ಗೆ ನಿರ್ದಿಷ್ಟಪಡಿಸಬಹುದಾದ ಅವಧಿಯೊಳಗಾಗಿ ಆ ಬಾಕಿಯನ್ನು ಸಂದಾಯ ಮಾಡಿದ್ದರೆ;

– ಜಪ್ತಿಯಿಂದ ಬಿಡುಗಡೆ ಮಾಡತಕ್ಕದ್ದು ಮತ್ತು ಅದರ ಆಡಳಿತವನ್ನು ಆ ವರಿಷ್ಠ ಹಿಡುವಳಿದಾರನಿಗೆ ವಹಿಸಿಕೊಡತಕ್ಕದ್ದು.

(2) ವರಿಷ್ಠ ಹಿಡುವಳಿದಾರನು ಗ್ರಾಮವನ್ನು ಅಥವಾ ಗ್ರಾಮದ ಭಾಗವನ್ನು ತನಗೆ ಪುನಃ ವಹಿಸಿಕೊಡಬೇಕೆಂದುಯಾವ ವರ್ಷದಲ್ಲಿ ಅರ್ಜಿ ಸಲ್ಲಿಸಿದ್ದಾನೋ ಆ ವರ್ಷದಲ್ಲಿಹೆಚ್ಚುವರಿ ಉತ್ಪನ್ನವೇನಾದರೂ ಬಂದಿದ್ದರೆ ಅದರಿಂದ ಎಲ್ಲ ಬಾಕಿಗಳನ್ನು ಮತ್ತು ಖರ್ಚುಗಳನ್ನು ಕಳೆದು ಅನಂತರ ಉಳಿಯುವ ಹೆಚ್ಚುವರಿ ಉತ್ಪನ್ನವನ್ನು, ವರಿಷ್ಠ ಗೇಣಿದಾರನಿಗೆ ಡೆಪ್ಯುಟಿ ಕಮೀಷನರನು ಸಂದಾಯ ಮಾಡತಕ್ಕದ್ದು. ಆದರೆ ಹಿಂದಿನ ವರುಷಗಳಲ್ಲಿ ಅಂಥ ಹೆಚ್ಚುವರಿ ಉತ್ಪನ್ನಗಳೇನಾದರೂ ಬಂದಿದ್ದರೆ ಅದು ರಾಜ್ಯ ಸರ್ಕಾರದ ವಿಲೆಯ ಅಧಿಕಾರಕ್ಕೊಳಪಟ್ಟಿರತಕ್ಕದ್ದು.

**187. ಗ್ರಾಮ, ಇತ್ಯಾದಿಗಳು ಹನ್ನೆರಡು ವರುಷಗಳಲ್ಲಿ ಬಿಡುಗಡೆಯಾಗದಿದ್ದರೆ ಸರ್ಕಾರದಲ್ಲಿ ಕಾಯಂ ಆಗಿ ನಿಹಿತವಾಗಿರತಕ್ಕದ್ದು.**– 183ನೇ ಪ್ರಕರಣದ ಮೇರೆಗೆ ಜಪ್ತಿ ಮಾಡಿದ ಗ್ರಾಮವನ್ನು ಅಥವಾ ಗ್ರಾಮದ ಭಾಗವನ್ನು ತನಗೆ ಪುನಃ ವಹಿಸಿಕೊಡಬೇಕೆಂದು ಈ ಮೊದಲು ಹೇಳಿದ ಹನ್ನೆರಡು ವರ್ಷದ ಅವಧಿಯೊಳಗಾಗಿ ಅರ್ಜಿಯನ್ನು ಸಲ್ಲಿಸದಿದ್ದರೆ ಅಥವಾ ಅಂಥ ಅರ್ಜಿಯನ್ನು ಸಲ್ಲಿಸಿದ ಬಳಿಕ ವರಿಷ್ಠ ಹಿಡುವಳಿದಾರನು ಇನ್ನೂ ಬಾಕಿಯೇನಾದರೂಉಳಿದಿದ್ದರೆ, ಅದನ್ನು ಈ ಬಗ್ಗೆ ಡೆಪ್ಯೂಟಿ ಕಮೀಷನರು ನಿರ್ದಿಷ್ಟಪಡಿಸಿದ ಅವಧಿಯೊಳಗಾಗಿ ಸಂದಾಯ ಮಾಡಲು ತಪ್ಪಿದರೆ, ಆ ಗ್ರಾಮವು ಅಥವಾ ಗ್ರಾಮದ ಭಾಗವುಅಂದಿನಿಂದ,ವರಿಷ್ಠ ಹಿಡುವಳಿದಾರನು ಅಥವಾ ಯಾರೇ ಹಿಸ್ಸೆದಾರನು ಅಥವಾ ಅವನ ಅಥವಾ ಅವರ ಪೂರ್ವಜ ಯಾರಿಗಾದರೂ ಅವರು ಸೃಜಿಸಿದ ಅಥವಾ ಅಂಥ ವರಿಷ್ಠ ಹಿಡುವಳಿದಾರನಿಗೆ ಅಥವಾ ಯಾರೇ ಹಿಸ್ಸೆದಾರನಿಗೆ ಸಂಬಂಧಿಸಿದಂತೆ ಅದರ ಮೇಲೆ ಹಕ್ಕಿದ್ದರೆ ಯಾವುದೇ ರೀತಿಯಲ್ಲಿ ಚಾಲ್ತಿಯಲ್ಲಿರುವ ಎಲ್ಲ ಪೂರ್ವಾಧಿಗಳಿಂದ ಮುಕ್ತವಾಗಿ, ಆದರೆ ಭೂಮಿಯ ವಾಸ್ತವಿಕ ಸ್ವಾಧೀನವನ್ನು ಹೊಂದಿರುವ ವ್ಯಕ್ತಿಯ ಹಕ್ಕುಗಳಿಗೆ ಬಾಧಕವಾಗದಂತೆ, ಸರ್ಕಾರದಲ್ಲಿ ನಿಹಿತವಾಗತಕ್ಕದ್ದು.

**188. ಕೆಲವು ಸಂದರ್ಭಗಳಲ್ಲಿ ಮುನ್ನೆಚ್ಚರಿಕೆಯ ಕ್ರಮಗಳು.**– (1) ಯಾವುದೇ ಭೂಮಿಯ ಬೆಳೆಯನ್ನು ಅಥವಾ ಅದರ ಯಾವುದೇ ಭಾಗವನ್ನು, ಖಾಸಗಿ ಒಪ್ಪಂದದ ಮೇರೆಗೆ ಅಥವಾ ಸಿವಿಲ್ ನ್ಯಾಯಾಲಯದ ಅಥವಾ ಇತರ ಸಾರ್ವಜನಿಕ ಪ್ರಾಧಿಕಾರದ ಆದೇಶದ ಮೇರೆಗೆ ಮಾರಾಟ ಮಾಡಿದಾಗ, ಅಡಮಾನ ಮಾಡಿದಾಗ ಅಥವಾ ಬೇರೆ ರೀತಿಯಲ್ಲಿ ವಿಲೇ ಮಾಡಿದಾಗ, [1][ತಹಶೀಲ್ದಾರನು][1]ಅವಶ್ಯಕವೆಂದು ತಾನು ಆಲೋಚಿಸಿದರೆ, ಸದರಿ ಭೂಮಿಯ ಬಗೆಗಿನ ಚಾಲ್ತಿ ವರುಷದ ಕಂದಾಯವನ್ನು, ಅದರ ಸಂದಾಯದ ಬಗ್ಗೆ ಗೊತ್ತುಪಡಿಸಿದ ದಿನಾಂಕವು ಬಂದಿರಲಿ ಅಥವಾ ಇಲ್ಲದಿರಲಿ, ಸಂದಾಯ ಮಾಡುವವರೆಗೆ, ಆ ಭೂಮಿಯಿಂದ ಬೆಳೆಯನ್ನು ತೆಗೆದುಕೊಂಡು ಹೋಗದಂತೆ ತಡೆಯಬಹುದು.

ಆದರೆ, ಮಾರಾಟ ಮಾಡಿದ, ಅಡಮಾನ ಮಾಡಿದ ಅಥವಾ ಬೇರೆ ರೀತಿಯಲ್ಲಿ ವಿಲೇ ಮಾಡಿದ ಬೆಳೆಯನ್ನು ಅಥವಾ ಅದರ ಯಾವುದೇ ಭಾಗವನ್ನು ಯಾವ ವರ್ಷದ ಕಂದಾಯಕ್ಕಾಗಿ ಹಾಗೆ ತಡೆಹಿಡಿಯಲಾಗಿದೆಯೋ ಆ ವರ್ಷದ ಕಂದಾಯದ ಮೊತ್ತಕ್ಕಿಂತ ಹೆಚ್ಚಿನ ಮೊತ್ತಕ್ಕಾಗಿ ತಡೆಹಿಡಿಯತಕ್ಕದ್ದಲ್ಲ.

(2) ರಾಜ್ಯ ಸರ್ಕಾರಕ್ಕೆ ಬೆಳೆಯ ಮೇಲಿರುವ ಧಾರಣಾಧಿಕಾರವನ್ನು ಚಲಾಯಿಸುವುದರ ಮೂಲಕ, ಭೂಕಂದಾಯದ ಸಂದಾಯವನ್ನು ಖಾತ್ರಿಪಡಿಸಿಕೊಳ್ಳುವುದಕ್ಕಾಗಿ, [1][ತಹಶೀಲ್ದಾರನು][1],-

1. 1970ರ ಅಧಿನಿಯಮ 5ರ ಮೂಲಕ 23.10.1969 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಎ) ಭೂಕಂದಾಯದ ಸಂದಾಯಕ್ಕೆ ಹೊಣೆಯಾಗಿರುವ ಭೂಮಿಯಲ್ಲಿ ಬೆಳೆಯಲಾಗುವ ಬೆಳೆಯನ್ನು ತನಗೆ ಅಥವಾ ಈ ಬಗ್ಗೆ ತಾನು ಹೆಸರಿಸುವ ಇತರ ಅಧಿಕಾರಿಗೆ ಮೊದಲು ಬರಹ ಮೂಲಕ ನೋಟೀಸನ್ನು ಕೊಟ್ಟ ಹೊರತು, ಕೊಯ್ಲು ಮಾಡತಕ್ಕದ್ದಲ್ಲವೆಂದು ಅಗತ್ಯಪಡಿಸಬಹುದು;

(ಬಿ) ಕೊಯ್ಲು ಮಾಡಿದ ಬೆಳೆಯನ್ನು ಭೂಮಿಯಿಂದ ಅಥವಾ ಅದನ್ನು ರಾಶಿ ಹಾಕಿದ ಸ್ಥಳದಿಂದ ತನ್ನ ಅಥವಾ ಮೇಲೆ ಹೇಳಿದ ಬೇರೆ ಅಧಿಕಾರಿಯ ಲಿಖಿತ ಅನುಮತಿ ಇಲ್ಲದೆ ಸಾಗಿಸಬಾರದೆಂದು ನಿರ್ದೇಶಿಸಬಹುದು;

(ಸಿ) ಅಂಥ ಬೆಳೆಯ ಕೊಯ್ಲು ಮಾಡುವುದನ್ನು ಅಥವಾ ಸಾಗಿಸುವುದನ್ನು ತಡೆಯಲು ಆ ಬೆಳೆಗೆ ಕಾವಲುಗಾರರನ್ನು ನೇಮಿಸಬಹುದು, ಮತ್ತು ಆ ಸಂಬಂಧದಲ್ಲಿ ತಗಲುವ ಖರ್ಚನ್ನು ಆ ಬೆಳೆಯು ಇರುವ ಭೂಮಿಯ ಕಂದಾಯದ ಬಾಕಿ ಎಂಬಂತೆ ವಸೂಲು ಮಾಡಬಹುದು.

(3) ಉಪಪ್ರಕರಣ(2)ರ ಮೇರೆಗೆ ಮಾಡಿದ ಯಾವುದೇ ಆದೇಶವನ್ನು, ಅದನ್ನು ಕ್ರಮಬದ್ಧವಾಗಿ ಪ್ರಕಟಿಸಿದ ಅನಂತರ ಅಥವಾ ಅದರ ಬಗ್ಗೆ ನೋಟೀಸನ್ನು ಜಾರಿ ಮಾಡಿದ ಅನಂತರ, ಯಾರೇ ವ್ಯಕ್ತಿಯು ಅದನ್ನು ಪಾಲಿಸದಿದ್ದರೆ ಅಥವಾ ಪಾಲಿಸದಂತೆ ದುಷ್ಪ್ರೇರಣೆ ಮಾಡಿದರೆ, ಅವನು [1][ತಹಶೀಲ್ದಾರನು][1] ನಡೆಸುವ ಸಂಕ್ಷಿಪ್ತ ವಿಚಾರಣೆಯ ಅನಂತರ, ಅಂಥ ಭೂಮಿಯ ಬಗ್ಗೆ ಬಾಕಿಯಾಗಿರುವ ಭೂಕಂದಾಯದ ಎರಡರಷ್ಟಕ್ಕೆ ಮೀರದ ಜುಲ್ಮಾನೆಗೆ ಗುರಿಯಾಗತಕ್ಕದ್ದು.

(4) [1][ತಹಶೀಲ್ದಾರನು][1],ಬಹಳ ದಿನ ಇಟ್ಟರೆ ಕೆಟ್ಟು ಹೋಗುತ್ತದೆಯಾದ್ದರಿಂದ ಬೆಳೆಯ ಕೊಯ್ಲನ್ನು ಮುಂದೂಡತಕ್ಕದ್ದಲ್ಲ ಅಥವಾ ಅದನ್ನು ರಾಶಿ ಹಾಕಿರುವುದನ್ನು ಅನಾವಶ್ಯಕವಾಗಿ ರಾಶಿ ಹಾಗೆಯೇ ಇಟ್ಟಿರತಕ್ಕದ್ದಲ್ಲ, ಬೆಳೆಯನ್ನು ರಾಶಿ ಹಾಕಿದ ಎರಡು ತಿಂಗಳೊಳಗಾಗಿ ಭೂಕಂದಾಯದ ಬಾಕಿಯು ಸಂದಾಯವಾಗದಿದ್ದರೆ, [1][ತಹಶೀಲ್ದಾರನು][1]ಬೆಳೆಯನ್ನು ಬಿಡುಗಡೆ ಮಾಡಿ ಈ ಅಧ್ಯಾಯವು ಅಧಿಕೃತಗೊಳಿಸಿರುವಂತಹ ಬೇರೆ ಇತರ ರೀತಿಯಲ್ಲಿ ಭೂಕಂದಾಯವನ್ನು ವಸೂಲು ಮಾಡಲು ಕ್ರಮಕೈಗೊಳ್ಳತಕ್ಕದ್ದು ಅಥವಾ ಕಂದಾಯದ ಬಾಕಿಯ ಮತ್ತು ಎಲ್ಲ ಕಾನೂನು ಸಮ್ಮತ ಖರ್ಚಿನ ವಸೂಲಿಗಾಗಿ ಚರಸ್ವತ್ತಿನ ಮಾರಾಟಕ್ಕೆ ಅನ್ವಯವಾಗುವ ಈ ಅಧ್ಯಾಯದ ಉಪಬಂಧಗಳ ಮೇರೆಗೆ ಮಾರಾಟ ಮಾಡುವುದಕ್ಕಾಗಿ ಆ ಬೆಳೆಯಲ್ಲಿ ಸೂಕ್ತವೆಂದು ತಾನು ಭಾವಿಸುವಷ್ಟು ಭಾಗವನ್ನು ತೆಗೆದುಕೊಳ್ಳತಕ್ಕದ್ದು ಮತ್ತು ಉಳಿದುದನ್ನು ಬಿಟ್ಟು ಕೊಡತಕ್ಕದ್ದು.

1. 1970ರ ಅಧಿನಿಯಮ 5ರ ಮೂಲಕ 23.10.1969 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**189. ಭದ್ರತೆಯನ್ನು ಒದಗಿಸಿದಾಗ ಮುಂಜಾಗ್ರತೆ ಕ್ರಮಗಳನ್ನು ಬಿಟ್ಟು ಬಿಡುವಿಕೆ.–** ಕಂದಾಯವನ್ನು ಸಂದಾಯ ಮಾಡಲು ಮುಖ್ಯವಾಗಿ ಜವಾಬ್ದಾರನಾಗಿರುವ ವ್ಯಕ್ತಿಯು ಅಥವಾ ಮುಖ್ಯವಾಗಿ ಜವಾಬ್ದಾರನಾಗಿರುವ ಆ ವ್ಯಕ್ತಿಯು ತಪ್ಪಿದರೆ ಅದಕ್ಕೆ ಜವಾಬ್ದಾರನಾಗುವ ವ್ಯಕ್ತಿಯು, ಮುಂಜಾಗ್ರತೆ ಕ್ರಮಗಳನ್ನು ಬಿಟ್ಟು ಬಿಡುವವರೆಗೆ [1][ತಹಶೀಲ್ದಾರನು][1]ಕಾನೂನುಬದ್ಧವಾಗಿ ವಹಿಸಿದ ಖರ್ಚನ್ನು ಸಂದಾಯ ಮಾಡತಕ್ಕದ್ದು ಮತ್ತು ಈ ಅಧ್ಯಾಯದ ಉಪಬಂಧಗಳ ಮೇರೆಗೆ ಯಾವ ಕಾಲಕ್ಕೆ ಕಂದಾಯವನ್ನು ಅಥವಾ ಅದರ ಕಂತನ್ನು ಸಂದಾಯ ಮಾಡಬೇಕಾಗಿದೆಯೋ ಆ ಕಾಲದಲ್ಲಿ ಅದನ್ನು ಸಂದಾಯ ಮಾಡುವ ಬಗ್ಗೆ [1][ತಹಶೀಲ್ದಾರನಿಗೆ][1] ತೃಪ್ತಿಕರವಾಗುವಂಥ ಭದ್ರತೆಯನ್ನು ಒದಗಿಸಿದರೆ 188ನೇ ಪ್ರಕರಣದ ಮೇರೆಗಿನ ಮುಂಜಾಗ್ರತೆಯ ಕ್ರಮಗಳನ್ನು ಬಿಟ್ಟು ಬಿಡತಕ್ಕದ್ದು.

1. 1970ರ ಅಧಿನಿಯಮ 5ರ ಮೂಲಕ 23.10.1969 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**190. ಇತರ ಸರ್ಕಾರೀ ಬಾಕಿಗಳ ವಸೂಲಿ.–**ಈ ಅಧಿನಿಯಮದ ಮೇರೆಗೆ ವಸೂಲಾಗಬೇಕಾದ ಈ ಮುಂದೆ ಹೇಳಿರುವ ಮೊಬಲಗುಗಳನ್ನು, ಎಂದರೆ,-

(ಎ) ಭೂಮಿಯ ಅಥವಾ ನೀರಿನ ಅಥವಾ ಭೂಮಿಯ ಯಾವುದೇ ಉತ್ಪನ್ನದ ಬಳಕೆಗಾಗಿ ಅಥವಾ ಅಧಿಭೋಗಕ್ಕಾಗಿ ರಾಜ್ಯ ಸರ್ಕಾರಕ್ಕೆ ಸಲ್ಲತಕ್ಕ ಎಲ್ಲ ಗೇಣಿಗಳು, ರಾಜಾದಾಯಗಳು, ನೀರು ದರಗಳು, ಉಪಕರಗಳು, ಫೀಜು, ಋಣ ಭಾರಗಳು, ಮೇಲ್ಗೊಡುಗೆಗಳು, ದಂಡಗಳು ಮತ್ತು ಜುಲ್ಮಾನೆಗಳು;

(ಬಿ) ಭೂಕಂದಾಯದ ಬಾಕಿಯಂತೆ ವಸೂಲಾಗಬೇಕಾದವುಗಳೆಂದು ಉಪಬಂಧ ಕಲ್ಪಿಸಿರುವ ಯಾವುದೇ ಅನುದಾನ, ಗೇಣಿ ಅಥವಾ ಕರಾರಿನ ಮೇರೆಗೆ ರಾಜ್ಯ ಸರ್ಕಾರಕ್ಕೆ ಸಲ್ಲತಕ್ಕ ಎಲ್ಲ ಮೊಬಲಗು;

(ಸಿ) ಈ ಅಧಿನಿಯಮದ ಮೂಲಕ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನ ಮೂಲಕ ಭೂಕಂದಾಯದ ಬಾಕಿಯಂತೆ ವಸೂಲಾಗಬೇಕಾದುದೆಂದು ಘೋಷಿತವಾದ ಎಲ್ಲ ಮೊಬಲಗು;

–ಭೂಕಂದಾಯದ ಬಾಕಿಯನ್ನು ವಸೂಲು ಮಾಡುವ ರೀತಿಯಲ್ಲಿಯೇ ವಸೂಲು ಮಾಡಬಹುದು;

**191. ಜಾಮೀನುದಾರನಿಂದ ಹಣದ ವಸೂಲಿ.–** ಈ ಅಧಿನಿಯಮದ ಅಥವಾ ಇತರ ಯಾವುದೇ ಅಧಿನಿಯಮದ ಮೇರೆಗೆ ಅಥವಾ ಯಾವ ಮಂಜೂರಾತಿಯ, ಗೇಣಿಯ ಅಥವಾ ಕರಾರಿನ ನಿಬಂಧನೆಗಳ ಮೇರೆಗೆ ಭದ್ರತೆಯಾಗಿ ಒದಗಿಸಿರುವ ಹಣವು ಭೂಕಂದಾಯದ ಬಾಕಿ ಎಂಬಂತೆ ಮೂಲಕರ್ತನಿಂದ ವಸೂಲಾಗಬೇಕಾದುದಾಗಿದೆಯೋ ಆ ಮಂಜೂರಾತಿಯಿಂದಾಗಿ ಗೇಣಿ ಅಥವಾ ಕರಾರಿನಿಂದಾಗಿಜಾಮೀನುದಾರನಾಗಿರಬಹುದಾದ ಪ್ರತಿಯೊಬ್ಬ ವ್ಯಕ್ತಿಯು, ತನ್ನ ಭದ್ರತಾ ಪತ್ರದ ನಿಬಂಧನೆಗಳಿಗನುಸಾರವಾಗಿ ತಾನು ಕೊಡಲು ಹೊಣೆಗಾರನಾಗಿರಬಹುದಾದ ಮೊಬಲಗಳನ್ನು ಅಥವಾ ಅದರ ಯಾವುದೇ ಭಾಗವನ್ನು ಸಂದಾಯ ಮಾಡಲು ತಪ್ಪಿದರೆ, ಅವನು ಈ ಅಧ್ಯಾಯದ ಉಪಬಂಧಗಳ ಮೇರೆಗೆ ಭೂಕಂದಾಯದ ಬಾಕಿಯ ಬಗ್ಗೆ ನಡೆಸಲಾಗುವ ವ್ಯವಹರಣೆಗಳಂತಹ ವ್ಯವಹರಣೆಗಳಿಗೆ ಬದ್ಧನಾಗಿರತಕ್ಕದ್ದು.

**192. ಒಂದು ಜಿಲ್ಲೆಯಲ್ಲಿನ ಬಾಕಿಯನ್ನು ಮತ್ತೊಂದು ಜಿಲ್ಲೆಯ ಡೆಪ್ಯೂಟಿ ಕಮಿಷನರು ವಸೂಲು ಮಾಡುವುದು.–** (1) ಭೂಕಂದಾಯದ ಬಾಕಿಯು ಅಥವಾ 190ನೇ ಪ್ರಕರಣದ ಮೇರೆಗೆ ಭೂಕಂದಾಯದ ಬಾಕಿ ಎಂಬಂತೆ ವಸೂಲಿಯಾಗದಿರುವ ಇತರ ಸರ್ಕಾರಿ ಬಾಕಿಗಳು ಒಂದು ಜಿಲ್ಲೆಯಲ್ಲಿ ಬಾಕಿಯಾಗಿದ್ದು ಬೇರೆ ಯಾವುದೇ ಜಿಲ್ಲೆಯಲ್ಲಿರುವ ಸುಸ್ತಿದಾರನ ಸ್ವತ್ತಿನ ಮಾರಾಟದಿಂದ ವಸೂಲಾಗಬೇಕಿದ್ದಲ್ಲಿ, ಯಾವ ಜಿಲ್ಲೆಯಲ್ಲಿ ಅಂಥ ಬಾಕಿಯು ಉಳಿದಿರುವುದೋ ಆ ಜಿಲ್ಲೆಯ ಡೆಪ್ಯೂಟಿ ಕಮಿಷನರನು 160ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಪ್ರಮಾಣಿತವಾದ ಲೆಕ್ಕಗಳ ತಃಖ್ತೆಯನ್ನು ಯಾವ ಜಿಲ್ಲೆಯಲ್ಲಿ ವಸೂಲು ಮಾಡಬೇಕಾಗಿದೆಯೋ ಆ ಜಿಲ್ಲೆಯ ಡೆಪ್ಯೂಟಿ ಕಮಿಷನರಿಗೆ ಕಳುಹಿಸಿಕೊಡತಕ್ಕದ್ದು.

(2) ಅಂಥ ಪ್ರಮಾಣಿತ ತಃಖ್ತೆಯು ತಲುಪಿದ ಬಳಿಕ, ಒಂದು ಜಿಲ್ಲೆಯ ಡೆಪ್ಯೂಟಿ ಕಮಿಷನರು, ಇನ್ನೊಂದು ಜಿಲ್ಲೆಯ ಡೆಪ್ಯೂಟಿ ಕಮಿಷನರು ವಸೂಲು ಮಾಡಬೇಕೆಂದು ಕೇಳಿದ ಬಾಕಿಯನ್ನು ಅದು ತನ್ನ ಜಿಲ್ಲೆಯಲ್ಲಿಯೇ ಬಾಕಿ ಇದೆ ಎಂಬಂತೆ ಭಾವಿಸಿ ಈ ಅಧ್ಯಾಯದ ಉಪಬಂಧಗಳ ಮೇರೆಗೆ ವಸೂಲು ಮಾಡುವುದು ಕಾನೂನು ಬದ್ಧವಾಗಿರತಕ್ಕದ್ದು.

## [1][ಅಧ್ಯಾಯ–XIV–ಎ

## ಅಪರಾಧಗಳು ಮತ್ತು ದಂಡನೆಗಳು

**192ಎ. ಅಪರಾಧಗಳು ಮತ್ತು ದಂಡನೆಗಳು.–** ಈ ಅಧಿನಿಯಮದಲ್ಲಿ ಅಥವಾ ಅದರ ಮೇರೆಗೆ ಮಾಡಿದ ನಿಯಮಗಳಲ್ಲಿ ಏನೇ ಒಳಗೊಂಡಿದ್ದರೂ, ಯಾರಾದರೂ ಕೆಳಗಿನ ಕೋಷ್ಟಕದ (2)ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಅಪರಾಧವನ್ನು ಮಾಡಿದರೆ, ಅಂಥ ಪ್ರತಿಯೊಂದು ಅಪರಾಧಕ್ಕೆ ಪ್ರಥಮ ದರ್ಜೆ ನ್ಯಾಯಿಕ ಮ್ಯಾಜಿಸ್ಟ್ರೇಟರಿಂದ ಅಪರಾಧ ನಿರ್ಣಯವಾದ ನಂತರ ಅದರ (3)ನೇ ಅಂಕಣದಲ್ಲಿ ನಮೂದಿಸಿರುವ ಶಿಕ್ಷೆಯಿಂದ ದಂಡಿತನಾಗತಕ್ಕದ್ದು.

**ಕೋಷ್ಟಕ**

| ಕ್ರ.ಸಂ. | ಅಪರಾಧ | ದಂಡನೆ |
|---|---|---|
| (1) | (2) | (3) |

| | | |
|---|---|---|
| 1. | ಸರ್ಕಾರದ ಭೂಮಿಯನ್ನು ಹೊಂದುವ ಉದ್ದೇಶದಿಂದ ಯಾವುದೇ ಸರ್ಕಾರಿ ಭೂಮಿಯನ್ನು ಕಾನೂನುಬಾಹಿರವಾಗಿ ಪ್ರವೇಶಿಸುವುದು ಅಥವಾ ಸ್ವಾಧೀನಪಡಿಸಿಕೊಳ್ಳುವುದು.<br>ಪರಂತು, ಕೊಡಗು ಜಿಲ್ಲೆಯಲ್ಲಿ ಜಮ್ಮಾ, ಬಾಣೆ ಭೂಮಿಗಳ ಅಥವಾ ಒತ್ತುವರಿ ಮಾಡಿಕೊಂಡಿರುವುದನ್ನು ಸಕ್ರಮಗೊಳಿಸಿರುವ ಅಥವಾ 94ಎ, 94ಬಿ, ಮತ್ತು 94ಸಿ ಪ್ರಕರಣಗಳ ಮೇರೆಗೆ ರಚಿಸಲಾದ ಸಮಿತಿಯ ಮುಂದೆ ಸಕ್ರಮಕ್ಕಾಗಿ ಬಾಕಿಯಿರುವ ಪ್ರಕರಣಗಳಿಗೆ ಇದು ಅನ್ವಯವಾಗತಕ್ಕದ್ದಲ್ಲ. | ಒಂದು ವರ್ಷದ ಕಾರವಾಸ ಶಿಕ್ಷೆ ಮತ್ತು ಐದು ಸಾವಿರ ರೂಪಾಯಿಗಳ ಜುಲ್ಮಾನೆ |
| 2. | ಮೋಸ ಮಾಡಿದ್ದರೆ ಮತ್ತು ಆ ಮೂಲಕ ಸರ್ಕಾರದ ಯಾವುದೇ ಭೂಮಿಯನ್ನು ದಾನದ ಮೂಲಕ ಅಥವಾ ಅನ್ಯಥಾ ಮಾರಾಟ, ಅಡಮಾನ, ವರ್ಗಾವಣೆ ಮಾಡುವ ಉದ್ದೇಶದಿಂದ ಅಪ್ರಾಮಾಣಿಕವಾಗಿ ದಸ್ತಾವೇಜುಗಳನ್ನು ಸೃಷ್ಟಿಸಿದ್ದರೆ. | ಮೂರು ವರ್ಷಗಳ ಕಾರಾವಾಸ ಶಿಕ್ಷೆ ಮತ್ತು ಹತ್ತು ಸಾವಿರ ರೂಪಾಯಿಗಳ ಜುಲ್ಮಾನೆ. |
| 3. | ಆ ಉದ್ದೇಶಕ್ಕಾಗಿ ಅದನ್ನು ಬಳಸುವ ಉದ್ದೇಶದಿಂದ ಸರ್ಕಾರದ ಭೂಮಿಗೆ ಸಂಬಂಧಿಸಿದಂತೆ ಅಥವಾ ಅಂಥ ಜಮೀನನ್ನು ಕಬಳಿಸಲು ಸುಳ್ಳು ದಾಖಲೆಗಳನ್ನು ಸೃಷ್ಟಿಸಿದ್ದರೆ | ಮೂರು ವರ್ಷಗಳ ಕಾರಾವಾಸ ಶಿಕ್ಷೆ ಮತ್ತು ಐದು ಸಾವಿರ ರೂಪಾಯಿಗಳ ಜುಲ್ಮಾನೆ. |
| 4. | ಸರ್ಕಾರದ ಭೂಮಿಯನ್ನು ಅನಧಿಕೃತ ಅಧಿಭೋಗವನ್ನು ವರದಿ ಮಾಡುವ ಅಥವಾ ಅಂಥ ಅನಧಿಕೃತ ಅಧಿಭೋಗದಾರರನ್ನು ತೆರವುಗೊಳಿಸಲು ಕ್ರಮವನ್ನು ತೆಗೆದುಕೊಳ್ಳುವ ಜವಾಬ್ದಾರಿಯನ್ನು ಯಾವ ರೆವಿನ್ಯೂ ಅಧಿಕಾರಿಗೆ ವಹಿಸಿಕೊಡಲಾಗಿದೆಯೋಆ ರೆವಿನ್ಯೂ ಅಧಿಕಾರಿಯು ವರದಿ ಮಾಡುವುದಕ್ಕೆ ಅಥವಾ ಅಂಥ ಅನಧಿಕೃತ ಅಧಿಭೋಗದಾರರನ್ನು ತೆರವುಗೊಳಿಸಲು ಕ್ರಮಕೈಗೊಳ್ಳುವುದಕ್ಕೆ ವಿಫಲರಾಗಿದ್ದರೆ:<br>ಪರಂತು, ಕೊಡಗು ಜಿಲ್ಲೆಯಲ್ಲಿ ಜಮ್ಮಾ, ಕಂದಾಯ ಮುಕ್ತ ಅರಣ್ಯ ಭೂಮಿಗಳಿಗೆ ಅಥವಾ ಒತ್ತುವರಿ ಮಾಡಿಕೊಂಡಿರುವುದನ್ನು ಸಕ್ರಮಗೊಳಿಸಿರುವ ಅಥವಾ ಅಧಿನಿಯಮದ 94ಎ, 94ಬಿ ಮತ್ತು 94ಸಿ ಪ್ರಕರಣಗಳ ಮೇರೆಗೆ ರಚಿಸಲಾದ ಸಮಿತಿಯ ಮುಂದೆ ಸಕ್ರಮಕ್ಕಾಗಿ ಬಾಕಿಯಿರುವ ಪ್ರಕರಣಗಳಿಗೆ ಇದು ಅನ್ವಯವಾಗತಕ್ಕದ್ದಲ್ಲ. | |
| 5. | ಕೃಷಿಯೇತರ ಉದ್ದೇಶಕ್ಕಾಗಿ ಯಾವುದೇ ಕೃಷಿ ಭೂಮಿಯನ್ನು ಸಕ್ರಮ ಪ್ರಾಧಿಕಾರದಿಂದ ಪರಿವರ್ತನೆಗೊಳಿಸಿಕೊಳ್ಳದಯೇ ಅಥವಾ ಮುಂಚಿತವಾಗಿ ಅನುಮೋದನೆ ಪಡೆಯದಯೇ ಮಾರಾಟ ಮಾಡಿದರೆ:<br>ಪರಂತು, ಈ ಬಗ್ಗೆ ವಿಶೇಷ ಯೋಜನೆಯನ್ನು ರೂಪಿಸುವುದರ ಮೂಲಕ ಸರ್ಕಾರವು ಸಕ್ರಮಗೊಳಿಸಿದ ಪ್ರಕರಣಗಳಿಗೆ ಇದು ಅನ್ವಯವಾಗತಕ್ಕದ್ದಲ್ಲ. | ಮೂರು ವರ್ಷಗಳ ಕಾರಾವಾಸ ಶಿಕ್ಷೆ ಮತ್ತು ಹತ್ತು ಸಾವಿರ ರೂಪಾಯಿಗಳ ಜುಲ್ಮಾನೆ. |
| 6. | ಕೃಷಿಯೇತರ ಬಳಕೆಗಾಗಿ ಕೃಷಿ ಭೂಮಿಯನ್ನು ಪರಿವರ್ತಿಸುವ ಸಲುವಾಗಿ ಸುಳ್ಳು ದಾಖಲೆಗಳನ್ನು ಸೃಷ್ಟಿಸುವುದು ಅಥವಾ ಕೃಷಿಯೇತರ ಉದ್ದೇಶಕ್ಕಾಗಿ ಬಳಸುವುದಕ್ಕೆ ಕೃಷಿ ಭೂಮಿಯ ಹಿಡುವಳಿದಾರನಿಗೆ ಅಧಿಕಾರ ನೀಡುವುದು. | ಮೂರು ವರ್ಷಗಳ ಕಾರಾವಾಸ ಶಿಕ್ಷೆ ಮತ್ತು ಐದು ಸಾವಿರ ರೂಪಾಯಿಗಳ ಜುಲ್ಮಾನೆ. |
| 7. | ಯಾವ ಸಾರ್ವಜನಿಕ ನೌಕರನಿಗೆ ದಾಖಲೆಗಳನ್ನು ನಿರ್ವಹಣೆ ಮಾಡಲು ಜವಾಬ್ದಾರಿಯನ್ನು ವಹಿಸಿಕೊಡಲಾಗಿದೆಯೋ ಅಥವಾ ಸಕ್ಷಮ ಪ್ರಾಧಿಕಾರಕ್ಕೆ ಅನಧಿಕೃತ ಪರಿವರ್ತನೆಯ ಬಗ್ಗೆ ವರದಿ ಮಾಡುವ ಜವಾಬ್ದಾರಿಯನ್ನು ವಹಿಸಿಕೊಡಲಾಗಿದೆಯೋ ಆ ಸಾರ್ವಜನಿಕನು ಸಕ್ಷಮ ಪ್ರಾಧಿಕಾರಕ್ಕೆ ವರದಿ ಮಾಡಲು ಅಥವಾ ಕೃಷಿಯೇತರ ಉದ್ದೇಶಗಳಿಗಾಗಿ ರೆವಿನ್ಯೂ ಭೂಮಿಗಳನ್ನು ಅನಧಿಕೃತವಾಗಿ ಪರಿವರ್ತಿಸುವುದರ ವಿರುದ್ಧ ಕ್ರಮ ತೆಗೆದುಕೊಳ್ಳಲು | ಮೂರು ವರ್ಷಗಳ ಕಾರಾವಾಸ ಶಿಕ್ಷೆ ಮತ್ತು ಹತ್ತು ಸಾವಿರ ರೂಪಾಯಿಗಳ ಜುಲ್ಮಾನೆ. |

| | | |
|---|---|---|
| | ವಿಫಲನಾಗಿದ್ದರೆ:<br>ಪರಂತು, ಈ ಬಗ್ಗೆ ವಿಶೇಷ ಯೋಜನೆಯನ್ನು ರೂಪಿಸುವ ಮೂಲಕ ಸರ್ಕಾರವು ಸಕ್ರಮಗೊಳಿಸುವಂಥ ಪ್ರಕರಣಗಳಿಗೆ ಇದು ಅನ್ವಯವಾಗತಕ್ಕದ್ದಲ್ಲ. | |
| 8. | ಈ ಅಧಿನಿಯಮದ ಮೇರೆಗೆ ಹೊರಡಿಸಲಾದ ಯಾವುದೇ ಕಾನೂನು ಆದೇಶಗಳನ್ನು ಉಲ್ಲಂಘಿಸಿದ್ದರೆ. | ಮೊದಲನೇ ಅಪರಾಧಕ್ಕಾಗಿ ಐದು ಸಾವಿರ ರೂಪಾಯಿಗಳಿಗೆ ವಿಸ್ತರಿಸಬಹುದಾದ ಜುಲ್ಮಾನೆ ಮತ್ತು ಎರಡನೇ ಮತ್ತು ತರುವಾಯದ ಅಪರಾಧಗಳಿಗೆ ಐದು ಪಟ್ಟು ಜುಲ್ಮಾನೆ. |

**192–ಬಿ. ಅಪರಾಧಗಳ ದುಷ್ಪ್ರೇರಣೆ.–** ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ಯಾರಾದರೂ ದಂಡನೀಯವಾದ ಯಾವುದೇ ಅಪರಾಧಕ್ಕೆ ದುಷ್ಪ್ರೇರಣೆ ನೀಡಿದರೆ ಅಥವಾ ಅಂಥ ಅಪರಾಧವನ್ನು ಮಾಡಲು ಪ್ರಯತ್ನಿಸಿದರೆ, ಅಂಥ ಅಪರಾಧವನ್ನು ಮಾಡಿರುವುದಕ್ಕಾಗಿ ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ಉಪಬಂಧಿಸಿರುವ ದಂಡದೊಂದಿಗೆ ಶಿಕ್ಷಿಸತಕ್ಕದ್ದು.

**192–ಸಿ. ಇತರ ಕಾನೂನುಗಳ ಮೇರೆಗೆ ಶಿಕ್ಷಿಸಲು ನಿಷೇಧ ಇಲ್ಲ.–** ಯಾವ ಕೃತ್ಯವು ಅಥವಾ ಲೋಪವು ದಂಡನೀಯವೆಂದು ಈ ನಿಯಮದಲ್ಲಿ ಅಥವಾ ಮೇರೆಗೆ ಹೇಳಲಾಗಿದೆಯೋ ಆ ಯಾವುದೇ ಕೃತ್ಯಕ್ಕಾಗಿ ಅಥವಾ ಲೋಪಕ್ಕಾಗಿ ಯಾರೇ ವ್ಯಕ್ತಿಯನ್ನು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಮೇರೆಗೆ ಪ್ರಾಸಿಕ್ಯೂಷನ್ ಮಾಡುವುದನ್ನು ಅಥವಾ ಶಿಕ್ಷಿಸುವುದನ್ನು ಈ ಅಧಿನಿಯಮದಲ್ಲಿ ಇರುವುದು ಯಾವುದೂ ತಡೆಯತಕ್ಕದ್ದಲ್ಲ.

ಪರಂತು, ಒಂದೇ ಅಪರಾಧಕ್ಕಾಗಿ ಯಾರೇ ವ್ಯಕ್ತಿಯನ್ನು ಒಂದಕ್ಕಿಂತ ಹೆಚ್ಚುಬಾರಿ ಪ್ರಾಸಿಕ್ಯೂಷನ್ ಮಾಡತಕ್ಕದ್ದಲ್ಲ ಮತ್ತು ಶಿಕ್ಷಿಸತಕ್ಕದ್ದಲ್ಲ.

**192.ಡಿ. ಅಪರಾಧಗಳನ್ನು ನ್ಯಾಯಿಕ ಗಮನಕ್ಕೆ ತೆಗೆದುಕೊಳ್ಳಬೇಕು.–** ಈ ಅಧ್ಯಾಯದ ಮೇರೆಗಿನ ಅಪರಾಧಗಳನ್ನು ನ್ಯಾಯಿಕ ಗಮನಕ್ಕೆ ತೆಗೆದುಕೊಳ್ಳತಕ್ಕದ್ದು.][1]

1. 2007ರ ಅಧಿನಿಯಮ 15ರ ಮೂಲಕ 11.12.2006 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

## ಅಧ್ಯಾಯ–XV
### ಸಂಕೀರ್ಣ

**193. ನಕಾಶೆಗಳ ಮತ್ತು ಭೂ ದಾಖಲೆಗಳ ಪರಿಶೀಲನೆ ಮತ್ತು ಅವುಗಳ ಪ್ರತಿಗಳನ್ನು ಕೊಡುವುದು.–** ಈ ಬಗ್ಗೆ ರಾಜ್ಯ ಸರ್ಕಾರವು ಕಾಲಕಾಲಕ್ಕೆ ನಿಯಮಿಸಬಹುದಾದ ನಿಯಮಗಳಿಗೆ ಮತ್ತು ಫೀಜಿನ ಸಂದಾಯಕ್ಕೊಳಪಟ್ಟು, ಎಲ್ಲ ನಕಾಶೆಗಳು ಮತ್ತು ಭೂದಾಖಲೆಗಳು ಮತ್ತು ಯುಕ್ತ ಕಾಲದಲ್ಲಿ ಸಾರ್ವಜನಿಕರ ಪರಿಶೀಲನೆಗೆ ದೊರೆಯುವಂತೆ ಇರತಕ್ಕದ್ದು ಮತ್ತು ಅಂಥ ನಕಾಶೆಗಳ ಮತ್ತು ಭೂ ದಾಖಲೆಗಳ ಪ್ರಮಾಣಿತ ಉದ್ಧೃತ ಭಾಗಗಳನ್ನು ಅಥವಾ ಅವುಗಳ ಪ್ರಮಾಣ ಪ್ರತಿಗಳನ್ನು, ಅವುಗಳಿಗಾಗಿ ಅರ್ಜಿ ಸಲ್ಲಿಸುವ ಎಲ್ಲ ವ್ಯಕ್ತಿಗಳಿಗೂ ಕೊಡತಕ್ಕದ್ದು.

**194. ಭೂಕಂದಾಯದ ಸ್ಥಗಿತ ಅಥವಾ ಮಾಫಿ.–** (1) ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ, ಆದರೆ ನಿಯಮಿಸಬಹುದಾದ ನಿಯಮಗಳಿಗೊಳಪಟ್ಟು, ಯಾವುದೇ ಭಾಗದಲ್ಲಿ ಸಾಕಷ್ಟು ಮಳೆ ಬಾರದ ಕಾರಣದಿಂದಾಗಿ ಅಥವಾ ಇತರ ಕಾರಣದಿಂದಾಗಿ ಬೆಳೆಗಳು ಆಗದೇ ಇದ್ದರೆ ಮತ್ತು ಅಂಥ ಭಾಗದಲ್ಲಿರುವ ಯಾವುದೇ ಭೂಮಿಯ ಬಗ್ಗೆ ಸಂದಾಯ ಮಾಡಬೇಕಾಗಿರುವ ಕಂದಾಯವನ್ನು ಸ್ಥಗಿತಗೊಳಿಸುವುದು ಅಥವಾ ಮಾಫಿ ಮಾಡುವುದು ಅವಶ್ಯಕವೆಂದು ರಾಜ್ಯ ಸರ್ಕಾರವು ಪರ್ಯಾಲೋಚಿಸಿದರೆ, ಅದು ಅಧಿಸೂಚನೆಯ ಮೂಲಕ,–

(i) ಅಂಥ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಅವಧಿಯವರೆಗೆ ಭೂಕಂದಾಯದ ಅಥವಾ ಅದರ ಯಾವುದೇ ಭಾಗದ ವಸೂಲಿಯನ್ನು ಸ್ಥಗಿತಗೊಳಿಸಬಹುದು; ಅಥವಾ

(ii) ಅಂಥ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ಯಾವುದೇ ವರ್ಷದಲ್ಲಿ ಸಂದಾಯವಾಗ ಬೇಕಾಗಿರುವ ಭೂಕಂದಾಯವನ್ನು ಪೂರ್ತಿಯಾಗಿ ಅಥವಾ ಭಾಗಶಃ ಮಾಫಿ ಮಾಡಬಹುದು.

(2)ಉಪಪ್ರಕರಣ(1)ರ ಮೇರೆಗೆ ಹೊರಡಿಸಿದ ಪ್ರತಿಯೊಂದು ಅಧಿಸೂಚನೆಯನ್ನೂ ರಾಜ್ಯ ವಿಧಾನ ಮಂಡಲದ ಎರಡೂ ಸದನಗಳ ಮುಂದೆಯೂ ಇರಿಸತಕ್ಕದ್ದು.

**195. ಅಧಿಕಾರಗಳನ್ನು ವಹಿಸಿಕೊಡುವುದು.–** (1) ಈ ಅಧಿನಿಯಮದ ಮೇರೆಗೆ ರಾಜ್ಯ ಸರ್ಕಾರಕ್ಕೆ ಅಥವಾ ಅದಕ್ಕೆ ಅಧೀನವಾಗಿರುವ ಯಾರೇ ಅಧಿಕಾರಿಗೆ ಪ್ರದತ್ತವಾಗಿರುವ ಅಧಿಕಾರಗಳನ್ನು, ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ, ತನಗೆ ಅಧೀನನಾಗಿರುವ ಯಾರೇ ಅಧಿಕಾರಿಗೆ ಅಥವಾ ಪ್ರಾಧಿಕಾರಕ್ಕೆ, ಸದರಿ ಅಧಿಸೂಚನೆಯಲ್ಲಿ ಯಾವುವಾದರೂ ನಿರ್ದಿಷ್ಟಪಡಿಸಬಹುದಾದ ನಿರ್ಬಂಧಗಳನ್ನು ಮತ್ತು ಷರತ್ತುಗಳನ್ನು ಅವುಗಳಿಗೊಳಪಟ್ಟು ವಹಿಸಿಕೊಡಬಹುದು.

(2) ಉಪಪ್ರಕರಣ (1)ರಲ್ಲಿ ಏನೇ ಒಳಗೊಂಡಿದ್ದರೂ, ರಾಜ್ಯ ಸರ್ಕಾರವು 3, 4, 6, 7, 8, 9, 10, 18, 20, 21, 40, 43, 48, 114, 115, 121 ಅಥವಾ 125ನೇ ಪ್ರಕರಣಗಳ ಮೇರೆಗಿನ ತನ್ನ ಯಾವುವೇ ಅಧಿಕಾರಗಳನ್ನು ಅಥವಾ 19ನೇ ಪ್ರಕರಣದ ಮೇರೆಗೆ ನಿಯಮಗಳನ್ನು ರಚಿಸುವ ಅಧಿಕಾರವನ್ನು ಅಥವಾ 210ನೇ ಪ್ರಕರಣದ ಮೇರೆಗೆ ತೊಂದರೆಗಳನ್ನು ನಿವಾರಿಸುವ ಅಧಿಕಾರವನ್ನು ವಹಿಸಿಕೊಡತಕ್ಕದ್ದಲ್ಲ.

**196. ಸದ್ಭಾವನೆಯಿಂದ ಕೈಕೊಂಡ ಕ್ರಮಕ್ಕೆ ರಕ್ಷಣೆ.–** (ಎ) ಈ ಅಧಿನಿಯಮದ ಅಥವಾ ಅದರ ಮೇರೆಗಿನ ನಿಯಮಗಳ ಮೇರೆಗೆ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರದ ಯಾರೇಅಧಿಕಾರಿಯ ವಿರುದ್ಧ;

(ಬಿ) ಈ ಅಧಿನಿಯಮದ ಅಥವಾ ಅದರ ಮೇರೆಗಿನ ನಿಯಮಗಳ ಮೇರೆಗೆ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯದಿಂದಾಗಿ ಉಂಟಾದ ಅಥವಾ ಉಂಟಾಗಬಹುದಾದ ಯಾವುದೇ ನಷ್ಟಕ್ಕಾಗಿ ಅಥವಾ ಅನುಭವಿಸಿದ ಅಥವಾ ಅನುಭವಿಸಬಹುದಾದ ಹಾನಿಗಾಗಿ ರಾಜ್ಯ ಸರ್ಕಾರದ ವಿರುದ್ಧ ಯಾವುದೇ ದಾವೆಯನ್ನು, ಪ್ರಾಸಿಕ್ಯೂಷನ್‌ನ್ನು ಅಥವಾ ವ್ಯವಹರಣೆಯನ್ನು ನಡೆಸತಕ್ಕದ್ದಲ್ಲ.

**197. ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರದ ಅಧಿಕಾರ.–** (1) ಈ ಅಧಿನಿಯಮದ ಉದ್ದೇಶಗಳನ್ನು ಮತ್ತು ಅದರ ಧ್ಯೇಯಗಳನ್ನು ಕಾರ್ಯರೂಪಕ್ಕೆ ತರುವುದರ ಸಲುವಾಗಿ ಮತ್ತು ಈ ಅಧಿನಿಯಮವನ್ನು ಜಾರಿಗೆ ತರುವುದಕ್ಕೆ ಸಂಬಂಧಿಸಿದ ವಿಷಯಗಳ ಬಗ್ಗೆ ಅಥವಾ ಇದರಲ್ಲಿ ಸುಸ್ಪಷ್ಟವಾಗಿ ಹೇಳಿರುವ ಸಂದರ್ಭಗಳ ಬಗ್ಗೆ ಎಲ್ಲ ಜನರ ಮಾರ್ಗದರ್ಶನಕ್ಕಾಗಿ ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗಿರದ ರಾಜ್ಯ ಸರ್ಕಾರವು, ಮೊದಲೇ ಪ್ರಕಟಿಸಿದ ನಂತರ, ಅಧಿಸೂಚನೆಯ ಮೂಲಕ ನಿಯಮಗಳನ್ನು ರಚಿಸಬಹುದು.

(2)ಅದರಲ್ಲೂ ಮುಖ್ಯವಾಗಿ ಮತ್ತು ಈ ಮುಂಚೆ ಹೇಳಿರುವ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಅಂಥ ನಿಯಮಗಳನ್ನು ,–

(ಎ)ರೆವಿನ್ಯೂ ಅಧಿಕಾರಿಗಳ ಮತ್ತು ಮೋಜಣಿ ಅಧಿಕಾರಿಗಳ ನೇಮಕವನ್ನು ಮತ್ತು ಅವರು ತಮ್ಮ ಅಧಿಕಾರಗಳನ್ನು ಚಲಾಯಿಸುವುದನ್ನು ನಿಯಂತ್ರಿಸುವ;

(ಬಿ) 16ನೇ ಪ್ರಕರಣದ ಮೇರೆಗೆ ಯಾವ ನಿಬಂಧನೆಗಳಿಗೆ ಮತ್ತು ಷರತ್ತುಗಳಿಗೆ ಒಳಪಟ್ಟುಗ್ರಾಮ ಲೆಕ್ಕಿಗನು ತನ್ನ ಹುದ್ದೆಯನ್ನು ಧಾರಣ ಮಾಡಬೇಕೋ ಆ ಷರತ್ತುಗಳನ್ನು ಮತ್ತು ನಿಬಂಧನೆಗಳನ್ನು ಗೊತ್ತುಪಡಿಸಿರುವ;

(ಸಿ) ಯಾವುದೇ ಜಿಲ್ಲೆಯಲ್ಲಿ ಅಥವಾ ಅದರ ಯಾವುದೇ ಭಾಗದಲ್ಲಿ 33ನೇ ಪ್ರಕರಣದ ಮೇರೆಗಿನ ಕ್ರಮಬದ್ಧವಾದ ವಿಚಾರಣೆಯಲ್ಲಿ ಸಾಕ್ಷ್ಯವನ್ನು ತೆಗೆದುಕೊಳ್ಳಬೇಕಾಗಿದ್ದರೆ, ಕನ್ನಡ ಅಥವಾ ಇಂಗ್ಲೀಷನ್ನು ಬಿಟ್ಟು ಬೇರೆ ಭಾಷೆಯನ್ನು ನಿರ್ದಿಷ್ಟಪಡಿಸಿರುವ;

(ಡಿ) 37ನೇ ಪ್ರಕರಣದ ಮೇರೆಗಿನ ವಿದ್ಯುಕ್ತ ವಿಚಾರಣೆ ಅಲ್ಲದ ಅಥವಾ ಕ್ಷಿಪ್ರ ವಿಚಾರಣೆ ಅಲ್ಲದ ಇತರ ರೀತಿಯ ವಿಚಾರಣೆಗಳನ್ನು ನಡೆಸುವ ವಿಧಾನವನ್ನು ನಿಯಮಿಸಿರುವ;

(ಇ) 42ನೇ ಪ್ರಕರಣದ ಮೇರೆಗೆ ನ್ಯಾಯಾಧೀಕರಣದ ಪೀಠಗಳು ತಮ್ಮ ಮುಖ್ಯ ಸ್ಥಳಗಳನ್ನು ಬಿಟ್ಟು, ಬೇರೆ ಸ್ಥಳಗಳಲ್ಲಿ ಉಪವೇಶನಗಳನ್ನು ನಡೆಸುವ ಬಗ್ಗೆ ಷರತ್ತುಗಳನ್ನು ಗೊತ್ತುಪಡಿಸಿರುವ;

(ಎಫ್)Vನೇ ಅಧ್ಯಾಯದ ಮೇರೆಗಿನ ಅಪೀಲುಗಳನ್ನು ಯಾವ ವಿಧಾನದಲ್ಲಿ, ಯಾವ ನಮೂನೆಯಲ್ಲಿ ಮತ್ತು ಯಾವ ರೀತಿಯಲ್ಲಿ ರೂಪಿಸಬೇಕೋ ಮತ್ತು ಸಲ್ಲಿಸಬೇಕೋ ಆ ವಿಧಾನವನ್ನು, ನಮೂನೆಯನ್ನು ಮತ್ತು ರೀತಿಯನ್ನು ನಿಯಮಿಸಿರುವ;

(ಜಿ)56ನೇ ಪ್ರಕರಣದ ಮೇರೆಗಿನ ಪುನರೀಕ್ಷಣೆಗಾಗಿ ಅರ್ಜಿಯನ್ನು ಯಾವ ಅವಧಿಯ ಒಳಗಾಗಿ ಸಲ್ಲಿಸಬೇಕೋಆ ಅವಧಿಯನ್ನು ನಿಯಮಿಸಿರುವ;

(ಹೆಚ್)ಭೂಕಂದಾಯದ ಸಂದಾಯಕ್ಕೆ ಗುರಿಯಾಗಿರುವ ಭೂಮಿಯನ್ನು ಯಾವ ಉದ್ದೇಶಕ್ಕಾಗಿ ಬಳಸಬಹುದು ಅಥವಾ ಬಳಸಬಾರದು ಎಂಬುದನ್ನು ನಿಯಮಿಸಿರುವ ಮತ್ತು ಬೇಸಾಯದ ಭೂಮಿಯನ್ನು ಬೇಸಾಯೇತರ ಉದ್ದೇಶಕ್ಕಾಗಿ ಬಳಸಲು ಅನುಮತಿ ಕೊಡುವುದನ್ನು ನಿಯಂತ್ರಿಸಿರುವ;

(ಐ) ರಾಜ್ಯ ಸರ್ಕಾರದಲ್ಲಿ ನಿಹಿತವಾದ ಭೂಮಿಯನ್ನು ಮತ್ತು ಇತರ ಸ್ವತ್ತನ್ನು 69ನೇ ಪ್ರಕರಣದ ಮೇರೆಗೆ ವಿಲೇ ಮಾಡುವುದನ್ನು ನಿಯಂತ್ರಿಸಿರುವ;

(ಜೆ) ಮುಟ್ಟುಗೋಲಾದ ಭೂಮಿಯ ವಿಲೇ ಮಾಡುವುದನ್ನು ನಿಯಂತ್ರಿಸಿರುವ;

(ಕೆ) ಅಧಿಭೋಗದಲ್ಲಿರದ ಮತ್ತು ವರ್ಗಾವಣೆಯಾಗಿರದ ಭೂಮಿಯನ್ನು ಯಾವ ನಿಬಂಧನೆಗಳಿಗೆ ಮತ್ತು ಷರತ್ತುಗಳಿಗೆ ಒಳಪಟ್ಟು ಮತ್ತು ಯಾವ ಅವಧಿಯವರೆಗೆ ಕೊಡಬಹುದೆಂಬುದನ್ನು ನಿಯಮಿಸಿರುವ;

[1][(ಎಲ್) ಬೇರೆಬೇರೆ ಪ್ರದೇಶಗಳಿಗೆ ಅಥವಾ ಬೇರೆಬೇರೆ ಉಲ್ಲಂಘನೆಗಳಿಗೆ ಅಥವಾ ಭೂಮಿಯ ಪರಿವರ್ತನೆಗೆ ಅಥವಾ ಯಾವ ಬೇರೆಬೇರೆ ಉದ್ದೇಶಗಳಿಗಾಗಿ ಭೂಮಿಯನ್ನು ಪರಿವರ್ತಿಸಲಾಗಿದೆಯೋ ಅಥವಾ ಬಳಕೆ ಮಾಡಲಾಗಿದೆಯೋ ಆ ಉದ್ದೇಶಗಳಿಗಾಗಿ 95 ಮತ್ತು 96ನೇ ಪ್ರಕರಣಗಳ ಮೇರೆಗೆ ವಿಧಿಸಬಹುದಾದಂಥ ಜುಲ್ಮಾನೆ ಮೊತ್ತ ಮತ್ತು ವಿನಾಯಿತಿ ಮೊತ್ತವನ್ನು ಗೊತ್ತುಪಡಿಸಿರುವ;][1];

1. 1985ರ ಅಧಿನಿಯಮ 10ರ ಮೂಲಕ 8.6.1984 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಎಂ) 109ನೇ ಪ್ರಕರಣದ ಮೇರೆಗೆ ಸರ್ವೆ ನಂಬರುಗಳನ್ನು ಪೋಡುಗಳಾಗಿ ವಿಭಾಗಿಸುವುದನ್ನು ನಿಯಂತ್ರಿಸಿರುವ ಮತ್ತು ಪೋಡುಗಳ ಕಂದಾಯವನ್ನು ನಿರ್ಧರಿಸಿರುವ;

(ಎನ್) ಮೋಜಣಿ ನಡೆಸುವುದನ್ನು ಮತ್ತು ಭೂಕಂದಾಯದ ವ್ಯವಸ್ಥೆಯನ್ನು ನಿಯಂತ್ರಿಸುವುದಕ್ಕಾಗಿ ಮತ್ತು ಕಂದಾಯ ವ್ಯವಸ್ಥೆಯನ್ನು ಜಾರಿಗೆ ತರುವುದಕ್ಕೆ ಮುಂಚಿತವಾಗಿ 122ನೇ ಪ್ರಕರಣದ ಮೇರೆಗೆ ಕೊಡಬೇಕಾದ ನೋಟೀಸನ್ನು ಗೊತ್ತುಪಡಿಸಿರುವ;

(ಓ) ಎಲ್ಲೆ ಗುರುತುಗಳನ್ನು ನಿರ್ಮಿಸುವುದನ್ನು, ಹಾಕಿಸುವುದನ್ನು, ಸುಸ್ಥಿತಿಯಲ್ಲಿಟ್ಟುಕೊಳ್ಳುವುದನ್ನು ಮತ್ತು ಅವುಗಳ ದುರಸ್ತಿಯನ್ನು ನಿಯಂತ್ರಿಸುವ;

(ಪಿ) ಈ ಅಧಿನಿಯಮದ ಉದ್ದೇಶಕ್ಕಾಗಿ ಇಡಬೇಕಾದ ದಾಖಲೆಗಳನ್ನು, ರಿಜಿಸ್ಟರುಗಳನ್ನು, ಲೆಕ್ಕ ಪತ್ರಗಳನ್ನು, ನಕಾಶೆಗಳನ್ನು ಮತ್ತು ನಕ್ಷೆಗಳನ್ನು ಮತ್ತು ಅವುಗಳನ್ನು ಸಿದ್ದಪಡಿತಕ್ಕ ಮತ್ತು ಸುಸ್ಥಿತಿಯಲ್ಲಿಟ್ಟುಕೊಳ್ಳತಕ್ಕ ರೀತಿ ಮತ್ತು ನಮೂನೆಗಳನ್ನು ಗೊತ್ತುಪಡಿಸಿರುವ;

(ಕ್ಯೂ) ಸರ್ವೆ ನಂಬರು ಮತ್ತು ಅದರ ಪೋಡುಗಳ ಭೂ ಕಂದಾಯದ ನಿರ್ಧರಣೆಯು ಯಾವ ರೀತಿಯಲ್ಲಿ ಅವುಗಳ ವರ್ಗೀಕರಣ ಮೌಲ್ಯದ ಮೇಲೆ ಆಧಾರಿತವಾಗಿರಬೇಕೆಂಬುದನ್ನು ನಿಯಮಿಸಿರುವ;

(ಆರ್) 118ನೇ ಪ್ರಕರಣದ ಮೇರೆಗೆ ವಿಚಾರಣೆಯು ಯಾವ ರೀತಿಯಲ್ಲಿ ನಡೆಯಬೇಕೆಂಬುದನ್ನು ನಿಯಮಿಸಿರುವ;

(ಎಸ್) ಮೋಜಣಿ ಅಧಿಕಾರಿಯು ಭೂಮಿಯ ಬೆಳೆಗಳ ಸರಾಸರಿ ಉತ್ಪತ್ತಿಯನ್ನು ಯಾವ ರೀತಿಯಲ್ಲಿ ಗೊತ್ತುಪಡಿಸಿಕೊಳ್ಳಬೇಕೆಂಬುದನ್ನು ನಿರ್ಧರಿಸುವುದಕ್ಕಾಗಿ;

(ಟಿ) 119ನೇ ಪ್ರಕರಣದ ಮೇರೆಗೆ ಮೋಜಣಿ ವರದಿಯನ್ನು ಯಾವ ರೀತಿಯಲ್ಲಿ ಪ್ರಕಟಿಸತಕ್ಕದ್ದೆಂಬುದನ್ನು ನಿಯಮಿಸಿರುವ;

(ಯು) 119ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ, ಕಂದಾಯ ವ್ಯವಸ್ಥೆಯ ಸೂಚನೆಗಳ ಬಗ್ಗೆ ಇರುವ ಆಕ್ಷೇಪಣೆಗಳನ್ನು ತಿಳಿಸಬೇಕೆಂದು ಕೋರುವ ನೋಟೀಸನ್ನು ಯಾವ ರೀತಿಯಲ್ಲಿ ಮತ್ತು ಯಾವ ಸ್ಥಳಗಳಲ್ಲಿ ಪ್ರಕಟಿಸಬೇಕೆಂಬುದನ್ನು ಗೊತ್ತುಪಡಿಸಿರುವ;

(ವಿ) ಹಕ್ಕು ದಾಖಲೆಗಳನ್ನು, ಹಕ್ಕು ಬದಲಾವಣೆಗಳ ರಿಜಿಸ್ಟರುಗಳನ್ನು ಮತ್ತು ತಕರಾರು ಮೊಕದ್ದಮೆಗಳ ರಿಜಿಸ್ಟರುಗಳನ್ನು ಸಿದ್ಧಪಡಿಸುವುದನ್ನು, ಇಡುವುದನ್ನು ಮತ್ತು ಪರಿಷ್ಕರಿಸುವುದನ್ನು ನಿಯಂತ್ರಿಸುವ ಬಗ್ಗೆ ಮತ್ತು ಅವುಗಳನ್ನು ಯಾವ ನಮೂನೆಯಲ್ಲಿ ತಯಾರಿಸಬೇಕೆಂಬುದನ್ನು ಮತ್ತು ಸದರಿ ದಾಖಲೆಗಳು ಮತ್ತು ರಿಜಿಸ್ಟರುಗಳನ್ನು ಯಾವ ಯಾವ ಅಧಿಕಾರಿಗಳು ಇಡಬೇಕೆಂಬುದನ್ನು, ಪರೀಕ್ಷಿಸಬೇಕೆಂಬುದನ್ನು ಮತ್ತು ಪರಿಷ್ಕರಿಸಬೇಕೆಂಬುದನ್ನು ಗೊತ್ತುಪಡಿಸಿರುವ;

[1][(ವಿಎ) ಪಟ್ಟಾ ಪುಸ್ತಕವನ್ನು ಸಿದ್ಧಪಡಿಸಲು, ನಿರ್ವಹಿಸಲು ಮತ್ತು ನೀಡುವುದಕ್ಕಾಗಿ ಪ್ರಕ್ರಿಯೆಯನ್ನು ಮತ್ತು ಅದರ ಸಿದ್ಧತೆಗಾಗಿ, ನೀಡಿಕೆಗಾಗಿ ಮತ್ತು ನಿರ್ವಹಣೆಗಾಗಿ ಹಾಗೂ ಅದಕ್ಕೆ ಸಂಬಂಧಿಸಿದ ವಿಷಯಗಳಿಗಾಗಿ ಏನಾದರೂ ಶುಲ್ಕವನ್ನು ಸಂದಾಯ ಮಾಡಬೇಕಿದ್ದರೆ ಅದನ್ನು ನಿಗದಿಪಡಿಸಿರುವ;][1]

1. 1982ರ ಅಧಿನಿಯಮ 23ರ ಮೂಲಕ 15.7.1982 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(ಡಬ್ಲ್ಯೂ) ಮೋಜಣಿ ಅಧಿಕಾರಿಯ ಅಧಿಕಾರಗಳನ್ನು ಗೊತ್ತುಪಡಿಸಿದ ಅಧಿಕಾರಿಗಳು ಮತ್ತು ರೆವಿನ್ಯೂ ಅಧಿಕಾರಿಗಳು ಚಲಾಯಿಸುವುದನ್ನು ಮತ್ತು 131ನೇ ಪ್ರಕರಣದ ಮೇರೆಗಿನ ಖರ್ಚು ಮತ್ತು ವೆಚ್ಚಗಳ ನಿರ್ಧರಣೆಯನ್ನು ನಿಯಂತ್ರಿಸುವ;

(ಎಕ್ಸ್) ಭೂಕಂದಾಯವನ್ನು ಯಾವ ಕಾಲಗಳಲ್ಲಿ ಮತ್ತು ಯಾವ ಸ್ಥಳಗಳಲ್ಲಿ ಮತ್ತು ಯಾವ ವ್ಯಕ್ತಿಗಳಿಗೆ ಸಂದಾಯ ಮಾಡತಕ್ಕದ್ದೆಂಬುದನ್ನು ಮತ್ತು ಅದನ್ನು ಎಷ್ಟು ಕಂತುಗಳಲ್ಲಿ ಸಂದಾಯ ಮಾಡಬಹುದೆಂಬುದನ್ನು ನಿಯಮಿಸಿರುವ;

(ವೈ) ತಗಾದೆ ನೋಟೀಸಿನ ನಮೂನೆಯನ್ನು ಮತ್ತು ಅದರಲ್ಲಿರಬೇಕಾದ ಒಳಾಂಶಗಳನ್ನು, ಅಂಥ ನೋಟೀಸಿನ ಬಗ್ಗೆ ವಸೂಲಾಗಬೇಕಾದ ಖರ್ಚುಗಳನ್ನು ಮತ್ತು ಅಂಥ ನೋಟೀಸುಗಳನ್ನು ಯಾವ ಅಧಿಕಾರಿಗಳು ಹೊರಡಿಸತಕ್ಕದೆಂಬುದನ್ನು ನಿಯಮಿಸಿರುವ;

(ಝಡ್) ಚರಸ್ವತ್ತಿನ ಜಪ್ತಿಯ ವಿಧಾನವನ್ನು ಹಾಗೂ ರೀತಿಯನ್ನು ಮತ್ತು ಅಂಥ ಜಪ್ತಿಯನ್ನು ಮಾಡಲು ಯಾವ ಅಧಿಕಾರಿಗಳು ಅಥವಾ ಅಧಿಕಾರಿಗಳ ವರ್ಗಗಳು ಸಕ್ಷಮ ಎಂಬುದನ್ನು ನಿಯಮಿಸಿರುವ;

(ಎಎ) ರೆವಿನ್ಯೂಅಧಿಕಾರಿಗಳು ಹೊರಡಿಸಬೇಕಾದ ಸಮನುಗಳ ಮತ್ತು ಇತರ ಪ್ರೊಸೆಸುಗಳ, ನೋಟೀಸುಗಳ, ಆದೇಶಗಳ ಮತ್ತು ಮಾಡಬೇಕಾದ ಉದ್ಘೋಷಣೆಗಳ ನಮೂನೆಯನ್ನು ಮತ್ತು ಅವುಗಳ ಜಾರಿಯ ರೀತಿಯನ್ನು ನಿಯಮಿಸಿರುವ;

(ಬಿಬಿ) ಸ್ವತ್ತಿನ ಜಪ್ತಿ ಮತ್ತು ಹರಾಜಿನ ವಿಧಾನವನ್ನು ಮತ್ತು 14ನೇ ಅಧ್ಯಾಯದ ಮೇರೆಗೆ ಹರಾಜಿನಲ್ಲಾದ ಸ್ಥಿರ ಸ್ವತ್ತಿನ ಮಾರಾಟದ ಸ್ಥಿರೀಕರಣ ಮತ್ತು ರದ್ದಿಯಾತಿಗಳನ್ನು ನಿಯಮಿಸಿರುವ;

(ಸಿಸಿ) ಸ್ವತ್ತಿನ ಜಪ್ತಿಯ ಮತ್ತು ಹರಾಜಿನ ನೋಟೀಸಿನ ಮತ್ತು ಉದ್ಘೋಷಣೆಗಳ ಪ್ರಕಟಣೆಯ ರೀತಿಯನ್ನು ನಿಯಂತ್ರಿಸಿರುವ;

(ಡಿಡಿ) ಸ್ವತ್ತಿನ ಜಪ್ತಿ ಮತ್ತು ಹರಾಜಿಗೆ ಸಂಬಂಧಿಸಿದ ಖರ್ಚು ಮತ್ತು ವೆಚ್ಚಗಳನ್ನು ನಿರ್ಧರಿಸುವ ರೀತಿಯನ್ನು ನಿಯಂತ್ರಿಸುವ;

(ಇಇ) ಭೂಕಂದಾಯದ ಬಾಕಿಗಾಗಿ ಅಥವಾ ಅಂಥ ಬಾಕಿಯಂತೆ ವಸೂಲಾಗಬೇಕಾದ ಇತರ ಸರ್ಕಾರಿ ಬಾಕಿಗಳಿಗಾಗಿ ಮಾಡಿದ ಸ್ವತ್ತಿನ ಹರಾಜಿನ ಬಗೆಗಿನ ಠೇವಣಿಯನ್ನು ಮತ್ತು ಖರೀದಿ ಹಣವನ್ನು ಸಂದಾಯ ಮಾಡುವ ರೀತಿಯನ್ನು ನಿಯಮಿಸಿರುವ;

(ಎಫ್‌ಎಫ್) 168ನೇ ಪ್ರಕರಣದ ಮೇರೆಗೆ ಭೂಕಂದಾಯದ ಸಂದಾಯ ಆಗುವುದನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ಯಾವ ಸಂದರ್ಭ ಸನ್ನಿವೇಶಗಳಲ್ಲಿ ಮುಂಜಾಗ್ರತೆ ಕ್ರಮಗಳನ್ನು ತೆಗೆದುಕೊಳ್ಳಬೇಕೋ ಆ ಸಂದರ್ಭ- ಸನ್ನಿವೇಶಗಳನ್ನು ನಿರೂಪಿಸಿರುವ;

(ಜಿಜಿ) ರೆವಿನ್ಯೂ ಅಧಿಕಾರಿಯಿಂದ ಮತ್ತೊಬ್ಬನಿಗೆ ಮೊಕದ್ದಮೆಗಳನ್ನು ವರ್ಗಾಯಿಸುವ ವಿಧಾನವನ್ನು ಗೊತ್ತುಪಡಿಸಿರುವ;

(ಎಚ್‌ಎಚ್) ಪ್ರಮಾಣಿತ ಪ್ರತಿಗಳನ್ನು ಕೊಡುವುದಕ್ಕಾಗಿ ಮತ್ತು ದಾಖಲೆಗಳ ಹಾಗೂ ಇತರ ರಿಜಿಸ್ಟರುಗಳ ಪರಿಶೀಲನೆ ಮತ್ತು ಅವುಗಳ ಪ್ರಮಾಣಿತ ಪ್ರತಿಗಳನ್ನು ಕೊಡುವುದರ ಬಗ್ಗೆ ಫೀಜನ್ನು ಗೊತ್ತುಪಡಿಸಿರುವ;

(ಐಐ) ಅಪೀಲು ಮೆಮೋರಾಂಡಮ್‌ಗೆ ಅಥವಾ ಪುನರೀಕ್ಷಣೆಯ ಅರ್ಜಿಗಳಿಗೆ ಏನಾದರೂ ಫೀಜನ್ನು ವಿಧಿಸಬಹುದಾದರೆ, ಅದರ ಮೊಬಲಗನ್ನು ಮತ್ತು ಅದನ್ನು ವಿಧಿಸಬೇಕಾದ ರೀತಿಯನ್ನು ಗೊತ್ತುಪಡಿಸಿರುವ;

(ಜೆಜೆ) ಈ ಅಧಿನಿಯಮವನ್ನು ಪರಿಣಾಮಕಾರಿಯಾಗಿ ಜಾರಿ ಮಾಡುವ ಬಗ್ಗೆ ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದ ಇತರ ಯಾವುದೇ ವಿಷಯಕ್ಕಾಗಿ

– ಅಂಥ ನಿಯಮಗಳನ್ನು ರಚಿಸಬಹುದು.

(3) ರಾಜ್ಯ ಸರ್ಕಾರವು, (1)ನೇ ಅಥವಾ (2)ನೇ ಉಪಪ್ರಕರಣದ ಮೇರೆಗೆ ಯಾವುವೇ ನಿಯಮಗಳನ್ನು ರಚಿಸುವಾಗ, ಯಾವುದೇ ನಿರ್ದಿಷ್ಟ ನಿಯಮವನ್ನು ಉಲ್ಲಂಘಿಸುವ ಯಾರೇ ವ್ಯಕ್ತಿಯು, ಅಪರಾಧ ನಿರ್ಣಯವಾದ ಬಳಿಕ, ಅಂಥ ಉಲ್ಲಂಘನೆಯಿಂದ ಉದ್ಭವಿಸಬಹುದಾದ ಇತರ ಪರಿಣಾಮಗಳ ಜೊತೆಗೆ, ಒಂದು ತಿಂಗಳಿಗೆ ಮೀರದ ಕಾರಾಗೃಹವಾಸದಿಂದ ಅಥವಾ ಐದು ನೂರು ರೂಪಾಯಿಗಳಿಗೆ ಮೀರದ ಜುಲ್ಮಾನೆಯಿಂದ ಅಥವಾ ಎರಡರಿಂದಲೂ ದಂಡಿತನಾಗತಕ್ಕದ್ದೆಂದು ನಿಯಮಿಸಬಹುದು.

(4) ಈ ಅಧಿನಿಯಮದ ಮೇರೆಗಿನ ನಿಯಮವನ್ನು ಪೂರ್ವಾನ್ವಯವಾಗುವಂತೆ ರಚಿಸಬಹುದು ಮತ್ತು ಅಂಥ ನಿಯಮವನ್ನು ರಚಿಸಿದಾಗ, ಅದನ್ನು ರಚಿಸಿದ್ದಕ್ಕೆ ಕಾರಣಗಳನ್ನು ರಾಜ್ಯ ವಿಧಾನ ಮಂಡಲದ ಎರಡೂ ಸದನಗಳ ಮುಂದೆ ಇರಿಸಲಾಗುವ ನಿರೂಪಣಾ ಪತ್ರದಲ್ಲಿ ನಿರ್ದಿಷ್ಟಪಡಿಸತಕ್ಕದ್ದು. 196ನೇ ಪ್ರಕರಣದ ಮೇರೆಗೆ ಮಾಡಲಾಗುವ ಮಾರ್ಪಾಟಿಗೊಳಪಟ್ಟು, ಈ ಅಧಿನಿಯಮದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವು ಈ ಅಧಿನಿಯಮದಲ್ಲಿ ಅಧಿನಿಯಮಿತವಾಗಿದೆಯೆಂಬಂತೆಯೇ ಪರಿಣಾಮಕಾಗಿಯಾಗತಕ್ಕದ್ದು.

**198. ನಿಯಮಗಳನ್ನು, ವಿನಿಯಮನಗಳನ್ನು ಮತ್ತು ಅಧಿಸೂಚನೆಗಳನ್ನು ರಾಜ್ಯ ವಿಧಾನ ಮಂಡಲದ ಮುಂದೆ ಇಡುವುದು.–** ಈ ಅಧಿನಿಯಮದ ಮೇರೆಗೆ ರಚಿಸಲಾದ ಪ್ರತಿಯೊಂದು ನಿಯಮವನ್ನು, 48ನೇ ಪ್ರಕರಣದ ಮೇರೆಗೆ ರಚಿಸಿದ ಪ್ರತಿಯೊಂದು ವಿನಿಯಮವನ್ನು ಮತ್ತು 201ನೇ ಪ್ರಕರಣದ ಮೇರೆಗೆ ಹೊರಡಿಸಲಾದ ಪ್ರತಿಯೊಂದು ಅಧಿಸೂಚನೆಯನ್ನು ಅದನ್ನು ರಚಿಸಿದ ಅಥವಾ ಹೊರಡಿಸಿದ ತರುವಾಯ ಸಾಧ್ಯವಾದಷ್ಟು ಬೇಗನೆ, ರಾಜ್ಯ ವಿಧಾನ ಮಂಡಲದ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ, ಒಂದು ಅಥವಾ ಒಂದಾದ ಮೇಲೊಂದರಂತೆ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಇರಿಸತಕ್ಕದ್ದು ಮತ್ತು ಅದನ್ನು ಹಾಗೆ ಇರಿಸಿದ ಅಧಿವೇಶನವು ಅಥವಾ ಅದಕ್ಕೆ ನಿಕಟ ತರುವಾಯದ ಅಧಿವೇಶನಗಳು ಮುಗಿಯುವುದಕ್ಕೂ ಮೊದಲು, ಆ ನಿಯಮದಲ್ಲಿ, ವಿನಿಯಮದಲ್ಲಿ ಅಥವಾ ಅಧಿಸೂಚನೆಯಲ್ಲಿ ಯಾವುದೇ ಮಾರ್ಪಾಟು ಮಾಡಬೇಕೆಂದು ಎರಡು ಸದನಗಳು ಒಪ್ಪಿದರೆ, ಅಥವಾ ಆ ನಿಯಮವನ್ನು ಅಥವಾ ವಿನಿಯಮವನ್ನು ಅಥವಾ ಅಧಿಸೂಚನೆಯನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ನಿಯಮವು, ವಿನಿಯಮವು ಅಥವಾ ಅಧಿಸೂಚನೆಯು ಆ ತರುವಾಯ, ಸಂದರ್ಭಾನುಸಾರ, ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ; ಆದರೆ, ಅಂಥ ಯಾವುದೇ ಮಾರ್ಪಾಡು ಅಥವಾ ರದ್ದಿಯಾತಿಯು ಆ ನಿಯಮದ, ವಿನಿಯಮದ ಅಥವಾ ಅಧಿಸೂಚನೆಯ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಕಾನೂನು ಮಾನ್ಯತೆಗೆ ಬಾಧಕವಾಗದಂತೆ ಇರತಕ್ಕದ್ದು.

**199. ತತ್ಕಾಲೀನ ಉಪಬಂಧಗಳು.–**(1) ಈ ಅಧಿನಿಯಮದಲ್ಲಿ ಅನ್ಯಥಾ ವ್ಯಕ್ತವಾಗಿ ಉಪ ಬಂಧಿಸಿರುವುದನ್ನುಳಿದು, ಈ ಅಧಿನಿಯಮವು ಜಾರಿಯಲ್ಲಿ ಬರುವುದಕ್ಕೆ ನಿಕಟಪೂರ್ವದಲ್ಲಿ ರಾಜ್ಯದೊಳಗಿರುವ ಯಾವುದೇ ಪ್ರದೇಶದಲ್ಲಿ ಯಾವುದೇ ನ್ಯಾಯಾಧಿಕರಣದಲ್ಲಿ ಅಥವಾ ರೆವಿನ್ಯೂ ನ್ಯಾಯಾಲಯದಲ್ಲಿ ಹೂಡಲಾದ ಅಥವಾ ಇತ್ಯರ್ಥದಲ್ಲಿರುವ ಎಲ್ಲ ಮೊಕದ್ದಮೆಗಳನ್ನು, ಅದು ಅಪೀಲು ಆಗಿರಲಿ, ಪುನರೀಕ್ಷಣೆ ಅಥವಾ ಬೇರೆ ರೀತಿಯದಾಗಿರಲಿ, ಈ ಅಧಿನಿಯಮವು ಅನುಮೋದಿತವಾಗಿರದಿದ್ದ ಸಂದರ್ಭದಲ್ಲಿ ಅವುಗಳಿಗೆ ಯಾವ ಕಾನೂನು ಅನ್ವಯವಾಗುತ್ತಿತ್ತೋ ಅಂಥ ಸಮುಚಿತ ಕಾನೂನಿನ ಉಪಬಂಧಗಳಿಗನುಸಾರವಾಗಿ ತೀರ್ಮಾನಿಸತಕ್ಕದ್ದು.

(2) ಈ ಅಧಿನಿಯಮದ ಮೇರೆಗೆ ರೆವಿನ್ಯೂ ನ್ಯಾಯಾಲಯವು ಮಾತ್ರ ವಿಚಾರಣೆ ನಡೆಸತಕ್ಕ, ಆದರೆ ಈ ಅಧಿನಿಯಮವು ಜಾರಿಗೆ ಬರುವುದಕ್ಕೆ ನಿಕಟಪೂರ್ವದಲ್ಲಿ ಸಿವಿಲ್ ನ್ಯಾಯಾಲಯದಲ್ಲಿ ಹೂಡಲಾದ ಅಥವಾ ಇತ್ಯರ್ಥದಲ್ಲಿರುವ ಯಾವುದೇ ಮೊಕದ್ದಮೆಯನ್ನು ಈ ಅಧಿನಿಯಮವು ಕಾರ್ಯಗತವಾಗುವುದಕ್ಕೆ ಮೊದಲು ಜಾರಿಯಲ್ಲಿದ್ದ ಕಾನೂನಿನಗನುಸಾರವಾಗಿ ಅಂಥ ಸಿವಿಲ್ ನ್ಯಾಯಾಲಯವು ವಿಲೆ ಮಾಡತಕ್ಕದ್ದು.

**200. ಕಂಪೆನಿಗಳಿಂದ ಅಪರಾಧಗಳು.–** (1) ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಕಂಪೆನಿಯು ಮಾಡಿದ್ದರೆ, ಆ ಅಪರಾಧವನ್ನು ಮಾಡಿದ ಕಾಲದಲ್ಲಿ ಕಂಪೆನಿಯ ಪ್ರಭಾರದಲ್ಲಿದ್ದ ಮತ್ತು ಕಂಪೆನಿಯ ವ್ಯವಹಾರದ ನಿರ್ವಹಣೆಗೆ ಜವಾಬ್ದಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯನ್ನು ಮತ್ತು ಆ ಕಂಪೆನಿಯನ್ನೂ ಆ ಅಪರಾಧದ ತಪ್ಪಿತಸ್ಥ ಎಂದು ಭಾವಿಸತಕ್ಕದ್ದು; ಮತ್ತು ತದನುಸಾರವಾಗಿ ಅವರ ವಿರುದ್ಧ ವ್ಯವಹರಣೆ ನಡೆಸತಕ್ಕದ್ದು ಹಾಗೂ ಅವರು ದಂಡಿತರಾಗತಕ್ಕದ್ದು:

ಪರಂತು, ತನಗೆ ತಿಳುವಳಿಕೆ ಇಲ್ಲದೆ ಅಪರಾಧವು ನಡೆಯಿತೆಂದು ಅಥವಾ ಅಂಥ ಅಪರಾಧ ನಡೆಯುವುದನ್ನು ತಡೆಗಟ್ಟಲು ತಾನು ಎಲ್ಲ ಸೂಕ್ತ ಜಾಗರೂಕತೆಯನ್ನು ವಹಿಸಿದ್ದೆನೆಂದು ಯಾರೇ ವ್ಯಕ್ತಿಯು ರುಜುವಾತು ಪಡಿಸಿದರೆ, ಈ ಉಪಪ್ರಕರಣದಲ್ಲಿರುವುದು ಯಾವುದೂ ಈ ಅಧಿನಿಯಮದಲ್ಲಿ ಉಪಬಂಧಿಸಿರುವ ಯಾವುದೇ ದಂಡನೆಗೆ ಅವನನ್ನು ಗುರಿಪಡಿಸತಕ್ಕದ್ದಲ್ಲ.

(2) ಕಂಪೆನಿಯು ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಮಾಡಿದ್ದರೆ ಮತ್ತು ಆ ಅಪರಾಧವು ಕಂಪೆನಿಯ ಯಾರೇ ನಿರ್ದೇಶಕನ, ವ್ಯವಸ್ಥಾಪಕನ, ಕಾರ್ಯದರ್ಶಿಯ ಅಥವಾ ಇತರ ಅಧಿಕಾರಿಯ ಸಮ್ಮತಿಯಿಂದ ಅಥವಾ ಪರೋಕ್ಷ ಸಮ್ಮತಿಯಿಂದ ನಡೆಯಿತೆಂಬುದಾಗಿ ಅಥವಾ ಆ ಅಪರಾಧವು, ಆ ನಿರ್ದೇಶಕನ, ವ್ಯವಸ್ಥಾಪಕನ, ಕಾರ್ಯದರ್ಶಿಯ ಅಥವಾ ಇತರ ಅಧಿಕಾರಿಯ ಯಾವುದೇ ನಿರ್ಲಕ್ಷ್ಯದಿಂದಾಗಿ ನಡೆಯಿತೆಂದು ರುಜುವಾತಾದರೆ, (1)ನೇ ಉಪಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಅಂಥ ನಿರ್ದೇಶಕನನ್ನು, ವ್ಯವಸ್ಥಾಪಕನನ್ನು, ಕಾರ್ಯದರ್ಶಿಯನ್ನು ಅಥವಾ ಆ ಇತರ ಅಧಿಕಾರಿಯನ್ನೂ ಸಹ ಆ ಅಪರಾಧದ ತಪ್ಪಿತಸ್ಥ ಎಂಬುದಾಗಿ ಭಾವಿಸತಕ್ಕದ್ದು ಮತ್ತು ಅವನು ತದನುಸಾರವಾಗಿ ವ್ಯವಹರಣೆಗೆ ಗುರಿಯಾಗತಕ್ಕದ್ದು ಮತ್ತು ದಂಡಿತನಾಗತಕ್ಕದ್ದು.

**ವಿವರಣೆ:**– ಈ ಪ್ರಕರಣದ ಉದ್ದೇಶಗಳಿಗಾಗಿ,–

(ಎ) 'ಕಂಪೆನಿ' ಎಂದರೆ, ನಿಗಮಿತ ನಿಕಾಯ ಮತ್ತು ಇದರಲ್ಲಿ ಫರ್ಮು ಅಥವಾ ವ್ಯಕ್ತಿಗಳ ಇತರ ಸಂಘವೂ ಸೇರುತ್ತದೆ:

(ಬಿ) ಫರ್ಮಿಗೆ ಸಂಬಂಧಿಸಿದಂತೆ'ನಿರ್ದೇಶಕ' ಎಂದರೆ, ಫರ್ಮಿನ ಪಾಲುಗಾರ.

**201. ಅಡಚಣೆಗಳನ್ನು ನಿವಾರಿಸುವ ಅಧಿಕಾರ.**– (1) ರಾಜ್ಯದ ಯಾವುದೇ ಪ್ರದೇಶದಲ್ಲಿ ಈ ಕಾನೂನು ಜಾರಿಗೆ ಬರುವುದಕ್ಕೆ ನಿಕಟಪೂರ್ವದಲ್ಲಿ ಜಾರಿಯಲ್ಲಿದ್ದ ಯಾವುದೇ ಅಧಿನಿಯಮದ ಅಥವಾ ಕಾನೂನಿನ ಉಪಬಂಧಗಳ ಬದಲಿಗೆ ಈ ಅಧಿನಿಯಮದ ಉಪಬಂಧಗಳಿಗೆ ಬದಲಾವಣೆ ಹೊಂದುವುದರ ಪರಿಣಾಮವಾಗಿ, ರಾಜ್ಯದ ಅಂಥ ಯಾವುದೇ ಪ್ರದೇಶದಲ್ಲಿ ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ಯಾವುದಾದರೂ ಅಡಚಣೆಯು ಉದ್ಭವಿಸಿದರೆ, ರಾಜ್ಯ ಸರ್ಕಾರವು ಅಂಥ ಅಡಚಣೆಯನ್ನು ನಿವಾರಣೆ ಮಾಡುವುದರ ಸಲುವಾಗಿ ಅವಶ್ಯಕವೆಂದು ಅಥವಾ ಯುಕ್ತವೆಂದು ಕಂಡು ಬರುವಂಥ ಉಪಬಂಧಗಳನ್ನು ಅಧಿಸೂಚನೆಯ ಮೂಲಕ ರಚಿಸಬಹುದು.

(2) ರಾಜ್ಯದ ಯಾವುದೇ ಪ್ರದೇಶದಲ್ಲಿ ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯರೂಪಕ್ಕೆ ತರುವಾಗ ಆ ಯಾವುದೇ ಪ್ರದೇಶದಲ್ಲಿ ಈ ಅಧಿನಿಯಮವು ಜಾರಿಗೆ ಬರುವುದಕ್ಕೆ ನಿಕಟಪೂರ್ವದಲ್ಲಿ, ಜಾರಿಯಲ್ಲಿದ್ದ ಯಾವುದೇ ಅಧಿನಿಯಮದ ಅಥವಾ ಕಾನೂನಿನ ಉಪಬಂಧಗಳಿಗೆ ಬದಲಾವಣೆ ಹೊಂದುವುದಕ್ಕೆ ಸಂಬಂಧಪಡದ ಯಾವುದಾದರೂ ತೊಂದರೆಯು ಉದ್ಭವಿಸಿದರೆ, ರಾಜ್ಯ ಸರ್ಕಾರವು ಆ ತೊಂದರೆಯನ್ನು ನಿವಾರಣೆ ಮಾಡುವುದಕ್ಕಾಗಿ ಅವಶ್ಯಕವೆಂದು ಅಥವಾ ಯುಕ್ತವೆಂದು ಕಂಡುಬರುವಂಥ ಈ ಅಧಿನಿಯಮದ ಉದ್ದೇಶಗಳಿಗೆ ಅಸಂಗತವಾಗಿರದ ಉಪಬಂಧಗಳನ್ನು ಅಧಿಸೂಚನೆಯ ಮೂಲಕ ರಚಿಸಬಹುದು.

**202. ನಿರಸನ ಮತ್ತು ಉಳಿಸುವಿಕೆಗಳು.**– (1) ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿರುವ ಅಧಿನಿಯಮಗಳು, ಮತ್ತು ಈ ಅಧಿನಿಯಮಕ್ಕೆ ಸಂವಾದಿಯಾಗಿರುವ ಇತರ ಯಾವುದೇ ಕಾನೂನು ಈ ಮೂಲಕ ನಿರಸಿತವಾಗಿವೆ:

ಪರಂತು, ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, ಅಂಥ ನಿರಸನವು,–

(ಎ) ಅಂಥ ಅಧಿನಿಯಮದ ಅಥವಾ ಕಾನೂನಿನ ಹಿಂದಿನಪ್ರವರ್ತನೆ ಅಥವಾ ಅವುಗಳ ಮೇರೆಗೆ ಕ್ರಮಬದ್ಧವಾಗಿ ಮಾಡಿದ ಅಥವಾ ಮಾಡಲೆಡೆಗೊಟ್ಟ ಯಾವುದೇ ಕಾರ್ಯ;

(ಬಿ) ಅಂಥ ಅಧಿನಿಯಮದ ಅಥವಾ ಕಾನೂನಿನ ಮೇರೆಗೆ ಆರ್ಜಿಸಿದ, ಒದಗಿಬಂದ ಅಥವಾ ಹೊರಿಸಿದ ಯಾವುದೇ ಹಕ್ಕು, ವಿಶೇಷ ಹಕ್ಕು, ಆಭಾರ ಅಥವಾ ಹೊಣೆ;

(ಸಿ) ಅಂಥ ಅಧಿನಿಯಮಕ್ಕೆ ಅಥವಾ ಕಾನೂನಿನ ವಿರುದ್ಧವಾಗಿ ಮಾಡಿದ ಯಾವುದೇ ಅಪರಾಧದ ಸಂಬಂಧದಲ್ಲಿ ಗುರಿಯಾದ ಯಾವುದೇ ದಂಡ, ಮುಟ್ಟುಗೋಲು ಅಥವಾ ದಂಡನೆ;

(ಡಿ) ಮೇಲೆ ಹೇಳಿದಂಥ ಹಕ್ಕು, ವಿಶೇಷ ಹಕ್ಕು, ಆಭಾರ, ಹೊಣೆ, ದಂಡ, ಮುಟ್ಟುಗೋಲು ಅಥವಾ ದಂಡನೆಗೆ ಸಂಬಂಧಿಸಿರುವ ಯಾವುದೇ ತನಿಖೆ, ಕಾನೂನು ವ್ಯವಹರಣೆ ಅಥವಾ ಪರಿಹಾರೋಪಾಯ–ಇವುಗಳ ಮೇಲೆ ಯಾವ ಪರಿಣಾಮವನ್ನು ಉಂಟು ಮಾಡತಕ್ಕದ್ದಲ್ಲ ಮತ್ತು ಅಂಥ ತನಿಖೆ, ಕಾನೂನು ವ್ಯವಹರಣೆ ಅಥವಾ ಪರಿಹಾರ ಕ್ರಮ

ಇವುಗಳನ್ನು ಹೂಡಬಹುದು ಅಥವಾ ಜಾರಿಗೆ ತರಬಹುದು ಮತ್ತು ಅಂಥ ಅಧಿನಿಯಮವು ಅಥವಾ ಕಾನೂನು ನಿರಸಿತವಾಗಿರದಿದ್ದರೆ ಹೇಗೆ ಅಂಥ ಯಾವುದೇ ದಂಡ, ಮುಟ್ಟುಗೋಲು ಅಥವಾ ದಂಡನೆಯನ್ನು ವಿಧಿಸಬಹುದೋ ಹಾಗೆ ವಿಧಿಸಬಹುದು.

(2) ಉಪಪ್ರಕರಣ (1)ರ ಪರಂತುಕದಲ್ಲಿ ಏನೇ ಇದ್ದರೂ, ಆದರೆ 201ನೇ ಉಪಪ್ರಕಣದ ಮೇರೆಗೆ ಹೊರಡಿಸಿದ ಯಾವುದೇ ಅಧಿಸೂಚನೆಗೆ ಒಳಪಟ್ಟು, (1)ನೇ ಉಪಪ್ರಕರಣದ ಮೇರೆಗೆ ನಿರಸಿತವಾದ ಯಾವುದೇ ಅಧಿನಿಯಮದ ಅಥವಾ ಕಾನೂನಿನ ಮೇರೆಗೆ ಮಾಡಿದ ಯಾವುದೇ ಕಾರ್ಯವನ್ನು ಅಥವಾ ಕೈಗೊಂಡ ಕ್ರಮಗಳನ್ನು (ಮಾಡಿದ ಯಾವುದೇ ನೇಮಕ ಅಥವಾ ಪ್ರತ್ಯಾಯೋಜನೆ, ನಿರ್ಧರಿಸಿದ, ಗೊತ್ತುಪಡಿಸಿದ ಅಥವಾ ವಿಧಿಸಿದ, ಭೂಕಂದಾಯ, ಬೇಸಾಯೇತರ ಕಂದಾಯ, ಫೀಜು ಅಥವಾ ಉಪಕರ, ಹೊರಡಿಸಿದ ಅಧಿಸೂಚನೆ, ಆದೇಶ, ಲಿಖಿತ ಅಥವಾ ನಿರ್ದೇಶನ, ರಚಿಸಿದ ನಿಯಮ ಅಥವಾ ವಿನಿಯಮ, ಪಡೆದುಕೊಂಡ ಪ್ರಮಾಣಪತ್ರ ಅಥವಾ ಕೊಡಲಾದ ಅನುಮತಿ ಸೇರಿ) ಈ ಅಧಿನಿಯಮಕ್ಕೆ ಸಂವಾದಿಯಾದ ಉಪಬಂಧಗಳ ಮೇರೆಗೆ ಮಾಡಿದವುಗಳೆಂದು ಅಥವಾ ಕೈಕೊಳ್ಳಲಾದವುಗಳೆಂದು ಭಾವಿಸತಕ್ಕದ್ದು; ಮತ್ತು ಈ ಅಧಿನಿಯಮದ ಮೇರೆಗೆ ಮಾಡಿದ ಯಾವುದೇ ಕಾರ್ಯದಿಂದ ಅಥವಾ ಕೈಕೊಂಡ ಯಾವುದೇ ಕ್ರಮದಿಂದ ಅದು ಮತ್ತು ತನಕ ಅವು ಅದೇ ಪ್ರಕಾರವಾಗಿ ಜಾರಿಯಲ್ಲಿ ಮುಂದುವರಿಯತಕ್ಕದ್ದು.

[1][(2ಎ) ಉಪಪ್ರಕರಣ (1)ರಲ್ಲಿ ಅಥವಾ (2)ನೇ ಉಪಪ್ರಕರಣದಲ್ಲಿ ಅಥವಾ (1)ನೇ ಉಪಪ್ರಕರಣದಿಂದ ರದ್ದಾಗುವವರೆಗೆ ನಿರಸಿತವಾದ ಯಾವುದೇ ಅಧಿನಿಯಮದಲ್ಲಿ ಅಥವಾ ಕಾನೂನಿನಲ್ಲಿಅಥವಾ (1)ನೇ ಉಪಪ್ರಕರಣದ ಮೇರೆಗೆ ನಿರಸಿತವಾದ ಯಾವುದೇ ಅಧಿನಿಯಮದ ಅಥವಾ ಕಾನೂನಿನ ಮೇರೆಗೆ ಡಿವಿಜನಲ್ ಕಮಿಷನರಿಗೆಅಧೀನನಾಗಿರುವ ಯಾರೇ ಅಧಿಕಾರಿಯು, ಮಾಡಿದ ಯಾವುದೇ ಆದೇಶಕ್ಕೆ ಅಥವಾ ವಿಲೇ ಮಾಡಿದ ಯಾವುದೇ ವ್ಯವಹರಣೆಗಳಿಗೆ ಸಂಬಂಧಪಟ್ಟಂತೆ ಯಾವುದೇ ಇತರ ಕಾನೂನಿನಲ್ಲಿ ಅಥವಾ ಅಂಥ ಅಧಿನಿಯಮದ ಅಥವಾ ಕಾನೂನಿನ ಮೇರೆಗೆ ರಚಿಸಿದ ಯಾವುದೇ ನಿಯಮದಲ್ಲಿ ಅಥವಾ ಆದೇಶದಲ್ಲಿ ಅಥವಾ ಏನೇ ಒಳಗೊಂಡಿದ್ದರೂ, ಡಿವಿಜನಲ್ ಕಮಿಷನರಿಗೆಅಪೀಲು ಮಾಡಲು ಅವಕಾಶವಿರತಕ್ಕದ್ದಲ್ಲ. ಆದರೆ ಅಪೀಲನ್ನು ನ್ಯಾಯಾಧಿಕರಣಕ್ಕೆ ಅಂಥ ಅಧಿನಿಯಮದ, ಕಾನೂನಿನ, ನಿಯಮದ ಅಥವಾ ಆದೇಶದ ಮೇರೆಗೆ ನ್ಯಾಯಾಧಿಕರಣವೇ ಅಪೀಲು ಪ್ರಾಧಿಕಾರ ಎಂಬಂತೆ ಅಪೀಲು ಮಾಡಲು ಅವಕಾಶವಿರತಕ್ಕದ್ದು ಮತ್ತು ಅಂಥ ಅಪೀಲನ್ನು ಆ ನ್ಯಾಯಾಧಿಕರಣವು ಅಂಥ ಅಧಿನಿಯಮದ, ಕಾನೂನಿನ, ನಿಯಮದ ಅಥವಾ ಆದೇಶದ ಉಪಬಂಧಗಳಿಗನುಸಾರವಾಗಿ ವಿಲೆ ಮಾಡತಕ್ಕದ್ದು.][1]

1. 1966ರ ಅಧಿನಿಯಮ 2ರ ಮೂಲಕ 01.03.1966 ರಿಂದ ಜಾರಿಗೆ ಬರುವಂತೆ ಅಧಿಸೂಚನೆಯ ಮೂಲಕ ಸೇರಿಸಲಾಗಿದೆ. ಅಧಿಸೂಚನೆಯ ಪಾಠವು ಈ ಅಧಿನಿಯಮದ ಕೊನೆಯಲ್ಲಿದೆ.

(3) ಯಾವುದೇ ಅಧಿನಿಯಮದಲ್ಲಿ ಅಥವಾ ಕಾನೂನಿನಲ್ಲಿ ಅಥವಾ ಲಿಖಿತದಲ್ಲಿ (1)ನೇ ಉಪಪ್ರಕರಣದ ಮೇರೆಗೆ ನಿರಸಿತವಾದ ಯಾವುದೇ ಅಧಿನಿಯಮದ ಅಥವಾ ಕಾನೂನಿನ ಯಾವುದೇ ಉಪಬಂಧದ ಬಗ್ಗೆ ಇರುವ ಉಲ್ಲೇಖವನ್ನು, ಬೇರೆ ಉದ್ದೇಶವು ಕಂಡು ಬರದಿದ್ದರೆ, ಈ ಅಧಿನಿಯಮಕ್ಕೆ ಸಂವಾದಿಯಾದ ಉಪಬಂಧಗಳಿಗೆ ಮಾಡಿದ ಉಲ್ಲೇಖವೆಂದು ಅರ್ಥ ಮಾಡತಕ್ಕದ್ದು.

(4) ಈ ಅಧಿನಿಯಮವು ಪ್ರಾರಂಭವಾಗುವ ಕಾಲದಲ್ಲಿ, ರಾಜ್ಯದ ಯಾವುದೇ ಪ್ರದೇಶದಲ್ಲಿ ಅಸ್ತಿತ್ವದಲ್ಲಿರುವ ಮತ್ತು ಕಾನೂನಿನಷ್ಟೇ ಬಲವನ್ನು ಹೊಂದಿರುವ ಯಾವುದೇ ರೂಢಿ, ಆಚರಣೆ, ಅಥವಾ ವ್ಯವಸ್ಥೆಯು ಅಧಿನಿಯಮದ ಯಾವುವೇ ಉಪಬಂಧಗಳಿಗೆ ತದ್ವಿರುದ್ಧವಾಗಿದ್ದರೆ, ಅಥವಾ ಅಸಂಗತವಾಗಿದ್ದರೆ, ಹಾಗೆ ತದ್ವಿರುದ್ಧವಾಗಿರುವಷ್ಟರ ಮಟ್ಟಿಗೆ ಅಥವಾ ಅಸಂಗತವಾಗಿರುವಷ್ಟರ ಮಟ್ಟಿಗೆ ಅವು ಜಾರಿಯಲ್ಲಿರುವುದು ನಿಂತು ಹೋಗತಕ್ಕದ್ದು.

**ಅನುಸೂಚಿ**

**(202ನೇ ಪ್ರಕರಣವನ್ನು ನೋಡಿ)**

| ಕ್ರ. ಸಂ. | ವರ್ಷ | ಅಧಿನಿಯಮದ ಕ್ರಮ ಸಂಖ್ಯೆ | ಸಂಕ್ಷಿಪ್ತ ಹೆಸರು |
|---|---|---|---|
| 1 | 1831 | 1 | ಭೂ ದಾವೆಗಳು (ಮುಂಬೈ ವಿನಿಯಮ, 1831ರ 1) |
| 2 | 1876 | 10 | ಮುಂಬೈ ರೆವಿನ್ಯೂ ಅಧಿಕಾರ ವ್ಯಾಪ್ತಿ ಅಧಿನಿಯಮ, 1876 |

| ಕ್ರ. ಸಂ. | ವರ್ಷ | ಅಧಿನಿಯಮದ ಕ್ರಮ ಸಂಖ್ಯೆ | ಸಂಕ್ಷಿಪ್ತ ಹೆಸರು |
|---|---|---|---|
| 3 | 1809 | 5 | ಮುಂಬೈ ಭೂಕಂದಾಯ ಸಂಹಿತೆ, 1879 |
| 4 | 1906 | 2 | ಮುಂಬೈ ಮಾಮಲತದಾರರ ನ್ಯಾಯಾಲಯಗಳ ಅಧಿನಿಯಮ, 1906 |
| 5 | 1939 | 12 | ಮುಂಬೈ ರೆವಿನ್ಯೂ ನ್ಯಾಯಾಧಿಕರಣ ಅಧಿನಿಯಮ, 1939 |
| 6 | 1317 ಎಫ್ | 8 | ಹೈದರಾಬಾದು ಭೂಕಂದಾಯ ಅಧಿನಿಯಮ, 1317–ಫ |
| 7 | 1318 ಎಫ್ | 60 | ಹೈದರಾಬಾದು ರೆವಿನ್ಯೂ ಮಂಡಲಿಯ ವಿನಿಯಮ, 1358–ಫ |
| 8 | 1952 | 32 | ಹೈದರಾಬಾದು ಭೂ (ವಿಶೇಷ ನಿರ್ಧರಣೆ) ಅಧಿನಿಯಮ, 1952 |
| 9 | 1888 | 4 | ಮೈಸೂರು ಭೂಕಂದಾಯ ಸಂಹಿತೆ, 1888 |
| 10 | 1951 | 8 | ಮೈಸೂರು ಮೋಜಣಿ ಮತ್ತು ಮೇರೆಗಳ ಅಧಿನಿಯಮ, 1951 |
| 11 | 1955 | 7 | ಮೈಸೂರು ರೆವಿನ್ಯೂ ಮಂಡಲಿಯ ಅಧಿನಿಯಮ, 1955 |
| 12 | 1957 | 24 | ಕರ್ನಾಟಕ ರೆವಿನ್ಯೂಅಪೀಲು ನ್ಯಾಯಾಧಿಕರಣ ಅಧಿನಿಯಮ, 1957 |
| 13 | 1958 | 17 | ಕರ್ನಾಟಕ ಭೂ ದಾಖಲೆಗಳ ಅಧಿನಿಯಮ, 1958 |
| 14 | 1962 | 18 | ಕರ್ನಾಟಕ ಹೆಚ್ಚಿನ ಡೆಪ್ಯೂಟಿ ಕಮಿಷನರ (ನೇಮಕ ಮತ್ತು ಅಧಿಕಾರಗಳು) ಅಧಿನಿಯಮ, 1962 |
| 15 | 1899 | 1 | ಕೊಡಗು ಭೂ ಮತ್ತು ಕಂದಾಯ ವಿನಿಯಮ, 1899 |
| 16 | 1802 | 26 | ಮದ್ರಾಸು ಭೂ ನೋಂದಣಿ ವಿನಿಯಮ, 1802 |
| 17 | 1803 | 1 | ಮದ್ರಾಸು ರೆವಿನ್ಯೂ ಮಂಡಲಿಯ ವಿನಿಯಮ, 1803 |
| 18 | 1803 | 2 | ಮದ್ರಾಸ್ ಕಲೆಕ್ಟರರ ವಿನಿಯಮ, 1803 |
| 19 | 1817 | 8 | ಮದ್ರಾಸ್ ಕಂದಾಯ ವಸೂಲಿ (ಸೇನಾ ಸ್ವತ್ತು) ವಿನಿಯಮ, 1817 |
| 20 | 1822 | 9 | ಮದ್ರಾಸ್ ಕಂದಾಯ ದುರುಪಯೋಗ ವಿನಿಯಮ, 1882 |
| 21 | 1823 | 3 | ಮದ್ರಾಸು ದುರುಪಯೋಗ (ತಿದ್ದುಪಡಿ) ವಿನಿಯಮ, 1823 |
| 22 | 1828 | 7 | ಮದ್ರಾಸು ಅಧೀನ ಕಲೆಕ್ಟರರ ಮತ್ತು ಕಂದಾಯ ದುರುಪಯೋಗ (ತಿದ್ದುಪಡಿ) ವಿನಿಯಮ, 1828 |
| 23 | 1832 | 3 | ಮದ್ರಾಸು ಕಂದಾಯ ದುರುಪಯೋಗ (ತಿದ್ದುಪಡಿ) ವಿನಿಯಮ, 1832 |
| 24 | 1837 | 36 | ಮದ್ರಾಸು ಸರ್ಕಾರೀ ಸ್ವತ್ತಿನ ದುರುಪಯೋಗ ಅಧಿನಿಯಮ, 1837 |
| 25 | 1839 | 7 | ಮದ್ರಾಸ್ ಗೇಣಿ ಮತ್ತು ರೆವಿನ್ಯೂ ಮಾರಾಟ ಅಧಿನಿಯಮ, 1839 |
| 26 | 1857 | 7 | ಮದ್ರಾಸು ಒಡಂಬಡಿಕೆ ಮಾಡಿಕೊಂಡಿಲ್ಲದ ಅಧಿಕಾರಿಗಳ ಅಧಿನಿಯಮ, 1857 |
| 27 | 1864 | 2 | ಮದ್ರಾಸು ಕಂದಾಯ ವಸೂಲಿ ಅಧಿನಿಯಮ, 1864 |
| 28 | 1865 | 1 | ಮದ್ರಾಸು ಜಿಲ್ಲಾ ಪರಿಮಿತಿಗಳ ಅಧಿನಿಯಮ, 1865 |
| 29 | 1865 | 6 | ಮದ್ರಾಸು ಸರ್ಕಾರೀ ಮೊಹರುಗಳ ಅಧಿನಿಯಮ, 1865 |
| 30 | 1869 | 3 | ಮದ್ರಾಸು ರೆವಿನ್ಯೂ ಸಮನುಗಳ ಅಧಿನಿಯಮ, 1869 |
| 31 | 1876 | 1 | ಮದ್ರಾಸು ಭೂಕಂದಾಯ ನಿರ್ಧರಣೆ ಅಧಿನಿಯಮ, 1876 |
| 32 | 1893 | 5 | ಮದ್ರಾಸು ರೆವಿನ್ಯೂ ವಿಚಾರಣೆಗಳ ಅಧಿನಿಯಮ, 1893 |
| 33 | 1905 | 3 | ಮದ್ರಾಸು ಭೂ ಒತ್ತುವರಿ ಅಧಿನಿಯಮ, 1905 |
| 34 | 1914 | 2 | ಮದ್ರಾಸು ಭೂ ಕಂದಾಯ ನಿರ್ಧರಣೆ (ತಿದ್ದುಪಡಿ ಅಧಿನಿಯಮ) 1914 |
| 35 | 1914 | 27 | ಮದ್ರಾಸು ಡೆಪ್ಯುಟಿ ಕಲೆಕ್ಟರರ ಅಧಿನಿಯಮ, 1914 |
| 36 | 1923 | 8 | ಮದ್ರಾಸು ಮೋಜಣಿ ಮತ್ತು ಮೇರೆಗಳ ಅಧಿನಿಯಮ, 1923 |
| 37 | 1925 | 2 | ಮದ್ರಾಸು ಮೋಜಣಿ ಮತ್ತು ಮೇರೆಗಳ ಅಧಿನಿಯಮ, 1923, (ಮಾನ್ಯೀಕರಣ) ಅಧಿನಿಯಮ, 1924 |

| ಕ್ರ ಸಂ. | ವರ್ಷ | ಅಧಿನಿಯಮದ ಕ್ರಮ ಸಂಖ್ಯೆ | ಸಂಕ್ಷಿಪ್ತ ಹೆಸರು |
|---|---|---|---|
| 38 | 1937 | 14 | ಮದ್ರಾಸು ಕಂದಾಯ ವಸೂಲಿ ಮತ್ತು ನಗರ ಭೂ ಕಂದಾಯ (ತಿದ್ದುಪಡಿ) ಅಧಿನಿಯಮ, 1937 |
| 39 | 1952 | 10 | ಮದ್ರಾಸು ಮೋಜಣಿ ಮತ್ತು ಮೇರೆಗಳ (ತಿದ್ದುಪಡಿ) ಅಧಿನಿಯಮ, 1952 |

**ಅಧಿಸೂಚನೆಗಳು**

**I**

**ಬೆಂಗಳೂರು, ದಿನಾಂಕ 19ನೇ ಮಾರ್ಚ್, 1964 [ಸಂಖ್ಯೆ. ಆರ್‌ಡಿ 55ಎಲ್‌ಎಡಿ 64]**

**ಎಸ್.ಓ. 385.–** ಮೈಸೂರು ಭೂ ಕಂದಾಯ ಅಧಿನಿಯಮ, 1964ರ (1964ರ ಮೈಸೂರು ಅಧಿನಿಯಮ 12) 1ನೇ ಪ್ರಕರಣದ (3)ನೇ ಉಪಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಮೈಸೂರು ಸರ್ಕಾರವು ಈ ಮೂಲಕ, 1964ರ ಏಪ್ರಿಲ್ ಮೊದಲನೇ ದಿನವನ್ನು ಸದರಿ ಅಧಿನಿಯಮವು ಮೈಸೂರು ರಾಜ್ಯದಲ್ಲಿ ಜಾರಿಗೆ ಬರತಕ್ಕ ದಿನವೆಂದುಗೊತ್ತುಪಡಿಸುತ್ತದೆ.

ಮೈಸೂರು ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಎನ್. ನರಸಿಂಹರಾವ್)**
ಕಾರ್ಯದರ್ಶಿ.

**II**

**ಬೆಂಗಳೂರು, ದಿನಾಂಕ 26ನೇ ಫೆಬ್ರವರಿ, 1966 [ಸಂಖ್ಯೆ. ಆರ್‌ಡಿ 48 ಎಆರ್‌ಟಿ 65]**

**ಎಸ್.ಓ. 3968.–** ಮೈಸೂರು ಭೂ ಕಂದಾಯ (ತಿದ್ದುಪಡಿ) ಅಧಿನಿಯಮ, 1966ರ (1966ರ ಮೈಸೂರು ಅಧಿನಿಯಮ 2) 1ನೇ ಪ್ರಕರಣದ (2)ನೇ ಉಪಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಮೈಸೂರು ಸರ್ಕಾರವು ಈ ಮೂಲಕ, 1966ರ ಮಾರ್ಚ್ ಮೊದಲನೇ ದಿನವನ್ನು ಸದರಿ ಅಧಿನಿಯಮವು ಜಾರಿಗೆ ಬರತಕ್ಕ ದಿನವೆಂದು ಗೊತ್ತುಪಡಿಸುತ್ತದೆ.

ಮೈಸೂರು ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಬಿ.ಎಸ್. ಶ್ರೀಕಂಠಯ್ಯ)**
ಕಾರ್ಯದರ್ಶಿ.

(ದಿನಾಂಕ: 3ನೇ ಮಾರ್ಚ್, 1966ರ ಕರ್ನಾಟಕ ರಾಜ್ಯ ಪತ್ರ (ವಿಶೇಷ ಸಂಚಿಕೆ) ಭಾಗ–IV, 2ಸಿ(ii)ರಲ್ಲಿ, ಸಂಖ್ಯೆ. 33 ರಲ್ಲಿ ಪ್ರಕಟಿಸಲಾಗಿದೆ.)

## III

**ಬೆಂಗಳೂರು, ದಿನಾಂಕ 19ನೇ ಮಾರ್ಚ್, 1991 [ಸಂಖ್ಯೆ. ಆರ್‌ಡಿ 43 ಎಲ್‌ಜಿಪಿ 91]**

**ಎಸ್.ಓ. 217.**– ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ರ ಪ್ರಕರಣ 107ರ ಮೇರೆಗೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಮೂಲಕ, ತಿದ್ದುಪಡಿ ಅಧಿನಿಯಮದ 1ನೇ ಪ್ರಕರಣದ (2)ನೇ ಉಪ–ಪ್ರಕರಣದಲ್ಲಿ ಅಗತ್ಯಪಡಿಸಿದಂತೆ, 1991ರ ಮಾರ್ಚ್ 20ನೇ ದಿನಾಂಕವನ್ನು,ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ಅಧಿನಿಯಮ, 1990 (1991ರ ಕರ್ನಾಟಕ ಅಧಿನಿಯಮ 2) ಜಾರಿಗೆ ಬರತಕ್ಕ ದಿನಾಂಕವೆಂದುನಿರ್ದಿಷ್ಟಪಡಿಸುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಬಿ.ಎಲ್. ಶಾಂತಾ)**
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ, (ಭೂ
ಮಂಜೂರಾತಿಗಳು).

(ದಿನಾಂಕ: 20ನೇ ಮಾರ್ಚ್, 1991ರ ಕರ್ನಾಟಕ ರಾಜ್ಯ ಪತ್ರ (ವಿಶೇಷ ಸಂಚಿಕೆ) ಭಾಗ–IV, 2ಸಿ(ii)ರಲ್ಲಿ, ಸಂಖ್ಯೆ. 118 ರಲ್ಲಿ ಪ್ರಕಟಿಸಲಾಗಿದೆ.)

## IV

**ಬೆಂಗಳೂರು, ದಿನಾಂಕ 6ನೇ ಆಗಸ್ಟ್, 1991 [ಸಂಖ್ಯೆ. ಆರ್‌ಡಿ 107 ಎಲ್‌ಜಿಪಿ 91]**

ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ರ 197ನೇಪ್ರಕರಣದ ಮೇರೆಗೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಮೂಲಕ, ಅಧಿನಿಯಮದ 1ನೇ ಪ್ರಕರಣದ (2)ನೇ ಉಪ–ಪ್ರಕರಣದ ಮೇರೆಗೆ ಅಗತ್ಯಪಡಿಸಿದಂತೆ, 1991ರ ಆಗಸ್ಟ್7ನೇ ದಿನಾಂಕವನ್ನುಕರ್ನಾಟಕ ಭೂ ಕಂದಾಯ (ತಿದ್ದುಪಡಿ) ಅಧಿನಿಯಮ, 1991 (1991ರ ಕರ್ನಾಟಕ ಅಧಿನಿಯಮ 21) ಜಾರಿಗೆ ಬರತಕ್ಕ ದಿನಾಂಕವೆಂದು ನಿರ್ದಿಷ್ಟಪಡಿಸುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಜಿತೇಂದ್ರ ಸಿಂಗ್)**
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ, (ಭೂ ಮಂಜೂರಾತಿ).

## V

**ಬೆಂಗಳೂರು, ದಿನಾಂಕ 13ನೇ ಅಕ್ಟೋಬರ್, 1998 [ಸಂಖ್ಯೆ. ಆರ್‌ಡಿ 38 ಎಲ್‌ಜಿಪಿ 98–I]**

ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ಅಧಿನಿಯಮ, 1997 (1998ರ ಅಧಿನಿಯಮ 22)ರ 1ನೇ ಪ್ರಕರಣದ (2)ನೇ ಉಪ–ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಮೂಲಕ, 1998ರ ನವೆಂಬರ್ ಮೊದಲನೇ ದಿನವನ್ನು ಸದರಿ ಅಧಿನಿಯಮವು ಜಾರಿಗೆ ಬರತಕ್ಕ ದಿನಾಂಕವಾಗಬೇಕೆಂದು ಗೊತ್ತುಪಡಿಸುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಬಿ. ಪುಟ್ಟಣ್ಣ)**
ಸರ್ಕಾರದ ಅಧೀನ ಕಾರ್ಯದರ್ಶಿ,

ಕಂದಾಯ ಇಲಾಖೆ, (ಭೂ ಮಂಜೂರಾತಿ-I).

## VI

**ಬೆಂಗಳೂರು, ದಿನಾಂಕ 3ನೇ ಡಿಸೆಂಬರ್, 1999 [ಸಂಖ್ಯೆ. ಆರ್‌ಡಿ 57 ಎಲ್‌ಜಿಪಿ 98 (ಪಿ1)]**

ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ಅಧಿನಿಯಮ, 1999 (1999ರ ಕರ್ನಾಟಕ ಅಧಿನಿಯಮ 26)ರ 1ನೇ ಪ್ರಕರಣದ (2)ನೇ ಉಪ-ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಮೂಲಕ,2000ನೇ ಇಸವಿ ಜನವರಿ 1ನೇ ದಿನಾಂಕವನ್ನು ಸದರಿ ಅಧಿನಿಯಮವು ಜಾರಿಗೆ ಬರತಕ್ಕ ದಿನಾಂಕವನ್ನಾಗಿ ಗೊತ್ತುಪಡಿಸುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಗಣೇಶಮೂರ್ತಿ)**
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ, ಸಮನ್ವಯ.

## VII

**ಬೆಂಗಳೂರು, ದಿನಾಂಕ 26ನೇ ಮೇ, 2003 [ಸಂಖ್ಯೆ. ಆರ್‌ಡಿ 54 ಸಮಿತಿ 2002 (ಪಿ)]**

ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ಅಧಿನಿಯಮ, 2002 (2003ರ ಕರ್ನಾಟಕ ಅಧಿನಿಯಮ 26)ರ 1ನೇ ಪ್ರಕರಣದ (2)ನೇ ಉಪ-ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಮೂಲಕ, 2003ರ ಮೇ 26ನೇ ದಿನಾಂಕವನ್ನು ಸದರಿ ಅಧಿನಿಯಮವು ಜಾರಿಗೆ ಬರತಕ್ಕ ದಿನಾಂಕವನ್ನಾಗಿ ಗೊತ್ತುಪಡಿಸುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಕೆ.ಎಸ್. ಶೆಂಡ್ರಿ)**
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ, (ಸಮನ್ವಯ)

**2013ರ ಕರ್ನಾಟಕ ಅಧಿನಿಯಮ ಸಂಖ್ಯೆ 11**

(2013ರ ಫೆಬ್ರವರಿ ಒಂದನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲುಪ್ರಕಟಿಸಲಾಗಿದೆ)

**ಕರ್ನಾಟಕ ಭೂ ಕಂದಾಯ (ಮೂರನೇ ತಿದ್ದುಪಡಿ) ಅಧಿನಿಯಮ, 2011**

(2013ರ ಜನವರಿ ಇಪ್ಪತ್ತೆರಡನೇ ದಿನದಂದು ರಾಜ್ಯಪಾಲರ ಅನುಮೋದನೆ ಪಡೆಯಲಾಗಿದೆ)

ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಕ್ಕಾಗಿ ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ನ್ನು (1964ರ ಕರ್ನಾಟಕ ಅಧಿನಿಯಮ ಸಂಖ್ಯೆ 12) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತೆರಡನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಭೂ ಕಂದಾಯ (ಮೂರನೇ ತಿದ್ದುಪಡಿ) ಅಧಿನಿಯಮ, 2011 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. 2ನೇ ಪ್ರಕರಣದ ತಿದ್ದುಪಡಿ.–** ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ರ (1964ರ ಕರ್ನಾಟಕ ಅಧಿನಿಯಮ ಸಂಖ್ಯೆ 12) (ಇದರಲ್ಲಿ ಇನ್ನು ಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಿದೆ) 2 ನೇ ಪ್ರಕರಣದ ಖಂಡ (20) ರ ವಿವರಣೆಯಲ್ಲಿ "ಕೊಡಗು ಜಿಲ್ಲೆಯ ಭೂ ಹಿಡುವಳಿದಾರ"ಎಂಬ ಪದಗಳಿಗೆ ಬದಲಾಗಿ"ಕೊಡಗು ಜಿಲ್ಲೆಯಲ್ಲಿರುವ ಜಮ್ಮಾಬಾಣೆ ಭೂಮಿ ಮೇಲೆ ಹಕ್ಕುಳ್ಳ ಮತ್ತು ಹಕ್ಕುಳ್ಳದಿರುವನೂ ಒಳಗೊಂಡಂತೆ ಉಂಬಳಿ ಭೂಮಿಯ ಹಿಡುವಳಿದಾರನನ್ನು"ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**3. 80ನೇ ಪ್ರಕರಣದ ತಿದ್ದುಪಡಿ.–** ಮೂಲ ಅಧಿನಿಯಮದ 80ನೇ ಪ್ರಕರಣದಲ್ಲಿ, "ಅದು ಎಲ್ಲಿಯೇ ಇರಲಿ"ಎಂಬ ಪದಗಳಿಗೆ ಬದಲಾಗಿ"ಅದು ಎಲ್ಲಿಯೇ ಇರಲಿ, ಕೊಡಗು ಜಿಲ್ಲೆಯಲ್ಲಿ ಅಧಿಭೋಗದಾರನು ಹೊಂದಿರುವ ಪರಭಾರೆ ಮಾಡದ ಜುಮ್ಮಾ ಬಾಣೆ ಭೂಮಿಯೂ ಸೇರಿದಂತೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

ರಾಜ್ಯಪಾಲರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ,

**ಜಿ.ಕೆ. ಬೋರೇಗೌಡ**
ಸರ್ಕಾರದ ಕಾರ್ಯದರ್ಶಿ
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನಾ ಇಲಾಖೆ

## 2013ರ ಕರ್ನಾಟಕ ಅಧಿನಿಯಮ ಸಂಖ್ಯೆ 51

(2013ರ ಜುಲೈ ಹನ್ನೊಂದನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟಿಸಲಾಗಿದೆ)

## ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ಅಧಿನಿಯಮ, 2012

(2013ರ ಜುಲೈ ಆರನೇ ದಿನದಂದು ರಾಜ್ಯಪಾಲರ ಅನುಮೋದನೆ ಪಡೆಯಲಾಗಿದೆ)

ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ನ್ನು (1964ರ ಕರ್ನಾಟಕ ಅಧಿನಿಯಮ ಸಂಖ್ಯೆ 12) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತೂರನೇವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:–

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ಅಧಿನಿಯಮ, 2012ಎಂದು ಕರೆಯತಕ್ಕದ್ದು.

(2)ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

(94ಸಿ ಪ್ರಕರಣವನ್ನು ಮೂಲ ಅಧಿನಿಯಮದಲ್ಲಿ ಸೇರಿಸಲಾಗಿದೆ)

**2. 94ಸಿ ಪ್ರಕರಣದ ತಿದ್ದುಪಡಿ.–** ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ರ (1964ರ ಕರ್ನಾಟಕ ಅಧಿನಿಯಮ ಸಂಖ್ಯೆ 12) 94ಸಿ ಪ್ರಕರಣಕ್ಕೆ ಕೆಳಗಿನವುಗಳನ್ನು ಪ್ರತಿಯೋಜಿಸತಕ್ಕದ್ದು, ಎಂದರೆ.–

**94ಸಿ ಅಧಿಭೋಗದ ಭೂಮಿಯಲ್ಲಿ ವಾಸದ ಮನೆಯನ್ನು ಕಟ್ಟಿಕೊಂಡಿದ್ದರೆ ಪ್ರಕರಣದಲ್ಲಿ ಭೂ ಮಂಜೂರಾತಿ.–** ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ ಮತ್ತು ಈ ಪ್ರಕರಣದಲ್ಲಿ ಇಲ್ಲಿ ಇನ್ನು ಮುಂದೆ ಉಪಬಂಧಿಸಿರುವುದನ್ನು ಹೊರತುಪಡಿಸಿ, ಗೊತ್ತುಪಡಿಸಿದ ಪ್ರಾಧಿಕಾರಕ್ಕೆ, 2012ರ ಜನವರಿ ಮೊದಲನೇ ದಿನಕ್ಕೆ ಮುಂಚೆ, ಯಾರೇ ವ್ಯಕ್ತಿಯು, ಸರ್ಕಾರಕ್ಕೆ ಸೇರಿದ ಯಾವುದೇ ಭೂಮಿಯನ್ನು ಅನಧಿಕೃತವಾಗಿ ಸ್ವಾಧೀನದಲ್ಲಿಟ್ಟುಕೊಂಡಿದ್ದಾನೆಂದು ಮತ್ತು ಅಂಥ ಭೂಮಿಯಲ್ಲಿ ವಾಸದ ಮನೆಯನ್ನು ಕಟ್ಟಿಕೊಂಡಿದ್ದಾನೆಂದು, ಸೂಕ್ತವೆಂದು ತಾನು ಭಾವಿಸುವಂಥ, ವಿಚಾರಣೆಯನ್ನು ನಡೆಸಿದ ತರುವಾಯ ಮನದಟ್ಟಾದಲ್ಲಿ, ಆ ಪ್ರಾಧಿಕಾರವು ಅಂಥ ವ್ಯಕ್ತಿಯು ತನಗೆ ಅರ್ಜಿ ಸಲ್ಲಿಸಿದಾಗ, ನಿಯಮಿಸಬಹುದಾದ ಅಂಥ ಅವಧಿಯೊಳಗೆ, ಅಂಥ ಫೀಜಿನೊಂದಿಗೆ ಅಂಥ ನಮೂನೆಯಲ್ಲಿ ಮತ್ತು ಅಂಥ ಮೊತ್ತವನ್ನು ಸಂದಾಯ ಮಾಡಿದ ಮೇಲೆ, ಅಂಥ ವಿಧಾನದಲ್ಲಿ ಮತ್ತು ಈ ಮುಂದಿನ ಷರತ್ತುಗಳಿಗೆ ಮತ್ತು ನಿಯಮಿಸಬಹುದಾದಂಥ ಇತರ ನಿರ್ಬಂಧಗಳಿಗೆ ಮತ್ತು ಷರತ್ತುಗಳಿಗೆ ಒಳಪಟ್ಟು ಮಂಜೂರಾತಿ ಆದೇಶದಲ್ಲಿ ನಿರ್ದಿಷ್ಟಪಡಿಸಬೇಕಾದ ಮನೆಯು ಆವರಿಸಿರುವಷ್ಟು ಭೂಮಿಗೆ ಮಂಜೂರಾತಿಯನ್ನು ನೀಡಬಹುದು, ಎಂದರೆ:–

(i) 2012ನೇ ಜನವರಿ ಮೊದಲನೇ ದಿನಕ್ಕೆ ಮುಂಚೆ ವಾಸದ ಮನೆಯನ್ನು ಕಟ್ಟಿಕೊಂಡಿರುವುದಕ್ಕಾಗಿ ರುಜುವಾತನ್ನು ಅರ್ಜಿದಾರನು ಸಲ್ಲಿಸತಕ್ಕದ್ದು;

(ii) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ರಾಜ್ಯದಲ್ಲಿನ ನಗರ ಪಾಲಿಕೆಗಳು, ಸಿಎಂಸಿಗಳು, ಟಿಎಂಸಿಗಳ ಅಧಿಕಾರ ವ್ಯಾಪ್ತಿಯಮಿತಿಗಳೊಳಗೆ ಬರುವ ರಾಜ್ಯ ಸರ್ಕಾರಕ್ಕೆ ಸೇರಿದ ಭೂಮಿಯ ಮೇಲೆ ಅನಧಿಕೃತವಾಗಿ ಕಟ್ಟಿದ ಯಾವುದೇ ಮನೆಯನ್ನು ಸಕ್ರಮಗೊಳಿಸತಕ್ಕದ್ದಲ್ಲ;

(iii) ಅಂಥ ಭೂಮಿಯ ಮಂಜೂರಾತಿಗಾಗಿ ಅರ್ಜಿಯನ್ನು ಸಲ್ಲಿಸಿದ ವ್ಯಕ್ತಿಗೆ ಅಥವಾ ಆತನ ಕುಟುಂಬದ ಯಾರೇ ಸದಸ್ಯನಿಗೆ ಯಾವ ಭೂಮಿಗಾಗಿ ಅರ್ಜಿಯನ್ನು ಸಲ್ಲಿಸಲಾಗಿದೆಯೋ ಆ ಭೂಮಿಯು ಇರುವ ನಗರ ಅಥವಾ ಗ್ರಾಮೀಣ ಪ್ರದೇಶದೊಳಗೆ ಯಾವುದೇ ಕಟ್ಟಡ ಅಥವಾ ನಿವೇಶನವು ಇದ್ದರೆ ಆ ಭೂಮಿಗೆ ಮಂಜೂರಾತಿಯನ್ನು ನೀಡತಕ್ಕದ್ದಲ್ಲ;

(iv) ಯಾರೇ ವ್ಯಕ್ತಿಯು, ತನ್ನ ಹೆಸರಿನಲ್ಲಿ ಅಥವಾ ತನ್ನ ಕುಟುಂಬದ ಯಾರೇ ಸದಸ್ಯನ ಹೆಸರಿನಲ್ಲಿ ಒಂದಕ್ಕಿಂತ ಹೆಚ್ಚಿನ ವಾಸದ ಮನೆ ಕಟ್ಟಿಕೊಳ್ಳಲು, ಭೂಮಿಯ ಮಂಜೂರಾತಿಗೆ ಅರ್ಹನಾಗತಕ್ಕದ್ದಲ್ಲ;

**ವಿವರಣೆ:–** ಈ ಖಂಡದ ಉದ್ದೇಶಕ್ಕಾಗಿ "ಕುಟುಂಬದ ಸದಸ್ಯರು" ಎಂದರೆ ಗಂಡ, ಹೆಂಡತಿ, ಅವಿವಾಹಿತ ಹೆಣ್ಣುಮಕ್ಕಳು ಮತ್ತು ಸಂದರ್ಭಾನುಸಾರ ಅಪ್ರಾಪ್ತ ವಯಸ್ಕ ಗಂಡುಮಕ್ಕಳು.

(v) ಹಾಗೆ ಮಂಜೂರಾದ ಭೂಮಿಯನ್ನು ಮಂಜೂರಾತಿ ಆದೇಶವನ್ನು ಸ್ವೀಕರಿಸಿದ ದಿನಾಂಕದಿಂದ ಹದಿನೈದು ವರ್ಷಗಳ ಅವಧಿಗಾಗಿ ಪರಭಾರೆ ಮಾಡತಕ್ಕದ್ದಲ್ಲ;

(vi) ಮಂಜೂರಾತಿ ಪಡೆದವನು ಕಟ್ಟಡವನ್ನು ವಾಸದ ಮನೆಗಾಗಿ ಹೊರತು ಯಾವುದೇ ಇತರ ಉದ್ದೇಶಕ್ಕಾಗಿ ಬಳಸತಕ್ಕದ್ದಲ್ಲ.

(vi ಎ) ಕೆಳಗಿನ ಕೋಷ್ಟಕದ (2)ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಿದ ನಗರಗಳು ಮತ್ತು ನಗರಪುರಸಭೆಗಳ ಸರಹದ್ದುಗಳ ಒಳಗೆ ಇರುವ ಪ್ರದೇಶಗಳಲ್ಲಿ ಮತ್ತು (3)ನೇ ಅಂಕಣದ ಎದುರಿಗಿರುವ ನಮೂದುಗಳಲ್ಲಿ ನಿರ್ದಿಷ್ಟಪಡಿಸಿದ ಅಂಥ ಸರಹದ್ದುಗಳಿಂದ ಅಷ್ಟು ದೂರದ ಅಂತರದೊಳಗೆ ಇರುವ ಯಾವುದೇ ಭೂಮಿಯನ್ನು ಮಂಜೂರು ಮಾಡತಕ್ಕದ್ದಲ್ಲ;

**ಕೋಷ್ಟಕ**

| ಕ್ರಮ ಸಂಖ್ಯೆ | ಸ್ಥಳಗಳು | ಅಂತರಗಳು |
|---|---|---|
| (1) | (2) | (3) |
| 1. | ಕರ್ನಾಟಕ ನಗರ ಪಾಲಿಕೆಗಳ ಅಧಿನಿಯಮ, 1976ರ ಅಡಿಯಲ್ಲಿ | 18 ಕಿ.ಮೀ.ಗಳು |

| | | |
|---|---|---|
| | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ | |
| 2. | ಕರ್ನಾಟಕ ನಗರ ಪಾಲಿಕೆಗಳ ಅಧಿನಿಯಮ, 1976ರ ಉಪಬಂಧಗಳ ಅಡಿಯಲ್ಲಿ ಅನುಕ್ರಮವಾಗಿ ಬೆಳಗಾವಿ, ಗುಲ್ಬರ್ಗಾ, ಹುಬ್ಬಳ್ಳಿ, ಧಾರವಾಡ, ಮಂಗಳೂರು ಮತ್ತು ಮೈಸೂರು ನಗರಗಳು | 10 ಕಿ.ಮೀ.ಗಳು |
| 3. | ಕರ್ನಾಟಕ ಪೌರಸಭೆಗಳ ಅಧಿನಿಯಮ, 1964ರ ಅಡಿಯಲ್ಲಿಯ ಎಲ್ಲಾ ನಗರ ಮುನಿಸಿಪಾಲಿಟಿಗಳು | 5 ಕಿ.ಮೀ.ಗಳು |

(vi ಬಿ) ಕರ್ನಾಟಕ ನಗರ ಪಾಲಿಕೆಗಳ ಅಧಿನಿಯಮ, 1976ರ ಅಡಿಯಲ್ಲಿ ಇತರ ನಗರ ಪಾಲಿಕೆಗಳ ಹೊರಗಿನ 10 ಕಿ.ಮೀ.ಗಳವರೆಗಿನ ಸರಹದ್ದು ಯಾವುದೇ ಭೂಮಿಯನ್ನು ಮಂಜೂರು ಮಾಡತಕ್ಕದ್ದಲ್ಲ.

(vi ಸಿ) ತಾಲೂಕು ಪುರಸಭೆಗಳು ಮತ್ತು ಪಟ್ಟಣ ಗ್ರಾಮಪಂಚಾಯತಿಗಳ ಹೊರಗಿನ ವರ್ತುಲದಿಂದ 3 ಕಿ.ಮೀ.ಗಳ ಸರಹದ್ದಿನ ಒಳಗೆ ಇರುವ ಅನಧಿಕೃತ ಕಟ್ಟಡಗಳನ್ನು ಸಕ್ರಮಗೊಳಿಸತಕ್ಕದ್ದಲ್ಲ ;

(vi ಡಿ) ಆಶ್ರಯ ವಸತಿ ಯೋಜನೆಗಳ ಅಡಿಯಲ್ಲಿ ಅರ್ಹತೆಗಾಗಿ ಪ್ರಸ್ತುತ ಸರ್ಕಾರಿ ಅನುಮೋದಿತ ಷರತ್ತುಗಳು ಒಟ್ಟಾಗಿ ಅನ್ವಯವಾಗತಕ್ಕದ್ದು ;

(vi ಇ) ಕಟ್ಟಿದ ಮನೆಯು ವಾಸ್ತವಿಕವಾಗಿ ಆವರಿಸಿಕೊಂಡಿರುವ ಜಾಗ ಅಥವಾ 2,400 ಚದರ ಅಡಿಯವರೆಗೆ ನಿರ್ಮಿತ ಮನೆಯ ಜಾಗ ಇದರಲ್ಲಿ ಯಾವುದು ಕಡಿಮೆ ವಿಸ್ತೀರ್ಣದ್ದೋ ಅದನ್ನು ಸಕ್ರಮಗೊಳಿಸತಕ್ಕದ್ದು."

(vii) ಸ್ವಾಧೀನದಲ್ಲಿರುವ ಯಾವ ಭೂಮಿಯಲ್ಲಿ ವಾಸದ ಮನೆ ಇರುವುದೋ ಆ ಭೂಮಿಯನ್ನು,-

(ಎ) ನೈಸರ್ಗಿಕ ಒಳಚರಂಡಿಗಳ ಮಾರ್ಗದಲ್ಲಿ ಅಥವಾ ಕಾಲುವೆ ಹರಿವಿನ ದಾರಿಯಲ್ಲಿ ಇದ್ದರೆ;

(ಬಿ) ರಾಜ್ಯ ಸರ್ಕಾರದ ಅಥವಾ ಯಾವುದೇ ಸ್ಥಳೀಯ ಪ್ರಾಧಿಕಾರದ ಒಡೆತನದ ಅಥವಾ ನಿಯಂತ್ರಣದ ಪ್ರಾಧಿಕಾರಕ್ಕೆ ಸೇರಿದ್ದಲ್ಲಿ;

(ಸಿ) ಪ್ರಸ್ತುತ ಅಥವಾ ಪ್ರಸ್ತಾಪಿತ ರಸ್ತೆಗಳಿಗೆ, ಒಳಗಿನ ಅಥವಾ ಹೊರಗಿನ ವರ್ತುಲ ರಸ್ತೆಗಳಿಗೆ, ರಾಷ್ಟ್ರೀಯ ಹೆದ್ದಾರಿಗಳಿಗೆ, ಅಗಲೀಕರಣಕ್ಕಾಗಿ ಪ್ರಸ್ತಾಪಿಸಲಾದುವುಗಳೂ ಒಳಗೊಂಡಂತೆ ವರ್ತುಲ ರಸ್ತೆಗಳಲ್ಲಿರುವ ಬೈಪಾಸ್‌ಗೆ ಮತ್ತು ರೈಲ್ವೆ ಲೈನುಗಳಿಗೆ, ಟ್ರಾಮ್‌ವೇಗಳಿಗೆ, ಸಮೂಹ ಕ್ಷಿಪ್ರ ಸಾರಿಗೆ ಪದ್ಧತಿ ಯೋಜನೆಗಳಿಗೆ, ಸಂಪರ್ಕಗಳಿಗೆ ಮತ್ತು ಇತರ ನಾಗರಿಕ ಸೌಲಭ್ಯಗಳಿಗೆ ಅಥವಾ ಸಾರ್ವಜನಿಕ ಉಪಯುಕ್ತತೆಗಳಿಗೆ ಅಡ್ಡಿ ಅಡಚಣೆ ಉಂಟು ಮಾಡುತ್ತಿದ್ದರೆ;

(ಡಿ) ಅಂಥ ಭೂಮಿಯು ಅರಣ್ಯ ಭೂಮಿಯಾಗಿದ್ದಲ್ಲಿ;

(ಇ) ಅಂಥ ಭೂಮಿಯು ಬೇರೊಬ್ಬ ವ್ಯಕ್ತಿಗೆ ಸೇರಿದ್ದೂ ಅದರ ಮೇಲೆ ಅರ್ಜಿದಾರನಿಗೆ ಹಕ್ಕು ಇರದಿದ್ದರೆ ;

(ಎಫ್) ಅಂಥ ಭೂಮಿಯನ್ನು ಉದ್ಯಾನವನಗಳು, ಆಟದ ಮೈದಾನಗಳು, ಮುಕ್ತ ಸ್ಥಳಗಳು ಅಥವಾ ಯಾವುದೇ ನಾಗರಿಕ ಸೌಕರ್ಯಗಳನ್ನು ಒದಗಿಸುವುದಕ್ಕಾಗಿ ಮೀಸಲಿಟ್ಟಿದ್ದರೆ;

(ಜಿ) ಅಂಥ ಭೂಮಿಯು ಅಕ್ಕಪಕ್ಕದವರ ಸ್ವತ್ತಿಗೆ, ಬಿರುಮಳೆಯ ನೀರು ಹರಿದುಹೋಗುವ ಒಳಚರಂಡಿಗೆ, ಕೆರೆ ಏರಿ ಪ್ರದೇಶಗಳಿಗೆ, ನದಿ ದಡಕ್ಕೆ ಅಥವಾ ನದಿಪಾತ್ರಗಳಿಗೆ ಮತ್ತು ಕಾಲುವೆಗಳಿಗೆ ಹೊಂದಿಕೊಂಡಿದ್ದರೆ ಅಥವಾ ಹೈಟೆನ್‌ಷನ್ ವಿದ್ಯುಚ್ಛಕ್ತಿ ಲೈನ್‌ಗಳ ಕೆಳಗಿದ್ದರೆ;

(ಎಚ್) ಪಾರಂಪರಿಕ ಸ್ಮಾರಕಗಳಿಗೆ, ವಿಮಾನ ನಿಲ್ದಾಣಗಳಿಗೆ ಮತ್ತು ಸೇನಾ ನಿಬಂಧನೆಗಳಿಗೆ ಸಂಬಂಧಿಸಿದಂತೆ ವಲಯ ನಿಬಂಧನೆಗಳಲ್ಲಿ ಇಂತಿಷ್ಟೇ ಎತ್ತರ ಇರಬೇಕೆಂದು ನಿರ್ದಿಷ್ಟಪಡಿಸಿ ನಿರ್ಬಂಧಗಳಿಗೆ ವಿರುದ್ಧವಾಗಿ ಅಂಥ ಭೂಮಿಯನ್ನು ಬಳಕೆ ಮಾಡುತ್ತಿದ್ದರೆ;

(ಐ) ಭೂಮಿಯು ಹೈಟೆನ್‌ಷನ್ ಲೈನ್‌ಗಳಿಗೆ ಅಥವಾ ಬೆಂಕಿ ಆಕಸ್ಮಿಕ ಶಮನದ ಕ್ರಮಗಳಿಗೆ ಕೊಟ್ಟಿರುವ ಯಾವುದೇ ಅನುಮತಿಗೆ ಅಂಥ ಅನುಗುಣವಾಗಿರದಿದ್ದರೆ;

(ಜೆ) ಅಂಥ ಭೂಮಿಯು ಭಾರತ ಸರ್ಕಾರದ ಪರಿಸರ ಮತ್ತು ಅರಣ್ಯ ಮಂತ್ರಾಲಯದ, ಕರಾವಳಿ ವಲಯ ನಿಬಂಧನೆ ವ್ಯಾಪ್ತಿಗೆ ಒಳಪಟ್ಟಿರುವ ಪ್ರದೇಶದಲ್ಲಿದ್ದರೆ,

– ಅಂಥ ಭೂಮಿಯನ್ನು ಮಂಜೂರು ಮಾಡತಕ್ಕದ್ದಲ್ಲ:

ಪರಂತು, ಭೂ ಬಳಕೆಯ ಬದಲಾವಣೆಗೆ ಸಂಬಂಧಿಸಿದಂತೆ ಆಗಿರುವ ಉಲ್ಲಂಘನೆಯನ್ನು ಸಾಧ್ಯವಾದಷ್ಟು ಮಟ್ಟಿಗೆ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961ರ (1963ರ ಕರ್ನಾಟಕ ಅಧಿನಿಯಮ 11) 14–ಎ ಪ್ರಕರಣಕ್ಕೆ ಅನುಸಾರವಾಗಿ ಸಕ್ರಮಗೊಳಿಸತಕ್ಕದ್ದು.]

**3. ಬಾಕಿ ಉಳಿದ ಅರ್ಜಿಗಳ ವರ್ಗಾವಣೆ.**–ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ಅಧಿನಿಯಮ, 2012ರ ಪ್ರಾರಂಭದ ದಿನಾಂಕದಂದು, ಗೊತ್ತುಪಡಿಸಲಾದ ಪ್ರಾಧಿಕಾರಿಯ ಮುಂದೆ ಪ್ರಕರಣ 94ಸಿ ಅಡಿಯಲ್ಲಿ ಬಾಕಿ ಉಳಿದಿದ್ದ ಎಲ್ಲ ಅರ್ಜಿಗಳನ್ನು, ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ಅಧಿನಿಯಮ, 2012ರ ಉಪಬಂಧಗಳಿಗನುಸಾರವಾಗಿ, ಅಂಥ ಅರ್ಜಿಯನ್ನು ಗೊತ್ತುಪಡಿಸಲಾದ ಪ್ರಾಧಿಕಾರಿಗೆ ಸಲ್ಲಿಸಲಾಗಿದ್ದರೆ ಹೇಗೆ ಪರಿಗಣಿಸಲಾಗುತ್ತಿತ್ತೊ ಮತ್ತು ವಿಲೆ ಮಾಡಲಾಗುತ್ತಿತ್ತೊ ಹಾಗೆ ಪರಿಗಣಿಸತಕ್ಕದ್ದು ಮತ್ತು ವಿಲೆ ಮಾಡತಕ್ಕದ್ದು.

**2013ರ ಕರ್ನಾಟಕ ಅಧಿನಿಯಮ ಸಂಖ್ಯೆ 66**

(2013ರ ಡಿಸೆಂಬರ್ ಮೂವತ್ತನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟಿಸಲಾಗಿದೆ)

**ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ಅಧಿನಿಯಮ, 2013**

(2013ರ ಡಿಸೆಂಬರ್ ಇಪ್ಪತ್ತಮೂರನೇ ದಿನದಂದು ರಾಜ್ಯಪಾಲರ ಅನುಮೋದನೆ ಪಡೆಯಲಾಗಿದೆ)

ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ನ್ನು (1964ರ ಕರ್ನಾಟಕ ಅಧಿನಿಯಮ ಸಂಖ್ಯೆ 12) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ನಾಲ್ಕನೇವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:–

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.**– (1) ಈ ಅಧಿನಿಯಮವನ್ನು ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ಅಧಿನಿಯಮ, 2013 ಎಂದು ಕರೆಯತಕ್ಕದ್ದು.

(2)ಇದು 2013 ರ ಅಕ್ಟೋಬರ್ ಹದಿನೈದನೇ ದಿನದಂದು ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

**2. 94–ಎ ಪ್ರಕರಣದ ತಿದ್ದುಪಡಿ.**– ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ರ (1964ರ ಕರ್ನಾಟಕ ಅಧಿನಿಯಮ ಸಂಖ್ಯೆ 12) 94–ಎ ಪ್ರಕರಣದ (1)ನೇ ಉಪಪ್ರಕರಣದಲ್ಲಿ "ಪ್ರತಿಯೊಂದು ತಾಲ್ಲೂಕಿಗಾಗಿ" ಎಂಬ ಪದಗಳಿಗೆ ಬದಲಾಗಿ "ವಿಧಾನಸಭೆಯ ಪ್ರತಿಯೊಂದು ಚುನಾವಣಾ ಕ್ಷೇತ್ರಕ್ಕಾಗಿ"ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**3. ನಿರಸನ ಮತ್ತು ಉಳಿಸುವಿಕೆಗಳು.**–ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ಆಧ್ಯಾದೇಶ, 2013ನ್ನು (2013 ರ ಕರ್ನಾಟಕ ಆಧ್ಯಾದೇಶ ಸಂಖ್ಯೆ. 1) ಈ ಮೂಲಕ ನಿರಸನಗೊಳಿಸಲಾಗಿದೆ.

(2) ಹಾಗೆ ನಿರಸನಗೊಂಡಿದ್ದರೂ, ಸದರಿ ಅಧ್ಯಾದೇಶದ ಮೂಲಕ ತಿದ್ದುಪಡಿಯಾದಂತೆ ಮೂಲ ಅಧಿನಿಯಮದ ಅಡಿಯಲ್ಲಿ ಮಾಡಿದಅಥವಾ ಕೈಗೊಂಡ ಯಾವುದೇ ಕ್ರಮವನ್ನು ಈ ಅಧಿನಿಯಮದ ಮೂಲಕ ತಿದ್ದುಪಡಿಯಾದ ಮೂಲ ಅಧಿನಿಯಮದ ಮೇರೆಗೆ ಮಾಡಲಾಗಿದೆಯೆಂದು ಅಥವಾ ಕೈಗೊಳ್ಳಲಾಗಿದೆಯೆಂದು ಭಾವಿಸತಕ್ಕದ್ದು.

ರಾಜ್ಯಪಾಲರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ,

**ಕೆ.ಬಿ.ಚಂಗಪ್ಪ**
ಸರ್ಕಾರದ ಕಾರ್ಯದರ್ಶಿ (ಪ್ರಭಾರ)
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನಾ ಇಲಾಖೆ

**2014ರ ಕರ್ನಾಟಕ ಅಧಿನಿಯಮ ಸಂಖ್ಯೆ 26**

(2014ರ ಆಗಸ್ಟ್ ಇಪ್ಪತ್ತೆಂಟನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟಿಸಲಾಗಿದೆ)

**ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ಅಧಿನಿಯಮ, 2014**

(2014ರ ಆಗಸ್ಟ್ ಇಪ್ಪತ್ತೈದನೇ ದಿನದಂದು ರಾಜ್ಯಪಾಲರ ಅನುಮೋದನೆ ಪಡೆಯಲಾಗಿದೆ)

ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ನ್ನು (1964ರ ಕರ್ನಾಟಕ ಅಧಿನಿಯಮ ಸಂಖ್ಯೆ 12) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತೈದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ಅಧಿನಿಯಮ, 2014 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

94ಬಿ(1) ಪ್ರಕರಣಗಳನ್ನು ಮೂಲ ಅಧಿನಿಯಮದಲ್ಲಿ ಸೇರಿಸಲಾಗಿದೆ.

ರಾಜ್ಯಪಾಲರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ,

**ಎಸ್.ಬಿ. ಗುಂಜಿಗಾವಿ**
ಸರ್ಕಾರದ ಕಾರ್ಯದರ್ಶಿ
ಸಂಸದೀಯ ವ್ಯವಹಾರಗಳ ಇಲಾಖೆ

**2014ರ ಕರ್ನಾಟಕ ಅಧಿನಿಯಮ ಸಂಖ್ಯೆ 27**

(2014ರ ಆಗಸ್ಟ್ ಇಪ್ಪತ್ತೆಂಟನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟಿಸಲಾಗಿದೆ)

**ಕರ್ನಾಟಕ ಭೂ ಸುಧಾರಣೆಗಳ ಮತ್ತು ಇತರ ಕೆಲವು ಕಾನೂನುಗಳ (ತಿದ್ದುಪಡಿ) ಅಧಿನಿಯಮ, 2014**

(2014ರ ಆಗಸ್ಟ್ ಇಪ್ಪತ್ತೈದನೇದಿನದಂದು ರಾಜ್ಯಪಾಲರ ಅನುಮೋದನೆ ಪಡೆಯಲಾಗಿದೆ)

ಕರ್ನಾಟಕ ಭೂ ಸುಧಾರಣೆಗಳ ಅಧಿನಿಯಮ, 1961ನ್ನು ಮತ್ತು ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಭೂ ಸುಧಾರಣೆಗಳ ಅಧಿನಿಯಮ, 1961ನ್ನು (1962ರ ಕರ್ನಾಟಕ ಅಧಿನಿಯಮ ಸಂಖ್ಯೆ 10) ಮತ್ತು ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ನ್ನು (1964ರ ಕರ್ನಾಟಕ ಅಧಿನಿಯಮ ಸಂಖ್ಯೆ 12) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತೈದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಭೂ ಸುಧಾರಣೆಗಳ ಮತ್ತುಇತರ ಕೆಲವು ಕಾನೂನುಗಳ (ತಿದ್ದುಪಡಿ) ಅಧಿನಿಯಮ, 2014ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

95 (8) ಪ್ರಕರಣವನ್ನು ಮೂಲ ಅಧಿನಿಯಮದಲ್ಲಿ ಸೇರಿಸಲಾಗಿದೆ.

ರಾಜ್ಯಪಾಲರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ,

**ಎಸ್.ಬಿ. ಗುಂಜಿಗಾವಿ**
ಸರ್ಕಾರದ ಕಾರ್ಯದರ್ಶಿ
ಸಂಸದೀಯ ವ್ಯವಹಾರಗಳ ಇಲಾಖೆ

**2015ರ ಕರ್ನಾಟಕ ಅಧಿನಿಯಮ ಸಂಖ್ಯೆ 2**

(2015ರ ಜನವರಿ ಎಂಟನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟಿಸಲಾಗಿದೆ)

**ಕರ್ನಾಟಕ ಭೂ ಸುಧಾರಣೆಗಳ ಮತ್ತು ಇತರ ಕೆಲವು ಕಾನೂನುಗಳ (ತಿದ್ದುಪಡಿ) ಅಧಿನಿಯಮ, 2014**

(2015ರ ಜನವರಿ ಏಳನೇದಿನದಂದು ರಾಜ್ಯಪಾಲರ ಅನುಮೋದನೆ ಪಡೆಯಲಾಗಿದೆ)

ಕರ್ನಾಟಕ ಭೂ ಸುಧಾರಣೆಗಳ ಅಧಿನಿಯಮ, 1961ನ್ನು ಮತ್ತು ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಭೂ ಸುಧಾರಣೆಗಳ ಅಧಿನಿಯಮ, 1961ನ್ನು (1962ರ ಕರ್ನಾಟಕ ಅಧಿನಿಯಮ ಸಂಖ್ಯೆ 10) ಮತ್ತು ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ನ್ನು (1964ರ ಕರ್ನಾಟಕ ಅಧಿನಿಯಮ ಸಂಖ್ಯೆ 12) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತೈದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಭೂ ಸುಧಾರಣೆಗಳ ಮತ್ತುಇತರ ಕೆಲವು ಕಾನೂನುಗಳ (ತಿದ್ದುಪಡಿ) ಅಧಿನಿಯಮ, 2014ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

95 (8) ಪ್ರಕರಣವನ್ನು ಮೂಲ ಅಧಿನಿಯಮದಲ್ಲಿ ಸೇರಿಸಲಾಗಿದೆ.

**2015ರ ಕರ್ನಾಟಕ ಅಧಿನಿಯಮ ಸಂಖ್ಯೆ 07**

(2015ರ ಜನವರಿ ಹನ್ನೆರಡನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟಿಸಲಾಗಿದೆ)

**ಕರ್ನಾಟಕ ಭೂ ಕಂದಾಯ (ಎರಡನೇ ತಿದ್ದುಪಡಿ) ಅಧಿನಿಯಮ, 2012**

(2015ರ ಜನವರಿ ಒಂಭತ್ತನೇ ದಿನದಂದು ರಾಜ್ಯಪಾಲರ ಅನುಮೋದನೆ ಪಡೆಯಲಾಗಿದೆ)

ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ನ್ನು (1964ರ ಕರ್ನಾಟಕ ಅಧಿನಿಯಮ ಸಂಖ್ಯೆ 12) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತಮೂರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ಅಧಿನಿಯಮ, 2012 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

94ಸಿಸಿ ಪ್ರಕರಣವನ್ನು ಮೂಲ ಅಧಿನಿಯಮದಲ್ಲಿ ಸೇರಿಸಲಾಗಿದೆ.

## 2015ರ ಕರ್ನಾಟಕ ಅಧಿನಿಯಮ ಸಂಖ್ಯೆ 31

(2015ರ ಆಗಸ್ಟ್ ಹದಿಮೂರನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟಿಸಲಾಗಿದೆ)

**ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ಅಧಿನಿಯಮ, 2015**

(೨೦೧೫ರ ಆಗಸ್ಟ್ ಹನ್ನೆರಡನೇ ದಿನದಂದು ರಾಜ್ಯಪಾಲರ ಅನುಮೋದನೆ ಪಡೆಯಲಾಗಿದೆ)

ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ನ್ನು (1964ರ ಕರ್ನಾಟಕ ಅಧಿನಿಯಮ ಸಂಖ್ಯೆ 12) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತಾರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:–

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ಅಧಿನಿಯಮ, 2015 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

94ಸಿ, 94ಸಿಸಿ ಮತ್ತು 95 ಪ್ರಕರಣಗಳನ್ನು ಮೂಲ ಅಧಿನಿಯಮದಲ್ಲಿ ಸೇರಿಸಲಾಗಿದೆ.

## 2017ರ ಕರ್ನಾಟಕ ಅಧಿನಿಯಮ ಸಂಖ್ಯೆ 11

(2017ರ ಫೆಬ್ರವರಿ ಇಪ್ಪತ್ತೆಂಟನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟಿಸಲಾಗಿದೆ)

**ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ಅಧಿನಿಯಮ, 2017**

(2017ರ ಫೆಬ್ರವರಿ ಇಪ್ಪತ್ತೇಳನೇ ದಿನದಂದು ರಾಜ್ಯಪಾಲರ ಅನುಮೋದನೆ ಪಡೆಯಲಾಗಿದೆ)

ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ನ್ನು (1964ರ ಕರ್ನಾಟಕ ಅಧಿನಿಯಮ ಸಂಖ್ಯೆ 12) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತೆಂಟನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:–

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ಅಧಿನಿಯಮ, 2017 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

94–ಬಿ ಪ್ರಕರಣವನ್ನು ಮೂಲ ಅಧಿನಿಯಮದಲ್ಲಿ ಸೇರಿಸಲಾಗಿದೆ.

## 2017ರ ಕರ್ನಾಟಕ ಅಧಿನಿಯಮ ಸಂಖ್ಯೆ 20

(2017ರ ಏಪ್ರಿಲ್ ಆರನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟಿಸಲಾಗಿದೆ)

**ಕರ್ನಾಟಕ ಭೂ ಕಂದಾಯ (ಎರಡನೇ ತಿದ್ದುಪಡಿ) ಅಧಿನಿಯಮ, 2017**

(2017ರ ಏಪ್ರಿಲ್ ಮೂರನೇ ದಿನದಂದು ರಾಜ್ಯಪಾಲರ ಅನುಮೋದನೆ ಪಡೆಯಲಾಗಿದೆ)

ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ನ್ನು (1964ರ ಕರ್ನಾಟಕ ಅಧಿನಿಯಮ ಸಂಖ್ಯೆ 12) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತೆಂಟನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:–

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ಕರ್ನಾಟಕ ಭೂ ಕಂದಾಯ (ಎರಡನೇ ತಿದ್ದುಪಡಿ) ಅಧಿನಿಯಮ, 2017 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

94–ಸಿಸಿ ಪ್ರಕರಣವನ್ನು ಮೂಲ ಅಧಿನಿಯಮದಲ್ಲಿ ಸೇರಿಸಲಾಗಿದೆ.

**2017ರ ಕರ್ನಾಟಕ ಅಧಿನಿಯಮ ಸಂಖ್ಯೆ 49**

(2017ರ ಡಿಸೆಂಬರ್ ಹದಿನಾರನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟಿಸಲಾಗಿದೆ)

**ಕರ್ನಾಟಕ ಭೂ ಕಂದಾಯ (ಮೂರನೇ ತಿದ್ದುಪಡಿ) ಅಧಿನಿಯಮ, 2017**

(2017ರ ಡಿಸೆಂಬರ್ ಹದಿಮೂರನೇ ದಿನದಂದು ರಾಜ್ಯಪಾಲರ ಅನುಮೋದನೆ ಪಡೆಯಲಾಗಿದೆ)

ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ನ್ನು (1964ರ ಕರ್ನಾಟಕ ಅಧಿನಿಯಮ ಸಂಖ್ಯೆ 12) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತೆಂಟನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಭೂ ಕಂದಾಯ (ಮೂರನೇ ತಿದ್ದುಪಡಿ) ಅಧಿನಿಯಮ, 2017 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

94-ಡಿಹೊಸ ಪ್ರಕರಣವನ್ನು ಮೂಲ ಅಧಿನಿಯಮದಲ್ಲಿ ಸೇರಿಸಲಾಗಿದೆ.

**2017ರ ಕರ್ನಾಟಕ ಅಧಿನಿಯಮ ಸಂಖ್ಯೆ 50**

(2017ರ ಡಿಸೆಂಬರ್ ಹದಿನಾರನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟಿಸಲಾಗಿದೆ)

**ಕರ್ನಾಟಕ ಭೂ ಕಂದಾಯ (ನಾಲ್ಕನೇ ತಿದ್ದುಪಡಿ) ಅಧಿನಿಯಮ, 2017**

(2017ರ ಡಿಸೆಂಬರ್ ಹದಿಮೂರನೇ ದಿನದಂದು ರಾಜ್ಯಪಾಲರ ಅನುಮೋದನೆ ಪಡೆಯಲಾಗಿದೆ)

ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ನ್ನು (1964ರ ಕರ್ನಾಟಕ ಅಧಿನಿಯಮ ಸಂಖ್ಯೆ 12) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತೆಂಟನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಭೂ ಕಂದಾಯ (ನಾಲ್ಕನೇ ತಿದ್ದುಪಡಿ) ಅಧಿನಿಯಮ, 2017 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

94-ಸಿ ಮತ್ತು 94-ಸಿಸಿಪ್ರಕರಣಗಳನ್ನು ಮೂಲ ಅಧಿನಿಯಮದಲ್ಲಿ ಸೇರಿಸಲಾಗಿದೆ.

**2018ರ ಕರ್ನಾಟಕ ಅಧಿನಿಯಮ ಸಂಖ್ಯೆ 11**

(2018ರ ಮಾರ್ಚ್ ಹದಿನೇಳನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟಿಸಲಾಗಿದೆ)

**ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ಅಧಿನಿಯಮ, 2018**

(2018ರ ಮಾರ್ಚ್ ಹದಿಮೂರನೇ ದಿನದಂದು ರಾಜ್ಯಪಾಲರ ಅನುಮೋದನೆ ಪಡೆಯಲಾಗಿದೆ)

ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ನ್ನು (1964ರ ಕರ್ನಾಟಕ ಅಧಿನಿಯಮ ಸಂಖ್ಯೆ 12) ಮತ್ತಷ್ಟು ತಿದ್ದುಪಡಿ ಮಾಡುವುದುಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತೊಂಬತ್ತನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ಅಧಿನಿಯಮ, 2018 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

94–ಎ ಮತ್ತು 95ಪ್ರಕರಣಗಳನ್ನು ಮೂಲ ಅಧಿನಿಯಮದಲ್ಲಿ ಸೇರಿಸಲಾಗಿದೆ.

## Certificate

Certified that this is the true kannada translation of the Karnataka Land Revenue Act, 1964

The above translation of the Karnataka Land Revenue Act, 1964 (Karnataka Act 12 of 1964) shall be authoritative text in the Kannada language under section 5A of the Karnataka Official Language Act, 1963 (Karnataka Act 26 of 1963).

VAJUBHAIVALA
GOVERNOR OF KARNATAKA

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

**ಕೆ. ದ್ವಾರಕನಾಥ್ ಬಾಬು**
ಸರ್ಕಾರದ ಕಾರ್ಯದರ್ಶಿ
ಸಂಸದೀಯ ವ್ಯವಹಾರಗಳ ಇಲಾಖೆ

**2018ರ ಕರ್ನಾಟಕ ಅಧಿನಿಯಮ ಸಂಖ್ಯೆ 27**

(2018ರ ಡಿಸೆಂಬರ್ 29ನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟಿಸಲಾಗಿದೆ)

**ಕರ್ನಾಟಕ ಭೂ ಕಂದಾಯ (ಎರಡನೇ ತಿದ್ದುಪಡಿ) ಅಧಿನಿಯಮ, 2018**

(2018ರ ಡಿಸೆಂಬರ್ 28ನೇ ದಿನದಂದು ರಾಜ್ಯಪಾಲರ ಅನುಮೋದನೆ ಪಡೆಯಲಾಗಿದೆ)

ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ನ್ನು (1964ರ ಕರ್ನಾಟಕ ಅಧಿನಿಯಮ ಸಂಖ್ಯೆ 12) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತೊಂಬತ್ತನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:–

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ಕರ್ನಾಟಕ ಭೂ ಕಂದಾಯ (ಎರಡನೇ ತಿದ್ದುಪಡಿ) ಅಧಿನಿಯಮ, 2018 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

ಪ್ರಕರಣ 94–ಬಿಅನ್ನು ಮೂಲ ಅಧಿನಿಯಮದಲ್ಲಿ ಇಂಧೀಕರಿಸಲಾಗಿದೆ.

## 2020ರ ಕರ್ನಾಟಕ ಅಧಿನಿಯಮ ಸಂಖ್ಯೆ 22

(2020ರ ಅಕ್ಟೋಬರ್ ತಿಂಗಳ 15ನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟಿಸಲಾಗಿದೆ)

**ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ಅಧಿನಿಯಮ, 2020**

(2020ರ ಅಕ್ಟೋಬರ್ 14ನೇ ದಿನದಂದು ರಾಜ್ಯಪಾಲರಿಂದ ಒಪ್ಪಿಗೆಯನ್ನು ಪಡೆಯಲಾಗಿದೆ)

ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ನ್ನು (1964ರ ಕರ್ನಾಟಕ ಅಧಿನಿಯಮ ಸಂಖ್ಯೆ 12) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತೊಂದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ಅಧಿನಿಯಮ, 2020 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

68 ಮತ್ತು 94 ಬಿ ಅನ್ನು ಪ್ರಕರಣಗಳನ್ನು ಮೂಲ ಅಧಿನಿಯಮದಲ್ಲಿ ಇಂಧೀಕರಿಸಲಾಗಿದೆ.

## 2020ರ ಕರ್ನಾಟಕ ಅಧಿನಿಯಮ ಸಂಖ್ಯೆ 44

(2020ರ ಅಕ್ಟೋಬರ್ ತಿಂಗಳ 19ನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟಿಸಲಾಗಿದೆ)

**ಕರ್ನಾಟಕ ಭೂ ಕಂದಾಯ (ಎರಡನೇ ತಿದ್ದುಪಡಿ) ಅಧಿನಿಯಮ, 2020**

(2020ರ ಅಕ್ಟೋಬರ್ 19ನೇ ದಿನಾಂಕದಂದು ರಾಜ್ಯಪಾಲರಿಂದ ಒಪ್ಪಿಗೆಯನ್ನು ಪಡೆಯಲಾಗಿದೆ)

ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ನ್ನು (1964ರ ಕರ್ನಾಟಕ ಅಧಿನಿಯಮ ಸಂಖ್ಯೆ 12) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತೊಂದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ಅಧಿನಿಯಮ, 2020 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

ಪ್ರಕರಣ 2 ಮತ್ತು 69-ಎ ಅನ್ನು ಮೂಲ ಅಧಿನಿಯಮದಲ್ಲಿ ಇಂಧೀಕರಿಸಲಾಗಿದೆ.